ರಚನಾ

ಎನ್.ಸಿ.ಎಫ್–2005

ಹೊಸ ಪಠ್ಯ ಪುಸ್ತಕ ಆಧಾರಿತ
ತರಬೇತಿ ಸಾಹಿತ್ಯ

2013–14

# ತರಗತಿ : 9
# ವಿಷಯ : ಸಮಾಜ ವಿಜ್ಞಾನ

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ,
ಬೆಂಗಳೂರು.
ಮತ್ತು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, 100 ಅಡಿ ವರ್ತುಲ ರಸ್ತೆ,
ಬನಶಂಕರಿ 3ನೇ ಹಂತ, ಹೊಸಕೆರೆಹಳ್ಳಿ, ಬೆಂಗಳೂರು–560 085.

| | | | |
|---|---|---|---|
| 1. | ಹೊಸ ಪಠ್ಯಪುಸ್ತಕಗಳ ಆಧಾರಿತ ತರಬೇತಿ ಸಾಹಿತ್ಯ | : | ಸಮಾಜ ವಿಜ್ಞಾನ<br>9ನೇ ತರಗತಿ |
| 2. | ಪ್ರಕಟಣೆ | : | ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ<br>ಬೆಂಗಳೂರು-560001.<br>ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, 100 ಅಡಿ ವರ್ತುಲ ರಸ್ತೆ,<br>ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ,<br>ಬೆಂಗಳೂರು-560085. |
| 3. | ಮುದ್ರಣ ವರ್ಷ | : | 2013-14 |
| 4. | ಪ್ರತಿಗಳ ಸಂಖ್ಯೆ | : | 4000 |
| 5. | ಮುದ್ರಕರು | : | ಭಾಗ್ಯಂ ಬೈಂಡಿಂಗ್ ವರ್ಕ್ಸ್,<br>ನಂ. 25/1, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ,<br>ಹೊಸ ಟಿಂಬರ್ ಲೇಔಟ್, ಮೈಸೂರು ರಸ್ತೆ,<br>ಬೆಂಗಳೂರು-560026. |

# ಮುನ್ನುಡಿ

2013–14ನೇ ಸಾಲಿನಿಂದ NCF–2005ರ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿಯೂ ಹೊಸಪಠ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 6 ಮತ್ತು 9ನೇ ತರಗತಿಗಳಿಗೆ ಪರಿಷ್ಕೃತ ಪಠ್ಯಪುಸ್ತಕಗಳನ್ನು ರಚಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

NCF–2005ರ ಪರಿಕಲ್ಪನೆಗಳನ್ನು ಈ ಪರಿಷ್ಕೃತ ಪಠ್ಯಕ್ರಮ, ಪಠ್ಯವಸ್ತು ಮತ್ತು ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಪರಿಷ್ಕರಣೆಯಲ್ಲಿ ಮೂಡಿಬಂದಿರುವ ಹೊಸ ಪರಿಕಲ್ಪನೆಗಳ ಬಗ್ಗೆ ಮತ್ತು ಬೋಧನಾ ಕಲಿಕಾ ಸನ್ನಿವೇಶದಲ್ಲಿ ಶಿಕ್ಷಕರು ಅನುಸರಿಸಬೇಕಾಗಿರುವ ವಿಧಿ ವಿಧಾನಗಳ ಬಗ್ಗೆ ಮನವರಿಕೆ ಮಾಡಿಕೊಡುವುದು. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಅಳವಡಿಸಿಕೊಳ್ಳುವುದು ಹಾಗೂ ರಚನಾವಾದದ ಬಗ್ಗೆ ಅರಿವು ಮೂಡಿಸುವುದು, ಅತ್ಯಂತ ಅವಶ್ಯವಾಗಿದೆ. ಈ ದಿಸೆಯಲ್ಲಿ 6 ಮತ್ತು 9ನೇ ತರಗತಿಯ ಪರಿಷ್ಕೃತ ಪಠ್ಯಪುಸ್ತಕಗಳನ್ನು ಕಲಿಕೆ ಮತ್ತು ಬೋಧನೆಗೆ ಅಳವಡಿಸಲು ಮಾರ್ಗದರ್ಶಿ ರೂಪದಲ್ಲಿ ಶಿಕ್ಷಕ ತರಬೇತಿ ಮಾಡ್ಯೂಲನ್ನು ರಚಿಸಲಾಗಿದೆ. 6ನೇ ತರಗತಿಗೆ ಒಂದು ಸಂಪೂರ್ಣ ಮಾಡ್ಯೂಲ್ ತಯಾರಿಕೆಯಾಗಿದ್ದು 9ನೇ ತರಗತಿಗೆ ವಿಷಯವಾರು ಶಿಕ್ಷಕರ ತರಬೇತಿ ಸಾಹಿತ್ಯ ರೂಪಿಸಲಾಗಿದೆ.

ಈ ತರಬೇತಿ ಸಾಹಿತ್ಯವನ್ನು ಮುಂಬರುವ ದಿನಗಳಲ್ಲಿ ಶಿಕ್ಷಕರಿಗೆ ತರಬೇತಿ ನೀಡುವ ಸಂದರ್ಭದಲ್ಲಿ ಬಳಕೆ ಮಾಡಿಕೊಳ್ಳಲಾಗುವುದು. ಈ ಪುಸ್ತಿಕೆಯಲ್ಲಿ ಅಳವಡಿಸಿರುವ ಅಂಶಗಳು ಶಿಕ್ಷಕ ಸಮುದಾಯ ತಮ್ಮ ಬೋಧನಾ ಮತ್ತು ಕಲಿಕಾ ಸನ್ನಿವೇಶದಲ್ಲಿ ಅಳವಡಿಸಿ ತರಗತಿಗಳಲ್ಲಿ ಹೆಚ್ಚು ಕಾರ್ಯಕ್ಷಮತೆಯನ್ನು ಉಂಟುಮಾಡುವರೆಂದು ಆಶಿಸಲಾಗಿದೆ.

(ಹೆಚ್.ಎಸ್. ರಾಮರಾವ್)
ನಿರ್ದೇಶಕರು
ಸಂಶೋಧನೆ ಮತ್ತು ತರಬೇತಿ

## ಪರಿಕಲ್ಪನೆ ಮತ್ತು ಮಾರ್ಗದರ್ಶನ

1. ಶ್ರೀ ಹೆಚ್.ಎಸ್. ರಾಮರಾವ್, ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು.
2. ಶ್ರೀಮತಿ ಯಶೋಧ ಬೋಪಣ್ಣ, ಸಹ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.
3. ಶ್ರೀಮತಿ ಸಿರಿಯಣ್ಣನವರ ಲಲಿತ ಚಂದ್ರಶೇಖರ, ಡಿ.ಎಸ್.ಇ.ಆರ್.ಟಿ.

## ಸಾಹಿತ್ಯ ರಚನಾ ತಂಡ

1. ಶ್ರೀ ಎ.ಎಸ್. ದೀಕ್ಷಿತ್, 1490, ಕಲ್ಯಾಣ ನಗರ, ಟಿ. ದಾಸರಹಳ್ಳಿ, ಬೆಂಗಳೂರು–57.
2. ಶ್ರೀ ಎಸ್. ಕೃಷ್ಣಪ್ಪ, ಸ.ಶಿ. ಎಂಪ್ರೆಸ್ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ತುಮಕೂರು.
3. ಶ್ರೀ ಎಂ.ವಿ. ನಂಜಪ್ಪ, ಸ.ಶಿ. ಶ್ರೀ ಸಿದ್ಧಾರ್ಥ ವಸತಿ ಪ್ರೌಢಶಾಲೆ, ವಿನೋಬನಗರ, ತುಮಕೂರು.

## ಕಾರ್ಯಕ್ರಮ ನಿರ್ವಹಣೆ

1. ಶ್ರೀ ಹೆಚ್.ಎಂ. ಬಸಪ್ಪ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು.

## ಪರಿವಿಡಿ


| ಕ್ರಸಂ. | ವಿಷಯ ವಿವರ | ಪುಟ ಸಂಖ್ಯೆ |
|---|---|---|
| 1. | ಪೀಠಿಕೆ | 6 |
| 2. | ಆಶಯ | 9 |
| 3. | ತರಬೇತಿಯ ಉದ್ದೇಶಗಳು | 11 |
| 4. | ತರಬೇತಿಯ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆಗಳು | 13 |
| 5. | ಪಠ್ಯ ಪುಸ್ತಕದ ಪುನರ್ರಚನೆ ಮತ್ತು ತಾತ್ವಿಕ ಹಿನ್ನೆಲೆ (N.C.F. ಮತ್ತು R.T.E.) ಒಳಗೊಂಡಂತೆ | 15 |
| 6. | ಒಂಬತ್ತನೇ ತರಗತಿ ಸಮಾಜ ವಿಜ್ಞಾನ ಪಠ್ಯ ಪುಸ್ತಕದ ಪರಿಚಯ | 24 |
| 7. | ಒಂಬತ್ತನೇ ತರಗತಿ ಹೊಸ ಪಠ್ಯ ಪುಸ್ತಕದಲ್ಲಿ ಅಳವಡಿಸಿಕೊಂಡಿರುವ ಹೊಸ ಅಂಶಗಳು | 27 |
| 8. | ಒಂಬತ್ತನೇ ತರಗತಿ ಸಮಾಜ ವಿಜ್ಞಾನವನ್ನು ಅರ್ಥೈಸಿಕೊಳ್ಳುವ ಬಗೆ | 30 |
| 9. | ಸಮಾಜ ವಿಜ್ಞಾನ ತರಗತಿಯಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳು (ಉದಾಹರಣೆಗಳೊಂದಿಗೆ) | 33 |
| 10. | ವಾರ್ಷಿಕ ಪಾಠ ಯೋಜನೆ (ಮಾದರಿಯೊಂದಿಗೆ) | 37 |
| 11. | ಘಟಕ ಯೋಜನೆ (ಮಾದರಿಯೊಂದಿಗೆ) | 40 |
| 12. | ವಿಮರ್ಶಾತ್ಮಕ ಶಿಕ್ಷಣ ಕ್ರಮವನ್ನು ಅಳವಡಿಸಿಕೊಳ್ಳುವ ಪರಿಕಲ್ಪನೆಗಳು (ವಿಭಾಗವಾರು) | 45 |
| | ಎ) ಇತಿಹಾಸ ಬಿ) ರಾಜ್ಯಶಾಸ್ತ್ರ ಸಿ) ಭೂಗೋಳಶಾಸ್ತ್ರ ಡಿ) ಸಮಾಜಶಾಸ್ತ್ರ ಇ) ಅರ್ಥಶಾಸ್ತ್ರ | |
| 13. | ಕಲಿವಿನ ವಿಧಾನಗಳನ್ನು ಸಂಘಟಿಸಲು ಕೆಲವು ಉದಾಹರಣೆಗಳು (ಸೂಚಿತ ಚಟುವಟಿಕೆಗಳ ನಿರ್ವಹಣೆಯೊಂದಿಗೆ) | 120 |
| 14. | ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ (ದಾಖಲೆ ನಿರ್ವಹಣೆಯೊಂದಿಗೆ) | 133 |
| 15. | ಕಲಿವಿನ ಪ್ರಗತಿಯ ಅವಲೋಕನವಾಗಿ ಅಭ್ಯಾಸ ಹಾಳೆ | 139 |
| 16. | ಅವಲೋಕನ ಮಾದರಿ | 144 |


❍ ❖ ❍

# 1. ಪೀಠಿಕೆ

ಇದು ಶಿಕ್ಷಕರ ಓದುವ ಸಾಹಿತ್ಯ. ತರಗತಿ ಪ್ರಕ್ರಿಯೆಗಳನ್ನು ರಚನವಾದಿ ನೆಲೆಗಳಿಂದ ಹೇಗೆ ಅನುಕೂಲಿಸಬಹುದು ಎನ್ನುವುದರ ಹುಡುಕಾಟವೇ ಇಲ್ಲಿನ ಮುಖ್ಯ ಕಾಳಜಿ ಇಲ್ಲಿ ನೀಡಿರುವ ಸಲಹೆಗಳನ್ನು ವಿಚಾರಗಳನ್ನು ಮತ್ತೊಮ್ಮೆ ತಾವೆಲ್ಲರೂ ವಿಮರ್ಶೆಗೊಳಪಡಿಸಿಕೊಂಡು ತಮ್ಮ ತಮ್ಮ ಸಂದರ್ಭಗಳಲ್ಲಿ ಅವುಗಳ ಅನುಷ್ಠಾನ ಹೇಗೆ ಎಂದು ಆಲೋಚಿಸಿಕೊಳ್ಳಬೇಕಾಗಿದೆ. ಕಲಿಕೆಯು ಅನುಭವಾತ್ಮಕವಾಗಬೇಕು. ಆಗಲೇ ಅದು ಆಪ್ತವಾಗುವುದು ಹಾಗೂ ಸಹಜವಾಗುವುದು ಎಂಬ ಪೂರ್ವಕಲ್ಪನೆಯೊಂದಿಗೆ ಈ ಸಾಹಿತ್ಯ ರಚಿಸಲಾಗಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಹಾಗೂ ಆರ್.ಟಿ.ಇ. 2009 ರ ಆಶಯಗಳ ಹಿನ್ನೆಲೆಯಲ್ಲಿ ಪಠ್ಯಪುಸ್ತಕಗಳ ಪರಿಷ್ಕರಣೆ ಕಾರ್ಯ ಕೈಗೆತ್ತಿಕೊಳ್ಳಲಾಯಿತು. ಈ ಆಶಯಗಳ ಸಾಕಾರಕ್ಕಾಗಿ ಪಾಠಗಳನ್ನು ರಚಿಸಲಾಗಿದೆ. ಈ ಪಾಠಗಳನ್ನು ರಚನವಾದಿ ತತ್ವದ ತರಗತಿ ಪ್ರಕ್ರಿಯೆಗಳಿಂದ ನಿರ್ವಹಿಸಬೇಕಿದೆ. ಮಕ್ಕಳು ತಮ್ಮ ಕಲಿಕೆ ತಾವೇ ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಡುವ ಚಟುವಟಿಕೆಗಳನ್ನು ನೀಡಲಾಗಿದೆ. ಇವುಗಳ ಹೊರತಾಗಿಯೂ ಶಿಕ್ಷಕರು ತಮ್ಮ ಸಂದರ್ಭಕ್ಕೆ ವಿವಿಧ ಚಟುವಟಿಕೆಗಳನ್ನು ರಚನಾವಾದಿ ತತ್ವದನ್ವಯ ಹಮ್ಮಿಕೊಳ್ಳಬಹುದಾಗಿದೆ. ಕಲಿಕೆ ಪಠ್ಯಪುಸ್ತಕ, ಶಿಕ್ಷಕರು ಹಾಗೂ ತರಗತಿ ಕೋಣೆಗಳ ಮಿತಿಗಳನ್ನು ಮೀರಿ ಬೆಳೆಯಬೇಕು, ಆಗಲೇ ಅದು ಕಲಿಕಾದಾರರಿಗೆ ಅರ್ಥಪೂರ್ಣವಾಗುವುದು. ಈ ದೃಷ್ಟಿಯಿಂದ ಇಲ್ಲಿ ನೀಡಿರುವ ಸಾಹಿತ್ಯವನ್ನು ಅರ್ಥೈಸಿಕೊಳ್ಳಬೇಕು.

ಈ ಸಾಹಿತ್ಯ ಓದುವುದಕ್ಕೆ ಮೊದಲು 2011ರಲ್ಲಿ ನೀಡಲಾದ ತರಬೇತಿ ಸಂಚಿ 'ನಿರಂತರ' ಓದಿಕೊಳ್ಳುವುದು ಅಪೇಕ್ಷಣೀಯ. ಒಂದು ಅರ್ಥದಲ್ಲಿ ಈ ಸಾಹಿತ್ಯ 'ನಿರಂತರ'ದ ಮುಂದುವರಿದ ಭಾಗ ಎನ್ನಬಹುದು.

ಈ ಸಾಹಿತ್ಯದಲ್ಲಿ ಎಂಟನೆಯ ತರಗತಿಯ ಸಮಾಜ ವಿಜ್ಞಾನ ವಿಷಯ ಕೆಲವು ಚಟುವಟಿಕೆಗಳನ್ನು ಸೂಚಿಸಿದೆ. ಈ ಚಟುವಟಿಕೆಗಳನ್ನು ಇದೇ ವಿಷಯಕ್ಕೆ ಬಳಸಬೇಕು ಎಂದೇನಿಲ್ಲ. ಚಟುವಟಿಕೆಗಳನ್ನು ಸೂಕ್ತ ಮಾರ್ಪಾಡುಗಳೊಂದಿಗೆ ಯಾವ ವಿಷಯ ಹಾಗೂ ತರಗತಿಯಲ್ಲಿ ಬೇಕಾದರೂ ಬಳಸಬಹುದು. ಪಾಠ ಯೋಜನೆ ಬರೆಯಲು ವಿವಿಧ ರೀತಿಯ ಮಾದರಿಗಳು ಕಾಣುತ್ತವೆ. ಪಾಠಯೋಜನೆ ಕಲಿಕಾ ಪ್ರಕ್ರಿಯೆಗಳನ್ನು ಹೇಗೆ ಸಂಘಟಿಸುತ್ತೀರಿ ಎನ್ನುವುದನ್ನು ಸ್ಪಷ್ಟಪಡಿಸಬೇಕೇ ಹೊರತು ಮಾದರಿಗಳನ್ನಲ್ಲ. ಪಾಠಯೋಜನೆಯಲ್ಲಿ ಇರಲೇಬೇಕಾದ ಅಂಶಗಳ ಕುರಿತಂತೆ ಎಲ್ಲ ವಿಷಯಗಳ ಶೀರ್ಷಿಕೆಗಳಡಿಯಲ್ಲಿಯೂ ಚರ್ಚಿಸಿದೆ. ಅವುಗಳ ಆಧಾರದಲ್ಲಿ ನಿಮ್ಮ ತರಗತಿಗೆ ಬೇಕಾದ ಪಾಠಯೋಜನೆ ನೀವೇ ತಯಾರಿಸಿಕೊಳ್ಳಿ. ಒಂದೇ ಪಾಠಯೋಜನೆ ಮಾದರಿಗೆ ಜೋತು ಬೀಳಬೇಕಾಗಿಲ್ಲ.

ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು ಕೂಡಾ ಕಲಿಕೆಯ ಸಾಧನ ಎಂದೇ ಅರ್ಥೈಸಿಕೊಳ್ಳಬೇಕಾಗಿದೆ. ಇಲ್ಲಿ ಶಿಕ್ಷಕರು ಕೂಡಾ ತಮ್ಮ ಆಚರಣೆಗಳನ್ನು ವಿಮರ್ಶಿಸಿಕೊಳ್ಳುವ ಅವಕಾಶಗಳಿವೆ. ಇದರ ಮೂಲಕ ಕಲಿಕಾದಾರರಲ್ಲಿ ಸ್ವಾವಲೋಕನ ಅನುಕೂಲಿಸುವುದು ಬಹಳ ಮುಖ್ಯ. ಆಗ ಮಾತ್ರ ಕಲಿಕೆ ವೈಯಕ್ತಿಕವಾಗುತ್ತದೆ. ಕಲಿಕದಾರರ ಜವಾಬ್ದಾರಿಯಾಗುತ್ತದೆ. ತರಗತಿ ಪ್ರಕ್ರಿಯೆಗಳಲ್ಲಿ ಮೌಲ್ಯಮಾಪನವನ್ನು ಹೇಗೆ ಅಳವಡಿಸಿಕೊಳ್ಳಬಹುದು ಎನ್ನುವುದು ಇನ್ನು ಮುಂದೆ ನಮ್ಮೆಲ್ಲರಿಗೂ ಒಂದು ನಿರಂತರ ಕಾಳಜಿಯೇ ಆಗಬೇಕಾಗಿದೆ. ವ್ಯವಸ್ಥೆಗೆ ತನ್ನನ್ನು ತಾನು ಸುಧಾರಣೆ ಮಾಡಿಕೊಳ್ಳಲು ಇರುವ ಸಾಮರ್ಥ್ಯವೇ ಗುಣಾತ್ಮಕತೆ ಎಂದು ಎನ್‌ಸಿಎಫ್ – 2005 ಹೇಳುತ್ತದೆ. ವ್ಯಕ್ತಿಗಳಲ್ಲಿ ತಮ್ಮನ್ನು ತಾವು ಸುಧಾರಣೆ ಮಾಡಿಕೊಳ್ಳುವ ಸಾಮರ್ಥ್ಯ ಬೆಳೆದಾಗ ಮಾತ್ರ ವ್ಯವಸ್ಥೆ ಸುಧಾರಣೆಯಾಗಬಲ್ಲದು. ಗುಣಾತ್ಮಕ ಶಿಕ್ಷಣದ ಮೂಲ ಗುಣಾತ್ಮಕ ಮೌಲ್ಯಮಾಪನದಲ್ಲಿ ಇದೆ ಎಂಬ ಹಿನ್ನೆಲೆಯಲ್ಲಿ ಈ ಸಾಹಿತ್ಯವನ್ನು ಓದುವುದು.

ತರಗತಿಯಲ್ಲಿ ಕಲಿಕೆ ಅನುಕೂಲಿಸಲು ಪಠ್ಯಪುಸ್ತಕ ಕೇವಲ ಒಂದು ಆಕರ ಮಾತ್ರ ಎನ್ನುವುದು ನಮ್ಮ ಮನಸ್ಸಿನಲ್ಲಿರಲಿ. ಪಠ್ಯವಸ್ತು ಹೇಗಿದ್ದರೂ ಅದನ್ನು ನಾವು ಅನುಭವಾತ್ಮಕ ಹಾಗೂ ವಿಮರ್ಶಾಯುಕ್ತ ತರಗತಿ ಪ್ರಕ್ರಿಯೆಗಳ ಮೂಲಕ ಮಕ್ಕಳ ಸಂದರ್ಭಕ್ಕೆ ಪ್ರಸ್ತುತ ಮಾಡಬಹುದು ಹಾಗೂ ಆ ಮೂಲಕ ಅರ್ಥಪೂರ್ಣವಾಗಿಸಬಹುದು. ತರಗತಿಗಳಲ್ಲಿ ಕಲಿಯುವುದೇ ಅಂತಿಮ ಎಂಬ ಭಾವನೆ ದೂರವಾಗಬೇಕು. ತರಗತಿ ಕಲಿಕೆ ಒಟ್ಟಾರೆ ಕಲಿಕೆಯ ಆರಂಭ ಮಾತ್ರ ಎನ್ನುವ ಪ್ರಜ್ಞೆ ಎಲ್ಲರಲ್ಲಿಯೂ ಬೆಳೆಸಬೇಕಾಗಿದೆ. ಈ ನಿಟ್ಟಿನಲ್ಲಿ ಬದಲಾದ ಪಠ್ಯಪುಸ್ತಕಗಳ ಕುರಿತಂತೆ ಸಮುದಾಯದೊಡನೆ ಶಾಲೆಗಳು ಸಂವಾದ ನಡೆಸಬೇಕಾಗಿರುವುದು ಆದ್ಯತೆಯ ಅಪೇಕ್ಷೆಯಾಗಿದೆ.

ಪ್ರತಿ ವಿಷಯಕ್ಕೂ ಅದರದ್ದೇ ಆದ ಪರಿಭಾಷೆಯಿದೆ. ಈ ಪರಿಭಾಷೆಯಲ್ಲಿಯೇ ಆ ವಿಷಯದ ತರಗತಿ ಪ್ರಕ್ರಿಯೆಗಳನ್ನು ಅನುಕೂಲಿಸುವುದು ಅಗತ್ಯ. ಅಂತೆಯೇ ಎಲ್ಲ ಕಲಿಕೆಯ ವಿಷಯಗಳನ್ನೂ ಸಮಗ್ರವಾಗಿ ಗ್ರಹಿಸಲು ಸಾಧ್ಯವಾಗುವಂತಹ ಕಲಿಕಾ ವಾತಾವರಣ ನಿರ್ಮಿಸಬೇಕಾಗಿದೆ. ವಿಷಯಗಳ ನಡುವಿನ ಗಡಿರೇಖೆಗಳನ್ನು ಕಡಿಮೆ ಮಾಡಿ ವಿವಿಧ ವಿಷಯಗಳನ್ನು ಸಮ್ಮಿಳಿತಗೊಳಿಸಿ ಅರ್ಥೈಸಿಕೊಳ್ಳುವುದನ್ನು ಅನುಕೂಲಿಸಬೇಕಾಗಿದೆ. ಆದ್ದರಿಂದ ಕಲಿಕೆ ಫಲಪ್ರದವಾಗಬೇಕಾದರೆ ಎಲ್ಲ ಶಿಕ್ಷಕರೂ ಈ ನಿಟ್ಟಿನಿಂದ ಆಲೋಚಿಸುತ್ತ ಒಟ್ಟಾಗಿ ಕಾರ್ಯತತ್ಪರರಾಗಬೇಕಾಗಿದೆ.

ಈ ಸಾಹಿತ್ಯದೊಡನೆಯೇ ತರಗತಿ ಅವಲೋಕನ ನಮೂನೆಗಳನ್ನು ನೀಡಿದೆ. ಇದು ತರಬೇತಿಯ ಅವಧಿಯಲ್ಲಿ ನಡೆಸುವ ಪ್ರದರ್ಶನ ಪಾಠಗಳನ್ನು ನೀಡಿ ನಿಮ್ಮ ಟಿಪ್ಪಣಿಗಳನ್ನು ದಾಖಲಿಸಿಕೊಳ್ಳಲು ಇರುವ ಸ್ಥಳ. ಅಂತಿಮವಾಗಿ ನಿಮ್ಮ ಅವಲೋಕನಗಳು ಈ ಸಾಹಿತ್ಯದ ಒಂದು ಭಾಗವಾಗಿಯೇ ಉಳಿಯಬೇಕು ಎಂಬ ಆಶಯದೊಂದಿಗೆ ಈ ನಮೂನೆಗಳನ್ನು ನೀಡಲಾಗಿದೆ. ಈ ಪುಸ್ತಕ ತರಬೇತಿಯ ಬಳಿಕವೂ ನಿಮ್ಮೊಡನೆ ಉಳಿಯುವ ಆಕರ ಸಾಹಿತ್ಯ.

ಇದನ್ನು ಕೆಲವು ಬಾರಿಯಾದರೂ ಓದಿ ಇಲ್ಲಿ ಹೇಳಿರುವ ವಿಷಯಗಳನ್ನು ಮನನ ಮಾಡಿಕೊಳ್ಳಬೇಕು. ಈ ಪುಸ್ತಕದೊಡನೆ ನಿಮ್ಮ ಸಂವಾದ ಇಡೀ ವರ್ಷ ಮುಂದುವರಿಯಬೇಕು. ಅಗತ್ಯವಿದ್ದರೆ ತಮ್ಮ ಸಮಲೋಚನಾ ಸಭೆಗಳಲ್ಲಿಯೂ ನಿಮ್ಮ ವಿಚಾರಗಳನ್ನು ಮಂಡಿಸಿ ಚರ್ಚಿಸಬಹುದು.

ಇದು ರಚನವಾದಿ ತತ್ವ ಆಧರಿಸಿದ ತರಗತಿ ಪ್ರಕ್ರಿಯೆಗಳನ್ನು ಅನುಕೂಲಿಸುವ ನಿಟ್ಟಿನಲ್ಲಿ ನಾವೆಲ್ಲರೂ ಜೊತೆಯಾಗಿ ಇಡುತ್ತಿರುವ ಮೊದಲ ಹೆಜ್ಜೆ. ತರಬೇತಿ ಮುಗಿಯುವ ತನಕ ನಾವೆಲ್ಲರೂ ಜೊತೆಯಾಗಿ ನಡೆದರೂ ನೀವು ಶಾಲೆಗೆ ತೆರಳಿದ ಬಳಿಕ ನಿಮ್ಮ ಹಾದಿ ಬೇರೆಯಾಗುತ್ತದೆ. ಇಲ್ಲಿ ಚರ್ಚಿಸಲಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ನಿಮ್ಮ ತರಗತಿ ಪ್ರಕ್ರಿಯೆಗಳನ್ನು ಸಂಘಟಿಸಿಕೊಳ್ಳಿ. ಅಗತ್ಯವಿದ್ದರೆ ಮಾರ್ಗದರ್ಶನಕ್ಕಾಗಿ ಸಂಪನ್ಮೂಲ ವ್ಯಕ್ತಿಗಳನ್ನು ಸಂಪರ್ಕಿಸಿ. ನಾವು ನೀಡುವ ಶಿಕ್ಷಣದ ಗುಣಾತ್ಮಕತೆಯನ್ನು ಉಳಿಸಿ ಬೆಳೆಸಬೇಕಾದರೆ ಸೈದ್ಧಾಂತಿಕ ವಿಷಯಗಳಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು, ಅಲ್ಲವೇ?

ಹೊಸ ಪಠ್ಯ ಪುಸ್ತಕಗಳು ಅತ್ಯಂತ ಅರ್ಥಪೂರ್ಣವಾದ ತರಗತಿ ಕಲಿಕಾ ಪ್ರಕ್ರಿಯೆಗಳನ್ನು ಅನುಕೂಲಿಸುವ ನಿಟ್ಟಿನಲ್ಲಿ ಎಲ್ಲರಿಗೂ ಉಪಯುಕ್ತವಾಗುತ್ತವೆ ಎಂದು ಭಾವಿಸುತ್ತೇವೆ.

**ಸಾಹಿತ್ಯ ರಚನಾ ತಂಡ**

# 2. ಆಶಯ

ಪಠ್ಯಕ್ರಮ ಬದಲಾಗಬೇಕು ಎಂಬ ಮಾತು ಸಾರ್ವಜನಿಕರಿಂದ ನಿರಂತರವಾಗಿ ಕೇಳಿಬರುತ್ತಿದ್ದ ಹಿನ್ನೆಲೆಯಲ್ಲಿ 2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ಕರ್ನಾಟಕ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಪಠ್ಯ ಪುಸ್ತಕಗಳ ನೂತನ ರಚನಾ ಕಾರ್ಯದಲ್ಲಿ ತೊಡಗಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 6 ಮತ್ತು 9ನೇ ತರಗತಿಗಳ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ನೂತನ ಪಠ್ಯ ಪುಸ್ತಕವು ರಚನೆಯಾಗಿದ್ದು ಎಂದಿನಂತೆ ನೂತನ ಪಠ್ಯಕ್ಕೆ ಸಂಬಂಧಿಸಿದಂತೆ ಪೂರ್ಣ ಪರಿಕಲ್ಪನೆಯ ಜ್ಞಾನವನ್ನು ಹೊಸ ಶಿಕ್ಷಣ ಕ್ರಮದ ನಿರ್ದೇಶನದಂತೆ ಕಟ್ಟಿಕೊಳ್ಳಲು, ರಾಜ್ಯದ ವಿಷಯವಾರು ಅನುಕೂಲಕಾರರಿಗೆ (ಶಿಕ್ಷಕರಿಗೆ) ತರಬೇತಿ ಕಾರ್ಯಾಗಾರವನ್ನು ಐದು ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ.

ಈ ತರಬೇತಿಯು ರಾಜ್ಯದ ಪ್ರತಿಯೊಬ್ಬ ಅನುಕೂಲಕಾರರಿಗೂ ತಲುಪಬೇಕಿದ್ದು, ಹೊಸ ಪಠ್ಯ ಪುಸ್ತಕವನ್ನು ಹೇಗೆ ಅರ್ಥೈಸಿಕೊಳ್ಳಬೇಕು ಹಾಗೂ ಮಕ್ಕಳಿಗೆ ಅನುಕೂಲಿಸುವ ಬಗ್ಗೆ ಹೇಗಿರಬೇಕೆಂಬುದರ ಬಗ್ಗೆ ಸ್ಥೂಲವಾಗಿ ರಚನಾ ಸಾಹಿತ್ಯದಲ್ಲಿ ಕೊಡಮಾಡುತ್ತಿದ್ದು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ಪೂರ್ಣ ಪರಿಕಲ್ಪನೆ ಕಲಿವಿನ ಸಂದರ್ಭದಲ್ಲಿ ಮೂಡಿಬರಲು ಅನುಕೂಲವಾಗುವಂತೆ ರಚನಾ ಸಾಹಿತ್ಯದ ಚೌಕಟ್ಟಿನಲ್ಲಿ ತರಬೇತಿಯಿಂದ ನೀಡಲಾಗುವುದು.

ಇದರ ಪರಿಣಾಮವಾಗಿ ಒಂಭತ್ತನೆ ತರಗತಿಯ ವಿದ್ಯಾರ್ಥಿಗಳು ಪ್ರಸ್ತುತ ಈ ಸಮಾಜ ವಿಜ್ಞಾನ ಪಠ್ಯವನ್ನು ಬದಲಾಗುತ್ತಿರುವ ವರ್ತಮಾನದ ಸಮಾಜದ ಸನ್ನಿವೇಶಗಳಿಗೆ ತಮ್ಮನ್ನು ತೊಡಗಿಸಿಕೊಳ್ಳಲು ಅನುಕೂಲವಾಗುವಂತಹ ಅವಕಾಶಗಳನ್ನು ತಾವು ಕಲ್ಪಿಸಿಕೊಡಬೇಕೆಂಬ ಆಶಯ ನಮ್ಮೆಲ್ಲರದ್ದಾಗಿದೆ.

ಹಾಗೆಯೇ ನೂತನ ಪಠ್ಯ ಪುಸ್ತಕಕ್ಕೆ ಸಂಬಂಧಿಸಿದಂತೆ ಕಲಿಕಾ ಪ್ರಕ್ರಿಯೆಗೆ ಕಲ್ಪಿಸಲಾಗಿರುವ ಹೊಸ ವಿಧಾನಗಳಾದ ಅಂತರ್ಗತ ವಿಧಾನ, ರಚನಾತ್ಮಕ ವಿಧಾನ ಹಾಗೂ ಸುರುಳಿಯಾಕಾರದ ವಿಧಾನಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ.

ಸಮಾಜ ವಿಜ್ಞಾನ ಪಠ್ಯದ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ ಚಟುವಟಿಕೆಗಳ ಮೂಲಕ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಪಡೆಯುವಂತೆ

ಮಾಡುವ ಪ್ರಯತ್ನ ಮಾಡಲಾಗಿರುವುದರಿಂದ ಪ್ರತಿಯೊಬ್ಬ ಅನುಕೂಲಕಾರರೂ ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸುವಂತೆ ಕಲಿವಿನ ಸಂದರ್ಭಗಳನ್ನು ಸೃಷ್ಟಿಸಿಕೊಳ್ಳಬೇಕೆಂಬುದು ಇಂದಿನ ತುರ್ತಾಗಿದೆ.

ನೂತನ ಪಠ್ಯವು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲದೇ ಇರುವುದರಿಂದ ಕಲಿಕೆಯನ್ನು ಕಂಠಪಾಠ ವಿಧಾನದಿಂದ ಕಡ್ಡಾಯವಾಗಿ ದೂರಮಾಡಿ ಮಗುವಿನ ಅನುಭವಗಳ ಮೂಲಕ ಜೀವನ ಅವಶ್ಯಕತೆಗಳಿಗೆ ಸ್ಪಂದಿಸಲು ಅನುವಾಗುವಂತೆ ಪ್ರತಿ ಘಟಕವನ್ನು ಅರ್ಥೈಸಿಕೊಂಡು ಮಗುವಿನ ಭವಿಷತ್ತಿನ ಜೀವನ ಮಾನವೀಯ ಮೌಲ್ಯಗಳ, ಅನುಷ್ಠಾನದೊಂದಿಗೆ, ಕೌಶಲ್ಯಪೂರ್ಣ ವ್ಯಕ್ತಿತ್ವವನ್ನು ಕಟ್ಟಿಕೊಂಡು ಸನ್ನಡೆಯ ಮನೋಧೋರಣೆಯ ನೂತನ ಯುಗ ಸೃಷ್ಟಿಯಾಗುವುದು ಇಂತಹ ಶಿಕ್ಷಣ ಕ್ರಮ ಅಳವಡಿಕೆಯಿಂದ ಮಾತ್ರ ಎಂದು ಆಶಿಸುತ್ತೇವೆ.

– ಪಠ್ಯ ಪುಸ್ತಕ ಸಮಿತಿ

# 3. ತರಬೇತಿಯ ಉದ್ದೇಶಗಳು

ಮಗು ಸಹಜ ಕಲಿಕೆಯಿಂದ ಸಾಕಷ್ಟು ಜ್ಞಾನ ಹೊಂದಿರುತ್ತದೆ. ವಿಮರ್ಶಾಯುಕ್ತ ಚಿಂತನೆ ಮತ್ತು ಅಂತಹ ಪದ್ಧತಿಯಿಂದ ತನ್ನ ಜ್ಞಾನ ಪುನಾರಚಿಸಿಕೊಳ್ಳಲು ಸಮಾಜ ವಿಜ್ಞಾನ ವಿಷಯ ಒದಗಿಸುತ್ತದೆ. ಸಮಾಜ ವಿಜ್ಞಾನ ವಿಷಯವು ಏಕತೆಯ ಮನೋಭಾವ ಮೂಡಿಸುವ ವಿಷಯವಾಗಬೇಕೆಂದೂ, ಹಾಗೂ ಹಿಂದುಳಿದ ವರ್ಗಗಳ ದೃಷ್ಠಿಕೋನದಿಂದ ಅಧ್ಯಯನ ಮಾಡುವುದೂ ಸೂಕ್ತ ಎಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಅಭಿಪ್ರಾಯ ಪಡುತ್ತದೆ. ಲಿಂಗ ಸಮಾನತೆ, ಬುಡಕಟ್ಟುಗಳ, ದಲಿತರ, ಇತರ ಅಲ್ಪಸಂಖ್ಯಾತರ ಬಗ್ಗೆ ಕಾಳಜಿ ವಹಿಸುವಂತೆ ಮಕ್ಕಳು ಕಲಿಯಬೇಕು. ಇದಕ್ಕೆ ವಿಮರ್ಶಾತ್ಮಕ ಚಿಂತನೆಗೆ ಮಕ್ಕಳನ್ನು ಅಣಿಗೊಳಿಸುವಂತಹ ವಿಧಾನಗಳನ್ನು ಶಿಕ್ಷಕರು ಅನುಸರಿಸಬೇಕು. ಇದು ಸಾಮಾಜಿಕ, ಆರ್ಥಿಕ, ನೈತಿಕ ಕ್ಷೇತ್ರಗಳಲ್ಲಿ ಚಿಂತನಪರ ಚರ್ಚೆಗಳು ವರ್ತಮಾನದ ಕಾಳಜಿಗಳನ್ನು ತಾವೇ ವಿಮರ್ಶಿಸಿಕೊಳ್ಳುವ ಅವಕಾಶಗಳನ್ನು ಮಕ್ಕಳಿಗೆ ಒದಗಿಸುತ್ತದೆ ಎನ್ನಲಾಗಿದೆ. ಈ ಆಶಯಗಳಂತೆ ಸದರಿ ಸಾಹತ್ಯದಲ್ಲಿ ಪ್ರಸ್ತುತ ಪರಿಷ್ಕರಿಸಲ್ಪಟ್ಟ ಪಠ್ಯ ಪುಸ್ತಕಗಳ ಪರಿಚಯ ಮತ್ತು ಅನುಸರಿಸಬಹುದಾದ ರಚನಾವಾದ ಪದ್ಧತಿಗಳ ವಿವರ ನೀಡಿದೆ ಎಂಬುದನ್ನು ತರಬೇತಿಯಲ್ಲಿ ಶಿಬಿರಾರ್ಥಿಗಳು ಅರ್ಥೈಸಿಕೊಳ್ಳಬೇಕಿದೆ. ಹಾಗೂ ತರಬೇತಿ ಕಲಿಕಾ ನಿರ್ವಹಣಾ ಕೌಶಲ್ಯವನ್ನು ಪಡೆದುಕೊಳ್ಳಬೇಕಿದೆ.

ಅಲ್ಲದೆ ಸಂವಿಧಾನದ ಮೌಲ್ಯಗಳನ್ನಾಧರಿಸಿ ರಾಷ್ಟ್ರೀಯ ಪಠ್ಯಕ್ರಮ, ಪಠ್ಯಕ್ರಮವನ್ನಾಧರಿಸಿ ಪಠ್ಯವಸ್ತು, ಹಾಗೂ ಪಠ್ಯವಸ್ತುವನ್ನಾಧರಿಸಿ ಪಠ್ಯಪುಸ್ತಕ ರಚನೆಯಾಗುವ ಪ್ರಕ್ರಿಯೆ ಎಲ್ಲಾ ಭಾಗೀದಾರರು ಅರ್ಥೈಸಿಕೊಳ್ಳಬೇಕೆನ್ನುವುದು ನಮ್ಮ ಆಶಯ. 9ನೇ ತರಗತಿಯ ಸಮಾಜ ವಿಜ್ಞಾನ ವಿಷಯದ ಹೊಸ ಪಠ್ಯಪುಸ್ತಕವೂ ಮೇಲೆ ತಿಳಿಸಿದ ಸರಣಿಯಲ್ಲಿಯೇ ರೂಪಿತವಾಗಿದೆ. ಪಾಠಗಳು ಮತ್ತು ಪಾಠ ನಿರ್ವಹಣಾ ಪದ್ಧತಿಗಳು ರಾ ಪ ಚೌ 05ರ ತತ್ವಗಳನ್ನು ಆಧರಿಸಿದೆ. ಈ ಅಂಶಗಳನ್ನು ತಿಳಿದುಕೊಳ್ಳುವ ನಿಮಿತ್ತ ಈ ತರಬೇತಿಯನ್ನು ಆಯೋಜಿಸಲಾಗಿದೆ. ಸದರಿ ತರಬೇತಿಯ ಉದ್ದೇಶಗಳು ಹೀಗಿವೆ.

1. ಹೊಸ ಪಠ್ಯಪುಸ್ತಕ ರೂಪಿಸಿದ ಹಿನ್ನೆಲೆ ಮತ್ತು ಉದ್ದೇಶಗಳನ್ನು ತಿಳಿಯುವುದು.
2. ಪಠ್ಯಪುಸ್ತಕವನ್ನು ಅರ್ಥೈಸಿಕೊಳ್ಳುತ್ತಾ ಪಠ್ಯದಲ್ಲಿರುವ ಹೊಸ ಪರಿಕಲ್ಪನೆಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಪಡೆಯುವುದು.
3. ಪಾಠಗಳ ಮೂಲಕ ಕಲಿಕೆ ಅನುಕೂಲಿಸುವ ವಿಧಾನಗಳನ್ನು ಉದಾಹರಣೆಗಳೊಂದಿಗೆ ಅರ್ಥೈಸಿಕೊಳ್ಳುವುದು.
4. ವಿವಿಧ ಚಟುವಟಿಕೆಗಳ ಸೃಷ್ಟಿ ಹಾಗೂ ಪ್ರಾತ್ಯಕ್ಷಿಕೆ ಮೂಲಕ ಕಲಿಕೆ ಅನುಕೂಲಿಸುವ ಅನುಭವ ಪಡೆಯುವುದು.

5. ಪಾಠ ವಿಷಯಗಳ ಜ್ಞಾನ ರಚನೆ ಮತ್ತು ಪುನಾರಚನೆಗೆ ಇರುವ ಅವಕಾಶಗಳನ್ನು ಸೃಜಿಸುವುದು.

6. ಹೊಸ ಪಠ್ಯ ಪುಸ್ತಕಗಳ ಮೂಲಕ ಹೆಚ್ಚಿನ ವಿಚಾರಗಳನ್ನು ವಿದ್ಯಾರ್ಥಿಗಳು ಗ್ರಹಿಸಲು ಪೂರಕವಾಗುವಂತಹ ಚಟುವಟಿಕಾಧಾರಿತ ತರಬೇತಿಯನ್ನು ಶಿಕ್ಷಕರಿಗೆ ಆಯೋಜಿಸುವುದು.

7. ಜಾಗತಿಕ ಶೈಕ್ಷಣಿಕ ಮಟ್ಟವನ್ನು ಪಠ್ಯಪುಸ್ತಕದಲ್ಲಿ ಅಳವಡಿಸಿರುವ ಪ್ರಸ್ತುತತೆಯ ಅಂಶವನ್ನು ಶಿಕ್ಷಕರಿಗೆ ಮೂಡಿಸುವುದು.

8. ಇದುವರೆಗಿನ ಕಂಠಪಾಠಯುಕ್ತ ಕಲಿಕೆಯನ್ನು, ಮಾಹಿತಿಯಾಧಾರಿತ ಕಲಿಕೆಯನ್ನು ದೂರಮಾಡಿ ಮಗು ಕ್ರಿಯಾಶೀಲವಾಗಿ ಜ್ಞಾನ ಕಟ್ಟಿಕೊಳ್ಳುವಂತೆ ಅವಕಾಶ ಕಲ್ಪಿಸುವುದು ಹೇಗೆ ಎಂಬುದನ್ನು ತರಬೇತಿಯ ಮೂಲಕ ಶಿಕ್ಷಕರಿಗೆ ತಿಳಿಸುವುದು.

9. ಸಮಾಜ ವಿಜ್ಞಾನದ ವಿಷಯವಾರು, ಪಾಠವಾರು ಜ್ಞಾನವು ಸಂಯೋಜಿತ ರೂಪದಲ್ಲಿರುತ್ತದೆ ಎಂಬುದನ್ನು ತಿಳಿದುಕೊಳ್ಳುವುದು.

10. ತರಗತಿಯಲ್ಲಿ ಶಿಕ್ಷಕರು ಬೋಧಕರಲ್ಲ. ಕಲಿಕೆಯ ಅನುಕೂಲಕಾರರು ಎಂದು ಅರ್ಥೈಸಿಕೊಳ್ಳುವುದು.

11. ಮಗುವಿನ ಕಲಿವಿನ ಅನುಭವವು ರಚನಾತ್ಮಕವಾಗಿ ಗುಣಾತ್ಮಕ ಹಿಮ್ಮಾತಿಯೊಂದಿಗೆ ಜ್ಞಾನ ಕಟ್ಟಿಕೊಳ್ಳುವಿಕೆಯ ವಿಧಾನದ ಬಗ್ಗೆ ಶಿಕ್ಷಕರು ಮನನ ಮಾಡಿಕೊಳ್ಳುವುದು.

12. ಪ್ರತಿಯೊಬ್ಬ ಶಿಕ್ಷಕರು ತರಗತಿ ಪ್ರಕ್ರಿಯೆಗಳನ್ನು ಸಂಘಟಿಸಿ ಮಗುವಿನ ಅನುಭವಗಳನ್ನು ತರಗತಿಯ ಒಟ್ಟು ಕಲಿಕಾ ನಿರೀಕ್ಷೆಗಳೊಂದಿಗೆ ವಿಷಯದ ಕಲಿಯುವಿಕೆಗೆ ಶಿಕ್ಷಕರನ್ನು ತರಬೇತಿಗೊಳಿಸುವುದು.

13. ಮೌಲ್ಯಮಾಪನ (ನಿರಂತರ ಮತ್ತು ವ್ಯಾಪಕ) ತಾಳೆಪಟ್ಟಿ, ಚರ್ಚೆ, ಸಂಭಾಷಣೆ, ಮಾಹಿತಿ ಸಂಗ್ರಹ, ಅಭಿಪ್ರಾಯ, ಅನುಭವಗಳನ್ನು, ಪರಿಕಲ್ಪನೆಗಳನ್ನು ಉದಾಹರಣೆ ಮೂಲಕ ಶಿಕ್ಷಕರಿಗೆ ಸ್ಪಷ್ಟಪಡಿಸುವುದು.

14. ಪ್ರತಿಯೊಬ್ಬ ಶಿಕ್ಷಕರೂ ತಮ್ಮ ತಮ್ಮ ಜವಾಬ್ದಾರಿ ತೆಗೆದುಕೊಳ್ಳುವುದರ ಮೂಲಕ ಮಗುವಿನ ಕಲಿಕೆಯ ಅನುಭವಕ್ಕೆ ಅವಕಾಶ ಕಲ್ಪಿಸುವಂತಹ ಸ್ವ ಶಕ್ತಿಕರಚನೆಗೆ ಶಿಕ್ಷಕ ತನ್ನನ್ನು ತಾನು ತೊಡಗಿಸಿಕೊಳ್ಳುವುದು.

15. ಶಿಕ್ಷಕರು ಮಕ್ಕಳಿಗೆ ನೀಡುವ ಅಂಶಗಳು ಕೇವಲ ತೋರಿಕೆಯ ಸೂಚಕಗಳು ಮಾತ್ರ ಹಾಗೂ ಇವತ್ತಿನ ಪ್ರತಿ ಪರೀಕ್ಷೆಗಳಲ್ಲಿ ಅಂಕಗಳು ಕಾಣುತ್ತವೆಯೇ ಹೊರತು ಜೀವನಾನುಭವವಲ್ಲ ಎಂಬುದನ್ನು ತಿಳಿಯುವಂತೆ ಶಿಕ್ಷಕರ ಮನಸ್ಸನ್ನು ಸಿದ್ಧಗೊಳಿಸುವುದು.

## 4. ತರಬೇತಿಯ ಸಂದರ್ಭದಲ್ಲಿನ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆಗಳು

ಸಮಾಜ ವಿಜ್ಞಾನ ತರಗತಿ ಪ್ರಕ್ರಿಯೆಯಲ್ಲಿ ಕಲಿಕೆಯು ರಚನವಾದಿ ನೆಲೆಗಳಿಂದ ಹೇಗೆ ಅನುಕೂಲಿಸಲ್ಪಡುವುದು ಎನ್ನುವುದರ ಹುಡುಕಾಟವೇ ಈ ರಚನಾ ಸಾಹಿತ್ಯದ ಹಾಗೂ ಇಂತಹ ತರಬೇತಿಗಳ ಮುಖ್ಯ ಕಾಳಜಿಯಾಗಿದೆ. ಸಮಾಜ ವಿಜ್ಞಾನದ ಪಾಠಗಳಲ್ಲಿ ಜ್ಞಾನ ರಚನೆಗೆ, ವಿಮರ್ಶಾಯುಕ್ತ ಶಿಕ್ಷಣ ಕ್ರಮ ಅಳವಡಿಕೆಗೆ ಕಲಿಕೆದಾರರಲ್ಲಿ ಜ್ಞಾನದ ಪುನರ್‌ರಚನೆ, ಮತ್ತು ನಿರಂತರ ಹಾಗೂ ಸಮಗ್ರ ಮೌಲ್ಯ ಮಾಪನಗಳನ್ನು ಅಳವಡಿಸಿಕೊಳ್ಳುವುದು ಕೂಡ ಅಗತ್ಯವಾಗಿರುವುದರಿಂದ ತರಬೇತಿಯಲ್ಲಿ ನೀಡಲಾಗುವ ಸಲಹೆ ಸೂಚನೆಗಳನ್ನು, ವಿಚಾರಗಳನ್ನು ತಾವೆಲ್ಲರೂ ಮತ್ತೊಮ್ಮೆ ವಿಮರ್ಶೆಗೊಳಪಡಿಸಿಕೊಂಡು ಈ ರೂಪದ ಕಲಿಕೆಯ ಅನುಷ್ಠಾನಕ್ಕೆ ಎಲ್ಲರೂ ಶ್ರಮಿಸಬೇಕಾಗಿದೆ.

ಈ ಹಿನ್ನಲೆಯಲ್ಲಿ ತರಬೇತಿಯ ಸಂದರ್ಭದ ಸಂಪನ್ಮೂಲ ವ್ಯಕ್ತಿಗಳಿಗೆ ಹಾಗೂ ಶಿಕ್ಷಕರಿಗೆ (ಅನುಕೂಲಿಸುವವ) ಕೆಲವು ಪೂರಕ ಸಲಹೆಗಳನ್ನು ಇಲ್ಲಿ ನೀಡಲಾಗಿದೆ. ಆದ್ದರಿಂದ ತಾವು ತಪ್ಪದೆ ಈ ಸೂಚನೆಗಳನ್ನು ಗಮನಿಸಿ, ಕಲಿಕಾ ಪ್ರಕ್ರಿಯೆಯಲ್ಲಿ ಕಾರ್ಯೋನ್ಮುಖರಾಗಬೇಕೆಂದು ರಚನಾ ತಂಡವು ಆಶಿಸುತ್ತದೆ.

* ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005, ಹಾಗೂ ಸಿ.ಸಿ.ಇ. 2009ರ ಆಶಯದಂತೆ ನೂತನವಾಗಿ ರಚಿಸಲ್ಪಟ್ಟಿರುವ ಸಮಾಜ ವಿಜ್ಞಾನ ಪಠ್ಯ ಪುಸ್ತಕದ ಕಲಿಕೆಯ ಬಗ್ಗೆ ಮಕ್ಕಳಿಗೆ ಜ್ಞಾನವನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ಮಾರ್ಗದರ್ಶನವಾಗಿ ರಚಿಸಿರುವ ರಚನಾ ಸಾಹಿತ್ಯವನ್ನು ತಪ್ಪದೇ ಓದಿ ಅರ್ಥೈಸಿಕೊಳ್ಳುವುದು.

* ತರಬೇತಿಯ ಸಂದರ್ಭದ ವಿಚಾರಗಳ ಚರ್ಚೆ, ನೀಡಲಾಗಿರುವ ರಚನಾ ಸಾಹಿತ್ಯ ಶಿಕ್ಷಕರು ಕಲಿಕಾ ಪ್ರಕ್ರಿಯೆ ಬೇಕಾಗುವ ಜ್ಞಾನ ಮತ್ತು ಅನ್ವಯ ಸಾಮರ್ಥ್ಯವನ್ನು ಪಡೆದುಕೊಳ್ಳುವ ಸಾಧನವಾಗಿದ್ದು, ಸಂಪನ್ಮೂಲ ವ್ಯಕ್ತಿಗಳು ಈ ಸಂದರ್ಭದಲ್ಲಿ ಉತ್ತಮ ಸಾಮರ್ಥ್ಯವನ್ನು ಅಭಿವ್ಯಕ್ತಿ ಕೌಶಲ್ಯವನ್ನು ಪಡೆದು ತರಬೇತಿಗೆ ಬರಲಿರುವ ಶಿಕ್ಷಕರಿಗೆ ಅಗತ್ಯ ಉದಾಹರಣೆಗಳ ಮೂಲಕ ತಿಳಿಸುವುದು ಅಗತ್ಯವಾಗಿದೆ.

* ತರಬೇತಿಗೆ ಮುನ್ನ ಪೂರ್ವ ತಯಾರಿಯನ್ನು ಅಗತ್ಯ ಸಲಕರಣೆಗಳೊಂದಿಗೆ ಮಾಡಿಕೊಳ್ಳುವುದು.

* ತರಬೇತಿ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳು ಸಮಯ ಪಾಲನೆಯನ್ನು ಕಡ್ಡಾಯವಾಗಿ ಪಾಲಿಸುವುದು.

* ಉತ್ತಮ ಅಭಿವ್ಯಕ್ತಿ ಕೌಶಲ್ಯವನ್ನು ಸಂಪನ್ಮೂಲ ವ್ಯಕ್ತಿಗಳು ಹೊಂದಿ ತರಬೇತುದಾರರಿಗೆ, ಆಸಕ್ತಿದಾಯಕವಾದ ವಿಷಯ ಮನನಕ್ಕೆ ಸ್ಪಷ್ಟತೆ, ನಿರ್ದಿಷ್ಟತೆ ಹಾಗೂ ಪ್ರೇರಣಾ ರೂಪದ ಮಾತುಗಾರಿಕೆಯನ್ನು ಹೊಂದಿರಬೇಕು.

* ತರಬೇತಿಯ ಅಷ್ಟು ದಿನಗಳು ಸ್ನೇಹಪೂರ್ವಕವಾಗಿ ತರಬೇತಿದಾರರನ್ನು ನೋಡಿಕೊಳ್ಳಬೇಕು.

* ತರಬೇತುದಾರರು ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿ, ಎಲ್ಲರೂ ಭಾಗಿಗಳಾಗುವಂತೆ ತರಬೇತಿಯ ತರಗತಿಯನ್ನು ಅನುವುಗೊಳಿಸುವುದು.

* ಸಂಪನ್ಮೂಲ ವ್ಯಕ್ತಿಗಳು ತಪ್ಪದೇ ತರಬೇತಿಗೆ ಮುನ್ನ ಎನ್.ಸಿ.ಎಫ್. 2005, ಸಿ.ಸಿ.ಇ. 2009 ಹಾಗೂ 'ನಿರಂತರ' 2011ನ್ನು ಓದಿಕೊಳ್ಳುವುದು ಹಾಗೂ ಇವುಗಳ ಚೌಕಟ್ಟಿನಲ್ಲಿಯೇ ತರಬೇತಿ ಮೂಡಿಬರುವುದನ್ನು ಮರೆಯಬಾರದು.

* ಸಂಪನ್ಮೂಲ ವ್ಯಕ್ತಿಗಳು ನೀಡುವ ಪ್ರಾತ್ಯಕ್ಷಿಕೆ ಪಾಠಗಳು ತರಬೇತುದಾರರು ಪೂರ್ಣ ಪ್ರಮಾಣದ ತರಗತಿ ಪ್ರಕ್ರಿಯೆಯ ಜ್ಞಾನವನ್ನು ಕಟ್ಟಿಕೊಳ್ಳುವಂತಿರಬೇಕು.

* ಸಮಾಜ ವಿಜ್ಞಾನ ಪಠ್ಯದ ಕಲಿಕಾ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಬಹುದಾದ ಕಲಿವಿನ ವಿಧಾನಗಳನ್ನು ಸಮಗ್ರವಾಗಿ ಪರಿಚಯ ಮಾಡಿಕೊಡುವುದು ಹಾಗೂ ಈ ಎಲ್ಲ ವಿಧಾನಗಳನ್ನು ಘಟಕವಾರು ಹೇಗೆ ಬಳಸಿಕೊಳ್ಳಬೇಕು ಎಂಬ ಸ್ವಾತಂತ್ರ್ಯವನ್ನು ಶಿಕ್ಷಕರಿಗೆ ಬಿಡುವುದು.

* ತರಗತಿಯಲ್ಲಿ ನೀಡಲಾಗುವ ಘಟಕವಾರು ಚಟುವಟಿಕೆಗಳು ವಿಭಿನ್ನವಾಗಿರಲು ಸಂಪನ್ಮೂಲ ವ್ಯಕ್ತಿಗಳು ವಿವಿಧ ಬಗೆಯ ಚಟುವಟಿಕೆಗಳನ್ನು ತರಬೇತಿ ಸಂದರ್ಭದಲ್ಲಿ ಪರಿಚಯ ಮಾಡಿಕೊಡುವುದು.

* ಬಳಸುವ ಬೋಧನೋಪಕರಣಗಳಿಗೆ ಆರ್ಥಿಕ ಹೊರೆಯಾಗದಂತೆ ಎಚ್ಚರ ವಹಿಸುವುದು.

* ತರಬೇತಿ ಅರ್ಥಪೂರ್ಣವಾಗಿ ಮೂಡಿಬರುವಂತೆ ಎಚ್ಚರವಹಿಸುವುದು.

# 5. ಪಠ್ಯ ಪುಸ್ತಕದ ಪುನರ್ರಚನೆ ಮತ್ತು ತಾತ್ವಿಕ ಹಿನ್ನಲೆ (ಎನ್.ಸಿ.ಎಫ್. ಮತ್ತು ಆರ್.ಟಿ.ಇ. ಒಳಗೊಂಡಂತೆ)

ತರಗತಿ ಪ್ರಕ್ರಿಯೆಗಳು, ಮಕ್ಕಳು ತಮ್ಮ ಕಲಿಕೆಯನ್ನು ತಾವೇ ಕಟ್ಟಿಕೊಳ್ಳಲು ಅನುಕೂಲಿಸುವಂತಿರಬೇಕು ಎನ್ನುವುದು ರಾ.ಪ.ಚೌ. 2005ರ ಮುಖ್ಯ ಆಶಯ. ಹೀಗಾಗಬೇಕಾದರೆ ಪಠ್ಯ ಪುಸ್ತಕದ ಮಿತಿಗಳನ್ನು ಮೀರಿ ಬೆಳೆಯುವ ಕಲಿಕಾ ಚಟುವಟಿಕೆಗಳೇ ನಮ್ಮ ಗುರಿಯಾಗಬೇಕು. ಎಂತಹಾ ಪಾಠವಾದರೂ ಅದನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಆಶಯ, ಜ್ಞಾನ ಕಟ್ಟುವ ಪದ್ಧತಿಯಂತೆ (ರಚನಾವಾದ ತತ್ವ) ಕಲಿಸುವುದಾದರೆ ಅಲ್ಲಿಗೆ ಇಂದು ನಮ್ಮೆದುರಿಗಿರುವ ಬಹುಪಾಲು ಸವಾಲುಗಳನ್ನು ನಿವಾರಿಸಿದಂತಾಗುತ್ತದೆ. ಕಲಿಕೆ ಮಕ್ಕಳಿಗೆ ಆಪ್ತವಾಗುತ್ತದೆ ಹಾಗೂ ಅರ್ಥಪೂರ್ಣವಾಗುತ್ತದೆ. ಅಂತಹ ತರಗತಿ ಪ್ರಕ್ರಿಯೆಗಳು ನಮ್ಮ ಸಂವಿಧಾನದ ಮತ್ತು ರಾಷ್ಟ್ರನೀತಿಗಳ ಆಶಯವನ್ನೂ ಪೂರೈಸುತ್ತವೆ.

**ಈ ಸಾಹಿತ್ಯ ಓದಿದ ನಂತರ ನೀವು**

1. ರಾ.ಪ.ಚೌ. 2005 ಹಾಗೂ ಆರ್.ಟಿ.ಇ. 2009 ಹಿನ್ನೆಲೆಯಲ್ಲಿ ಪರಿಷ್ಕೃತ ಪಠ್ಯಪುಸ್ತಕಗಳನ್ನು ತರಗತಿಗಳಲ್ಲಿ ಅರ್ಥಪೂರ್ಣವಾಗಿ ಬಳಸಲು ಅಗತ್ಯ ಸೈದ್ಧಾಂತಿಕ ನೆಲೆಗಟ್ಟನ್ನು ಹೊಂದುವಿರಿ.
2. ಜ್ಞಾನ ರಚನೆ ಪುನಾರಚನೆ ಪ್ರಕ್ರಿಯೆಯನ್ನು ತರಗತಿಗಳಲ್ಲಿ ಅನುಕೂಲಿಸಲು ಅಗತ್ಯ ಕ್ರಮ ಕೈಗೊಳ್ಳುವಿರಿ.
3. ಅನುಭವಾತ್ಮಕ ಕಲಿಕೆಯ ಪ್ರಾಮುಖ್ಯತೆಯನ್ನು ಮನಗಾಣುವಿರಿ.

**ಕಲಿಸುವಿಕೆ ಮತ್ತು ಸಂವಿಧಾನಾತ್ಮಕ ಗುರಿಗಳು**

ಸಂವಿಧಾನದಂತೆ ನಮ್ಮ ದೇಶಕ್ಕೆ ನಾಲ್ಕು ರಾಷ್ಟ್ರೀಯ ಗುರಿಗಳಿವೆ. ಈ ಗುರಿಗಳನ್ನು ಸಾಧಿಸುವುದು ನಮ್ಮ ಹೊಣೆ.

* ಸ್ವಾತಂತ್ರ್ಯ
* ಸಮಾನತೆ
* ಭಾತೃತ್ವ
* ಸಾಮಾಜಿಕ ನ್ಯಾಯ

ಭಾರತದ ಪ್ರತಿ ಪ್ರಜೆಗೂ ಮೇಲ್ಕಂಡ ಅಂಶಗಳನ್ನು ದೊರಕಿಸುವುದು, ದೊರಕಿದ್ದನ್ನು ಖಾತ್ರಿಪಡಿಸಿಕೊಳ್ಳುವುದು, ಮತ್ತು ಅವು ನಿರಂತರವಾಗಿ ಉಳಿದಿರುವಂತೆ ನೋಡಿಕೊಳ್ಳುವುದು ಸರ್ಕಾರ ಅರ್ಥಾತ್ ನಮ್ಮ ಕರ್ತವ್ಯ ಸಂವಿಧಾನದ ಪ್ರಸ್ತಾವನೆಯಂತೆ ನಮ್ಮ ಶಿಕ್ಷಣದ ರಾಷ್ಟ್ರೀಯ ಗುರಿಗಳೂ ಇವೇ ಆಗಿವೆ. ಇವುಗಳೊಂದಿಗೆ ಇನ್ನಷ್ಟು 1986ರ ರಾಷ್ಟ್ರೀಯ ಶಿಕ್ಷಣದ ಹತ್ತು ಕೋರ್ ವಿಷಯಗಳು ಸೇರಿವೆ. ಅವುಗಳಲ್ಲಿ ಪ್ರಮುಖವಾದವು ಭಾರತದ ರಾಷ್ಟ್ರೀಯ ಪರಂಪರೆಯ ಬಗ್ಗೆ ಹೆಮ್ಮೆ ಹೊಂದುವುದು, ವೈಜ್ಞಾನಿಕ ಮನೋಭಾವ ಹೊಂದಿರುವುದು ಮತ್ತು ಪರಿಸರ ಕಾಳಜಿಯುಕ್ತ ಜೀವನ ನಡೆಸುವುದು ಆಗಿವೆ. ಇವೂ ಸಹ ಪ್ರಸ್ತುತ ನಮ್ಮ ಶಿಕ್ಷಣದ ಗುರಿಗಳಾಗಿ ಸಾಂವಿಧಾನಿಕ ಗುರಿಗಳ ಜೊತೆ ಸೇರ್ಪಡೆಯಾಗುತ್ತವೆ.

ರಾಷ್ಟ್ರೀಯ ಗುರಿಗಳ ಅಳವಡಿಕೆಯನ್ನು ನಮ್ಮ ಶಾಲೆ ಮತ್ತು ತರಗತಿಗಳಲ್ಲಿ ಗಮನಿಸಿದಾಗ 60 ವರ್ಷಗಳಲ್ಲಿ ನಾವು ನಮ್ಮ ಮಕ್ಕಳಿಗೆ ನೀಡಿದ ಸ್ವಾತಂತ್ರ್ಯ ಕಡಿಮೆಯೇ. ಕಲಿಕೆ, ಅದರ ವಿಧಾನ, ಅಂದಿನ ತರಗತಿಯ ಗುರಿಗಳು, ಮಕ್ಕಳ ಅಭಿವ್ಯಕ್ತಿ, ಅವರ ಅಭಿಪ್ರಾಯ, ನಮ್ಮನ್ನು ವಿರೋಧಿಸುವ ಸ್ವಾತಂತ್ರ್ಯ ಹೀಗೆ ವಿವಿಧ ಮಜಲುಗಳನ್ನು ಗಮನಿಸುತ್ತಾ ನಮಗೆ ನಾವೇ ಮಕ್ಕಳ ಸ್ವಾತಂತ್ರ್ಯದ ವಿಷಯವನ್ನು ಪ್ರಶ್ನಿಸಿಕೊಂಡಾಗ ಸಿಗುವ ಉತ್ತರವು ನಮ್ಮನ್ನು ಯೋಚನೆಗೆ ಹಚ್ಚುತ್ತದೆ. ಈ ಯೋಚನೆ ನಾವು ಮಕ್ಕಳಿಗೆ ನೀಡಿದ ಸಮಾನತೆ, ಭ್ರಾತೃತ್ವ ಮತ್ತು ಸಾಮಾಜಿಕ ನ್ಯಾಯಕ್ಕೂ ಅನ್ವಯಿಸುತ್ತದೆ.

ಪ್ರಸ್ತುತ ಬದಲಾದ ಐದು ಮತ್ತು ಎಂಟನೇ ತರಗತಿಯ ಪಠ್ಯಪುಸ್ತಕದಲ್ಲಿ ಮಕ್ಕಳ ಕಲಿಕಾ ಸ್ವಾತಂತ್ರ್ಯ ಮತ್ತು ಉಳಿದ ಗುರಿಗಳ ಸಾಕಾರಕ್ಕಾಗಿ ಪಾಠಗಳನ್ನು ರೂಪಿಸಲಾಗಿದೆ. ಒಂದು ನಿಗದಿತ ಕಾಲದಲ್ಲಿ (ಒಂದು ಘಂಟೆ ಎಂದಿಟ್ಟುಕೊಂಡರೆ) ಮಕ್ಕಳನ್ನು ಕಲಿಕಾ ಚಟುವಟಿಕೆಯಲ್ಲಿ ತೊಡಗಿಸಿದರೆ ಕೊನೆಯಲ್ಲಿ ನಮಗೆ ನೋಡ ಸಿಗುವುದು ಅವರು ಎಷ್ಟು ಕಲಿತಿದ್ದಾರೆಂಬುದಲ್ಲ ! ಆದರೆ ಅವರ ವಿವಿಧ ಮನೋ ಸಾಮರ್ಥ್ಯ (ಅಪ್ಟಿಟ್ಯೂಡ್‌ಗಳು) ಮಾತ್ರ. ಇಲ್ಲಿ ಎಷ್ಟು ಕಲಿತರು ಎಂಬ ಪರೀಕ್ಷೆಗಿಂತ ಹೇಗೆ ಕಲಿಯುತ್ತಿದ್ದಾರೆ ಎಂದು ಅರ್ಥೈಸಿಕೊಳ್ಳುವುದು ಕಲಿಕೆ ಅನುಕೂಲಿಸುವವರಿಗೆ ಪ್ರಧಾನವಾಗುತ್ತದೆ. ಅರ್ಥಾತ್ ತರಗತಿ ನಿರ್ವಹಣೆಯಲ್ಲಿ ಕಲಿಸುವ ಪ್ರಕ್ರಿಯೇ ಮಹತ್ವದ್ದಾಗಿದೆ. ಇಲ್ಲಿ ಎಷ್ಟು ಕಲಿತರು ಎಂಬ ಮೌಲ್ಯಮಾಪನ ಚಟುವಟಿಕೆ ಅಂತಿಮ ಎನಿಸಿಕೊಳ್ಳುವುದಿಲ್ಲ. ಕಲಿಕೆ ಅನುಕೂಲಿಸಿದ ನಂತರ ಮಕ್ಕಳು ಸ್ವತಃ ತಮ್ಮ ಅಭಿಪ್ರಾಯ ರೂಪಿಸಿಕೊಂಡಿರುವುದು, ತಮ್ಮದೇ ರೀತಿಯಲ್ಲಿ ಅಭಿವ್ಯಕ್ತಿಸುವುದು ಪ್ರಮುಖವೆನಿಸುತ್ತದೆಯೇ ಹೊರತು ಶಿಕ್ಷಕರು ಹೇಳಿದಂತೆಯೇ ಮಕ್ಕಳು ಹಿಂಬಾಲಿಸುವುದಲ್ಲ. ಮಗು ಹಿಂಬಾಲಿಸಿದಲ್ಲಿ ಅದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲ ಮತ್ತು ಅಂತಹ ನಿರೀಕ್ಷೆಗಳಿಂದ ಮಗುವಿನ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ.

**ಕಲಿಸುವಿಕೆ ಮತ್ತು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 (ಎನ್.ಸಿ.ಎಫ್ 2005)**

ಈಗಾಗಲೇ "ನಿರಂತರ" ಸಾಹಿತ್ಯದಲ್ಲಿ ಚರ್ಚಿಸಿರುವಂತೆ 1998 ರ ರಾಷ್ಟ್ರೀಯ ಶಿಕ್ಷಣ ನೀತಿ ಒಂದು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಹುಟ್ಟುಹಾಕುವ ಪ್ರಯತ್ನ ಆರಂಭಿಸಿತ್ತು. ಈ

ಶಿಕ್ಷಣ ವ್ಯವಸ್ಥೆಗೆ ತಳಹದಿಯಾಗಿ ಆಗಾಗ ಪಠ್ಯಕ್ರಮದ ನೀತಿ ನಿರೂಪಣೆ ಮಾಡಲಾಗುತ್ತದೆ. ಈ ಎಲ್ಲ ಪಠ್ಯಕ್ರಮಗಳ ಮೂಲದಲ್ಲಿ ಸಂವಿಧಾನದಲ್ಲಿ ಶಿಫಾರಸ್ಸು ಮಾಡಲಾದ ಮೌಲ್ಯಗಳೇ ಪ್ರಧಾನ. Egalitrarian, secular, pluralistic society founded on social justice and equality ಈ ಅಂಶಗಳು ರಾ.ಪ.ಚೌ05ರ ಮೂಲ ಆಶಯಗಳೂ ಸಹ ಆಗಿರುತ್ತವೆ.

## ಮುಖ್ಯ ಲಕ್ಷಣಗಳು

ಎನ್.ಸಿ.ಎಫ್. 2005ರ ಮುಖ್ಯ ಲಕ್ಷಣಗಳು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದಾಗಿದೆ. ಅದರ ಕೆಲವು ಪ್ರಧಾನವಾದ ಅಂಶಗಳನ್ನು ಈ ಕೆಳಕಂಡಂತೆ ಗುರುತಿಸಿದೆ.

* ಭಾರತ ಸಂವಿಧಾನದಲ್ಲಿ ನೆಲೆಗೊಳಿಸಿರುವ ಮೌಲ್ಯಗಳ ಅಳವಡಿಕೆ
* ಪಠ್ಯಕ್ರಮ ವಿಧಿಸುವ ಹೊರೆಯನ್ನು ಕಡಿಮೆ ಮಾಡುವುದು.
* ಎಲ್ಲರಿಗೂ ಮೌಲ್ಯಧಾರಿತ/ಗುಣಾತ್ಮಕ ಶಿಕ್ಷಣ ದೊರಕಿಸುವುದು (ಇ.ಎಫ್.ಐ).
* ವ್ಯವಸ್ಥಿತ ಸುಧಾರಣೆ
* ಸರ್ವ ಸಮಾನ ಶಾಲಾ ವ್ಯವಸ್ಥೆ. ಇವುಗಳ ಆಧಾರದಲ್ಲಿಯೇ ಶಿಕ್ಷಣದ ಗುರಿಗಳನ್ನೂ ರೂಪಿಸುವುದು. ಇವುಗಳೆಂದರೆ
* ಸ್ವತಂತ್ರ ಚಿಂತನೆ ಹಾಗೂ ಕ್ರಿಯಾಶೀಲತೆಯ ಬೆಳವಣಿಗೆ
* ಇತರರ ಭಾವನೆಗಳಿಗೆ ಸ್ಪಂದಿಸುವಿಕೆ
* ಹೊಸ ಸನ್ನಿವೇಶಗಳಿಗೆ ನಮ್ಯ ಹಾಗೂ ಸೃಜನಶೀಲ ರೀತಿಯಲ್ಲಿ ಸ್ಪಂದಿಸುವಿಕೆ

ಶಿಕ್ಷಣವು ಪ್ರಜಾಸತ್ತಾತ್ಮಕ ಜೀವನ ಶೈಲಿಯನ್ನು ಗಟ್ಟಿಗೊಳಿಸಬೇಕಾದರೆ ಅದು ಮೊತ್ತಮೊದಲಿಗೆ ಪ್ರಥಮ ತಲೆಮಾರಿನ ಕಲಿಕಾರ್ಥಿಗಳನ್ನು ಶಾಲೆಯಲ್ಲಿಯೇ ಉಳಿಯುವಂತೆ ಮಾಡಬೇಕಾಗಿದೆ. ಶಿಕ್ಷಣ ಈಗ ಸಂವಿಧಾನ ಬದ್ಧವಾದ ಮೂಲಭೂತ ಹಕ್ಕು. ಲಿಂಗ, ಮತ, ಜಾತಿ, ಅಂಗವಿಲತೆಗಳ ವ್ಯತ್ಯಾಸಗಳನ್ನು ಮೀರಿದ ಶಾಲಾ ವಾತಾವರಣವನ್ನು ನಿರ್ಮಿಸಿ, ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕ ಆಹಾರದ ಬಗ್ಗೆ ನಿಗಾವಹಿಸಬೇಕಾಗಿದೆ.

## ಪಠ್ಯಕ್ರಮ ಅಭಿವೃದ್ಧಿಗೆ ಎನ್.ಸಿ.ಎಫ್ 2005 – 5 ಮಾರ್ಗದರ್ಶಿ ತತ್ವಗಳನ್ನು ಹೊಂದಿದೆ

ಕಲಿಕೆ ಹೊರೆಯಾಗಿರುವುದು ನಾವು ಶಿಕ್ಷಣದ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಹಾಗೂ ಗುಣಾತ್ಮಕತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ತಪ್ಪಿದ್ದೇವೆ ಎಂಬುದಕ್ಕೆ ಸಾಕ್ಷಿ. ಇದನ್ನು ಸರಿಪಡಿಸಲು ರಾ.ಪ.ಚೌ–2005 ಐದು ಮಾರ್ಗದರ್ಶಿ ತತ್ವಗಳನ್ನು ಮುಂದಿಡುತ್ತದೆ. ಈ ಮಾರ್ಗದರ್ಶಿ ತತ್ವಗಳು ಅತ್ಯಂತ ಆಳವಾದ ಅರ್ಥವನ್ನು ಹೊಂದಿವೆ.

1. ಜ್ಞಾನವನ್ನು ಶಾಲೆಯ ಹೊರಗಿನ ಜೀವನಕ್ಕೆ ಸಂಬಂಧೀಕರಿಸುವುದು.

2. ಬಾಯಿಪಾಠ ಮಾಡುವ ವಿಧಾನಗಳಿಂದ ಕಲಿಕಾ ಪ್ರಕ್ರಿಯೆಯನ್ನು ಬೇರೆಯಾಗಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.

3. ಪಠ್ಯಕ್ರಮವು ಪಠ್ಯಪುಸ್ತಕಗಳನ್ನು ಮೀರಿ ನಿಲ್ಲುವಂತೆ ಶ್ರೀಮಂತಗೊಳಿಸುವುದು.

4. ಪರೀಕ್ಷೆಗಳನ್ನು ಹೆಚ್ಚು ನಮ್ಯ ಮಾಡುವುದು ಹಾಗೂ ತರಗತಿಯ ಆಗುಹೋಗುಗಳೊಂದಿಗೆ ಸಮ್ಮಿಳಿತಗೊಳಿಸುವುದು.

5. ಪ್ರಜಾಸತ್ತಾತ್ಮಕ ರಾಜ್ಯವ್ಯವಸ್ಥೆಯಲ್ಲಿ ಪಾರಂಪರಿಕ ಶ್ರದ್ಧೆ ಹಾಗೂ ಪ್ರೀತಿಗಳುಳ್ಳ ಕಾಳಜಿಗಳನ್ನು ಬೆಳೆಸುವುದು (nurturing an overriding identity informed by caring concerns within the democratic polity of the country)

## ಯೋಚಿಸಿ

ನಮ್ಮ ಅನುಷ್ಠಾನದಲ್ಲಿರುವ ಪಠ್ಯಕ್ರಮದಲ್ಲಿ ಈ ಮೇಲೆ ಸೂಚಿಸಿದ ಅಂಶಗಳನ್ನು ಅಳವಡಿಸಿಕೊಳ್ಳಲು ಅವಕಾಶಗಳಿಲ್ಲ ಎನಿಸುತ್ತದೆಯೇ? ನಾವು ಇದುವರೆಗೂ ಇಂತಹ ವಿಚಾರಗಳನ್ನು ಅಳವಡಿಸಿಕೊಳ್ಳದಿರಲು ಕಾರಣಗಳೇನು? ನೀವು ನಿಮ್ಮ ತರಗತಿ ಪ್ರಕ್ರಿಯೆಗಳಲ್ಲಿ ಈ ಅಂಶಗಳನ್ನು ಅಳವಡಿಸಿಕೊಳ್ಳಲು ನಿಮಗೆ ಯಾವ ರೀತಿಯ ಬೆಂಬಲ ಅಗತ್ಯವಿದೆ?

## ರಾಷ್ಟ್ರೀಯ ಪಠ್ಯ ಕ್ರಮ ಚೌಕಟ್ಟಿನ ಆಶಯಗಳ ಸಾರಾಂಶ

ಮೇಲೆ ತಿಳಿಸಿದ ಐದು ಮಾರ್ಗದರ್ಶಿ ತತ್ವಗಳು ಹೊರೆಯಾಗದ ಕಲಿಕೆಗೂ ಆದ್ಯತೆ ಕೊಡುತ್ತದೆ. ಜ್ಞಾನ ಮತ್ತು ಕಲಿಕೆಯ ಬಗ್ಗೆ ಪ್ರಸ್ತಾಪಿಸುತ್ತಾ ಮಗು ಜ್ಞಾನವನ್ನು ಕಟ್ಟಿಕೊಳ್ಳುವುದು ಎಂಬ ವಿಷಯವನ್ನು ಎನ್.ಸಿ.ಎಫ್. ವಿವರವಾಗಿ ಚರ್ಚಿಸಿದೆ. ಕಲಿಕೆಯ ಮಗುವಿನ ದೈಹಿಕ ಹಾಗೂ ಮಾನಸಿಕ ಮಟ್ಟಕ್ಕೆ ಇದ್ದು ಮಗುವಿಗೆ ಜ್ಞಾನವನ್ನು ಕಟ್ಟಿಕೊಳ್ಳುವಲ್ಲಿ ಪಠ್ಯಕ್ರಮ ಸಹಾಯ ಮಾಡಬೇಕು. ಕಲಿಕೆಯ ಅನುಭವವು ಮಗುವಿನ ಸ್ವಭಾವ ಹಾಗೂ ಪರಿಸರಕ್ಕೆ ಹೊಂದಿಕೆಯಾಗಬೇಕು.

ಜ್ಞಾನ ಮತ್ತು ಮಾಹಿತಿಗಳನ್ನು ಪ್ರತ್ಯೇಕಿಸಬೇಕು. ಬೋಧನೆಯನ್ನು ಒಂದು ವೃತ್ತಿಪರ ಚಟುವಟಿಕೆಯಾಗಿ ಪರಿಗಣಿಸಬೇಕೇ ಹೊರತು ಮಾಹಿತಿ ನೀಡುವ, ನೆನಪು ಶಕ್ತಿ ಬೆಳೆಸುವ ತರಬೇತಿ ಎಂದು ತಿಳಿಯಬಾರದು. ಚಟುವಟಿಕೆಗಳೇ ಮಗುವಿಗೆ ಈ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಇರುವ ಮುಖ್ಯ ಮಾಧ್ಯಮ. ತರಗತಿಯ ಕಲಿಕಾ ಅನುಭವಗಳು/ ಚಟುವಟಿಕೆಗಳು ಮಕ್ಕಳಿಗೆ ತಮ್ಮ ಜ್ಞಾನವನ್ನು ಕಟ್ಟಿಕೊಳ್ಳಲು ಸಹಾಯವಾಗುವಂತಿರಬೇಕು.

ಪಠ್ಯವಿಷಯಗಳೊಳಗಿನ ಅಂತರವನ್ನು ಕಡಿಮೆಮಾಡಿ ಸಮ್ಮಿಳಿತ ಪಠ್ಯವಸ್ತುವನ್ನು ಒದಗಿಸಲು ಶಿಫಾರಸು ಮಾಡಲಾಗಿದೆ. ಸ್ಥಳೀಯ ಹಾಗೂ ಪಾರಂಪರಿಕ ಕೌಶಲಗಳನ್ನೊಳಗೊಂಡ

ಬಹುಪಠ್ಯಪುಸ್ತಕಗಳು ಹಾಗೂ ಇತರ ಸಾಹಿತ್ಯ ಮಗುವಿನ ಮನೆಯ ಹಾಗೂ ಸಮುದಾಯದ ಜೀವನದ ಅವಶ್ಯಕತೆಗಳಿಗೆ ಸ್ಪಂದಿಸಬೇಕು. ಮಗುವಿನ ಮಾತೃಭಾಷೆ, ಸ್ಥಳೀಯ, ಬುಡಕಟ್ಟು ಭಾಷೆಗಳನ್ನು ಆರಂಭಿಕ ಹಂತಗಳಲ್ಲಿ ಬೋಧನಾ ಮಾಧ್ಯಮವಾಗಿ ಬಳಸಬೇಕೆಂದು ಸೂಚಿಸಲಾಗಿದೆ.

ಇಂಗ್ಲೀಷ್ ಸೇರಿದಂತೆ ಬಹುಭಾಷಾ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸಬೇಕು. ಬೆಳೆಸಲು ಸಾಧ್ಯ ಎಂದು ಶಿಫಾರಸು ಮಾಡಿದೆ. ಮಾತೃಭಾಷೆಯಲ್ಲಿ ಓದುವ, ಬರೆಯುವ ಕೌಶಲಗಳಿಗೆ ಔಪಚಾರಿಕ ತರಬೇತಿ ಬೇಕು ಆದರೆ ದ್ವಿತೀಯ ಹಾಗೂ ತೃತೀಯ ಭಾಷೆಗಳಿಗೆ ಎಲ್ಲ ಕೌಶಲಗಳಲ್ಲೂ ತರಬೇತಿ ನೀಡಬೇಕು. ಇವೆಲ್ಲವೂ ಮಾತೃಭಾಷೆಯ ಮೇಲೆ ಸರಿಯಾದ ಪ್ರಭುತ್ವ ಸಾಧಿಸುವುದರಿಂದ ಸಾಧ್ಯವಾಗುತ್ತದೆ. ಅದಕ್ಕೆ ಬೇಕಾದ ಬೋಧನಾ ಕ್ರಮ ಅಳವಡಿಸಿಕೊಳ್ಳಬೇಕು. ಓದುವ ಕೌಶಲದ ಬೆಳವಣಿಗೆಗೆ ಒತ್ತು ನೀಡುವುದರಿಂದ ಶಾಲಾ ಕಲಿಕೆಗೆ ಪ್ರಯೋಜನವಾಗುವುದು ಎಂಬುದನ್ನು ಮನಗಾಣಲಾಗಿದೆ.

ಗಣಿತ ವಿಷಯಕ್ಕೆ ಸಂಬಂಧಿಸಿದಂತೆ ತಾರ್ಕಿಕ ಚಿಂತನಾ ಸಾಮರ್ಥ್ಯ. ಅಮೂರ್ತ ಪರಿಕಲ್ಪನೆಗಳನ್ನು ಮೂರ್ತೀಕರಿಸಿಕೊಳ್ಳುವುದು ಹಾಗೂ ನಿಭಾಯಿಸುವುದು, ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು. ಇದಕ್ಕಾಗಿ ಗಣಿತವು ತನ್ನ ಮಿತಿಗಳನ್ನು ವಿಸ್ತರಿಸಿಕೊಳ್ಳುವುದು ಮುಖ್ಯ.

ವಿಜ್ಞಾನ ವಿಷಯವು ದಿನನಿತ್ಯದ ಅನುಭವಗಳನ್ನು ಪರೀಕ್ಷಿಸಿ ವಿಶ್ಲೇಷಿಸುವ ಅವಕಾಶ ನೀಡಬೇಕು. ಪರಿಸರಕ್ಕೆ ಸಂಬಂಧಿಸಿದ ವಿಷಯಗಳು, ಚಟುವಟಿಕೆ ಹಾಗೂ ಪ್ರಾಜೆಕ್ಟ್‌ಗಳ ಮೂಲಕ ಕಲಿಕೆಯಾಗುವಂತಾಗಬೇಕು. ಇಂತಹ ಪ್ರಾಜೆಕ್ಟ್‌ಗಳಿಂದ ಬರುವ ಮಾಹಿತಿ ಭಾರತದ ಪರಿಸರದ ಬಗ್ಗೆ ಒಂದು ದೊಡ್ಡ ಮಾಹಿತಿ ಭಂಡಾರವನ್ನೇ ಸೃಷ್ಟಿಮಾಡಬಲ್ಲದು. ಅನ್ವೇಷಣಾ ಕಲಿಕೆಗೆ ಒತ್ತು ನೀಡಬೇಕು. ಜ್ಞಾನ ಕಟ್ಟಿಕೊಳ್ಳುವ ಪ್ರಕ್ರಿಯೆಗೆ ವಿಜ್ಞಾನ ಕಲಿಕೆ ಪೂರಕವಾಗಬೇಕು.

ಸಮಾಜ ವಿಜ್ಞಾನದಲ್ಲಿ ಏಕತೆಯ ಮನೋಭಾವ ಮುಖ್ಯ ವಿಷಯವಾಗಬೇಕು. ಈ ವಿಷಯವನ್ನು ಹಿಂದುಳಿದ ವರ್ಗಗಳ ದೃಷ್ಟಿಕೋನದಿಂದ ಅಧ್ಯಯನ ಮಾಡುವ ಬಗ್ಗೆ ಶಿಫಾರಸು ಮಾಡಿದೆ. ಲಿಂಗ ಸಮಾನತೆ, ಬುಡಕಟ್ಟುಗಳ, ದಲಿತರ, ಇತರ ಅಲ್ಪಸಂಖ್ಯಾತರ ಬಗ್ಗೆ ಕಾಳಜಿವಹಿಸುವಂತೆ ಮಕ್ಕಳು ಕಲಿಯಬೇಕು. ವಿಮರ್ಶಾಯುಕ್ತ ಚಿಂತನೆ ಮತ್ತು ಅಂತಹಾ ಪದ್ಧತಿ ಇಲ್ಲಿ ಹೆಚ್ಚು ಬಳಕೆಯಾಗಬೇಕು. ವಿಮರ್ಶಾತ್ಮಕ ಚಿಂತನೆಗೆ ಮಕ್ಕಳನ್ನು ಅಣಿಗೊಳಿಸುವಂತಹ ವಿಧಾನಗಳನ್ನು ಶಿಕ್ಷಕರು ಅನುಸರಿಸಬೇಕು. ಇದು ಸಾಮಾಜಿಕ, ಆರ್ಥಿಕ, ನೈತಿಕ ಕ್ಷೇತ್ರಗಳಲ್ಲಿ ಚಿಂತನಪರ ಬೋಧನೆಗಳು ವರ್ತಮಾನದ ಕಾಳಜಿಗಳನ್ನು ತಾವೇ ವಿಮರ್ಶಿಸಿಕೊಳ್ಳುವ ಅವಕಾಶಗಳನ್ನು ಮಕ್ಕಳಿಗೆ ಒದಗಿಸುತ್ತದೆ.

ಇದಲ್ಲದೇ ಎನ್.ಸಿ.ಎಫ್ ಇನ್ನೂ ನಾಲ್ಕು ವಿಷಯಗಳಾದ ಕಾರ್ಯಶಿಕ್ಷಣ, ಲಲಿತ ಕಲೆ ಹಾಗೂ ಪಾರಂಪರಿಕ ಕುಶಲ ಕಲೆ, ಆರೋಗ್ಯ ಮತ್ತು ದೈಹಿಕ ಶಿಕ್ಷಣ ಮತ್ತು ಶಾಂತಿ ಶಿಕ್ಷಣ ವಿಷಯಗಳ ಬಗ್ಗೆ ಚರ್ಚಿಸುತ್ತದೆ. ಐದನೆಯ ಮಾರ್ಗದರ್ಶಿ ತತ್ವದನ್ವಯ ಇವು ಮುಖ್ಯವೂ

ಕೂಡ. ಈ ನಾಲ್ಕು ವಿಷಯಗಳಲ್ಲಿ ಶಿಕ್ಷಕರು ಕಲಿಕೆ ಅನುಕೂಲಿಸಬೇಕಾಗುತ್ತದೆ. ಆರ್.ಟಿ.ಇ. 09 ಕೂಡಾ ಈ ವಿಷಯಗಳನ್ನು ಕಡ್ಡಾಯಗೊಳಿಸಿದೆ.

ಪರೀಕ್ಷಾ ಕ್ರಮಗಳಲ್ಲಿ ಬದಲಾವಣೆ–ಪರೀಕ್ಷೆಗಳು ಹೊರೆ ರಹಿತ ಹಾಗೂ ಒತ್ತಡ ಕಡಿಮೆ ಮಾಡುವಂತಿರಬೇಕು. ಪರೀಕ್ಷೆಯಲ್ಲಿ ಕೇಳುವ ಪ್ರಶ್ನೆಗಳ ಸ್ವರೂಪದಲ್ಲಿ ಬದಲಾಗಿ ಅವು ತಾರ್ಕಿಕ ಮತ್ತು ಸೃಜನಶೀಲ ಸಾಮರ್ಥ್ಯಗಳಿಗೆ ಹೆಚ್ಚು ಒತ್ತುಕೊಡಬೇಕು. ತರಗತಿಯೊಡನೆ ಪರೀಕ್ಷಾ ಕ್ರಮಗಳು ಮತ್ತು ಮೌಲ್ಯಮಾಪನ ಸಮ್ಮಿಳಿತಗೊಳ್ಳಬೇಕು. ಪಾಸು ಫೇಲು ಎಂಬ ಪದ್ಧತಿ ಹೋಗಿ ಬೇರೆ ಬೇರೆ ಮಟ್ಟದ ಸಾಧನೆ ಎಂದು ಗುರುತಿಸುವಂತಾಗಬೇಕು. ಶಾಲೆ ಹಾಗೂ ಇತರ ಸಾಮಾಜಿಕ ಅಂಗಗಳ ನಡುವೆ ಸಹಭಾಗಿತ್ವ ಸಾಧಿಸುವುದು ಹಾಗೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಎಲ್ಲರ ಗುರಿಯಾಗಬೇಕು.

ಈ ಎಲ್ಲಾ ಆಶಯಗಳು ಮತ್ತು ಮಾರ್ಗದರ್ಶಿ ತತ್ವಗಳನ್ವಯವೇ ಪ್ರಸ್ತುತ 5 ಮತ್ತು 8ನೇ ತರಗತಿಯ ಪಠ್ಯಪುಸ್ತಕಗಳನ್ನು ರಚಿಸಲಾಗಿದೆ. ಆರ್‌ಟಿಇ 09 ನೀತಿಗಳನ್ನು ತಿಳಿದುಕೊಂಡ ನಂತರ ಎನ್‌ಸಿಎಫ್ 05 ಮತ್ತು ಆರ್‌ಟಿ 09ರ ನೀತಿಗಳನ್ವಯ ರಚಿತವಾದ ಪಠ್ಯಪುಸ್ತಕ ಮತ್ತು ಅವುಗಳೊಂದಿಗೆ ವ್ಯವಹರಿಸುವ ಸಾಧ್ಯತೆಗಳನ್ನು ಚರ್ಚಿಸೋಣ.

### ಕಲಿಕೆ, ಕಲಿಸುವಿಕೆ ಮತ್ತು ಆರ್‌ಟಿಇ 2009

ಗುಣಮಟ್ಟದ ಶಿಕ್ಷಣ ಪ್ರತಿ ಮಗುವಿನ ಮೂಲಭೂತ ಹಕ್ಕು. ಈ ಹಕ್ಕಿನ ಜಾರಿಗಾಗಿ ಭಾರತ ಸರ್ಕಾರ 2009ರಿಂದ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ 2009 ಅನ್ನು ಅನುಷ್ಠಾನಗೊಳಿಸಿರುವುದು ತಮಗೆ ತಿಳಿದ ವಿಷಯ. ಈ ಅಧಿನಿಯಮದಲ್ಲಿ ವಿವಿಧ ಸೆಕ್ಷನ್‌ಗಳಲ್ಲಿ ಕಲಿಕೆ ಮತ್ತು ಕಲಿಸುವಿಕೆಯ ಅಂಶಗಳು ಅಡಕವಾಗಿದ್ದು ಸದರಿ ಸೆಕ್ಷನ್‌ಗಳನ್ನು ಈ ಕೆಳಗೆ ನೀಡಿದೆ.

* ಸೆಕ್ಷನ್ 9 (ಎಫ್)ರಂತೆ ತರಗತಿ ಕೊಠಡಿ, ಶೌಚಾಲಯ, ನೀರಿನ ಸೌಲಭ್ಯ, ಆಟದ ಮೈದಾನ, ಕಪ್ಪು ಹಲಗೆ, ಪೀಠೋಪಕರಣ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು ಕಡ್ಡಾಯವಾಗಿರುತ್ತದೆ. ಇವೆಲ್ಲವೂ ಮಗುವಿನ ಶಾಲಾ ಜೀವನವನ್ನು ಹೆಚ್ಚು ಆತ್ಮೀಯಗೊಳಿಸುವ ಅಂಶಗಳಾಗಿವೆ.

* ಸೆಕ್ಷನ್ 19ರನ್ವಯ ಪ್ರತಿ ರಾಜ್ಯವೂ ತಮ್ಮ ಶಿಕ್ಷಣದ ಗುಣಾತ್ಮಕತೆಗೆ ಮಾಪಕ/ಸೂಚಕಗಳನ್ನು ರಚಿಸಿಕೊಂಡು (Quality Indicators) ಅದರನ್ವಯ ಕಾರ್ಯ ನಿರ್ವಹಿಸುವುದು.

* ಅನುಸೂಚಿಯ 4ನೇ ಅಂಶದಲ್ಲಿ ಪ್ರತಿ ಶಿಕ್ಷಕರು ತಮ್ಮ ಪೂರ್ವ ಸಿದ್ಧತೆಯ ಅವಧಿಯನ್ನೂ ಸೇರಿದಂತೆ ಒಂದು ವಾರದಲ್ಲಿ 45 ಗಂಟೆಗಳಷ್ಟು ಸಮಯ ಕಾರ್ಯ ನಿರ್ವಹಿಸಬೇಕು.

* 1 ರಿಂದ 5ನೇ ತರಗತಿವರೆಗಿನ ಪ್ರತಿ ಮಗು ಕಲಿಯಲು ಪ್ರತಿ ಶೈಕ್ಷಣಿಕ ವರ್ಷಕ್ಕೆ 800 ಬೋಧನಾ ಗಂಟೆಗಳು, 6 ರಿಂದ 8ನೇ ತರಗತಿಯವರೆಗೆ 1000 ಬೋಧನಾ ಗಂಟೆಗಳನ್ನು ಮೀಸಲಿರಿಸಬೇಕು.

* ಸೆಕ್ಷನ್ 21 ಮತ್ತು 22 ರಂತೆ ಶಾಲಾ ವ್ಯವಸ್ಥಾಪನ ಸಮಿತಿ ಶಾಲೆಯಲ್ಲಿನ ಕಲಿಕೆಯ ಗುಣಾತ್ಮಕತೆಯನ್ನು ಅವಲೋಕಿಸಿ ಅಗತ್ಯವಿದ್ದಲ್ಲಿ ಈ ಕೆಳಕಂಡ ನೆರವನ್ನು ನೀಡುವುದು.

  - ವಿಕೇಂದ್ರೀಕೃತ, ಆಯಾ ಸನ್ನಿವೇಶಕ್ಕೆ ಅನುಗುಣವಾದ ಯೋಜನೆ ತಯಾರಿ, ಅನುಷ್ಠಾನ, ಅನುಪಾಲನೆ ಮತ್ತು ಮೌಲ್ಯಮಾಪನ.

  - ಕಲಿಕಾ ಬೋಧನೋಪಕರಣಗಳು, ಸಾಮಗ್ರಿಗಳ ಪೂರೈಕೆ

  - ಬಾಹ್ಯ ಮೇಲ್ವಿಚಾರಣೆಯನ್ನು ಬಲಪಡಿಸುವುದು.

  - ಶಾಲಾ ಭೌತಿಕ ಮತ್ತು ತರಗತಿ ಪ್ರಕ್ರಿಯೆಯನ್ನು ಸಬಲೀಕರಣ ಮಾಡುವುದು.

* ಸೆಕ್ಷನ್ 29 ಮತ್ತು 30ರನ್ವಯ ಮಗುವಿನ ಸರ್ವತೋಮುಖ ಪ್ರಗತಿಯನ್ನು ದಾಖಲಿಸಲು ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಮಾಡತಕ್ಕದ್ದು ಮತ್ತು ಪ್ರಮಾಣಪತ್ರ ನೀಡತಕ್ಕದ್ದು. ಆದರೆ ಮಗುವನ್ನು ಯಾವುದೇ ಮಂಡಳಿಯ ಪರೀಕ್ಷೆಗೆ ಒಳಪಡಿಸುವಂತಿಲ್ಲ.

* ಸೆಕ್ಷನ್ 31ರನ್ವಯ ಮಕ್ಕಳ ಹಕ್ಕುಗಳನ್ನು ಜಾರಿಗೊಳಿಸಲು ಶಾಲೆ ಮತ್ತು ಭಾಗೀದಾರರು ಕ್ರಮ ವಹಿಸುವುದು.

ಇವುಗಳಲ್ಲದೇ ಐದನೆಯ ಅಧ್ಯಾಯದ 29ನೇ ವಿಧಿಯಲ್ಲಿ ಕಲಿಕೆ, ಕಲಿಸುವಿಕೆ, ಪಠ್ಯ ವಿಷಯ ನಿರ್ವಹಣೆಯ ಕುರಿತಾದ ಖಚಿತ ನಿಲುವುಗಳು ಮತ್ತು ನೀತಿಗಳಿವೆ. ಅಧ್ಯಾಯ ಐದರ ಯಥಾವತ್ ಕನ್ನಡ ಅನುವಾದವನ್ನು ಈ ಕೆಳಗೆ ನೀಡಿದೆ.

**ಪ್ರಾಥಮಿಕ ಶಿಕ್ಷಣದ ಪಠ್ಯ ವಿಷಯ ಮತ್ತು ಅದರ ಪೂರ್ಣಗೊಳಿಸುವಿಕೆ** .......... ಈ ಶೀರ್ಷಿಕೆಯಿಂದ ಅಧ್ಯಾಯ ಆರಂಭವಾಗುತ್ತಿದ್ದು 29ರ ವಿಧಿಯ ವಿವರ ಈ ಕೆಳಗಿದೆ.

29. ಪಠ್ಯ ವಿಷಯ ಮತ್ತು ಪರೀಕ್ಷಾ ಪ್ರಕ್ರಿಯೆ – ಪ್ರಾಥಮಿಕ ಶಿಕ್ಷಣಕ್ಕಾಗಿ ಪಠ್ಯ ವಿಷಯಗಳನ್ನು ಮತ್ತು ಪರೀಕ್ಷಾ ಪ್ರಕ್ರಿಯೆಯನ್ನು, ಸಮುಚಿತ ಸರ್ಕಾರವು, ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಿದ ಒಂದು ಶೈಕ್ಷಣಿಕ ಪ್ರಾಧಿಕಾರವು ನಿಗದಿಪಡಿಸತಕ್ಕದ್ದು.

(2) ಶೈಕ್ಷಣಿಕ ಪ್ರಾಧಿಕಾರವು, (1) ನೇ ಉಪ–ಪ್ರಕರಣದ ಅಡಿಯಲ್ಲಿ ಪಠ್ಯ ವಿಷಯದ ಮತ್ತು ಪರೀಕ್ಷಾ ಪ್ರಕ್ರಿಯೆಗಳನ್ನು ನಿಗದಿಪಡಿಸುವಾಗ, ಈ ಮುಂದಿನವುಗಳನ್ನು ಪರಿಗಣಿಸತಕ್ಕದ್ದು.

ಎಂದರೆ, –

(ಎ) ಸಂವಿಧಾನದಲ್ಲಿ ಪವಿತ್ರ ಸ್ಥಾನ ನೀಡಿರುವ ಮೌಲ್ಯಗಳ ಅನುಸರಣೆ;

(ಬಿ) ಮಕ್ಕಳ ಸರ್ವಾಂಗೀಣ ಅಭಿವೃದ್ಧಿ;

(ಸಿ) ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಯ ವರ್ಧನೆ;

(ಡಿ) ಪೂರ್ಣ ಪ್ರಮಾಣದಲ್ಲಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ವಿಕಸನ;

(ಇ) ಶಿಶು ಸ್ನೇಹಿ ಮತ್ತು ಶಿಶು ಕೇಂದ್ರೀಕೃತ ವಾತಾವರಣದಲ್ಲಿ ಚಟುವಟಿಕೆಗಳು, ಅನ್ವೇಷಣೆ ಮತ್ತು ಸಾಹಸ ಶೋಧನೆ ಮೂಲಕ ಮಕ್ಕಳು ಕಲಿಯುವುದು;

(ಎಫ್) ಶಿಕ್ಷಣ ಮಾಧ್ಯಮವು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆಯಲ್ಲಿರತಕ್ಕದ್ದು;

(ಜಿ) ಮಗುವಿನ ಭಯ, ಆಘಾತ ಹಾಗೂ ಆತಂಕ ಹೋಗಲಾಡಿಸುವುದು ಮತ್ತು ಮಗು ಮುಕ್ತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ನೆರವಾಗುವುದು;

(ಎಚ್) ಜ್ಞಾನದ ಗ್ರಹಿಕೆ ಮತ್ತು ಅದನ್ನು ಅನ್ವಯಿಸುವ ಆತನ ಅಥವಾ ಆಕೆಯ ಸಾಮರ್ಥ್ಯದ ಬಗ್ಗೆ ಮಕ್ಕಳ ಸಮಗ್ರ ಹಾಗೂ ನಿರಂತರ ಮೌಲ್ಯ ನಿರ್ಧರಣೆ.

## ಆರ್‌ಟಿಇ 09 ಮತ್ತು ಕಲಿಸುವಿಕೆಯ ಸಾರಾಂಶ

ಆರ್‌ಟಿಇ 09 ಶಿಕ್ಷಣದ ಗುಣಾತ್ಮಕತೆಗೆ ತಿಳಿಸಿದಂತೆ ಕಲಿಕೆ ಮತ್ತು ಕಲಿಸುವಿಕೆಗೆ ನಾವು ನಮ್ಮ ಸೂಚಕಗಳನ್ನು ಹೊಂದಬೇಕಿದೆ. ಮಗುವಿನ ಕಲಿಕೆಯ ವಾತಾವರಣವು ಭಯ ಮುಕ್ತ, ಆಘಾತ ಹಾಗೂ ಆತಂಕರಹಿತವಾಗಿದ್ದು ಮುಕ್ತ ಅಭಿಪ್ರಾಯಕ್ಕೆ ನೆರವಾಗುವಂತಿರಬೇಕು. ಕಲಿತ ಜ್ಞಾನ ಮತ್ತು ಸಾಮರ್ಥ್ಯಗಳ ಮೌಲ್ಯಮಾಪನಕ್ಕೆ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು ಜಾರಿಗೊಳಿಸಬೇಕಿದೆ. ಈ ಎಲ್ಲಾ ಅಂಶಗಳು ಒಂದಕ್ಕೊಂದು ಸಮ್ಮಿಳಿತವಾದ ಅಂಶಗಳೇ ಆಗಿವೆ. ಉದಾಹರಣೆಗೆ ಭಯ ರಹಿತ ವಾತಾವರಣಕ್ಕೂ ಮುಕ್ತ ಅಭಿಪ್ರಾಯ ವ್ಯಕ್ತಪಡಿಸುವಿಕೆಗೂ ಹತ್ತಿರದ ಸಂಬಂದವಿದೆ. ಎಲ್ಲ ಶಾಲಾ ಪ್ರಕ್ರಿಯೆಗಳನ್ನೂ ಮೌಲ್ಯಮಾಪನದ ಹಂತಕ್ಕೆ ಸೀಮಿತಗೊಳಿಸುವುದು ಪ್ರಸ್ತುತ ದುರಂತ. ಮೌಲ್ಯಮಾಪನವು ಭಾಗೀದಾರರಿಗೆ ಹಿಮ್ಮಾಹಿತಿ ಪಡೆಯುವ ಮತ್ತು ಕಲಿಕೆಯ ಒಂದು ಸಾಧನವೇ ಹೊರತು, ಮಗುವನ್ನು ಬ್ರ್ಯಾಂಡ್ ಮಾಡಲು ಅಲ್ಲ ಎನ್ನುವುದಕ್ಕೂ ಮುಕ್ತ ವಾತಾವರಣ ಮತ್ತು ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಎನ್ನುವುದಕ್ಕೂ ಸಂಬಂಧವಿದೆ.

ಎನ್.ಸಿ.ಎಫ್ 05 ಮತ್ತು ಆರ್‌ಟಿಇ 09ರ ಆಶಯಗಳ ಪೂರೈಕೆಗೆ ರಾಜ್ಯವು ಕೈಗೊಂಡಿರುವ ಕ್ರಮಗಳು ಎನ್.ಸಿ.ಎಫ್ ಮತ್ತು ಆರ್‌ಟಿಇ ಆಶಯ ಮತ್ತು ಶಿಫಾರಸಿನಂತೆ ರಾಜ್ಯ ಸರ್ಕಾರವು

ಹಲವು ಪ್ರಯತ್ನಗಳನ್ನು ಈಗಾಗಲೇ ಮಾಡಿದೆ. ಕಲಿಕಾದಾರರ ಅಗತ್ಯಗಳನ್ನು ಗುರುತಿಸಲಾಗಿದೆ. ಪಠ್ಯಕ್ರಮ ಕುರಿತು ಈ ಕೆಳಗಿನ ಶಿಫಾರಸುಗಳನ್ನು ಮಾಡಿದೆ.

* ಕಲಿಯುವ ವಿಧಾನದಲ್ಲಿ ಕಲಿಯುವವರ ಅವಶ್ಯಕತೆ, ಸಾಮರ್ಥ್ಯ ಮತ್ತು ಮಿತಿಗಳ ಮೇಲೆ ಪಠ್ಯಕ್ರಮ ತನ್ನ ಗಮನ ಕೇಂದ್ರೀಕರಿಸಬೇಕು.

* ಪರಿಷ್ಕೃತ ಪಠ್ಯಕ್ರಮವು ಉನ್ನತ ಶಿಕ್ಷಣಕ್ಕೆ ಸೇರ್ಪಡೆಯಾಗುವ ಮಕ್ಕಳ ಅವಶ್ಯಕತೆಗಳಷ್ಟೇ ಅಲ್ಲದೇ ಎಲ್ಲಾ ಮಕ್ಕಳ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. (ಎಂದರೆ ಹತ್ತನೇ ತರಗತಿಯಲ್ಲಿ ಅನುತ್ತೀರ್ಣರಾಗುವ, ಕೆಳ ತರಗತಿಗಳಲ್ಲಿ ಗಣನೀಯ ಸಂಖ್ಯೆಗಳಲ್ಲಿ ಗೈರುಹಾಜರಾಗುವ ಮಕ್ಕಳ ಅವಶ್ಯಕತೆಗಳನ್ನೂ ಗಮನಿಸಬೇಕು).

* ಮಕ್ಕಳು 8ನೆಯ ತರಗತಿಯಿಂದಲೇ ತಮ್ಮ ಅಸ್ತಿತ್ವ ಕಂಡುಕೊಳ್ಳುವ (ಉದ್ಯೋಗಾವಕಾಶಗಳು) ಹೊಸ ಮಾರ್ಗಗಳನ್ನು ಪಠ್ಯಕ್ರಮ ಒಳಗೊಳ್ಳಬೇಕು.

* ವಿವಿಧ ಕಾರಣಗಳಿಂದ ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ನಿರ್ದಿಷ್ಟ ಹಂತಗಳವರೆಗೆ ಮುಂದುವರೆಯಲಾಗದ ಮಕ್ಕಳಿಗೂ ಪಠ್ಯಕ್ರಮವು ಮುಕ್ತ ಶಾಲಾ ಅವಕಾಶಗಳನ್ನು ತೆರೆದಿಡಬೇಕು.

* ಪಠ್ಯಕ್ರಮ, ಪಠ್ಯವಸ್ತು ಮತ್ತು ಪಠ್ಯಪುಸ್ತಕಗಳನ್ನು ರಾಜ್ಯ ಶಿಕ್ಷಣ ನೀತಿಗನುಗುಣವಾಗಿ ತ್ರಿಭಾಷಾ ಸೂತ್ರದನ್ವಯ ರಚಿಸಬೇಕು.

* ಮಕ್ಕಳ ಮೌಲ್ಯಮಾಪನ ಶಾಲಾ ಹಂತದ ಮಕ್ಕಳ ಮೌಲ್ಯಮಾಪನ 1–5 ತರಗತಿಯವರೆಗೆ, ದಕ್ಷತೆಯನ್ನು ಆಧರಿಸಿ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ದಿಂದಾಗಬೇಕು.

ಈ ಎಲ್ಲಾ ಅಂಶಗಳ ಬಗ್ಗೆ ಗಮನಹರಿಸಲಾಗುತ್ತಿದ್ದರೂ ಸಾಗಬೇಕಾದ ದೂರ ಬಹಳ ಹೆಚ್ಚಾಗಿದ್ದು ನಾವು ಸಾಗುವ ವೇಗ ಇನ್ನೂ ಹೆಚ್ಚಿಸಬೇಕಿದೆ.

# 6. 9ನೇ ತರಗತಿ ಸಮಾಜ ವಿಜ್ಞಾನ ಪಠ್ಯ ಪುಸ್ತಕದ ಪರಿಚಯ

ಎನ್.ಸಿ.ಎಫ್ 2005ರ ಮಾರ್ಗಸೂಚಿಯಂತೆ, 9ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿಯೂ ಕೂಡ ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಹಾಗೂ ವ್ಯವಹಾರ ಅಧ್ಯಯನಗಳನ್ನು ಒಳಗೊಂಡ ಅಂಶಗಳನ್ನು ಸೇರಿಸಲಾಗಿದ್ದು, ಇಲ್ಲಿನ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆಯೂ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಮಗು ಪಡೆಯುವಂತೆಯೂ ಘಟಕಗಳನ್ನು ರಚಿಸಲಾಗಿದೆ.

ಈ ನೂತನ ಪಠ್ಯ ಪುಸ್ತಕವು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿರದೆ ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವಂತೆ ಮತ್ತು ಮಕ್ಕಳು ಸ್ವಸ್ಥ ಸಮಾಜದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುವಂತೆ ಪುಟಗಳ ವಿನ್ಯಾಸಕ್ಕೆ ಮಹತ್ವಕೊಡಲಾಗಿದೆ. ಇಂದಿನ ಸ್ಪರ್ಧಾತ್ಮಕ ಹಾಗೂ ಮಾಹಿತಿ ಯುಗಕ್ಕೆ ಅನುಕೂಲವಾಗುವಂತೆ ಹೆಚ್ಚಿನ ವಿಷಯಗಳನ್ನು ಸೇರಿಸಲಾಗಿದೆ. ಪಠ್ಯ ಪುಸ್ತಕದಲ್ಲಿ ಕ್ಲಿಷ್ಟವಾದ ಪದಗಳನ್ನು ತೆಗೆದು ಸರಳ ಶಬ್ದಗಳ ಜೋಡಣೆ ಕಠಿಣವಾದ ಪದಗಳಿಗೆ ಅರ್ಥ, ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಇಸವಿಗಳನ್ನು ನೀಡಿದ್ದು ಉತ್ತಮ ಕಲಿಕಾಂಶಗಳನ್ನು ಅಳವಡಿಸಿಕೊಳ್ಳಲಾಗಿದೆ.

ಅಲ್ಲದೆ ಸಮಾಜ ವಿಜ್ಞಾನ ಪಠ್ಯ ಪುಸ್ತಕದಲ್ಲಿನ ಕಲಿಕಾಂಶಗಳು ವಿದ್ಯಾರ್ಥಿಗಳನ್ನು ವಿಮರ್ಶಾತ್ಮಕ ಶಿಕ್ಷಣ ಶಾಸ್ತ್ರದ ಅಭ್ಯಾಸಗಳಿಗೆ ತೊಡಗುವಂತೆ ಮಾಡಿ ಆ ಮೂಲಕ ಅವಶ್ಯಕ ಭಾರತೀಯ ಜೀವನ ಮೌಲ್ಯಗಳನ್ನು ಕಲಿಕೆಯ ಮೂಲಕ ತಾವೇ ಕಟ್ಟಿಕೊಳ್ಳುವಂತಹ ವ್ಯವಸ್ಥೆಯನ್ನು ಚಟುವಟಿಕೆಗಳ ಮೂಲಕ ಅನುವು ಮಾಡಿ ಕೊಡಲಾಗಿದೆ. ಉದಾಹರಣೆಯಾಗಿ ನೀಡಿರುವ ಚಟುವಟಿಕೆಗಳನ್ನೇ ತಾವು ತರಗತಿಯಲ್ಲಿ ಬಳಸಬೇಕೆಂದೇನಿಲ್ಲ. ತಮ್ಮ ತಮ್ಮ ಸೂಕ್ತ ಮಾರ್ಪಾಡುಗಳೊಂದಿಗೆ ಬಳಸಿಕೊಳ್ಳಬಹುದಾಗಿದೆ ಎಂಬುದನ್ನು ಮರೆಯಬಾರದು. ಏಕೆಂದರೆ ಮಕ್ಕಳನ್ನು ಶಾಲೆಯಲ್ಲಿಯೇ ಸಮಾಜ ಜೀವನಕ್ಕೆ ಅಣಿಗೊಳಿಸುವ ಮಹತ್ತರವಾದ ಕೆಲಸ ಇಂದಿನ ಶಿಕ್ಷಣ ಕ್ರಮದ ಕಾಳಜಿಯಾಗಿರುವುದರಿಂದ ಮಗು ತನ್ನ ಜೀವನದ ಸಂಘರ್ಷಗಳಿಂದ ಮುಕ್ತರಾಗಲು ಶಾಲೆ ಬಹುಮುಖ್ಯವಾಗಿ ಮಾರ್ಗದರ್ಶನ ನೀಡಬೇಕಾಗಿರುವುದರಿಂದ ಮಗುವಿನ ಅನುಭವಾತ್ಮಕ ಕಲಿಕೆಗಳೊಂದಿಗೆ ಸಮಾಜ ವಿಜ್ಞಾನದ ತರಗತಿ ಪ್ರಕ್ರಿಯೆಗಳು ನಡೆಯುವಂತೆ ಇಲ್ಲಿ ಆಲೋಚಿಸಲೇಬೇಕಾಗಿದೆ.

ಈ ಹಿನ್ನೆಲೆಯಲ್ಲಿಯೇ ಸಮಾಜ ವಿಜ್ಞಾನ ಪಠ್ಯದ ವಿಷಯವು ಏಕತೆಯ ಮನೋಭಾವವನ್ನು ಒಳಗೊಂಡಿದ್ದು, ಲಿಂಗ ಸಮಾನತೆ, ವರ್ಗ ಸಮಾನತೆ ಬುಡಕಟ್ಟು, ದಲಿತ, ಅಲ್ಪ ಸಂಖ್ಯಾತರ

ಬಗ್ಗೆ ಕಾಳಜಿಗಳನ್ನು ಬಳಸಿಕೊಳ್ಳುವಂತೆ ಮಕ್ಕಳು ಕಲಿಯಲು ಅವಕಾಶ ಕಲ್ಪಿಸಿರುವುದರಿಂದ ಶಿಕ್ಷಕರು ವಿಮರ್ಶಾತ್ಮಕ ಚಿಂತನೆ, ಇದಕ್ಕೆ ಮಕ್ಕಳನ್ನು ಅಣಿಗೊಳಿಸುವುದು, ಕಡ್ಡಾಯವಾಗಿದೆ. ಸಾಮಾಜಿಕ, ಆರ್ಥಿಕ, ನೈತಿಕ ಕ್ಷೇತ್ರಗಳಲ್ಲಿ ಚಿಂತನ ಪರವಾದ, ಹಾಗೂ ವರ್ತಮಾನದ ಕಾಳಜಿಗಳನ್ನು, ಮಕ್ಕಳು ಕಲಿಯುತ್ತಾ ಪ್ರಜಾಸತ್ತಾತ್ಮಕವಾದ ಭಾವನೆಗಳನ್ನು ಸಮಾಜ ವಿಜ್ಞಾನ ವಿಷಯದಲ್ಲಿ ಕಟ್ಟಿಕೊಳ್ಳುವುದು ಕೂಡ ಅನಿವಾರ್ಯವಾಗಿದೆ ಎಂಬುದನ್ನು ಶಿಕ್ಷಕರು ಮನಗಾಣಬೇಕು.

ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ 9ನೇ ತರಗತಿ ಸಮಾಜ ವಿಜ್ಞಾನ ತರಗತಿ ಪ್ರಕ್ರಿಯೆಗಳಲ್ಲಿ ವಿಮರ್ಶಾತ್ಮಕ ಶಿಕ್ಷಣ ಕ್ರಮದೊಂದಿಗೆ ಮಗುವಿನ ಅನುಭವಾತ್ಮಕ ಕಲಿಕೆಗೆ ಘಟಕಗಳನ್ನು ಹೇಗೆ ಅರ್ಥೈಸಿಕೊಳ್ಳಬಹುದು ಎಂಬ ಸೂಕ್ಷ್ಮ ಪರಿಚಯವನ್ನು ಈ ಕೆಳಗಿನ ಉದಾಹರಣೆಗಳೊಂದಿಗೆ ಶಿಕ್ಷಕರು ಗಮನಿಸಬಹುದು.

ಉದಾಹರಣೆ

ಕರ್ನಾಟಕದ ಜನಸಂಖ್ಯೆ (ಭೂಗೋಳ) ಎಂಬ ಘಟಕದಲ್ಲಿ ಜನಸಂಖ್ಯೆಯನ್ನು– 'ಸಂಪನ್ಮೂಲ ಹೇಗೆ?' ಎಂದು ಅರ್ಥೈಸಲಾಗಿದೆ.

ಈ ಜ್ಞಾನವನ್ನು ಮಗು ಅರಿಯುವಾಗ ತನ್ನ ಕುಟುಂಬದಲ್ಲಿನ ಸದಸ್ಯರ (ತಂದೆ, ತಾಯಿ, ಅಣ್ಣ ತಮ್ಮ, ಅಜ್ಜಿ, ತಾತ ಒಳಗೊಂಡಂತೆ) ಮನೆಯ ದಿನನಿತ್ಯದ ಕಾರ್ಯಗಳನ್ನು ನಿರ್ವಹಿಸುವಲ್ಲಿ ಅವರ ಪ್ರಾಮುಖ್ಯತೆ ಏನೆಂಬುದನ್ನು ಅರಿಯುವುದರೊಂದಿಗೆ ಹಾಗೂ ತನ್ನೂರಿನಲ್ಲಿ ಯಾವುದೇ ಸಾರ್ವತ್ರಿಕ ಕೆಲಸವನ್ನು (ದೇವರ ಜಾತ್ರೆ, ಹಬ್ಬ, ಉತ್ಸವ ಇತ್ಯಾದಿ) ಸಾಮೂಹಿಕ ಜನ ಭಾಗವಹಿಸಿ ಮಾಡುವ ಕಾರ್ಯಗಳ ಹಿನ್ನಲೆಯಲ್ಲಿ ರಾಜ್ಯದ, ದೇಶದ, ಜಸಂಖ್ಯೆಯ ಮಹತ್ವವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು.

ಈ ಘಟಕದ ಮಗುವಿನ ಅನುಭವಾತ್ಮಕ ಕಲಿಕೆಗೆ ಈ ಕೆಳಗಿನ ಚಟುವಟಿಕೆಯನ್ನು ಸೂಚಿಸಲಾಗಿದೆ.

* ತರಗತಿಯ ಮಕ್ಕಳ ಸಂಖ್ಯೆಗೆ ಅನುಗುಣವಾಗಿ 4 ಅಥವಾ 5 ಗುಂಪುಗಳನ್ನು ರಚಿಸುವುದು.

ಪ್ರತಿ ಗುಂಪಿನ ಮಕ್ಕಳಿಗೂ ತಮ್ಮ ತಮ್ಮ ಕುಟುಂಬಗಳ ಸದಸ್ಯರ ಕೆಳಗಿನ ಮಾಹಿತಿಗಳನ್ನು ಸಂಗ್ರಹಿಸುವುದು.

* ಗಂಡು–ಹೆಣ್ಣಿನ ಪ್ರಮಾಣ
* ಅಕ್ಷರಸ್ಥರು–ಅನಕ್ಷರಸ್ಥರು
* ವಯೋಮಾನ

* ದುಡಿಮೆ ಮಾಡುವವರು

* ದುಡಿಮೆ ಇಲ್ಲದವರು

* ಕುಟುಂಬದ ಯಜಮಾನ

* ಆರೋಗ್ಯವಂತರು

ಈ ಅಂಶಗಳನ್ನು ಪಟ್ಟಿಮಾಡಿ ಪರಸ್ಪರ ಚರ್ಚಿಸಿ ಪ್ರತಿ ಕುಟುಂಬದ ಸದಸ್ಯರ ಮಹತ್ವವನ್ನು ಅರಿಯುವುದು.

* ನಂತರ ತರಗತಿಯ ಎಲ್ಲ ಗುಂಪಿನಲ್ಲಿ ಸರಾಸರಿಯಾಗಿ ದುಡಿಯುವ ವಯೋಮಾನದವರ ಪ್ರಮಾಣ ಅನಕ್ಷರತೆ, ಸಾಕ್ಷರತೆ, ಗಂಡು ಹೆಣ್ಣಿನ ಪ್ರಮಾಣ ಹಾಗೂ ದುಡಿಯದವರ ಪ್ರಮಾಣವನ್ನು ಕಪ್ಪು ಹಲಗೆಯ ಮೇಲೆ ಬರೆಯುವುದು.

* ಆ ಮೂಲಕ ಕುಟುಂಬಗಳಲ್ಲಿ ದುಡಿಯುವವರು ಯಾರು? ಅವರ ಆರೋಗ್ಯ, ಕಾರ್ಯಕ್ಷಮತೆಯನ್ನು ಮಕ್ಕಳು ತಿಳಿಯುವುದರ ಮೂಲಕ ದುಡಿಯುವ ಸದಸ್ಯರು ಕುಟುಂಬ ಒಂದಕ್ಕೆ ಹೇಗೆ ಪ್ರಮುಖರೆನ್ನಿಸುತ್ತಾರೆ (ಸಂಪನ್ಮೂಲ) ಎಂಬುವ ಹಿನ್ನಲೆಯಲ್ಲಿ ರಾಜ್ಯ ಅಥವಾ ದೇಶಕ್ಕೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲದ ಪ್ರಾಮುಖ್ಯತೆಯ ಅರಿವಿನ ಜ್ಞಾನವನ್ನು ಕಟ್ಟಿಕೊಳ್ಳುವುದು.

ಹೀಗೆ ಸಮಾಜ ವಿಜ್ಞಾನ ಪಠ್ಯ ಪುಸ್ತಕದಲ್ಲಿನ ಪ್ರತಿ ವಿಭಾಗದ ಘಟಕಗಳನ್ನು ಅನುಭವಾತ್ಮಕವಾಗಿ ಮಗು ಅರ್ಥೈಸಿಕೊಂಡು ಜ್ಞಾನ ಕಟ್ಟಿಕೊಳ್ಳುವಂತಹ ತರಗತಿಯ ಪ್ರಕ್ರಿಯೆಯ ಅನಿವಾರ್ಯತೆ ಇದೆ ಎಂಬುದು ಸಮಾಜ ವಿಜ್ಞಾನ ಪಠ್ಯಪುಸ್ತಕದ ಆಶಯವಾಗಿದೆ. ಆದ್ದರಿಂದಲೇ ನೂತನ ಪಠ್ಯ ಪುಸ್ತಕವು NCF 2005ರ ಮಾರ್ಗದರ್ಶನದಂತೆ ಭಿನ್ನವಾಗಿ, ವಿಶಿಷ್ಟವಾಗಿ ಮೂಡಿಬಂದಿದೆ.

# 7. 9ನೇ ತರಗತಿ ಹೊಸ ಪಠ್ಯ ಪುಸ್ತಕದಲ್ಲಿ ಅಳವಡಿಸಿಕೊಂಡಿರುವ ಹೊಸ ಅಂಶಗಳು

ಪ್ರಸ್ತುತ ಹೊಸ ಶಿಕ್ಷಣ ಕ್ರಮವು ಎನ್.ಸಿ.ಎಫ್ 2005, ಮತ್ತು ಸಿ.ಸಿ.ಇ. 2009ರ ಆಶಯದಂತೆ ಮೂಡಿಬಂದದ್ದು ಈ ಹಿನ್ನಲೆಯಲ್ಲಿ ಬದಲಾಗಿರುವ ಒಂಭತ್ತನೇ ತರಗತಿಯ ಪಠ್ಯಪುಸ್ತಕಗಳಲ್ಲಿನ ಸಮಾಜ ವಿಜ್ಞಾನವು ಸಹ ರಚನೆಯಾಗಿದೆ. ಇಂದಿನ ಜೀವನಕ್ಕೆ ಪ್ರತಿಯೊಬ್ಬ ಮಗುವನ್ನು ಅಣಿಗೊಳಿಸುವಲ್ಲಿ ಸಮಾಜ ವಿಜ್ಞಾನ ವಿಷಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಗುವಿನ ಸರ್ವತೋಮುಖ ಪ್ರಗತಿಗಾಗಿ ನೈಜ ಬದುಕಿಗೆ ಹತ್ತಿರವಾದ, ವೈಶಿಷ್ಟ್ಯಪೂರ್ಣವಾದ ಅಂಶಗಳು ಈಗಿನ 9ನೇ ತರಗತಿ ಸಮಾಜ ವಿಜ್ಞಾನ ವಿಷಯದಲ್ಲಿ ಹೇಗೆ ಅಳವಡಿಸಿಕೊಳ್ಳಲಾಗಿದೆ ಎಂಬುದನ್ನು ಈ ಮುಂದೆ ಚರ್ಚಿಸಲಾಗಿದೆ.

1) ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಪಠ್ಯಪುಸ್ತಕದಲ್ಲಿ 6 ವಿಭಾಗಗಳನ್ನು ಈ ವರ್ಷವೂ ಇಡಲಾಗಿದ್ದು, ಅನುಕೂಲಕಾರರು ಆಯ್ದ ವಿಭಾಗಗಳ ಅನುಕೂಲಿಸುವ ಜ್ಞಾನ ಕಟ್ಟಿಕೊಳ್ಳುವ ಉದ್ದೇಶದ ಹಿನ್ನಲೆಯನ್ನು ಅರಿತುಕೊಳ್ಳುವುದು ಹೆಚ್ಚು ಸೂಕ್ತ.

2) ಪಠ್ಯದ ಭೂಗೋಳಶಾಸ್ತ್ರ ವಿಭಾಗದಲ್ಲಿ ಕಳೆದ ಪಠ್ಯದಲ್ಲಿದ್ದ ಪ್ರಪಂಚದ ಭೌಗೋಳಿಕ ವಿಚಾರಕ್ಕೆ ಬದಲಾಗಿ ಈಗ ಬದಲಾದ ಪಠ್ಯದಲ್ಲಿ ಕರ್ನಾಟಕದ ಭೂಗೋಳಶಾಸ್ತ್ರವನ್ನು 10 ಅಧ್ಯಾಯಗಳಲ್ಲಿ ಸುದೀರ್ಘವಾಗಿ ಪರಿಚಯಿಸಲಾಗಿದೆ. ಇದರ ಮುಖ್ಯ ಉದ್ದೇಶ ಮಗು ತನ್ನ ಮತ್ತು ಸುತ್ತಲ ಭೌಗೋಳಿಕ ಹಿನ್ನಲೆಯನ್ನು ಕಡ್ಡಾಯವಾಗಿ ಅರ್ಥೈಸಿಕೊಳ್ಳಬೇಕೆಂಬುದು ಇಲ್ಲಿನ ಆಶಯವಾಗಿದೆ.

3) ಹಾಗೆಯೇ ರಾಜ್ಯಶಾಸ್ತ್ರ ವಿಭಾಗದಲ್ಲಿ ಸಂವಿಧಾನ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜೊತೆಗೆ ಆಧುನಿಕ ಸಮಾಜ ಇನ್ನಿಲ್ಲದಂತೆ ಕೊರಗುತ್ತಿರುವ ಭಿನ್ನತೆ, ಅನ್ಯೆಕ್ಯತೆ ಸಾಮರಸ್ಯಗಳನ್ನು ತೊಡೆದು ಹಾಕಲು ಬೆಳೆಯುತ್ತಿರುವ ಮಗುವಿನಲ್ಲಿ ಏಕತೆ ಹೊಂದಾಣಿಕೆಯ ಮೌಲ್ಯಗಳನ್ನು ಕಟ್ಟಲು ರಾಷ್ಟ್ರೀಯ ಭಾವೈಕ್ಯತೆ ಎಂಬ ಘಟಕವನ್ನು ಪ್ರಸ್ತುತಪಡಿಸಲಾಗಿದೆ.

4) ಪ್ರತಿಯೊಂದು ಪಾಠದ ಪ್ರಾರಂಭದಲ್ಲಿ ನಾಲ್ಕಾರು ವಾಕ್ಯಗಳಲ್ಲಿ ನೀಡಲಾಗಿರುವ ಅಂಕಣವು ಸೂಕ್ಷ್ಮವಾಗಿ ಪಾಠದ ಪ್ರಧಾನ ವಿಷಯದ ತಿರುಳನ್ನು ನೀಡಿರುವುದರಿಂದ ಘಟಕಕ್ಕೆ ಸಂಬಂಧಿಸಿದ ಜ್ಞಾನ ರಚನೆ ಏನೆಂಬುದನ್ನು ಘಟಕದ ಮೊದಲೇ ಪರಿಚಯ ಮಾಡಿಕೊಳ್ಳಬಹುದಾಗಿದೆ.

5) ಪಠ್ಯದ ವ್ಯವಹಾರ ಅಧ್ಯಯನ ವಿಭಾಗದಲ್ಲಿ ಮಗು ವ್ಯವಹಾರದ ಪರಿಕಲ್ಪನೆಯನ್ನು ಪ್ರೌಢಹಂತದಿಂದಲೇ ತಿಳಿದುಕೊಳ್ಳುವಂತೆ ಅನುಕೂಲವಾಗಲು ನಿತ್ಯದ ಯಾವುದೇ ವ್ಯವಹಾರ ಪ್ರಕ್ರಿಯೆಯಲ್ಲಿ ಖರ್ಚು, ಆದಾಯಗಳನ್ನು ಹಾಗೂ ಅವುಗಳಿಗೆ ಸಂಬಂಧಿಸಿದ ಲೆಕ್ಕ ಬರಹ (ಕ್ಯಾಸ್‌ಬುಕ್)ದ ಪರಿಕಲ್ಪನೆಯನ್ನು ಮೂಡಿಸುವುದರ ಜೊತೆಗೆ ಲಾಭ ನಷ್ಟದ ಪ್ರಮಾಣವನ್ನು ಮಗುವಿಗೆ ಅರ್ಥೈಸುವ ಉದ್ದೇಶವಿದೆ.

6) ಪಠ್ಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದಂತೆ 9ನೇ ತರಗತಿಯಿಂದಲೇ ಮಗು ಹಣಕಾಸಿನ ವ್ಯವಹಾರದ ಪರಿಕಲ್ಪನೆಯನ್ನು ಮಾಡಿಸಿಕೊಳ್ಳುವ ಉದ್ದೇಶಕ್ಕಾಗಿ, ನೂತನವಾಗಿ 'ಆರ್ಥಿಕ ರಚನೆ' ಎಂಬ ಹೊಸ ಘಟಕವನ್ನು ಪರಿಚಯಿಸಲಾಗಿದೆ.

7) ಪ್ರತಿ ಘಟಕಗಳ ಮುಖ್ಯಾಂಶಗಳನ್ನು ಮನನ ಮಾಡಿಕೊಳ್ಳಬೇಕಾದ ಅಂಶಗಳನ್ನು 'ಬಾಕ್ಸ್'ನಲ್ಲಿ ನೀಡಲಾಗಿದ್ದು ಅವುಗಳನ್ನು ಗಮನಿಸಿ, ಮಕ್ಕಳ ಚರ್ಚೆಗೆ ಅವಕಾಶ ಮಾಡಿಕೊಟ್ಟು ಪರಿಕಲ್ಪನಾತ್ಮಕ ಪರಿಧಿಗಳನ್ನು ವಿಸ್ತರಿಸುವುದು, ಅಲ್ಲದೆ ಪ್ರತಿಯೊಂದು ಘಟಕವೂ ಪೂರಕವಾದ ಚಟುವಟಿಕೆಗಳನ್ನು ಹೊಂದಿದ್ದು, ಮಗು ಈ ಚಟುವಟಿಕೆಯ ಮೂಲಕ ತನ್ನ ಜೀವನವನ್ನು ಅರ್ಥೈಸಿಕೊಳ್ಳುವಂತೆ ಅನುಕೂಲಿಸುವುದು ಹಾಗೂ ಘಟಕಕ್ಕೆ ಪೂರಕವಾಗುವ ಮತ್ತಷ್ಟು ಚಟುವಟಿಕೆಗಳನ್ನು ಅನುಕೂಲಕಾರರು ಮತ್ತು ಮಕ್ಕಳು ಸೃಷ್ಟಿಸಿಕೊಂಡು ವಿಮರ್ಶಾಯುಕ್ತ ಶಿಕ್ಷಣ ಕ್ರಮದ ಮೂಲಕ ಜ್ಞಾನ ಕಟ್ಟಿಕೊಳ್ಳುವುದು ಬಹುದೊಡ್ಡ ಆಶಯವಾಗಿದೆ.

8) ಅರ್ಥಶಾಸ್ತ್ರದ ಆರ್ಥಿಕ ವಲಯ ಘಟಕದಲ್ಲಿ ಇಂದಿನ ವಿನೂತನ ಆರ್ಥಿಕ ವಲಯಗಳಾದ ಕೃಷಿವಲಯ, ಪಶುಪಾಲನೆ, ಮೀನುಗಾರಿಕೆ, ಗಣಿಗಾರಿಕೆಗಳ ಜೊತೆಗೆ 'ಪುಷ್ಪ ಕೃಷಿ' ಎಂಬ ಹೆಚ್ಚು ಬೇಡಿಕೆ ಇರುವ ಆರ್ಥಿಕ ವಲಯದ ಪರಿಕಲ್ಪನೆಯನ್ನು ಸೇರಿಸಲಾಗಿದೆ.

9) ಪಠ್ಯದಲ್ಲಿ ಪ್ರತಿ ಘಟಕಾಂಶವು ಉತ್ತಮವಾದ ಭಾಷಾ ಶೈಲಿಯೊಂದಿಗೆ ಮೂಡಿಬಂದಿದ್ದು, ಸಂದರ್ಭೋಚಿತ ನಕ್ಷೆಗಳು, ಆಕರ್ಷಕ ಚಿತ್ರಪಟಗಳು, ಕಂಡುಬಂದಿದ್ದು, ಪಠ್ಯಪುಸ್ತಕ ಆಕರ್ಷಣೀಯವಾಗಿದೆ.

10) ಪ್ರತಿ ಘಟಕದ ಅಭ್ಯಾಸ ಪ್ರಶ್ನೆಗಳು ಸಿ.ಸಿ.ಇ. ಹಿನ್ನಲೆಯ ಚಟುವಟಿಕೆಗಳೊಂದಿಗೆ ರಚಿತವಾಗಿದ್ದು, ಉತ್ತರವು ಎನ್.ಸಿ.ಎಫ್. ಆಶಯವನ್ನು ಅರ್ಥೈಸಿಕೊಳ್ಳುವಂತೆ ಕೇಳಲಾಗಿದೆ.

11) ಕಲಿಕಾ ದೃಷ್ಟಿಯಿಂದ ಪ್ರತಿಘಟಕವನ್ನು ಚಿಕ್ಕ ಚಿಕ್ಕ ಉಪಘಟಕಗಳ ಶೀರ್ಷಿಕೆಯಡಿಯಲ್ಲಿ ಚರ್ಚಿಸಲಾಗಿದೆ. ಈ ಉಪಘಟಕದ ಜ್ಞಾನರಚನಾ ಅಂಶಗಳನ್ನು ವಿವಿಧ ರೀತಿಯ ಕಲಿವಿನ ವಿಧಾನಗಳ ಮೂಲಕ ಅರ್ಥೈಸಲು ಹಾಗೂ ವಿಮರ್ಶಾತ್ಮಕ ಬುದ್ಧಿ ಮತ್ತೆಯನ್ನು ಮಗು ಬೆಳಸಿಕೊಳ್ಳಲು ಪ್ರತಿ ಘಟಕದಲ್ಲಿ ಎಲ್ಲಾ ರೀತಿಯ ಕಲಿಕೆಯ ಅವಕಾಶ ಕಲ್ಪಿಸಲಾಗಿದೆ.

12) ಆಯಾ ಕಾಲದ ರಾಜ, ಆತನ ಆಡಳಿತ, ಆದರ್ಶಗಳು, ಚಿಂತನೆ ತತ್ವ ವಿಮಾಂಸೆಗಳನ್ನು ಪ್ರಸ್ತುತ ಸಂದರ್ಭಕ್ಕೆ ಅನ್ವಯಿಸಲಾಗಿದೆ.

13) ಪಠ್ಯದ ಮುಖಪುಟದ ಹಂಪಿಯ ಕಲ್ಲಿನ ರಥವು ಇತಿಹಾಸದ ಚಲನೆಯನ್ನು ಪ್ರತಿಬಿಂಬಿಸುವಂತೆ ಇದ್ದು ಹಿಂಬದಿಯ ವಿಧಾನ ಸೌಧಕ್ಕೆ ಅದು ಚಲಿಸಿ, ನಮ್ಮ ಕಾಲವನ್ನು ಎಚ್ಚರಿಕೆಯಿಂದ ಗಮನಿಸಿ, ಇಂದಿನ ಸರಕಾರ ಆಡಳಿತ ನಡೆಸಲಿ ಎಂಬ ಸಂದೇಶ ನೀಡುವಂತಿದೆ.

14) ಸಮಾಜಶಾಸ್ತ್ರ ವಿಭಾಗದಲ್ಲಿ ಬರುವ ಕುಟುಂಬ, ಸಾಮಾಜೀಕರಣ ಹಾಗೂ ಕುಟುಂಬದ ಸಂಬಂಧಗಳನ್ನು ಮಗು ಅರ್ಥೈಸಿಕೊಳ್ಳುವಾಗ ತನ್ನ ಜೀವನವನ್ನೇ ಪ್ರಯೋಗಾಲಯವನ್ನಾಗಿ ಮಾಡಿಕೊಂಡು ಅನುಭವಾತ್ಮಕ ಕಲಿಕೆಗೆ ಅವಕಾಶ ಕಲ್ಪಿಸುವಂತಿದೆ.

15) ಪಠ್ಯದ ಪ್ರತಿ ಘಟಕವು ತನ್ನ ವ್ಯಾಪ್ತಿಯಲ್ಲಿ ಮಗುವಿಗೆ ಮೌಲ್ಯಗಳು, ವ್ಯಕ್ತಿಗೌರವ, ಮಾನಸಿಕ ಸ್ಥೈರ್ಯ, ಆತ್ಮವಿಶ್ವಾಸ, ಸೋಲನ್ನು ಸ್ವೀಕರಿಸುವ ಭಾವ, ರಾಷ್ಟ್ರಭಕ್ತಿ, ಮುಂತಾದ 'ಸಮಾಜಮುಖಿ' ಚಿಂತನೆಗಳನ್ನು ಬೆಳೆಸಿಕೊಳ್ಳುವಲ್ಲಿ ಮಾರ್ಗದರ್ಶನ ನೀಡುತ್ತವೆ.

16) ಪರಿಸರ ಜಾಗೃತಿ, ಸಂಘಜೀವನ ವಿಶ್ವಭ್ರಾತೃತ್ವದಂತಹ ಭಾವನೆಗಳು ಘಟಕಗಳ ಮೂಲಕ ಬೆಳೆಸಲು ಯತ್ನಿಸಲಾಗಿದೆ.

17) ಐತಿಹಾಸಿಕ ನಿಲವುಗಳ ಸಾಂಸ್ಕೃತಿಕ ಪರಂಪರೆಯ ಮಹತ್ವವನ್ನು ಮಗು ತಾನೇ ಜ್ಞಾನಕಟ್ಟಿಕೊಳ್ಳಲು ಇತಿಹಾಸ ವಿಭಾಗದ ಘಟಕಗಳು, ಸರಳ ಮತ್ತು ಸ್ಪಷ್ಟ ರಚನಾ ವಾಕ್ಯಗಳೊಂದಿಗೆ ರಚಿಸಲ್ಪಟ್ಟಿದೆ.

18) ವಿಶ್ವದ ವಿವಿಧ ಧರ್ಮಗಳ ಸಮನ್ವಯ, ಸಾಮರಸ್ಯದ ಸಂಕೇತವಾಗಿ ಇತಿಹಾಸ ಸಂಬಂಧ ವಿಭಾಗ ಮೊದಲನೇ ಘಟಕವು ಮಗುವನ್ನು ತಟ್ಟುತ್ತದೆ.

19) ಮಗುವಿನ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ಪಠ್ಯವು ರಚಿತವಾಗಿದ್ದು, ರಾಷ್ಟ್ರದ ಏಕರೂಪ ಶಿಕ್ಷಣ ಕ್ರಮಕ್ಕೆ ಕಲಿಕಾರ್ಥಿಯನ್ನು ಸಿದ್ಧಗೊಳಿಸುವಂತಿದೆ.

20) ಮಗುವಿನ ಸ್ವಂತ ಉದ್ಯೋಗದ ಪರಿಕಲ್ಪನೆಯನ್ನು ಮೂಡಿಸುವಂತಹ ಘಟಕಗಳು ಅರ್ಥಶಾಸ್ತ್ರ ಮತ್ತು ವ್ಯವಹಾರ ಅಧ್ಯಯನ ವಿಭಾಗಗಳು ಹೊಂದಿವೆ.

## 8. 9ನೇ ತರಗತಿ ಸಮಾಜ ವಿಜ್ಞಾನ ಪಠ್ಯ ಪುಸ್ತಕವನ್ನು ಅರ್ಥೈಸಿಕೊಳ್ಳುವ ಬಗೆ

9ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ರಚಿಸಿರುವ ಪ್ರಸ್ತುತ ಸಮಾಜ ವಿಜ್ಞಾನ ಪಠ್ಯಪುಸ್ತಕವು ಬದಲಾಗುತ್ತಿರುವ ವರ್ತಮಾನ ಸಮಾಜದ ಸನ್ನಿವೇಶಗಳಿಗೆ ವಿದ್ಯಾರ್ಥಿಯು ತನ್ನನ್ನು ತೊಡಗಿಸಿಕೊಳ್ಳಲು ಅನುಕೂಲವಾಗುವಂತೆ ರಚಿಸಲಾಗಿದ್ದು, ಇತಿಹಾಸ, ರಾಜ್ಯಶಾಸ್ತ್ರ, ಭೂಗೋಳಶಾಸ್ತ್ರ ಅರ್ಥಶಾಸ್ತ್ರ, ಸಮಾಜಶಾಸ್ತ್ರ ಹಾಗೂ ವ್ಯವಹಾರ ಅಧ್ಯಯನಗಳನ್ನು ಈ ತರಗತಿಯಲ್ಲಿಯೂ ಮುಂದುವರೆಸಲಾಗಿದೆ.

ನೂತನ ಪಠ್ಯ ಪುಸ್ತಕದಲ್ಲಿ ಕಲಿಕಾ ವಿಧಾನಗಳಾದ ಅಂತರ್ಗತ ವಿಧಾನ (Intergrated Approach) ರಚನಾತ್ಮಕ ವಿಧಾನ (Constructive Approach, ಹಾಗೂ ಸುರುಳಿಯಾಕಾರದ (Spirol Approach) ವಿಧಾನಗಳನ್ನು ಅಳವಡಿಸಲಾಗಿದೆ.

ಅಂತರ್ಗತ (ಸಮ್ಮಿಳಿತ) ವಿಧಾನವೆಂದರೆ ಮಗುವು ಕಟ್ಟಿಕೊಳ್ಳಬೇಕಾದ ಜ್ಞಾನದ ಹಿನ್ನಲೆಯಲ್ಲಿ ಎಲ್ಲಾ ವಿಷಯಾಂಶಗಳನ್ನು ನೋಡುವ ಕ್ರಮ

ಉದಾ :– ವಿಜಯನಗರ ಸಾಮ್ರಾಜ್ಯದ ಬಗ್ಗೆ ಅರ್ಥೈಸಿಕೊಳ್ಳುವಾಗ ಮಗು ಈ ಸಾಮ್ರಾಜ್ಯದ ಐತಿಹಾಸಿಕ ಹಿನ್ನಲೆ, ರಾಜಕೀಯವಾದ ಬೆಳವಣಿಗೆಗಳು ಇದಕ್ಕೆ ಸಂಬಂಧಿಸಿದಂತೆ ಆ ಕಾಲದ ರಾಜರ ಆಡಳಿತ ಕ್ರಮ, ಮುತ್ತು ರತ್ನಗಳಿಂದ ಸಮೃದ್ಧ ಈ ಸಾಮ್ರಾಜ್ಯದ ಆರ್ಥಿಕ ಪ್ರಭಾವ, ಧಾರ್ಮಿಕವಾದ ಸಮನ್ವಯತೆ ವೈಜ್ಞಾನಿಕ ಹಿನ್ನಲೆಯ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆ, ಕಳ್ಳತನ, ಮೋಸ ವಂಚನೆಗಳಿಂದ ಮುಕ್ತವಾಗಿದ್ದ ಹಿನ್ನಲೆಯಲ್ಲಿ ಸಾಮಾಜಿಕ ಭದ್ರತೆ ಮುಂತಾದ ಅಂಶಗಳನ್ನು ವಿಜಯನಗರ ಸಾಮ್ರಾಜ್ಯದ ಕಲಿಕೆಯ ಸಂದರ್ಭದಲ್ಲಿ ಈ ಸಮ್ಮಿಳಿತ ವಿಧಾನವನ್ನು ಅರಿಯುವರು.

ಹಾಗೆಯೇ, ರಚನಾತ್ಮಕ ವಿಧಾನವೆಂದರೆ, ಜ್ಞಾನ ಕಟ್ಟಿಕೊಳ್ಳಲು ಮಗು ತನ್ನ ಅನುಭವಗಳನ್ನು ಸಂಘಟಿಸಿ ಅನುಭವಾತ್ಮಕವಾಗಿ ಜ್ಞಾನ ಪುನರ್‌ರಚನೆಗೆ ಅನುಕೂಲಿಸಿಕೊಳ್ಳುವುದೇ ರಚನಾವಾದವಾಗಿದೆ. ಅಂದರೆ ತಮ್ಮದೇ ಆದ ರೀತಿಯಲ್ಲಿ ಜ್ಞಾನ ಕಟ್ಟಿಕೊಳ್ಳುವುದು ಎಂದರ್ಥ.

**ಉದಾ :**

**ಭಾಗ – ಭೂಗೋಳ / ಘಟಕ : ಕರ್ನಾಟಕದ ಜಲಸಂಪತ್ತು**

ಈ ಘಟಕದಲ್ಲಿ ಮಗು ತನ್ನ ಅನುಭವದ ಮೂಲಕ ಜ್ಞಾನ ಕಟ್ಟಿಕೊಳ್ಳುವ ಪ್ರಯತ್ನ ಮಾಡುತ್ತದೆ.

ಹೇಗೆಂದರೆ ನೀರು ಒಂದು ಸಂಪತ್ತು ಎಂದು ಅರ್ಥೈಸಿಕೊಳ್ಳುವಲ್ಲಿ ಮಗು ತಾನು ಮತ್ತು ತನ್ನ ಸುತ್ತ ನೀರಿನ ಕೊರತೆ ಉಂಟಾದಂತಹ ಸಂದರ್ಭದಲ್ಲಿ ಅದರ ಅವಶ್ಯಕತೆ, ಪ್ರಾಮುಖ್ಯತೆ ಎಷ್ಟೆಂಬುದನ್ನು ಅನುಭವಿಸುವುದರ ಮೂಲಕ ನೀರು ಒಂದು ಸಂಪನ್ಮೂಲ ಹೇಗೆಂಬ ಜ್ಞಾನವನ್ನು ಕಟ್ಟಿಕೊಂಡು, ತನ್ನ ನಿಜ ಜೀವನದಲ್ಲಿ ನೀರಿನ ಬಳಕೆ ಮಾಡಿಕೊಳ್ಳುವಲ್ಲಿ ತನ್ನ ಪಾತ್ರವೇನೆಂಬುದನ್ನು ಅರಿತುಕೊಳ್ಳುತ್ತದೆ.

ಇದೇ ರೀತಿಯಾಗಿ ಸಮಾಜ ವಿಜ್ಞಾನದ ಎಲ್ಲಾ ಘಟಕಗಳಿಗೂ ಈ ರಚನಾವಾದ ವಿಧಾನವನ್ನು ಶಿಕ್ಷಕರು ಅಳವಡಿಸಿಕೊಳ್ಳಬಹುದು.

**ಸುರುಳಿಯಾಕಾರದ ವಿಧಾನವೆಂದರೆ :** ಮಗು ತಾನು ಕಟ್ಟಿಕೊಳ್ಳುವ ಜ್ಞಾನವನ್ನು ತನ್ನ ಸಾಮರ್ಥ್ಯಕ್ಕನುಸಾರ ವಯೋಮಾನಕ್ಕೆ ಅನುಗುಣವಾಗಿ ದಿನದಿಂದ ದಿನಕ್ಕೆ ಅನುಭವ ಮತ್ತು ಚಟುವಟಿಕೆಗಳ ಮೂಲಕ ಜ್ಞಾನವನ್ನು ಪಡೆದುಕೊಂಡು ಜೀವನ ಮೌಲ್ಯಗಳನ್ನು ಅಂತರ್ಗತ ಮಾಡಿಕೊಳ್ಳುವುದೇ ಸುರುಳಿಯಾಕಾರದ ಕಲಿಕಾ ವಿಧಾನವಾಗಿದೆ.

**ಉದಾ – ಭಾಗ – ಸಮಾಜಶಾಸ್ತ್ರ ಘಟಕ : ಕುಟುಂಬ**

ಪ್ರಸ್ತುತ ಘಟಕಕ್ಕೆ ಸಂಬಂಧಿಸಿದಂತೆ ಸುರುಳಿಯಾಕಾರದ ಕಲಿಕಾ ವಿಧಾನವನ್ನು ಈ ಕೆಳಗಿನಂತೆ ಮಗುವನ್ನು ಕಲಿಕೆಯಲ್ಲಿ ಅನುಭವ ಹಾಗೂ ಚಟುವಟಿಕೆಗಳನ್ನು ಒಳಗೊಂಡಂತೆ ಜ್ಞಾನ ಕಟ್ಟಿಕೊಂಡು ಸಮಾಜಮುಖಿಯಾದ ಆಲೋಚನೆಗಳ ಹೊಸ ಹೊಸ ಜ್ಞಾನವನ್ನು ಮನನ ಮಾಡಿಕೊಳ್ಳುತ್ತಾ ವಿಸ್ತರಿಸಿಕೊಳ್ಳುತ್ತದೆ.

ಹೇಗೆಂದರೆ,

- ಮಗುವಿಗೆ ತಾಯಿ, ತಂದೆ ಪರಿಕಲ್ಪನೆ
- ಕುಟುಂಬದ ಇತರ ಸದಸ್ಯರು
- ನೆರೆ ಹೊರೆ
- ಶಾಲೆ
- ಸಮಾಜ
- ಊರು
- ತಾಲ್ಲೂಕು – ಜಿಲ್ಲೆ ರಾಜ್ಯ, ದೇಶ – ವಿಶ್ವದ ಪರಿಕಲ್ಪನೆ
- ವಸುದೇವ ಕುಟುಂಬಕಂ ಎಂಬ ಹೊಸ ಅರಿವು.




ಹೀಗೆ ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಈ ಕಲಿಕಾ ವಿಧಾನಗಳೇ ಪೂರಕವಾಗಿವೆ ಎಂಬುದನ್ನು ನಾವು ಮರೆಯಬಾರದು. ಮಗು ಸ್ವತಂತ್ರವಾಗಿ ಕಲಿಯುವುದಕ್ಕೆ ಅವಕಾಶ ಮಾಡಿಕೊಡುವ ಈ ನಿಟ್ಟಿನಲ್ಲಿ ಮಗುವಿಗೆ ಕಲಿಕೆಯಲ್ಲಿ ವ್ಯವಸ್ಥಿತವಾದ ಜ್ಞಾನ ಕಟ್ಟಿಕೊಳ್ಳಲು

ಹಾಗೂ ಸವಾಲುಗಳನ್ನು ಎದುರಿಸಲು ಬೇಕಾಗುವ ಚೈತನ್ಯವನ್ನು ತುಂಬುವುದು ಇಂದಿನ ಶಿಕ್ಷಣ ಕ್ರಮದ ತುರ್ತಾಗಿದೆ. ಪಠ್ಯ ಪುಸ್ತಕವನ್ನು ಪೂರ್ಣವಾಗಿ ಅರ್ಥೈಸಿಕೊಂಡು ಅದರ ಸ್ವರೂಪವನ್ನು ವಿಶ್ಲೇಷಿಸಿ ತರಗತಿ ಪ್ರಕ್ರಿಯೆಯಲ್ಲಿ ಅನುಭಾತ್ಮಕವಾದ ಬೇರೆ ಬೇರೆ ಆಯಾಮಗಳೊಂದಿಗೆ ಕಲಿಕೆ ಮುಂದುವರೆಯಬೇಕಾಗಿದೆ.

ಹಾಗೂ ಮಗುವಿನಲ್ಲಿ ಕೌಶಲ್ಯ ಮನೋಧೋರಣೆ, ಆಸಕ್ತಿ, ಅಭಿವ್ಯಕ್ತಿಗಳನ್ನು ಉತ್ತಮೀಕರಿಸಿಕೊಳ್ಳುವಲ್ಲಿ ಜ್ಞಾನದ ಎಲ್ಲಾ ವಿಷಯಗಳನ್ನು ಪೂರಕವಾಗಿ ಕಟ್ಟಿಕೊಳ್ಳುವಲ್ಲಿ ಸಮಾಜ ವಿಜ್ಞಾನ ನೂತನ ಪಠ್ಯ ಪುಸ್ತಕದ ಎಲ್ಲಾ 6 ಭಾಗಗಳ ಘಟಕಗಳೊಂದಿಗೆ ಮಗುವಿನ ಜ್ಞಾನ ಮನನ, ಹಾಗೂ ಪುನರ್ರಚನೆಯ ಸಾಮರ್ಥ್ಯವನ್ನು ಮಗು ಗಳಿಸಲು ಎಲ್ಲಾ ರೀತಿಯ ಅವಕಾಶಗಳನ್ನು ಶಿಕ್ಷಕರು ತಪ್ಪದೇ ಒದಗಿಸಿಕೊಡುವುದು. ಜೊತೆಗೆ ಈ ಪ್ರಕ್ರಿಯೆಗೆ ಬೇಕಾದ ಎಲ್ಲಾ ಕಲಿಕಾ ಸಂಪನ್ಮೂಲಗಳನ್ನು ಸಂಗ್ರಹಿಸಿಟ್ಟುಕೊಂಡು ಕಲಿಕಾ ಸಂದರ್ಭದಲ್ಲಿ ಸಂದರ್ಭೋಚಿತವಾಗಿ ತಪ್ಪದೇ ಬಳಸುವುದು.

## 9. ಸಮಾಜ ವಿಜ್ಞಾನ ತರಗತಿಯಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳು

ಹೊಸ ಶಿಕ್ಷಣ ವ್ಯವಸ್ಥೆಯಲ್ಲಿ ಮಗು ಕೇಂದ್ರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡುತ್ತಿದ್ದು ಮಕ್ಕಳೇ ಕ್ರಿಯಾಶೀಲರಾಗಿ ತೊಡಗಿಕೊಂಡು ತಮ್ಮ ತಮ್ಮ ಅನುಭವಗಳ ಮೂಲಕ ಜ್ಞಾನ ಕಟ್ಟಿಕೊಳ್ಳುವ ರೀತಿಯಲ್ಲಿ ಶಿಕ್ಷಣ ಕ್ರಮವನ್ನು ವಿಕಾಸಗೊಳಿಸಿದ್ದು ಕಂಠಪಾಠ ಹಾಗೂ ಅಂಕ ಪ್ರಧಾನ ಕಲಿಕೆಯಿಂದ ಹೊರಬರುವಂತೆ ನೂತನ ಕಲಿಕಾ ಚಟುವಟಿಕೆಗಳನ್ನು ರೂಪಿಸಲಾಗಿದೆ.

ಅದಕ್ಕಾಗಿ ಮಕ್ಕಳು ಗುಂಪು ಚರ್ಚೆಯಲ್ಲಿ ಸಹವರ್ತಿಗಳ ಜೊತೆ ಅನುಭವ, ಸಹ ಕಲಿಕೆ ಹಾಗೂ ಚರ್ಚೆಯಲ್ಲಿ ಗುಂಪು ಗುಂಪುಗಳಾಗಿ ಮತ್ತು ವೈಯಕ್ತಿಕವಾಗಿ ಕಲಿಯುವಂತಾಗಲಿ ಎಂಬುದು ಕೂಡ ಇಂದಿನ ಶಿಕ್ಷಣದ ಮಹಾದಾಶಯವಾಗಿದೆ.

ಹಾಗೆಯೇ ಕಲಿಕೆಯನ್ನು ಅನುಕೂಲಿಸುವವರು ಕಲಿಕಾ ಸಮಸ್ಯೆಗಳ ಹಿನ್ನಲೆಯಲ್ಲಿ ಅನೇಕ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳಲು ಕಲಿಕಾ ಚಟುವಟಿಕೆಗಳನ್ನು ಸಮಗ್ರವಾಗಿ ಬಳಸಿಕೊಳ್ಳಲಾಗಿದೆ. ಮಗು ಕಲಿಕೆಯ ಸಂದರ್ಭದಲ್ಲಿ ತನ್ನ ಮಾತುಗಾರಿಕೆ ಪಾಲ್ಗೊಳ್ಳುವಿಕೆ, ಪರಸ್ಪರ ವಿನಿಮಯ, ಸಂವಹನ, ಕಲಿಕಾ ಫಲಿತಾಂಶದ ದಾಖಲೀಕರಣದ ಜೊತೆಗೆ ಹಿಮ್ಮಾಹಿತಿಯನ್ನು ಒಳಗೊಂಡಂತೆ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದು, ಕಲಿಕೆಗೆ ಅನುಕೂಲಿಸುವವರ ಕರ್ತವ್ಯವಾಗಿದೆ.

ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ 9ನೇ ತರಗತಿ ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಕೆಲವು ಘಟಕಗಳ ಮೇಲೆ ಚಟುವಟಿಕೆಗಳನ್ನು ಹೇಗೆ ಅಳವಡಿಸಿಕೊಳ್ಳಬಹುದು ಎಂಬುದು ಉದಾಹರಣೆಯೊಂದಿಗೆ ಮುಂದೆ ವಿಶ್ಲೇಷಿಸಲಾಗಿದೆ.

**ಪಾಠದ ಹೆಸರು : ಮೊಘಲರು ಮತ್ತು ಮರಾಠರು**

ಈ ಘಟಕಕ್ಕೆ ಸಂಬಂಧಿಸಿದಂತೆ ಆಯ್ಕೆ ಮಾಡಿಕೊಳ್ಳಬಹುದಾದ ಚಟುವಟಿಕೆಗಳು

ಆಯ್ಕೆ ಮಾಡಿಕೊಂಡ ಚಟುವಟಿಕೆ : ಕಲಿಕಾ ನಿಲ್ದಾಣ ಚಟುವಟಿಕೆ : (ಕಲಿಕಾ ನಿಲ್ದಾಣ ಚಟುವಟಿಕೆ ಎಂದರೆ, ಒಂದು ಘಟಕಕ್ಕೆ ಸಂಬಂಧಿಸಿದ ಅಂಶಗಳನ್ನು ವಿವರವಾಗಿ ಕಾರ್ಡ್‌ನಲ್ಲಿ ಬರೆದು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಐದು ಅಥವಾ ಆರು ಕಡೆ ಇಡುವುದು. ಪ್ರತಿ ವಿಭಾಗದ ಕಡೆಯು ಬೇರೆ ಬೇರೆ ಕಲಿಕಾಂಶಗಳನ್ನು ಬರೆದಿದ್ದು, ಮಕ್ಕಳ ಗುಂಪು ಆವರ್ತಗಳಲ್ಲಿ ಚಲಿಸಬೇಕು. ಅಲ್ಲಿನ ವಿಷಯವನ್ನು ಓದಿ ತಮ್ಮ ತಮ್ಮಲ್ಲೇ ಚರ್ಚಿಸಬೇಕು. ಮುಂದಿನ ಕಾರ್ಡ್ ಬಳಿ ಚಲಿಸಬೇಕು. ಕಾರ್ಡ್ ಇರಿಸಿದ ಸ್ಥಳವೇ ಕಲಿಕಾ ನಿಲ್ದಾಣ).

ಉದಾ : ನಾಲ್ಕು ಗುಂಪು ಮಾಡಿರುವ ತರಗತಿಗೆ ಸಂಬಂಧಿಸಿದಂತೆ

ಕಲಿಕಾ ನಿಲ್ದಾಣ : 1 ಬಾಬರ್ ಮತ್ತು ಮೊಘಲ್ ಸಾಮ್ರಾಜ್ಯದ ಸ್ಥಾಪನೆ – 1526ರಲ್ಲಿ ನಡೆದ ಮೊದಲ ಪಾಣಿಪಟ್ ಕದನ. ಯಾರು ಯಾರಿಗೆ ನಡೆಯಿತು. ರಾಜಧಾನಿ ಬಾಬರನ ಸಾಮ್ರಾಜ್ಯ ವಿಸ್ತರಣೆ ಪ್ರದೇಶಗಳು.

ಕಲಿಕಾ ನಿಲ್ದಾಣ : 2 ಹುಮಾಯೂನ್, ಈತನು ಎದುರಿಸಿದ ಕಠಿಣ ಸವಾಲುಗಳು, ಹುಮಾಯೂನ್ ವಶಪಡಿಸಿಕೊಂಡ ಕೋಟೆಗಳು. ಹುಮಾಯೂನನ ಅಧಿಕಾರದ ಅವಧಿ.

ಕಲಿಕಾ ನಿಲ್ದಾಣ : 3 ಸೂರ್ ಮನೆತನದ ಮತ್ತು ಶೇರ್‌ಷಾ. ಶೇರ್‌ಷಾನ ಬಾಲ್ಯದ ದಿನಗಳು, ಶೇರ್‌ಷಾನನೆಂದು ಹೆಸರು ಬರಲು ಕಾರಣ, ಬಾಬರ್ ಮತ್ತು ಶೇಹಷಾನ ಸಂಬಂಧ. ಹುಮಾಯಾನನಿಂದ ವಶಪಡಿಸಿಕೊಂಡ ಪ್ರದೇಶಗಳು.

ಕಲಿಕಾ ನಿಲ್ದಾಣ : 4 ಶೇರ್‌ಷನ ಆಡಳಿತ ವ್ಯವಸ್ಥೆ – ಸೈನ್ಯದ ಸಂಖ್ಯೆ ಸೈನ್ಯದಲ್ಲಿನ ವಿವಿಧ ಅಧಿಕಾರಿಗಳು, ಕಟ್ಟಿಸಿದ ಕೋಟೆಗಳು, ಭೂಕಂದಾಯ ವ್ಯವಸ್ಥೆ ನ್ಯಾಯಾಂಗ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ ಶೇರ್‌ಷನ ಕೊಡುಗೆಗಳು, ಮನನ ಮಾಡಿಕೊಂಡ ಅಂಶಗಳು. ಜ್ಞಾನ ಪುನರ್ರಚನೆಯ ಅವಕಾಶಗಳು. (ಉದಾ : ಶೇರ್‌ಷಾನ ಆಡಳಿತ ಮತ್ತು ಪ್ರಸ್ತುತ ಆಡಳಿತ ವ್ಯವಸ್ಥೆ ಚರ್ಚೆ).

**ಸೂಚನೆ :** ಪ್ರತಿ ಕಲಿಕಾ ನಿಲ್ದಾಣಕ್ಕೂ ಸಂಬಂಧಿಸಿದ ಬೋಧನೋಪಕರಣಗಳನ್ನು ಬಳಸುವುದು.

- ಶಿಕ್ಷಕರು ಆವರ್ತದಲ್ಲಿ ಮಕ್ಕಳು ಚಲಿಸುವಂತೆ ನೋಡಿಕೊಳ್ಳುವುದು.
- ಮಕ್ಕಳ ಚರ್ಚೆ ಪಠ್ಯಕ್ಕೆ ಪೂರಕವಾಗಿರುವಂತೆ ಎಚ್ಚರವಹಿಸುವುದು.
- ಘಟಕಕ್ಕೆ ಸಂಬಂಧಿಸಿದಂತೆ ಶಿಕ್ಷಕರು ಮನನಮಾಡಿಕೊಳ್ಳಬೇಕಾದ ಹಾಗೂ ಜ್ಞಾನ ಪುನರ್ರಚನಾ ಅಂಶಗಳ ಕಡೆ ಮಕ್ಕಳ ಗಮನವನ್ನು ಸೆಳೆಯುವಂತೆ ಪ್ರೇರೇಪಿಸಬೇಕು.
- ಆವರ್ತದ ಚಲನೆ ಮುಕ್ತಾಯವಾದ ನಂತರ ಪ್ರತಿ ಗುಂಪಿನಿಂದ ತರಗತಿಯಲ್ಲಿ ಒಂದೊಂದು ಕಲಿಕಾ ನಿಲ್ದಾಣದ ಬಗೆಗಿನ ಜ್ಞಾನವನ್ನು ಹಂಚಿಕೊಳ್ಳಲು ಪ್ರತಿ ತಂಡದ ಕನಿಷ್ಠ ಒಬ್ಬರಿಗಾದರೂ ಅವಕಾಶ ಕಲ್ಪಿಸಬೇಕು.
- ಘಟಕದ ಒಟ್ಟಾರೆ ಆಶಯವನ್ನು ಶಿಕ್ಷಕರು ಕಡೆಯಲ್ಲಿ ಸಮನ್ವಯಗೊಳಿಸಬೇಕು.
- ಘಟಕಕ್ಕೆ ಸಂಬಂಧಿಸಿದ ಮನೆಗೆಲಸದ ಚಟುವಟಿಕೆಗಳನ್ನು ನೀಡುವುದು.

ಉದಾ : ಟಿಪ್ಪಣಿ ಬರವಣಿಗೆ. ಉದಾ : ಷೇರ್‌ಷನ ಆಡಳಿತ ನಕ್ಷೆ ರಚನೆ ಮತ್ತು ಗುರುತಿಸುವಿಕೆ.

- ಪ್ರಬಂಧ ರಚನೆ; ಉದಾ : ಬಾಬರ್ ಭಾರತಕ್ಕೆ ಬಂದಾಗಿನ ಇಲ್ಲಿನ ಪರಿಸ್ಥಿತಿ.

ಉದಾ : ಪಾಠದ ಹೆಸರು : ಕರ್ನಾಟಕದ ಜಲಸಂಪನ್ಮೂಲಗಳು (ಭೂಗೋಳ)

ಚಟುವಟಿಕೆಗಳು (ಹೋಮ್ ಗ್ರೂಪ್ – ಎಕ್ಸ್‌ಫರ್ಟ್ ಗ್ರೂಪ್) ಅಥವಾ
(ನಮ್ಮ ಗುಂಪು – ಪರಿಣತ ಗುಂಪು)

(ಘಟಕವಾರು ಅವಧಿಗೆ ಅನುಗುಣವಾಗಿ ತರಗತಿಯಲ್ಲಿನ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಐದು–ಆರು ಗುಂಪು ರಚಿಸುವುದು. ಇದು ನಮ್ಮ ಗುಂಪು ಎನ್ನಿಸಿಕೊಳ್ಳುತ್ತದೆ.

ನಂತರ ಈ ಗುಂಪಿನ ಪ್ರತಿಯೊಬ್ಬ ಸದಸ್ಯರಿಗೂ ಒಂದೊಂದು ಸಂಖ್ಯೆ ನೀಡಿ ಈ ಸಂಖ್ಯೆಗೆ ಅನುಗುಣವಾಗಿ ಒಂದೇ ತರಹದ ನಂಬರ್ ಬರುವ (ಉದಾ : 1–1, 2–2, 3–3, 4–4, 5–5) ಮಕ್ಕಳನ್ನು ಮತ್ತೊಂದು ಕಡೆ ಗುಂಪುಗಳನ್ನಾಗಿ ಮಾಡಿ, ಈ ಗುಂಪಿಗೆ ಘಟಕದಲ್ಲಿ ಹಂಚಿಕೆಯಾದಂತೆ ಒಂದೊಂದು ಕಲಿಕಾಂಶವನ್ನು ನೀಡಿ ಕೂಲಂಕುಶವಾಗಿ ಚರ್ಚಿಸುವಂತೆ ತಿಳಿಸುವುದು. ಇದರಿಂದ ಪ್ರತಿ ಗುಂಪಿನವರು ವಿಷಯದ ಮೇಲೆ ಪರಿಣತಿ ಸಾಧಿಸುತ್ತಾರೆ. ಇದೇ ಪರಿಣತ ಗುಂಪು.

– ಇದಾದನಂತರ ಎಲ್ಲಾ ಮಕ್ಕಳು ತಮ್ಮ ಮೂಲ ಗುಂಪುಗಳಿಗೆ ಮರಳುವುದು. ತಮ್ಮ ಈ ಮೂಲ ಗುಂಪಿನಲ್ಲಿ ತಾವು ಕಲಿತು ಬಂದ ವಿಷಯವನ್ನು ಸಮಗ್ರವಾಗಿ ಒಬ್ಬೊಬ್ಬರಾಗಿ ಹಂಚಿಕೊಳ್ಳುವರು).

ಉದಾ : ಮೊದಲ ಹಂತದಲ್ಲಿ 'ಆರು' ಗುಂಪುಗಳ ರಚನೆ. ಇದು ನಮ್ಮ ಗುಂಪು, ಎನ್ನಿಸಿಕೊಂಡಿದೆ. ಮೂಲಗುಂಪು ಪರಿಣತ ಗುಂಪು. ಮೂಲ ಗುಂಪಿನ ಒಬ್ಬೊಬ್ಬರು ಈ ಪರಿಣತ ಗುಂಪಿನಲ್ಲಿ ಇರುತ್ತಾರೆ.

**ಕಲಿಕಾಂಶಗಳ ಹಂಚಿಕೆ**

ಪರಿಣತ ಗುಂಪು : 1 ಕರ್ನಾಟಕದಲ್ಲಿ ಪೂರ್ವಾಭಿಮುಖವಾಗಿ ಹರಿಯುವ ನದಿಗಳು.

ಪರಿಣತ ಗುಂಪು : 2 ಕರ್ನಾಟಕದಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು.

ಪರಿಣತ ಗುಂಪು : 3 ಕರ್ನಾಟಕದಲ್ಲಿ ನೀರಾವರಿ ವ್ಯವಸ್ಥೆ

ಪರಿಣತ ಗುಂಪು : 4 ಕರ್ನಾಟಕದ ಜಲವಿದ್ಯುತ್ ಯೋಜನೆಗಳು

ಪರಿಣತ ಗುಂಪು : 5 ಜಲ ವಿವಾದಗಳು

ಪರಿಣತ ಗುಂಪು : 6 ನದಿ ಮತ್ತು ಜಲ ಸಾಮರಸ್ಯ.

ಆರು ಪರಿಣತ ಗುಂಪುಗಳು ತಮ ತಮಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಶಿಕ್ಷಕರ ಮಾರ್ಗದರ್ಶನದಲ್ಲಿ ಕೂಲಂಕುಶವಾಗಿ ಕಲಿಯುತ್ತಾರೆ. ನಂತರ ಈ ಆರು ಪರಿಣತ ಗುಂಪಿನ ಸದಸ್ಯರು (ಮಕ್ಕಳು) ತಮ್ಮ ಮೂಲ ಗುಂಪಿಗೆ ಮರಳಿ, ತಾವು ಪರಿಣತಿ ಗುಂಪಿನಲ್ಲಿ ಕಲಿತ ಕಲಿಕಾಂಶಗಳನ್ನು ಮತ್ತೆ ಮನನ ಮಾಡಿಕೊಳ್ಳುವರು.

**ಸೂಚನೆ :** ಶಿಕ್ಷಕರು ಕಲಿಕಾಂಶಗಳನ್ನು ಮೊದಲೇ ಪಟ್ಟಿ ಮಾಡಿಕೊಳ್ಳುವುದು.

- ಚರ್ಚೆಯ ಸಂದರ್ಭದಲ್ಲಿ ಪ್ರತಿ ಗುಂಪಿಗೂ ಶಿಕ್ಷಕರು ಚಲಿಸುತ್ತಾ ಸಲಹೆ ಸೂಚನೆ ನೀಡಬೇಕು.
- ಘಟಕದಲ್ಲಿ ಮನನ ಮಾಡಿಕೊಳ್ಳುವ ಹಾಗೂ ಜ್ಞಾನ ಪುನರ್‌ರಚನೆಗೆ ಪೂರಕವಾಗಿರುವ ಅಂಶಗಳಿಗೆ ಹೆಚ್ಚು ಒತ್ತು ನೀಡುವುದು.

ಉದಾ : ಕಾವೇರಿ ನದಿ ನೀರಿನ ಹಂಚಿಕೆ. ಹನಿ ನೀರು ಅಮೂಲ್ಯ.

ಕಡ್ಡಾಯವಾಗಿ ಶಿಕ್ಷಕರು ಕಡೆಯಲ್ಲಿ ಘಟಕಕ್ಕೆ ಸಂಬಂಧಿಸಿದಂತೆ ಸಮನ್ವಯತೆಯ ಮಾತುಗಳನ್ನಾಡುವುದು ಬೋಧನೋಪಕರಣಗಳ ಬಳಕೆ ಅಗತ್ಯ.

ಉದಾ : – ಕರ್ನಾಟಕದ ನದಿಗಳ ಭೂಪಟ

- ಕರ್ನಾಟಕದ ಜಲವಿದ್ಯುತ್ ಕೇಂದ್ರಗಳ ಭೂಪಟ.
- ಜಲಪಾತಗಳನ್ನು ತೋರಿಸುವ ಭೂಪಟ. (ಜೋಗ್, ಹೊಗೇನಕಲ್ಲು)
- ನದಿ ಯೋಜನೆಗಳ ಭೂಪಟ.
- ಕಡ್ಡಾಯವಾಗಿ ಮನೆಗೆಲಸಕ್ಕೆ ಸಂಬಂಧಿಸಿದ ಚಟುವಟಿಕೆ ನೀಡುವುದು.

ಉದಾ : – ವಿವಿಧೋದ್ದೇಶ ನದಿ ಯೋಜನೆಗಳ ಬಗ್ಗೆ ಮಾಹಿತಿ ಸಂಗ್ರಹ (ಕೃಷ್ಣರಾಜಸಾಗರ)

- ನಿಮ್ಮೂರಿನ ಸುತ್ತಮುತ್ತಲಿನ ಜಲಪಾತ, ಝರಿ, ಕೆರೆ, ಹಳ್ಳ, ನದಿ, ಸರೋವರಗಳ ಹೆಸರುಗಳನ್ನು ಸಂಗ್ರಹಿಸಿ ಅವುಗಳ ಉಪಯೋಗಗಳನ್ನು ಬರೆಯಿರಿ.
- ಕರ್ನಾಟಕದ ರೇಖಾ ನಕ್ಷೆಯಲ್ಲಿ ಆಲಮಟ್ಟಿ ಯೋಜನೆ ತುಂಗಭದ್ರಾ ಯೋಜನೆ, ಉದಕಮಂಡಲ, ಪಶ್ಚಿಮ ಘಟ್ಟಗಳು, ಜೋಗ್, ಶ್ರೀರಂಗಪಟ್ಟಣ, ಶಿವನ ಸಮುದ್ರ ಪ್ರದೇಶಗಳನ್ನು ಗುರುತಿಸಿರಿ.

ಇದೇ ರೀತಿಯಾಗಿ ಉಳಿದ ಚಟುವಟಿಕೆಗಳನ್ನು ತರಗತಿಯಲ್ಲಿ ಬಳಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

# 10. ವಾರ್ಷಿಕ ಪಾಠ ಯೋಜನೆ

ಹೊಸ ಶಿಕ್ಷಣ ಕ್ರಮದ ನಿರ್ದೇಶನದಂತೆ, ಎನ್.ಸಿ.ಎಫ್. ಮತ್ತು ಸಿ.ಸಿ.ಇ. ಆಶಯದಂತೆ ತರಗತಿಯ ಕಲಿಕಾ ಪ್ರಕ್ರಿಯೆಗೆ ಒಂದು ನಿರ್ದಿಷ್ಟವಾದ ಚೌಕಟ್ಟನ್ನು ಕಲ್ಪಿಸಿಕೊಳ್ಳದಿದ್ದರೂ ಅನುಕೂಲಕಾರ (ಶಿಕ್ಷಕ)ರಿಗೆ Hand Post ನಂತೆ ಸಹಾಯ ಮಾಡುವಲ್ಲಿ ಈ ವಾರ್ಷಿಕ ಪಾಠಯೋಜನೆಯ ಪರಿಕಲ್ಪನೆ ಉಪಯುಕ್ತವಾಗುತ್ತದೆ ಎನ್ನುವ ಹಿನ್ನಲೆಯಲ್ಲಿ ವಾರ್ಷಿಕ ಪಾಠಯೋಜನೆಯ ರೂಪುರೇಷೆಗಳನ್ನು ಸಾಹಿತ್ಯ ರಚನಾ ತಂಡವು ತಮ್ಮ ಮುಂದಿಡುತ್ತಿದೆ.

ರಚನಾವಾದಿ ಪದ್ಧತಿಗಳನ್ನು ಆಧರಿಸಿ, ನಿರ್ವಹಿಸುವ ತರಗತಿಯ ಕಲಿಕೆಯು ಅನುಕೂಲಕಾರರ (ಶಿಕ್ಷಕರ) ಮಾರ್ಗದರ್ಶನದಲ್ಲಿ ಪ್ರತಿ ಮಗುವು ತನ್ನದೇ ಆದ ರೀತಿಯಲ್ಲಿ ಅನುಭವಗಳ ಮೂಲಕ ಜ್ಞಾನ ಕಟ್ಟಿಕೊಳ್ಳಬೇಕಾಗಿದೆ. ಈ ಸಂಬಂಧ ಶಿಕ್ಷಕರೇ ಎಲ್ಲವನ್ನೂ ಹೇಳುವುದಿಲ್ಲವಾದ್ದರಿಂದ, ಸಂವೇದನಶೀಲವಾದ ತರಗತಿ ನಿರ್ವಹಣೆಯ ಪದ್ಧತಿಗಳನ್ನು, ಚಟುವಟಿಕೆಗಳನ್ನು ಒಳಗೊಂಡಂತೆ, ಕಲಿಕಾ ಸಂದರ್ಭದಲ್ಲಿ ನನ್ನ ಪಾತ್ರ ಏನು, ಏಕೆ ಹೇಗೆ ನಿರ್ವಹಿಸಬೇಕು ಎನ್ನುವ ಹಿನ್ನಲೆಯಲ್ಲಿ ವಾರ್ಷಿಕ ಪಾಠ ಯೋಜನೆಯನ್ನು ಅನುಕೂಲಕಾರನು ತನಗಾಗಿ ರೂಪಿಸಿಕೊಳ್ಳಬೇಕಿದೆ.

ಮಕ್ಕಳ ಅನುಭವಗಳ ಪರಿಧಿಯೊಳಗೆ ಬರುವ ವಸ್ತು, ಅಂಶ, ಘಟನೆಗಳಿಂದ ಕಲಿಕೆಯನ್ನು ಆರಂಭಿಸಿ, ಹೊಸ ವಿಷಯಗಳತ್ತ ಮುಂದುವರೆಸುವುದು ಹೇಗೆ ಎಂಬುದಕ್ಕೆ ನಿರ್ದಿಷ್ಟ ಪರಿಕಲ್ಪನೆಯನ್ನು ಈ ವಾರ್ಷಿಕ ಪಾಠ ಯೋಜನೆಯಲ್ಲಿ ಅರ್ಥಪೂರ್ಣವಾದ ಹಾಗೂ ಪೂರಕವಾದ ಅಂಶ, ಸಲಹೆ ಸೂಚನೆಗಳನ್ನು ದಾಖಲಿಸಿಕೊಳ್ಳಬೇಕಾಗುತ್ತದೆ.

ಅನುಕೂಲಕಾರ, ಕಲಿಕೆ, ಕಲಿಕೆಯನ್ನು ಅನುಕೂಲಿಸುವುದು ಎಂಬುದನ್ನು ಒಳಗೊಂಡಂತೆ ಜ್ಞಾನದ ಪುನರ್‌ರಚನೆಗೆ ವಿದ್ಯಾರ್ಥಿಗಳನ್ನು ಹೇಗೆ ಉತ್ತೇಜಿಸಿ ಕಟ್ಟಿಕೊಂಡ ಜ್ಞಾನವನ್ನು ಅವಶ್ಯಕತೆಗಳಿಗನುಸಾರವಾಗಿ ಸಮನ್ವಯಿಸಲು ಪ್ರತಿಪಾಠವನ್ನು ಬಳಸಿಕೊಳ್ಳುವ ಪ್ರಕ್ರಿಯೆಯನ್ನು ವಾರ್ಷಿಕ ಪಾಠಯೋಜನೆಯು ಒಳಗೊಂಡಿರಬೇಕು. ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ವಾರ್ಷಿಕ ಪಾಠ ಯೋಜನೆಯ ರಚನೆಯ ಉದ್ದೇಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

1) ಅನುಭವಾತ್ಮಕ ಚಟುವಟಿಕೆಗಳನ್ನು ಒಳಗೊಂಡಿರಬೇಕು.

2) ಏನನ್ನು ಕಲಿಯುವುದು? ಹೇಗೆ ಕಲಿಯುವುದು ಎಂಬುದಕ್ಕೆ ಸ್ಪಷ್ಟತೆಯನ್ನು ನೀಡಿರಬೇಕು.

3) ಅನುಕೂಲಕಾರರ ಪೂರ್ವಸಿದ್ಧತೆ ಕಲಿಕಾ ಸಾಮಗ್ರಿ, ಆಕರ ಸಂಪನ್ಮೂಲ, ಮೇಲ್ವಿಚಾರಣೆ, ಮೌಲ್ಯಮಾಪನ ವಿಧಾನಗಳನ್ನು ಸೂಕ್ಷ್ಮವಾಗಿ ಸೂಚಿಸಿರುವುದು.

4) ಮಕ್ಕಳ ವಿಮರ್ಶಾತ್ಮಕ ಚಿಂತನೆಗೆ ವಿಧಾನಗಳನ್ನು ಸಂಗ್ರಹಿಸುವುದು.

5) ಚರ್ಚೆಗಳಿಗೆ ಅವಕಾಶ ನೀಡುವುದು.

6) ಕಲಿಕೆ ಮತ್ತು ಮೌಲ್ಯಮಾಪನದಲ್ಲಿ ಅಗತ್ಯವಾಗಿ ಬೇಕಾಗುವ ಸಾಧನಗಳು ಮತ್ತು ತಂತ್ರಗಳನ್ನು ಸಂಗ್ರಹಿಸಿಕೊಳ್ಳುವುದು.

7) ಘಟಕವಾರು ಪ್ರಮುಖ ಜ್ಞಾನ ರಚನೆಯ ಅಂಶಗಳು ದೊರೆಯುವ ಅವಧಿಗಳು ಹಾಗೂ ಮನನ ಮಾಡಿಕೊಳ್ಳಲೇಬೇಕಾಗುವಂತಹ ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳುವುದು.

ಉದಾಹರಣೆಗಾಗಿ : ವಾರ್ಷಿಕ ಪಾಠ ಯೋಜನೆಯ ಮಾದರಿ :

## ಅನುಕೂಲಕಾರರು [ಶಿಕ್ಷಕರು] ನಿರ್ವಹಿಸುವ ಮಾದರಿ ವಾರ್ಷಿಕ ಪಾಠಯೋಜನೆ ನಿರ್ವಹಣಾ ವಹಿ

9ನೇ ತರಗತಿ ವರ್ಷ : 2013–14 ಮಾಧ್ಯಮ : ಆಂಗ್ಲ : ಕನ್ನಡ

ಪಠ್ಯ ವಿಷಯ : ಸಮಾಜ ವಿಜ್ಞಾನ ಶಾಲೆಯ ಹೆಸರು : ________________ ಶಿಕ್ಷಕರ ಹೆಸರು (ಅನುಕೂಲಕಾರ)

| ತಿಂಗಳು ದೊರೆಯುವ ಅವಧಿ | ಘಟಕ | ಉಪ ಘಟಕ | ಜ್ಞಾನ ರಚನಾ ಅಂಶಗಳು | ದೊರೆಯುವ ಅವಧಿ | ದೊರೆತ ಅವಧಿ | ವ್ಯತ್ಯಾಸ ವಿದ್ದಲ್ಲಿ | ಕಲಿಕೆ ಅನುಕೂಲಿಸುವ ವಿಧಾನ | ಜ್ಞಾನ ರಚನಾ ಸಾಮಗ್ರಿಗಳು | ಚಟುವಟಿಕೆ | ಮನೆಗೆಲಸ | ಮೌಲ್ಯ ಮಾಪನ | ಮನನ ಮಾಡಿ ಕೊಳ್ಳುವ ಅಂಶ | ಅನುಕೂಲಕಾರರ ಸಹಿ | ಮುಖ್ಯಸ್ಥರ ಸಹಿ |
|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| ಜೂನ್ 26 | 1 | <br>ಎ)<br>ಬಿ)<br>ಸಿ) | – ಕ್ರೈಸ್ತ ಮತ್ತು ಇಸ್ಲಾಂ ಮತಗಳು<br>ಏಸು ಮತ್ತು ಧರ್ಮ ಸ್ಥಾಪನೆ<br>ಬೆಳವಣಿಗೆ<br>ಬೋಧನೆಗಳು, ಪ್ರಚಾರ ಪ್ರಸಾರ | 03 | 01<br>01<br>01 | – | ಚರ್ಚಾ ವಿಧಾನ | ಏಸುವಿನ ಚಿತ್ರ ಏಸು, ಪೈಗಂಬರ ಬೋಧನೆಗಳ ಚಾರ್ಟ್ ಬೈಬಲ್, ಕುರಾನ್ ಗ್ರಂಥಗಳು | ಚರ್ಚ್, ಮಸೀದಿಗಳಿಗೆ ಭೇಟಿ, ಬೋಧನೆಗಳ ಚಾರ್ಟ್ ಮತಾಚರಣೆಯಲ್ಲಿ ಸಾಮ್ಯತೆ ಕುರಿತ ಚಾರ್ಟ್ ತಯಾರಿಕೆ, ಗುಂಪು ರಚನೆ. | ಗೃಹ ಪಾಠ 1 (ಪ್ರಬಂಧ ಮಾದರಿ) | ರೂ. ಮೌ. 1 | ಧಾರ್ಮಿಕ ಸಾಮರಸ್ಯ | | |

# 11(ಎ). ಪಾಠ (ಘಟಕ) ಯೋಜನೆಯನ್ನು ಕುರಿತು

ಹೊಸ ಶಿಕ್ಷಣ ನೀತಿಯ ಪರಿಕಲ್ಪನೆಯೊಂದಿಗೆ, ರಾಷ್ಟ್ರೀಯ ಪಠ್ಯಕ್ರಮ ಮತ್ತು ಸಿ.ಸಿ.ಇ. ಅನ್ವಯ ಜ್ಞಾನವನ್ನು ಕಟ್ಟಿಕೊಳ್ಳುವುದು ಮತ್ತು ಹೊರಗಿನ ಜ್ಞಾನದೊಂದಿಗೆ ಶಾಲಾ ತರಗತಿಯೊಳಗಿನ ಜ್ಞಾನವನ್ನು ಸಂಯೋಜಿಸುವ ಕ್ರಿಯೆಗೆ ಇಂದು ನಾವು ಹೆಚ್ಚು ಒತ್ತು ಕೊಡಬೇಕಾಗಿದೆ. ಪಠ್ಯಪುಸ್ತಕಗಳ ಮೂಲ ಉದ್ದೇಶ ಜ್ಞಾನವನ್ನು ವರ್ಗಾಯಿಸುವುದಲ್ಲ. ಅದರ ಬದಲಿಗೆ ಜ್ಞಾನವನ್ನು ಪುನರ್‌ರಚಿಸಿಕೊಳ್ಳುವ ಅವಕಾಶಗಳನ್ನು ಮಕ್ಕಳಿಗೆ ಮುಕ್ತವಾಗಿರಿಸಿ ಅನುಕೂಲಕಾರರು ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಬೇಕಿದೆ.

ಈ ಹಿನ್ನಲೆಯಲ್ಲಿ ನಾವು ರೂಪಿಸಿಕೊಳ್ಳುವ ಪಾಠಯೋಜನೆಯು ನಾವು ಹೊಸ ಪಠ್ಯಪುಸ್ತಕವನ್ನು ಹೇಗೆ ಅರ್ಥೈಸಿಕೊಂಡಿದ್ದೇವೆ ಹಾಗೂ ಅದರ ಉದ್ದೇಶ, ಕಲಿಯುವವರ ಅವಶ್ಯಕತೆ ಅವುಗಳನ್ನು ಪೂರೈಸುವಲ್ಲಿ ನಾವು ಪೂರ್ವ ತಯಾರಿಗಾಗಿ ತಯಾರಿಸಿಟ್ಟುಕೊಂಡಿರುವ ಪಾಠಯೋಜನೆ ಅನುಕೂಲಕಾರರಾದ ಶಿಕ್ಷಕರಿಗೆ ಹೇಗೆ ಮಾರ್ಗದರ್ಶನ ನೀಡುತ್ತದೆ ಎಂಬುದನ್ನು ಒಳಗೊಂಡಿರುವುದು ಸೂಕ್ತವೆನಿಸುತ್ತದೆ.

ಇದರಿಂದಾಗಿಯೇ ಪಾಠಯೋಜನೆಗೆ ಒಂದು ನಿರ್ದಿಷ್ಟವಾದ ಚೌಕಟ್ಟನ್ನು ಒದಗಿಸಲು ಹೊಸ ಶಿಕ್ಷಣ ನೀತಿ ಬಯಸುವುದಿಲ್ಲ ಆದರೂ ಅನುಕೂಲಕಾರರು ತಮ್ಮ ತರಗತಿಯ ಕಲಿಕಾ ಪ್ರಕ್ರಿಯೆಗೆ ರೂಪಿಸಿಕೊಂಡಿರುವ ಪೂರ್ವ ತಯಾರಿ ಗುರುತಿಸಿಕೊಂಡ ಜ್ಞಾನ ರಚನೆಯ ಅಂಶಗಳು, ಚಟುವಟಿಕೆ, ಕಲಿಕಾ ಸಾಮಗ್ರಿಗಳು ಹಾಗೂ ಮೌಲ್ಯಮಾಪನವನ್ನು ಒಳಗೊಂಡಂತೆ ಒಂದು ನಿರ್ದಿಷ್ಟ ಪರಿಕಲ್ಪನೆಯನ್ನು ಹೊಂದಬೇಕಿರುವುದರಿಂದ ಈ ಕೆಳಕಂಡ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಒಂದು ಪಾಠಯೋಜನಾ ಮಾದರಿಯನ್ನು ನೀಡಲಾಗಿದೆ.

**ಪಾಠ ಯೋಜನೆಯ ಉದ್ದೇಶಗಳು**

1) ಎನ್.ಸಿ.ಎಫ್ ಮತ್ತು ಸಿ.ಸಿ.ಇ. ಆಶಯಗಳನ್ನು ತರಗತಿ ಕೋಣೆಯಲ್ಲಿ ಅನುಪಾಲಿಸುವ ಕ್ರಮವನ್ನು ನಿಗದಿಪಡಿಸಿಕೊಳ್ಳುವುದು.

2) ಮಕ್ಕಳಲ್ಲಿ ಮೌಲ್ಯಗಳು ಆಸಕ್ತ, ಕೌಶಲ್ಯಗಳನ್ನು ಬೆಳೆಸಲು ಚಟುವಟಿಕೆಗಳನ್ನು ಆಯೋಜಿಸಿಕೊಳ್ಳುವುದು.

3) ಪ್ರತಿ ಘಟಕವನ್ನು ಸಾಮರ್ಥ್ಯವಾರು ಕಲಿಕೆಗೆ ಪೂರಕವಾಗುವಂತೆ ಅರ್ಥೈಸಿಕೊಳ್ಳುವುದು.

4) ಕಲಿಕಾ ಸಾಮಗ್ರಿ, ಮೌಲ್ಯಮಾಪನ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವ ಸಂದರ್ಭವನ್ನು ಗುರುತುಮಾಡಿಕೊಳ್ಳುವುದು.

5) ಮಗುವಿನ ಭಾಗವಹಿಸುವಿಕೆಯನ್ನು ಅವಲೋಕಿಸಿ ದಾಖಲಿಸುವುದು.

6) ವಿಶೇಷವಾಗಿ ರೂಪಣಾತ್ಮಕ ಮೌಲ್ಯಮಾಪನ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವ ಅವಲೋಕನ ನಮೂನೆಯನ್ನು ಸಿದ್ಧಪಡಿಸಿಕೊಳ್ಳುವುದು.

7) ಅನುಭವಾತ್ಮಕ ಕಲಿಕೆ ಹೇಗೆ ತರಗತಿ ಪ್ರಕ್ರಿಯೆಗೆ ಹೊಂದಿಕೊಳ್ಳುತ್ತದೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದು.

8) ಜ್ಞಾನ ಪುನರ್ರಚನೆಗೆ ಅವಕಾಶ ಕಲ್ಪಿಸುವುದು.

**ಪಾಠ ಪ್ರಾರಂಭಿಸುವ ದಿನಾಂಕ :** **ಮುಕ್ತಾಯದ ದಿನಾಂಕ :**

## ಪಾಠಯೋಜನಾ ಮಾದರಿ

**ಘಟಕ : 1 ಪಾಠದ ಹೆಸರು : ಕ್ರೈಸ್ತ ಮತ್ತು ಇಸ್ಲಾಂ ಮತಗಳು**

**1) ಸಾಮರ್ಥ್ಯಗಳು : (ಕಲಿಕಾಂಶ, ಜ್ಞಾನ ರಚನಾ ಅಂಶಗಳು)**

1) ಏಸು ಮತ್ತು ಮಹಮದ್ ಪೈಗಂಬರರ ಜೀವನ ತಿಳಿಯುವುದು.
2) ಕ್ರೈಸ್ತ ಮತ್ತು ಇಸ್ಲಾಂ ಮತದ ಬೆಳವಣಿಗೆ ಅರಿಯುವುದು
3) ಕ್ರೈಸ್ತ ಹಾಗೂ ಇಸ್ಲಾಂ ಮತದ ಬೋಧನೆಗಳನ್ನು ಅರ್ಥೈಸಿಕೊಳ್ಳುವುದು.
4) ಕ್ರೈಸ್ತ ಮತ್ತು ಇಸ್ಲಾಂ ಮತಗಳ ಪ್ರಸಾರವನ್ನು ಗಮನಿಸುವುದು.

**2) ಕಲಿವಿನ ವಿಧಾನ : ಚರ್ಚಾ ವಿಧಾನ**

* **ಶಿಕ್ಷಕರು** ಮಕ್ಕಳನ್ನು ಐದು ಗುಂಪುಗಳನ್ನಾಗಿ ಮಾಡುವರು.

ಪ್ರತಿ ಗುಂಪಿಗೂ ಏಸು ಮತ್ತು ಪೈಗಂಬರ ಜೀವನ, ಕ್ರೈಸ್ತ ಮತ್ತು ಇಸ್ಲಾಂ ಮತದ ಬೆಳವಣಿಗೆ, ಬೋಧನೆಗಳು ಹಾಗೂ ಈ ಧರ್ಮಗಳ ಪ್ರಭಾವವನ್ನು ಮಿಂಚು ಪಟ್ಟಿಯಲ್ಲಿ ಬರೆದು ಹಂಚಿ ಚರ್ಚಿಸಲು ತಿಳಿಸುವರು.

* **ವಿದ್ಯಾರ್ಥಿಗಳು**

ಏಸುವಿನ ಜೀವನ ಬೋಧನೆಗಳು – ಪೈಗಂಬರರ ಜೀವನ ಬೋಧನೆಗಳ ಬಗ್ಗೆ ಮಕ್ಕಳು ಪಠ್ಯ ಪುಸ್ತಕದ ನೆರವಿನಿಂದ ಪ್ರಶ್ನಾವಳಿ ಕಾರ್ಡ್‌ಗಳಲ್ಲಿರುವ ಅಂಶಗಳನ್ನು ಗುಂಪಿನೊಂದಿಗೆ ಚರ್ಚಿಸಿ ಉತ್ತರಗಳನ್ನು ಅವಲೋಕಿಸಿ, ಕ್ಲಿಷ್ಟಕರವಾದ ಅಂಶಗಳಿಗೆ ಶಿಕ್ಷಕರಿಂದ ಮಾಹಿತಿ ಪಡೆದು ಜ್ಞಾನವನ್ನು ಕಟ್ಟಿಕೊಳ್ಳುವರು.

**3) ಚಟುವಟಿಕೆಗಳು**
- ಕ್ರೈಸ್ತ ಮತ್ತು ಇಸ್ಲಾಂ ಧರ್ಮದ ಬೋಧನೆಗಳ ಪಟ್ಟಿ ತಯಾರಿಕೆ
- ಇಸ್ಲಾಂ ಮತ್ತು ಕ್ರೈಸ್ತ ಮತಾಚರಣೆಯ ವ್ಯತ್ಯಾಸಗಳ ಪಟ್ಟಿ
- ಮಸೀದಿ ಮತ್ತು ಚರ್ಚ್‌ಗಳಿಗೆ ಭೇಟಿ ನೀಡಲು ತಿಳಿಸುವುದು.

**4) ಮೌಲ್ಯಮಾಪನ :**
- ಇಸ್ಲಾಂ ಮತ್ತು ಕ್ರೈಸ್ತ ಮತಗಳ ಬೋಧನೆ ನಿಮ್ಮ ಮೇಲೆ ಬೀರಿದ ಪ್ರಭಾವ ಕುರಿತು ಪ್ರಬಂಧ ಬರೆಯಿರಿ.

**5) ಕಲಿಕಾ ಸಾಮಗ್ರಿಗಳು**
- ಏಸುವಿನ ಚಿತ್ರ – ಮೆಕ್ಕಾದ ಚಿತ್ರ
- ಏಸು ಮತ್ತು ಪೈಗಂಬರರ ಬೋಧನೆಗಳ ಚಾರ್ಟ್ ಪ್ರದರ್ಶನ
- ಬೈಬಲ್ ಮತ್ತು ಕುರಾನ್ ಗ್ರಂಥಗಳ ಪ್ರದರ್ಶನ.

# 11(ಬಿ). ಪಾಠ ಯೋಜನೆ (ಮಾದರಿ)

## ಘಟಕ : 2 ಪಾಠದ ಹೆಸರು : ನಮ್ಮ ರಾಜ್ಯ – ಕರ್ನಾಟಕ (ಭೂಗೋಳ)

**ಎ) ಈ ಪಾಠದಿಂದ ನಿರೀಕ್ಷಿಸುವ ಅಂಶಗಳು (ಸಾಮರ್ಥ್ಯಗಳು)**

- 'ಕರ್ನಾಟಕ' ರಾಜ್ಯದ ಪರಿಕಲ್ಪನೆಯನ್ನು ಮೂಡಿಸಿಕೊಳ್ಳುವುದು.
- ಕನ್ನಡ ನಾಡಿನ ಹಿರಿಮೆ–ಗರಿಮೆ ಹಾಗೂ ಪರಂಪರೆಗಳ ಬಗ್ಗೆ ಅರಿಯುವುದು.
- ಕರ್ನಾಟಕ ರಾಜ್ಯ ರೂಪುಗೊಂಡ ಬಗೆ ತಿಳಿಯುವುದು.
- 'ಕರ್ನಾಟಕ' ಎಂಬ ಹೆಸರಿನ ಹಿನ್ನಲೆಯನ್ನು ಅರ್ಥೈಸಿಕೊಳ್ಳುವುದು.
- ಭೌಗೋಳಿಕವಾಗಿ ಕರ್ನಾಟಕದ ಸ್ಥಾನ, ವಿಸ್ತೀರ್ಣ, ಭೂ ಮತ್ತು ಜಲ ಮೇರೆಗಳು, ನೆರೆ ರಾಜ್ಯಗಳನ್ನು ಗುರುತಿಸುವುದು.
- ರಾಜ್ಯದ ಸಂಪನ್ಮೂಲಗಳ ಪರಿಚಯ ಮಾಡಿಕೊಳ್ಳುವುದು.

**ಬಿ) ಮನನ ಮಾಡಿಕೊಳ್ಳಲೇಬೇಕಾದ ಅಂಶಗಳು**

- ಕರ್ನಾಟಕ ರಾಜ್ಯದ ವೈಶಿಷ್ಟ್ಯತೆ
- ಕರ್ನಾಟಕ ಎಂಬ ಹೆಸರಿನ ಹಿನ್ನಲೆ
- ಭಾರತದ ಭೂಗೋಳದಲ್ಲಿ ಕರ್ನಾಟಕ
- ವಿಶಾಲ ಕರ್ನಾಟಕದ ಪರಿಕಲ್ಪನೆ
- ವಿಕೇಂದ್ರೀಕೃತ ಆಡಳಿತವಾಗಿ ಕರ್ನಾಟಕ

**ಸಿ) ಉದ್ದೇಶಿತ ಕಲಿಕಾ ಅಂಶಗಳ ಬಗ್ಗೆ ರೂಪಿಸಿಕೊಳ್ಳಬಹುದಾದ / ಪ್ರಶ್ನೆ ಮತ್ತು ಚಟುವಟಿಕೆಗಳು**

1. **ಮೌಖಿಕ ಪ್ರಶ್ನೆಗಳು** — ಉದಾ : ಭಾರತ ಭೂಪಟವನ್ನು ತರಗತಿಯಲ್ಲಿ ಪ್ರದರ್ಶಿಸಿರಿ :

   1) ಈ ಭೂಪಟದಲ್ಲಿ ಕರ್ನಾಟಕ ರಾಜ್ಯವನ್ನು ಗುರುತಿಸಿರಿ.

2. **ಲಿಖಿತ ಪ್ರಶ್ನೆ** — ಉದಾ : ಅಭ್ಯಾಸ ಪ್ರಶ್ನೆಗಳು
   - ರಸಪ್ರಶ್ನೆ
   - ನಕ್ಷೆ ರಚಿಸುವುದು.

**ಕರ್ನಾಟಕ ಏಕೀಕರಣ ಕುರಿತ ಚರ್ಚಾತ್ಮಕ ಪ್ರಶ್ನೆಗಳು**

| | | |
|---|---|---|
| 3. | **ನಾಡು ನುಡಿ ಕುರಿತ ಕವನಗಳ ಸಂಗ್ರಹ** | ಕರ್ನಾಟಕ ರಾಜ್ಯದ ಗಡಿ ಭಾಷೆ, ಜನ ಸಂಸ್ಕೃತಿ, ಪರಂಪರೆ, ಕಲೆ, ವಾಸ್ತುಶಿಲ್ಪ, ರಾಜಕೀಯ, ಸಾಂಸ್ಕೃತಿಕ ಹಿರಿಮೆಗಳನ್ನೊಳಗೊಂಡಂತೆ. |
| 4. | **ನಾಡು ನುಡಿಯ ಸಾಧಕರು** | ಸಾಹಿತ್ಯ, ಕಲೆ, ವಿಜ್ಞಾನ, ಕ್ರೀಡೆ, ರಾಜಕೀಯ, ತಂತ್ರಜ್ಞಾನ, ಕುರಿತಂತೆ. |
| 5. | **ಜೀವ ಸೆಲೆಯಾದ ನದಿಗಳ ಪಟ್ಟಿ** | ಹುಟ್ಟು, ಪೌರಾಣಿಕ ಹಿನ್ನಲೆ, ಮಹಿಮೆ, ಪ್ರಯೋಜನ. |

**ಡಿ) ಕಲಿಕೆಯನ್ನು ಅನುಕೂಲಿಸುವ ವಿಧಾನಗಳು**

* **ಪ್ರಶ್ನೋತ್ತರ ವಿಧಾನ :** ಕರ್ನಾಟಕ ರಾಜ್ಯವನ್ನು ಕುರಿತಂತೆ ಪರಿಕಲ್ಪನೆ ಮೂಡಿಸಲು ಮಕ್ಕಳಲ್ಲಿ ಸರಳ ಪ್ರಶ್ನೆಗಳಿಂದ ಪ್ರಾರಂಭಿಸಿ ಸಂಕೀರ್ಣ ಮಾದರಿ ಪ್ರಶ್ನೆಗಳನ್ನು ಕೇಳುವುದು.

* **ಘಟಕ ಪದ್ಧತಿ :** ಕರ್ನಾಟಕ ರಾಜ್ಯದ ಹಿನ್ನಲೆ, ಪರಂಪರೆ, ವಿಸ್ತೀರ್ಣ ಹಾಗೂ ಭೌಗೋಳಿಕ ಸನ್ನಿವೇಶ ಕುರಿತಂತೆ ಘಟಕಗಳನ್ನಾಗಿ ವಿಭಾಗಿಸಿಕೊಳ್ಳುವುದು.

* **ಪ್ರವಾಸ / ಹೊರ ಸಂಚಾರ ವಿಧಾನ :** ಕರ್ನಾಟಕ ರಾಜ್ಯದ ಗಡಿ ಪ್ರದೇಶಗಳು ಐತಿಹಾಸಿಕ, ಸಾಂಸ್ಕೃತಿಕ ಹಾಗೂ ನೈಸರ್ಗಿಕ ಹಿರಿಮೆಯನ್ನು ಸಾರುವ ಪ್ರದೇಶಗಳಿಗೆ ಭೇಟಿ ನೀಡುವುದು.

* **ಪಠ್ಯ ಪುಸ್ತಕ ಪಾಠ ಅವಲೋಕನ ವಿಧಾನ :** ವಿದ್ಯಾರ್ಥಿಗಳ ಪೂರ್ವ ಜ್ಞಾನವನ್ನು ಬಳಸಿಕೊಂಡು ಪಠ್ಯ ಪುಸ್ತಕವನ್ನು ಅವಲೋಕನ ಮಾಡಿ ವಿದ್ಯಾರ್ಥಿಗಳಲ್ಲೆ ಪರಸ್ಪರ ಚರ್ಚಾಂಶಗಳನ್ನು ನೀಡಿ, ಕಲಿವನ್ನುಂಟುಮಾಡುವುದು.

ಉದಾ : ಕರ್ನಾಟಕ ರಾಜ್ಯದ ವಿಸ್ತೀರ್ಣ

ಕರ್ನಾಟಕ ರಾಜ್ಯದ ವೈಶಿಷ್ಟ್ಯ.

* **ಕಲಿಕಾ ಸಾಮಗ್ರಿಗಳು (ಟಿ.ಎಲ್.ಎಂ.)**

- ಭಾರತದ ಭೂಪಟ (ರಾಜಕೀಯ)
- ಕರ್ನಾಟಕದ ರಾಜಕೀಯ ಭೂಪಟ.
- ಪ್ರಪಂಚದ ಭೂಪಟ.
- ಕರ್ನಾಟಕದ ಪ್ರಾಕೃತಿಕ ಭೂಪಟ.

- ಕರ್ನಾಟಕದ ಸಾಂಸ್ಕೃತಿಕ ಹಿರಿಮೆ ಪ್ರತಿಬಿಂಬಿಸು ಪಿ.ಪಿ.ಟಿ.
- ಶ್ರೇಷ್ಠ ಕವಿಗಳ ಚಿತ್ರ (ಕುವೆಂಪು, ಪಂಪ ಇತ್ಯಾದಿ)
- ಕರ್ನಾಟಕದ ರೇಖಾನಕ್ಷೆ.
- ಕರ್ನಾಟಕದ ವಿಜ್ಞಾನಿಗಳ ಭಾವಚಿತ್ರ
- ಕರ್ನಾಟಕದ ನದಿಗಳ ಚಿತ್ರ
- ಕರ್ನಾಟಕ ಪ್ರಮುಖ ಐತಿಹಾಸಿಕ ಸ್ಥಳಗಳ ಪಟ್ಟಿ

* **ಸಂಪನ್ಮೂಗಳ ಕ್ರೂಢೀಕರಣ**
  - 9ನೇ ತರಗತಿ ಸಮಾಜ ವಿಜ್ಞಾನ ಪುಸ್ತಕ
  - ಕರ್ನಾಟಕದ ಇತಿಹಾಸ – ಪಾಲಾಕ್ಷ
  - ಅಂತರ್ಜಾಲ
  - ಕವಿರಾಜ ಮಾರ್ಗ ಕೃತಿ
  - ಕುವೆಂಪು ವಿರಚಿತ ನಾಡಗೀತೆ
  - ಕನ್ನಡ ಹಿರಿಮೆ ಸಾರುವ ಪದ್ಯಗಳ ಸಂಗ್ರಹ
  - ಕರ್ನಾಟಕ ದಾರ್ಶನಿಕರ ಭಾವಚಿತ್ರ ಸಂಗ್ರಹ
  - ಕರ್ನಾಟಕ ರಾಜ್ಯವನ್ನಾಳಿದ ಅರಸು ಮನೆತನಗಳ ಇತಿಹಾಸ ಸಂಗ್ರಹ
  - ಕರ್ನಾಟಕ ಕುರಿತ ಲಾವಣಿಗಳ ಸಂಗ್ರಹ
  - ಕರ್ನಾಟಕ ಕುರಿತು ಜನಪದ ಕತೆಗಳ ಸಂಗ್ರಹ

# 12. ವಿಮರ್ಶಾತ್ಮಕ ಶಿಕ್ಷಣ ಕ್ರಮವನ್ನು ಅಳವಡಿಸಿಕೊಳ್ಳುವ ನೂತನ ಪರಿಕಲ್ಪನೆಗಳು

**ಎ) ಇತಿಹಾಸ ವಿಭಾಗ : ಉದಾಹರಣೆ : 1**

**1. ಪಾಠದ ಹೆಸರು : ಮಧ್ಯಯುಗದ ಯೂರೋಪ್**

**2. ಜ್ಞಾನ ರಚನೆಗೆ ಇರುವ ಅವಕಾಶಗಳು :**

> ಮಧ್ಯಯುಗದ ಯೂರೋಪಿನ ಸಮಾಜದ ಸ್ಥಿತಿಗತಿಗಳು

> ಊಳಿಗ ಮಾನ್ಯ ಪದ್ಧತಿ ಅರ್ಥ

> ಊಳಿಗ ಮಾನ್ಯ ಪದ್ಧತಿಯ ವಿವಿಧ ರೂಪಗಳು

> ಊಳಿಗ ಮಾನ್ಯ ಪದ್ಧತಿಯ ಗುಣಗಳು ಮತ್ತು ದೋಷಗಳು

> ಊಳಿಗ ಮಾನ್ಯ ಪದ್ಧತಿಯ ಅವನತಿ

> ಪ್ರಸ್ತುತ ಜನತಂತ್ರ ವ್ಯವಸ್ಥೆಯೊಂದಿಗೆ ಊಳಿಗಮಾನ್ಯ ಪದ್ಧತಿ ಹೋಲಿಕೆ

> ಭೂ ಒಡೆತನದ ಹಕ್ಕನ್ನು (ಆಸ್ತಿಯ ಹಕ್ಕು) ಪಡೆಯುವ ಬಗೆ

> ವರ್ಗ ವ್ಯವಸ್ಥೆಯಲ್ಲಿನ ವ್ಯತ್ಯಾಸಗಳ ಅರಿವು.

**3. ವಿಮರ್ಶಾಯುಕ್ತ ಶಿಕ್ಷಣ ಕ್ರಮ ಅಳವಡಿಕೆಗೆ ಇರುವ ಅವಕಾಶಗಳು**

* ಮಧ್ಯಯುಗದ ಯೂರೋಪಿನಲ್ಲಿ ವರ್ಗ ವ್ಯವಸ್ಥೆಯಲ್ಲಿನ ತಾರತಮ್ಯವನ್ನು ವಿಮರ್ಶಾಯುಕ್ತವಾಗಿ ಅರ್ಥೈಸಿಕೊಳ್ಳುವುದು.
* ಇಂದಿನ ಪ್ರಜಾತಂತ್ರ ವ್ಯವಸ್ಥೆಯೇ ಊಳಿಗಮಾನ್ಯ ಪದ್ಧತಿಗಿಂತ ಅತ್ಯಂತ ಶ್ರೇಷ್ಠವಾದುದೆಂಬ ತೀರ್ಮಾನವನ್ನು ಕಂಡುಕೊಳ್ಳುವುದು.
* ಊಳಿಗಮಾನ್ಯ ಪದ್ಧತಿಯ ಅವನತಿಗೆ ಕಾರಣವಾದ ನಿರಂಕುಶ ರಾಜ ಪ್ರಭುತ್ವ, ಭಾಷೆ, ರಾಷ್ಟ್ರೀಯ ಮನೋಭಾವನೆಗಳನ್ನು ಚರ್ಚಿಸಿ ತೀರ್ಮಾನ ಕೈಗೊಳ್ಳುವುದು.
* ಊಳಿಗಮಾನ್ಯ ವ್ಯವಸ್ಥೆಯೊಳಗೆ ಉನ್ನತ ವರ್ಗಗಳಿಗೆ ದೊರೆಯುತ್ತಿದ್ದ ಸವಲತ್ತುಗಳ ಬಗ್ಗೆ ಚರ್ಚಿಸಿ ಇಲ್ಲಿನ ತಾರತಮ್ಯವನ್ನು ತಿರಸ್ಕರಿಸುವುದು.
* ಸಮಾಜದ ರಕ್ಷಣೆಗೆ ಊಳಿಗ ಮಾನ್ಯ ವ್ಯವಸ್ಥೆಯಲ್ಲಿ ತೆಗೆದುಕೊಳ್ಳುತ್ತಿದ್ದ ಕ್ರಮ ಹಾಗೂ ಈ ಕಾಲದ ಬಾರ್ಬೇರಿಯನ್ನರು ಅಟ್ಟಹಾಸವನ್ನು ಮಟ್ಟ ಹಾಕುವಲ್ಲಿ ವಹಿಸಿದ ಪಾತ್ರವನ್ನು ವಿಮರ್ಶಿಸುವುದು.

**4. ಜ್ಞಾನದ ಪುನರ್ರಚನೆಗೆ ಇರುವ ಅವಕಾಶಗಳು**

* ಕ್ರೌರ್ಯ, ಹಿಂಸೆ, ಅಶಾಂತಿ, ದಬ್ಬಾಳಿಕೆ, ಆಕ್ರಮಣಕಾರಿ ಅಂಶಗಳನ್ನು ತಿರಸ್ಕರಿಸಿ, ಸಹನೆ, ದಯೆ, ಶಾಂತಿ, ಸಮಾನತೆ ಎಂಬ ಸಮಾಜಮುಖಿಯಾದ ಮಾನವೀಯ ಮೌಲ್ಯಗಳ ಅರಿವು ತನ್ನದಾಗಿಸಿಕೊಳ್ಳುವುದು.

  ಉದಾ : – ಅಮೇರಿಕಾದಲ್ಲಾದ ಜನಾಂಗೀಯ ಕಲಹ
  – ಭಾರತದ ಸ್ಪೃಷ್ಯ, ಅಸ್ಪೃಷ್ಯ ತಾರತಮ್ಯ
  – ಆಫ್ರಿಕಾದ ವರ್ಣ ವ್ಯತ್ಯಾಸ

* ಸಮಾಜ ಮತ್ತು ದೇಶದ ಕಣ್ಣು ತೆರೆಸುವಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗಳು ವಹಿಸಿದ ಪಾತ್ರದ ಮಹತ್ವವನ್ನು ಸ್ವೀಕರಿಸಿ ತೀರ್ಮಾನಕ್ಕೆ ಬರುವುದು.

  ಉದಾ : ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ ಭಾಷೆ/ಸಾಹಿತ್ಯಗಳಲ್ಲಾದ ವಿಕಾಸ ವಚನಗಳು, ಕೀರ್ತನೆಗಳು/ದಾಸರ ಪದಗಳು, ಜನಪದ ಗೀತೆಗಳು, ಶಿಶುನಾಳ ಷರೀಪ ಮತ್ತು ಏಸುವಿನ ಜೀವನ ಸಂದೇಶ ಕುರಿತ ಸಾಹಿತ್ಯ ರಚನೆಗಳು.

* ವರ್ಗರಹಿತ ಸಮಾಜದ ಅನಿವಾರ್ಯತೆಯನ್ನು ಅರ್ಥೈಸಿಕೊಂಡು ಭಾರತದಂತಹ ರಾಷ್ಟ್ರಗಳಲ್ಲಿನ ಸ್ವಾತಂತ್ರ್ಯ ಸಮಾನತೆ, ಸಹೋದರತೆಯಂತಹ ಭಾವನೆಯನ್ನು ಬೆಳೆಸಿಕೊಳ್ಳುವುದು.
* ಉಳುವವನಿಗೆ ಭೂಮಿಯ ಒಡೆತನ ಬಂದಿರುವ ಹಿನ್ನಲೆಯಲ್ಲಿ ಊಳಿಗಮಾನ್ಯ ಪದ್ಧತಿಯಲ್ಲಿನ ಭೂ ಒಡೆತನದ ನಿಯಮವೂ ಕಾರಣವಾಗಿದೆ ಎಂಬ ನಿರ್ಣಯಕ್ಕೆ ಬರುವುದು.

**5. ನಿರಂತರ ಹಾಗೂ ವ್ಯಾಪಕ ಮೌಲ್ಯ ಮಾಪನ ಅವಳಡಿಸಿಕೊಳ್ಳಲು ಇರುವ ಅವಕಾಶಗಳು**

* ಊಳಿಗಮಾನ್ಯ ಪದ್ಧತಿ ವ್ಯವಸ್ಥೆಗೆ ಪೂರ್ವದಲ್ಲಿ ಬರ್ಬರ ಜನಾಂಗದ ಕ್ರೂರತನದಿಂದ ಕೂಡಿದ ದಾಳಿಕೋರತನವನ್ನು ಮೂಕಾಭಿನಯ ಮೂಲಕ ಅಂದಿನ ಸಮಾಜದ ಸ್ಥಿತಿಯನ್ನು ಪ್ರದರ್ಶಿಸುವುದು.
* ಸರ್ವ ಸಮಾನತೆಯನ್ನು ಬಿಂಬಿಸುವ ದೃಶ್ಯಾವಳಿಗಳನ್ನು ಒಳಗೊಂಡ ನಾಟಕಾಭಿನಯ.
* ಊಳಿಗಮಾನ್ಯ ಪದ್ಧತಿಯೊಳಗಿನ ವರ್ಗ ವ್ಯವಸ್ಥೆ ಮತ್ತು ಜನತಂತ್ರ ವ್ಯವಸ್ಥೆಯಲ್ಲಿನ ವರ್ಗರಹಿತ ಸಂದರ್ಭವನ್ನು ಗುಂಪು ಚರ್ಚೆ ಮೂಲಕ ತೀರ್ಮಾನ ಕೈಗೊಳ್ಳುವುದು.
* ಊಳಿಗ ಮಾನ್ಯ ಪದ್ಧತಿಯ ಗುಣದೋಷಗಳು ಮತ್ತು ಜನತಂತ್ರ ವ್ಯವಸ್ಥೆಯಲ್ಲಿನ ಗುಣ ದೋಷಗಳನ್ನು ಕುರಿತು ಚಾರ್ಟ್ ತಯಾರಿಕೆ.
* ಊಳಿಗ ಮಾನ್ಯ ವ್ಯವಸ್ಥೆಯನ್ನು ಕುರಿತ ಪ್ರಬಂಧ ರಚನೆ.
* ಊಳಿಗ ಮಾನ್ಯ ಪದ್ಧತಿಯ ವರ್ಗ ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಚಿತ್ರಗಳ ರಚನೆ.
* ಸಂದರ್ಭೋಚಿತ ಮೌಖಿಕ/ಲಿಖಿತ ಪ್ರಶ್ನಾವಳಿಗಳು.

**ಕಲಿಕೆಯನ್ನು ಅನುಕೂಲಿಸುವ ವಿಧಾನಗಳು**

1. **ನಾಟಕ ಅಥವಾ ನಾಟಕಾಭಿನಯ ವಿಧಾನ**
    * ಊಳಿಗ ಮಾನ್ಯ ವ್ಯವಸ್ಥೆಯಲ್ಲಿನ ವರ್ಗ ಪದ್ಧತಿಯ ದೃಶ್ಯಾವಳಿ
    * ಬರ್ಬರ ಜನಾಂಗದ ದಾಳಿಕೋರಿತನದ ದೃಶ್ಯಾವಳಿ ಕುರಿತು
2. **ಕಥನ ವಿಧಾನ**
    * ಬರ್ಬರ ಜನಾಂಗದ ಆಕ್ರಮಣಕಾರಿ ನೀತಿ ಕುರಿತು ಕಥೆ ಹೇಳುವುದು ಹಾಗೆಯೇ ಊಳಿಗಮಾನ್ಯ ಪದ್ಧತಿಯನ್ನು ಕುರಿತು ಕಥೆ ಹೇಳುವುದು.
3. **ಚರ್ಚಾ ವಿಧಾನ**
    * ಊಳಿಗಮಾನ್ಯ ವ್ಯವಸ್ಥೆಯ ಗುಣಾವಗುಣಗಳ ಗುಂಪು ಚರ್ಚೆ.
4. **ಘಟಕ ಪದ್ಧತಿ – ಬರ್ಬರ ದಾಳಿ, ಊಳಿಗಮಾನ್ಯ ಪದ್ಧತಿಗಳು.**
    * ಊಳಿಗ ಮಾನ್ಯ ವ್ಯವಸ್ಥೆಯಲ್ಲಿನ ಗುಣದೋಷಗಳು.
    * ಊಳಿಗ ಮಾನ್ಯ ವ್ಯವಸ್ಥೆಯ ಅವನತಿಗೆ ಕಾರಣ.
5. **ವಿಶ್ಲೇಷಣಾ ವಿಧಾನ**
    * ಊಳಿಗಮಾನ್ಯ ವ್ಯವಸ್ಥೆ ಮತ್ತು ಜನತಂತ್ರ ವ್ಯವಸ್ಥೆಯ ಹೋಲಿಕೆ, ವ್ಯತ್ಯಾಸವನ್ನು ವಿಶ್ಲೇಷಿಸುವುದು.
6. **ಸಂಪನ್ಮೂಲಗಳ ಕ್ರೂಢೀಕರಣ**
    * ಚಿತ್ರದಲ್ಲಿ ಚರಿತ್ರೆ
    * ಯೂರೋಪಿನ ಮಧ್ಯಕಾಲೀನ ಇತಿಹಾಸ ಪಾಲಕ್ಷ, ಅಕಬರಾಲಿ
    * ವಿಶ್ವಕೋಶ
    * ವೀಕಿ ಪೀಡಿಯಾ, ಎನ್ಸೈಕ್ಲೋಪೀಡಿಯಾ
    * ಅಂತರ್ಜಾಲ – Google ಬಳಕೆ
7. **ಬಳಸಬಹುದಾದ ಬೋಧನೋಪಕರಣಗಳು**
    * ಬರ್ಬರ ಜನಾಂಗದ ದಾಳಿ ಕುರಿತ ಚಿತ್ರಪಟ
    * ವರ್ಗ ವ್ಯವಸ್ಥೆಯ ಚಿತ್ರಗಳು
    * ಭೂಮಾಲೀಕತ್ವದ ದಾಖಲಾತಿಗಳು (ಪಹಣಿ, ಪಟ್ಟಿ)
    * ಯೂರೋಪ್ ಖಂಡ/ಪ್ರಪಂಚದ ಭೂಪಟ.
    * ಪಠ್ಯ ಪುಸ್ತಕ

**8. ಮನನ ಮಾಡಿಕೊಳ್ಳಲೇಬೇಕಾದ ಅಂಶಗಳು**

* ಸಮಾನತೆ
* ಭ್ರಾತೃತ್ವ
* ಶ್ರಮ ಮತ್ತು ದುಡಿಮೆ
* ದಬ್ಬಾಳಿಕೆ ಮತ್ತು ಶೋಷಣೆ ವಿರುದ್ಧದ ಹೋರಾಟ
* ರಾಷ್ಟ್ರೀಯ ಪ್ರಜ್ಞೆ.

**ಉದಾಹರಣೆ : 2**

## 1) ಪಾಠದ ಹೆಸರು : ವಿಜಯನಗರ ಮತ್ತು ಬಹಮನಿರಾಜ್ಯ

**2) ಜ್ಞಾನ ರಚನೆಗೆ ಇರುವ ಅವಕಾಶಗಳು :**

* ವಿಜಯನಗರ ಮತ್ತು ಬಹಮನಿರಾಜ್ಯಗಳ ಉಗಮ.
* ವಿಜಯನಗರ ಹಾಗೂ ಬಹಮನಿರಾಜ್ಯಗಳ ರಾಜವಂಶಗಳು.
* ಕೃಷ್ಣದೇವರಾಯನ ಕೊಡುಗೆಗಳು.
* ವಿಜಯನಗರ ಸಾಮ್ರಾಜ್ಯದ ಕಲೆ ವಾಸ್ತುಶಿಲ್ಪ, ಸಂಸ್ಕೃತಿಗಳ ಪರಿಚಯ.
* ಬಹಮನಿ ಅರಸರ ಆಡಳಿತಾತ್ಮಕ ಕೊಡುಗೆಗಳು.
* ಬಹಮನಿ ಸಾಮ್ರಾಜ್ಯದ ಕಲೆ ಮತ್ತು ವಾಸ್ತುಶಿಲ್ಪ ಸಾಹಿತ್ಯಿಕ ಕೊಡುಗೆಗಳು.
* ವಿಜಯನಗರ ಸಾಮ್ರಾಜ್ಯದ ಅವನತಿ/ತಾಳಿಕೋಟೆ ಕದನ.
* ಬಹಮನಿ ಸಾಮ್ರಾಜ್ಯದ ಅಂತ್ಯ.

**3) ವಿಮರ್ಶಾಯುಕ್ತ ಶಿಕ್ಷಣಕ್ರಮ ಅಳವಡಿಕೆಗೆ ಇರುವ ಅವಕಾಶಗಳು**

* ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಒಂದು ಯುಗ ಪ್ರವರ್ತಕ ಘಟನೆ ಎಂಬುದನ್ನು ತಾರ್ಕಿಕವಾಗಿ ಚರ್ಚಿಸಿ ಕಾರಣವನ್ನು ಅರ್ಥೈಸಿಕೊಳ್ಳುವುದು.
* ಸಂಗಮ, ಸಾಳುವ, ತುಳುವ ಮತ್ತು ಅರವೀಡು ರಾಜವಂಶಗಳು ವಿಜಯನಗರದ ಖ್ಯಾತಿಯನ್ನು ಜಗದ್ವಿಖ್ಯಾತಗೊಳಿಸಿದ ಸಂದರ್ಭಗಳನ್ನು ಚರ್ಚಿಸುವುದು.
* ಕೃಷ್ಣದೇವರಾಯನ ಆಡಳಿತಾತ್ಮಕ ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯಿಕ ಹಾಗೂ ಸೈನಿಕ ಕೊಡುಗೆಗಳ ಮಹತ್ವವನ್ನು ವಿದೇಶೀಯರ ಬಣ್ಣಿಸಿರುವ ಹಿನ್ನಲೆಯಲ್ಲಿ ಒಪ್ಪಿಕೊಂಡು, ಪ್ರಸ್ತುತ ಕಾಲ ಸಂದರ್ಭದ ಆಧುನಿಕ ಸರ್ಕಾರಗಳ ಕಾರ್ಯ ವೈಖರಿಯ ಬಗ್ಗೆ ಹೋಲಿಸಿ, ತೀರ್ಮಾನ ಕೈಗೊಳ್ಳುವುದು.

* ಒಂದು ದೇಶದ/ಸಾಮ್ರಾಜ್ಯದ ಸಾಂಸ್ಕೃತಿಕ ಹಿರಿಮೆಗೆ ಅಲ್ಲಿನ ರಾಜರ/ಸರಕಾರದ ಸಾಹಿತ್ಯದ ಪ್ರೋತ್ಸಾಹವನ್ನು ಹೇಗೆ ಅವಲಂಬಿಸಿರುತ್ತದೆ ಎಂಬುದನ್ನು ಅರ್ಥೈಸಿಕೊಳ್ಳುವರು.
* ದೇಶದ ಜನರ ನೆಮ್ಮದಿ ಅಲ್ಲಿನ ರಕ್ಷಣೆಯನ್ನು ಅವಲಂಬಿಸಿರುತ್ತದೆ ಎನ್ನುವ ಹಿನ್ನಲೆಯಲ್ಲಿ ರಾಷ್ಟ್ರರಕ್ಷಣೆಗೆ ಕೃಷ್ಣದೇವರಾಯನೂ ಸೇರಿದಂತೆ ವಿಜಯನಗರದ ಅರಸರು ಹೇಗೆ ಯುವ ಶಕ್ತಿಯನ್ನು ಪ್ರೋತ್ಸಾಹಿಸುತ್ತಿದ್ದರು ಎಂಬುದನ್ನು ಸ್ಮರಿಸಿಕೊಂಡು ಇಂದಿನ ಭಾರತದಂತಹ ರಾಷ್ಟ್ರದ ರಕ್ಷಣೆಯಲ್ಲಿ ಯುವಶಕ್ತಿಯ ಮಹತ್ವವನ್ನು ಗಮನಕ್ಕೆ ತಂದುಕೊಳ್ಳುವರು.
* ವಿಜಯನಗರ ಸಾಮ್ರಾಜ್ಯದಲ್ಲಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸಮಾನತೆಯು ಅಂದಿನ ಆ ಸಮಾಜದ ಏಳಿಗೆ ಕಾರಣವಾಗಿದ್ದು ಈ ಕಾಲಘಟ್ಟದ ಅಸಮಾನತೆಯ ಪ್ರಸ್ತುತ ಸಂದರ್ಭಕ್ಕೆ ವಿಜಯನಗರದ ಇಂತಹ ಸಂದೇಶದ ಅನುಷ್ಠಾನದ ಅನಿವಾರ್ಯತೆಯನ್ನು ತೀರ್ಮಾನಕ್ಕೆ ತಂದುಕೊಳ್ಳುವರು.
* ವಿಜಯನಗರ ಸರ್ವಧರ್ಮ ಸಹಿಷ್ಣುತೆಯು ಇಂದಿನ ಸಮಾಜದ ಒಡಕುಗಳಿಗೆ ಹೇಗೆ ಮಾದರಿಯಾಗಿ ನಿಲ್ಲಬಲ್ಲದು ಮತ್ತು ಸರ್ವಧರ್ಮಗಳನ್ನು ಸಮಾನತೆಯಿಂದ ಕಾಣುವ ಮನೋಭಾವನೆ ವಿಜಯನಗರದ ಅರಸರ ಇಂತಹ ನೀತಿಗಳು ಪಾಠವಾಗಲಿ ಎಂದು ಹೆಮ್ಮೆಯೆಂದು ತಿಳಿದುಕೊಳ್ಳುವರು.
* ವಿಜಯನಗರ ಸಾಮ್ರಾಜ್ಯದ ವಾಸ್ತುಶಿಲ್ಪದ ವೈವಿಧ್ಯತೆಗೆ ಸಂಬಂಧಿಸಿದಂತೆ ಆ ಕಾಲದ ಶಿಲ್ಪಿಗಳ ಕಲಾ ನೈಪುಣ್ಯ ಅವರ ಕುಶಲತೆ, ತಾಳ್ಮೆಯನ್ನು ಮೆಚ್ಚಿಕೊಳ್ಳುವರು.
* ದ್ವೇಷದಿಂದ ದ್ವೇಷವೇ ಬೆಳೆಯುತ್ತದೆ ಎಂಬ ಸಂದೇಶದಂತೆ ರಾಮರಾಯನು ಬಹಮನಿ ಸುಲ್ತಾನರ ಮೇಲೆ ತೀರಿಸಿಕೊಂಡ ಪ್ರತೀಕಾರ ಭಾವನೆ ಹೇಗೆ ಒಂದು ಭವ್ಯ ಸಾಮ್ರಾಜ್ಯವನ್ನು ಸರ್ವನಾಶ ಮಾಡಿತು ಎಂಬ ಎಚ್ಚರವನ್ನು ತಮ್ಮದಾಗಿಸಿ ಕೊಳ್ಳುವರು.
* ದ್ರಾವಿಡ ಶೈಲಿಯ ಶ್ರೇಷ್ಠ ವಿಕಸಿತ ರೂಪದಂತಿರುವ ವಿಜಯನಗರದ ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಇಂದಿನ ಎಲ್ಲಾ ಸಂಗೀತ, ನೃತ್ಯದ ಮೂಲ ನೆಲೆಯಂತಿರುವ ವಿಜಯನಗರ ಸಾಂಸ್ಕೃತಿಕ ಹಿರಿಮೆಯ ಬಗ್ಗೆ ಮೆಚ್ಚಿಕೊಳ್ಳುವರು.
* ಒಬ್ಬ ಶ್ರೇಷ್ಠ ಪ್ರಧಾನ ಮಂತ್ರಿಯಿಂದ ಅಲ್ಲಿನ ಆಳರಸರ ಅದಕ್ಷತೆ ನಡುವೆಯೂ ಒಂದು ವಿಶಾಲ ಸಾಮ್ರಾಜ್ಯದ ಸ್ಥಾಪನೆಗೊಳ್ಳಲು ಸಾಧ್ಯವಾಗುವ ಬಗೆಯನ್ನು ಬಹಮನಿ ಸುಲ್ತಾನರ ಪ್ರಧಾನಮಂತ್ರಿ ಮಹಮದ್ ಗವಾನರ ಸಾಧನೆಯ ಅಡಿಯಲ್ಲಿ ಅರ್ಥೈಸಿಕೊಳ್ಳುವರು.

* ಇಂದಿನ ಸಮಾಜದೊಳಗಣ ಮತೀಯ ಗಲಬೆ ಮತ್ತು ಅಶಾಂತಿಯ ಸನ್ನಿವೇಶಗಳನ್ನು ಸರಿಪಡಿಸುವಲ್ಲಿ ಇಬ್ರಾಹಿಂ ಆದಿಲ್ ಷಾರವರ ಕಿತಾಬ್ –ಎ– ನವರಸ ಕೃತಿಯು ಎಲ್ಲಾ ಧರ್ಮೀಯರಲ್ಲಿ ಸಾಮರಸ್ಯದ ಬದುಕನ್ನು ಬಿಂಬಿಸುವಲ್ಲಿ ಕೃತಿಯೊಳಗಣ ಮತೀಯ ಉದಾರತೆಯ ಅಂಶಗಳು ಹೇಗೆ ಸಾಕ್ಷಿಯಾಗುತ್ತವೆ ಎಂಬುದನ್ನು ತಿಳಿಯುವರು.
* ವಿಜಯನಗರದ ವೈಭವಯುತ ಸಾಮ್ರಾಜ್ಯದ ನಿದರ್ಶನವಾಗಿ ಮುತ್ತುರತ್ನ ಹವಳಗಳನ್ನು ಬೀದಿಗಳಲೆಲ್ಲಾ ಮಾರುತ್ತಿದ್ದು ವ್ಯವಸ್ಥೆಯೊಂದಿಗೆ ಇಂದಿನ ಚಿನ್ನ ಬೆಳ್ಳಿಯ ಬೆಲೆಯನ್ನು ಅರ್ಥೈಸಿಕೊಂಡು ಆ ಕಾಲದ ವೈಭವವನ್ನು ಕಲ್ಪಿಸಿಕೊಳ್ಳುವುದು.
* ಇಂದಿನ ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ಬರುವ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮಾಡಳಿತ ವ್ಯವಸ್ಥೆಯ ರಚನೆ ಬಹುತೇಕ, ಬಹುಮನಿ ಅರಸರ ಕಾಲದ ಪ್ರಾಂತ, ಸರ್ಕಾರ್ ಮತ್ತು ಗ್ರಾಮಗಳ ಆಡಳಿತ ವ್ಯವಸ್ಥೆಯಲ್ಲಿ ರೂಪುಗೊಂಡಿರು ವಂತಿದೆ ಎಂಬುದನ್ನು ಅಧಿಕಾರ ವಿಕೇಂದ್ರೀಕರಣದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಪರಿಕಲ್ಪನೆಯನ್ನು ಸ್ವೀಕರಿಸಿಕೊಳ್ಳುವರು.
* ಪ್ರಸ್ತುತ ನಮ್ಮೊಳಗಿರುವ ಕಂದಾಯ, ಸೈನ್ಯ ಮತ್ತು ನ್ಯಾಯಾಂಗ ವ್ಯವಸ್ಥೆಯು ಬಹಮನಿ ಸುಲ್ತಾನರ, ಕಂದಾಯ, ಸೈನ್ಯ ನ್ಯಾಯಾಡಳಿತದ ಮುಂದುವರೆದ ಭಾಗದಂತಿದೆ ಎಂಬುದನ್ನು ಹೋಲಿಸಿ ತೀರ್ಮಾನ ಕೈಗೊಳ್ಳುವರು.
* ಬಹಮನಿ ಸುಲ್ತಾನರಲ್ಲಿ ಕೃಷಿಯೇ ಪ್ರಮುಖ ಉದ್ಯೋಗವಾಗಿದ್ದು ಇಂದಿನಂತೆಯೇ ಅನೇಕ ಕುಲ ಕಸುಬುಗಳು, ಜನರ ಜೀವನೋಪಾಯಕ್ಕೆ ಪೂರಕವಾಗಿದ್ದವು. ಹಾಗೂ ಚಿನ್ನ ಬೆಳ್ಳಿಯ ನಾಣ್ಯಗಳ ಜೊತೆಗೆ ವಿದೇಶೀ ವ್ಯಾಪಾರ ಜಾತಿಪದ್ಧತಿ, ಪಿತೃಪ್ರಧಾನ ಕುಟುಂಬ ಮತ್ತು ಸ್ತ್ರೀ ಬದುಕಿನ ಬಗ್ಗೆ ಕೆಲವು ನಿಬಂಧನೆಗಳೂ ಇದ್ದವು ಎಂಬುದನ್ನು ಅರ್ಥೈಸಿಕೊಂಡು ಪ್ರಸಕ್ತ ಸಾಮಾಜಿಕ ಜೀವನ ಐತಿಹಾಸಿಕ ಹಿನ್ನಲೆಯಿಂದಲೇ ಮುಂದುವರೆದಿದೆ ಎಂಬ ತೀರ್ಮಾನಕ್ಕೆ ಬರುವರು.
* ಬಹಮನಿ ಸುಲ್ತಾನರ ಆಡಳಿತದಲ್ಲಿ ರಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವಿದ್ದು, ಮತ, ಕಾನೂನು, ಕಾವ್ಯ, ಅಲಂಕಾರಶಾಸ್ತ್ರ, ಖಗೋಳಶಾಸ್ತ್ರ, ವ್ಯಾಕರಣ, ಗಣಿತ, ತತ್ವಶಾಸ್ತ್ರ, ಇತಿಹಾಸ, ರಾಜನೀತಿ ವಿಷಯುಗಳ ಅಧ್ಯಯನದ ಮೂಲಕ ಬಾಗಿನ ಕಟ್ಟಿಕೊಳ್ಳುವುದಾಗಿತ್ತು ಎಂಬುದನ್ನು ಶೈಕ್ಷಣಿಕ ಮಹತ್ವದ ಹಿನ್ನಲೆಯಲ್ಲಿ ಸ್ಮರಿಸಿಕೊಳ್ಳುವರು.

4) **ಜ್ಞಾನ ಪುನರ್ರಚನೆಗಿರುವ ಅವಕಾಶಗಳು**

* ವಿಜಯನಗರ ಸಾಮ್ರಾಜ್ಯದ ಉದಯಕ್ಕೆ ಕಾರಣ ಉದಾ : 14ನೇ ಶತಮಾನದಲ್ಲಿ ದಕ್ಷಿಣ ಭಾರತದೊಳಗಣ ರಾಜಕೀಯ ಅಭದ್ರತೆ, ಅಸ್ಥಿರತೆ, ಕ್ಷೋಭೆ, ಭಯ ಮತ್ತು ಧಾರ್ಮಿಕ ವಿಪ್ಲವಗಳು ಹೇಗೆ ಕಾರಣವಾದವು ಎಂಬುದನ್ನು ತಿಳಿಸುವುದು.

* ವಿಜಯನಗರ ಅರಸರುಗಳಲ್ಲಿ ಮುಖ್ಯರಾದಂತಹ ಹರಿಹರ, ಬುಕ್ಕರಾಯ, ಎರಡನೇ ದೇವರಾಯ ಮತ್ತು ಶ್ರೀಕೃಷ್ಣದೇವರಾಯ ಸಾಮ್ರಾಜ್ಯ ವಿಸ್ತರಣೆಯಲ್ಲಿ ಅವರು ಅನುಸರಿಸಿದ ನೀತಿ, ನಿಲವು ಮತ್ತು ಧೈರ್ಯ ಉತ್ಸಾಹಗಳನ್ನು ಮತ್ತು ರಾಜ್ಯ ರಕ್ಷಣೆಯ ಬದ್ಧತೆಯ ಜ್ಞಾನವನ್ನು ಕಟ್ಟಿಕೊಳ್ಳುವರು.

* ರಾಜನಾದವನು ತನ್ನ ಸಮಕಾಲೀನ ರಾಜರನ್ನು ಹಾಗೂ ವಿದೇಶೀ ರಾಜರನ್ನು ನಡೆಸಿಕೊಳ್ಳುತ್ತಿದ್ದ ರೀತಿ ಹಾಗೂ ಸಂಬಂಧವನ್ನು ಕಟ್ಟಿಕೊಳ್ಳುತ್ತಿದ್ದ ರೀತಿಯನ್ನು ಇಂದಿನ ವಿದೇಶಾಂಗ ನೀತಿಯ ಪರಿಕಲ್ಪನೆಯೊಂದಿಗೆ ಕಲ್ಪಿಸಿಕೊಳ್ಳಲು ಶ್ರೀಕೃಷ್ಣ ದೇವರಾಯನ ಆಡಳಿತ ಪದ್ದತಿಯು ನೈಪುಣ್ಯತೆಯ ಜ್ಞಾನವನ್ನು ವಿನೂತನವಾಗಿ ಕಟ್ಟಿಕೊಳ್ಳುವರು.

* ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಆಡಳಿತದ ಸಮಲತ್ತುಗಳು ದೊರೆಯುವಂತಹ ವ್ಯವಸ್ಥೆಯ ಅಡಿಯಲ್ಲಿ ವಿಜಯನಗರ ಮತ್ತು ಬಹಮನಿ ಅರಸರ ಅಧಿಕಾರ ವಿಕೇಂದ್ರೀಕರಣದ ನೀತಿಯು ಮಾದರಿ ಆಡಳಿತದಂತೆ ಕಂಡುಬರುತ್ತಿದೆ ಎಂಬ ಜ್ಞಾನ ವಿದ್ಯಾರ್ಥಿಗಳದ್ದಾಗುವುದು.

* ಜಾತಿ ವ್ಯವಸ್ಥೆಯ ಅಡಿಯಲ್ಲಿ ಬರುವ ಕುಲ ಕಸುಬುಗಳು, ಸಮಾಜದ ಶಾಂತಿಯುತ ಚಲನೆಗೆ ಸಹಾಯವಾಗುತ್ತವೆ ಎಂಬುದನ್ನು ವಿಜಯನಗರ ಮತ್ತು ಬಹಮನಿ ಅರಸರ ಕಾಲದ ಚಮ್ಮಾರ, ಬಡಗಿ, ಅಕ್ಕಸಾಲಿಗ, ನೇಕಾರ, ಕಂಚುಗಾರ, ಕಮ್ಮಾರರ, ಕಸುಬುಗಳ ಮೂಲಕ, ಆರ್ಥಿಕ ಸ್ವಾವಲಂಬನೆಯ ಮಹತ್ವಕ್ಕೆ ಉದ್ಯೋಗಗಳು ಮುಖ್ಯ ಎಂಬ ಜ್ಞಾನ ಕಟ್ಟಿಕೊಳ್ಳುವರು.

* ವಿಜಯನಗರ ಮತ್ತು ಬಹಮನಿ ಅರಸರ ಆಡಳಿತ ಪದ್ಧತಿಯಲ್ಲಿ ಇದ್ದಂತಹ ತೆರಿಗೆ ವಸೂಲಾತಿ ಭೂ ಹಿಡುವಳಿ, ವಿದೇಶೀ ವ್ಯಾಪಾರ, ವ್ಯವಸ್ಥೆ ಬಗ್ಗೆ ಅರಿತುಕೊಂಡು, ಆಡಳಿತದ ಮೇಲೆ ಬೀರುವ ಪರಿಣಾಮದ ಸದುಪಯೋಗ ಜ್ಞಾನವನ್ನು ವಿದ್ಯಾರ್ಥಿಗೆ ಉದಾಹರಣೆ ಮೂಲ ವಿವರಿಸುವುದು.

  ಉದಾ : ತೆರಿಗೆಯ ಹಣವನ್ನು ನೀರಾವರಿಗೆ ರಸ್ತೆ ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುತ್ತಿತ್ತು.

  ವಿದೇಶಿ ವ್ಯಾಪಾರ ಕೊಡು-ಕೊಳ್ಳುವ ಹಿನ್ನಲೆಯಲ್ಲಿ ನಿರಂತರವಾಗಿ ನಡೆಯುತ್ತಿದ್ದವು. ಚಿನ್ನ ಬೆಳ್ಳಿ ಸಾಂಬಾರ ಪದಾರ್ಥಗಳನ್ನು ರಪ್ತು ಮಾಡಿ ಕುದುರೆ, ಮದ್ಯ, ಸೈನಿಕರು, ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು.

* ವಿಜಯನಗರ ಮತ್ತು ಬಹಮನಿ ಸುಲ್ತಾನರ ಸಾಂಸ್ಕೃತಿಕ ಪರಂಪರೆ ಇಂದಿಗೂ ಮಾದರಿಯಾಗಿದೆ ಹಾಗೂ ಮುಂದುವರೆಯುತ್ತಲೇ ಇದೆ.

  ಉದಾ : ಶ್ರೀಕೃಷ್ಣ ದೇವರಾಯನ **ಆಮುಕ್ತ ಮೌಲ್ಯದ,** ಎರಡನೇ ಇಬ್ರಾಹಿಂ ಆದಿಲ್‌ಶಾನ ಮತೀಯ ಉದಾರತೆ ಕುರಿತು ಜ್ಞಾನ ಕಟ್ಟಿಕೊಳ್ಳಲು ಅವಕಾಶ ಕಲ್ಪಿಸುವುದು – ಸಾಂಸ್ಕೃತಿಕ ಸಾಮರಸ್ಯದ ಸಂಕೇತವಾಗಿ ಇಂದಿಗೂ ಹಂಪೆಯಲ್ಲಿ ಕಂಡುಬರುವ ಗುಡಿ, ಚರ್ಚು ಮಸೀದಿಗಳ ನಿರ್ಮಾಣ ಕುರಿತು ವೈಚಾರಿಕತೆ ಬೆಳೆಸುವುದು.

5) **ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಅಳವಡಿಸಿಕೊಳ್ಳಲು ಇರುವ ಅವಕಾಶಗಳು**

* ವಿದ್ಯಾರಣ್ಯ ಮಹರ್ಷಿಗಳು ಹಕ್ಕ ಬುಕ್ಕರಿಗೆ ಉಪದೇಶ ಮಾಡುವುದರೊಂದಿಗೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮಾಡಿದ ಸಂದರ್ಭವನ್ನು ನಾಟಕಾಭಿನಯದ ಮೂಲಕ ಪ್ರದರ್ಶಿಸುವಂತೆ ತಿಳಿಸುವುದು.
* ಎರಡನೇ ಪ್ರೌಢದೇವರಾಯ ಮತ್ತು ಕೃಷ್ಣದೇವರಾಯನ ಸಾಧನೆಗಳನ್ನು ಕುರಿತು ಪ್ರಬಂಧ ಮಂಡನೆ ಮಾಡುವುದು.
* ವಿಜಯನಗರ ಮತ್ತು ಬಹಮನಿ ಸುಲ್ತಾನರ ಆಡಳಿತಾತ್ಮಕ ಅಂಶಗಳನ್ನು ತರಗತಿಯಲ್ಲಿ ಗುಂಪುಗಳ ಮೂಲಕ ಚರ್ಚಿಸಿ, ಸಾಮ್ಯತೆ ಕಂಡುಬರುವ ಅಂಶಗಳನ್ನು ಪಟ್ಟಿಮಾಡುವುದು.
* ವಿಜಯನಗರ ಮತ್ತು ಬಹಮನಿ ಅರಸರ ಕಾಲದ ಕಲೆ ವಾಸ್ತುಶಿಲ್ಪಗಳ ವ್ಯತ್ಯಾಸಗಳನ್ನು ಕಲಿಕಾ ನಿಲ್ದಾಣಗಳಲ್ಲಿ ಚರ್ಚಿಸಿ, ತೀರ್ಮಾನಗಳನ್ನು ಕೈಗೊಳ್ಳುವುದು.
* ತೆರಿಗೆ ಪದ್ಧತಿ, ಭೂಹಿಡುವಳಿ ಪದ್ಧತಿ, ಅಧಿಕಾರ ವಿಕೇಂದ್ರೀಕರಣ ಕುರಿತ ಪ್ರಶ್ನಾವಳಿಗಳನ್ನು ತಯಾರಿಸುವುದು.
* ರಾಮರಾಯ ಅನುಸರಿಸಿದ ಬಹಮನಿ ಸುಲ್ತಾನರ ಬಗೆಗಿನ ಪ್ರತೀಕಾರ ನೀತಿಯೇ ವಿಜಯನಗರದ ಅವನತಿಗೆ ಕಾರಣವಾಯಿತು ಎಂಬ ವಿಚಾರವಾಗಿ ಚರ್ಚಾಸ್ಪರ್ಧೆ ಏರ್ಪಡಿಸುವುದು.
* ಮಹಮದ್ ಗವಾನನ ನಿಷ್ಠೆ, ಸೇವೆ ಕುರಿತು ಟಿಪ್ಪಣಿ ರಚಿಸಲು ತಿಳಿಸುವುದು.
* ರಸಪ್ರಶ್ನೆ, ಪರೀಕ್ಷೆಗಳನ್ನು ನಡೆಸುವುದು.
* ವಿಜಯನಗರ ಮತ್ತು ಬಹಮನಿ ಸಾಮ್ರಾಜ್ಯದ ವ್ಯಾಪ್ತಿ ಎಲ್ಲವನ್ನು ಕುರಿತು ಭೂಪಟ ರಚಿಸುವುದು.
* ವಿಜಯನಗರ ಮತ್ತು ಬಹಮನಿ ರಾಜರುಗಳ ಕಾಲದ ವಿದೇಶೀ ವ್ಯಾಪಾರದ ಬಂದರುಗಳನ್ನು ಭೂಪಟದಲ್ಲಿ ಗುರುತಿಸುವುದು.

* ದೇಶ ಪ್ರೇಮ ರಾಷ್ಟ್ರ ರಕ್ಷಣೆ ಹಿಂದೂ ಮುಸ್ಲಿಂ ಸಾಮರಸ್ಯವನ್ನು ತೋರಿಸುವ ಘಟನೆಗಳನ್ನು ಸ್ವ ಅನುಭವಿಸಿದ ವಿದ್ಯಾರ್ಥಿಗಳಿಂದ ಹೇಳಿಸುವುದು.

**6) ಕಲಿಕೆಯನ್ನು ಅನುಕೂಲಿಸುವ ವಿಧಾನಗಳು**

> ಘಟಕ ಪದ್ಧತಿ : ವಿಜಯನಗರ ಮತ್ತು ಬಹಮನಿ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಒಟ್ಟು ಪಾಠಭಾಗವನ್ನು ಘಟಕಗಳನ್ನಾಗಿ ವಿಭಾಗಿಸಿಕೊಂಡು ಕಲಿವನ್ನುಂಟು ಮಾಡುವುದು.

ಉದಾ : ವಿಜಯನಗರ ಸ್ಥಾಪನೆ

* 2ನೇ ಪ್ರೌಢದೇವರಾಯ
* ಕೃಷ್ಣದೇವರಾಯ
* ವಿಜಯನಗರ ಸಾಮ್ರಾಜ್ಯ ಪಥನ
* ವಿಜಯನಗರದ ಕೊಡುಗೆಗಳು
* ಮಹಮದ್ ಗವಾನ
* ಇಬ್ರಾಹಿಂ ಆದಿಲ್‌ಷಾ
* ಬಹಮನಿ ರಾಜ್ಯದ ಆರ್ಥಿಕ ಸಾಮಾಜಿಕ, ಧಾರ್ಮಿಕ ವ್ಯವಸ್ಥೆ.

> ವೀಕ್ಷಣಾ ವಿಧಾನ : ಬಹಮನಿ ಮತ್ತು ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಪ್ರಮುಖ ಚಿತ್ರಪಟಗಳನ್ನು ತರಗತಿಯಲ್ಲಿ ಪ್ರದರ್ಶಿಸಿ ವೀಕ್ಷಿಸುವುದರ ಮೂಲಕ ಕಲಿವಿನ ಅವಕಾಶವನ್ನು ಕಲ್ಪಿಸುವುದು.

ಉದಾ : * ವಿರೂಪಾಕ್ಷ ದೇವಾಯಲದ ಚಿತ್ರಪಟ
* ಶ್ರೀ ಕೃಷ್ಣದೇವರಾಯನ ಚಿತ್ರ
* ಬಿಜಾಪುರದ ಗೋಲ್‌ಗುಂಬಸ್ ಚಿತ್ರ
* ಬೀದರ್ ಕೋಟೆ ಮತ್ತು ಜಾಮಿಯಾ ಮಸೀದಿಗಳ ಚಿತ್ರ

> ಪ್ರವಾಸ ವಿಧಾನ : ವಿಜಯನಗರ ಮತ್ತು ಬಹಮನಿ ಅರಸರು ಆಳ್ವಿಕೆ ನಡೆಸಿದ ಸ್ಥಳಗಳಾದ ಹಂಪಿ ಮತ್ತು ಬಿಜಾಪುರ, ಬೀದರ್‌ಗಳಿಗೆ ಭೇಟಿ ನೀಡಿ, ಅಲ್ಲಿನ ಸ್ಮಾರಕಗಳನ್ನು ವೀಕ್ಷಿಸಿ ಕಲಿವನ್ನುಂಟು ಮಾಡುವುದು.

ಈ ವಿಧಾನಗಳ ಜೊತೆಗೆ ಸಮಾಜ ವಿಜ್ಞಾನ ಕಲಿಕೆಯಲ್ಲಿ ಸಂಶೋಧನಾ ವಿಧಾನ ಮತ್ತು ಪ್ರಶ್ನೋತ್ತರ ವಿಧಾನಗಳನ್ನು ಬಳಸಿಕೊಳ್ಳಬಹುದು.

**7) ಸಂಪನ್ಮೂಲಗಳ ಕ್ರೂಢೀಕರಣಗಳು**

* 9ನೇ ತರಗತಿ ಪಠ್ಯಪುಸ್ತಕ
* ದಕ್ಷಿಣ ಭಾರತದ ಇತಿಹಾಸ – ಅಕಬರಾಲಿ
* ಚಿತ್ರದಲ್ಲಿ ಚರಿತ್ರೆ

* ಹಂಪಿ ಮತ್ತು ಬಿಜಾಪುರ ಬೀದರ್‌ನಲ್ಲಿರುವ ಐತಿಹಾಸಿಕ ಸ್ಮಾರಕಗಳ ಚಿತ್ರಪಟ.
* ಮೋಹನ ತರಂಗಿಣಿ – ಕನಕದಾಸರು, ಕಾ.ತ. ಚಿಕ್ಕಣ್ಣ
* ಅಂತರ್ಜಾಲ. ಗೂಗಲ್.ಕಾಮ್
* ಎನ್ಸೈಕ್ಲೋಪೀಡೀಯ.

**8) ಬೋಧನೋಪಕರಣಗಳು**

- ದಕ್ಷಿಣ ಭಾರತದ ಭೂಪಟ
- ಪ್ರಪಂಚದ ಭೂಪಟ
- ಹಂಪಿಯ ಚಿತ್ರಪಟಗಳು
- ಬಿಜಾಪುರ/ಬೀದರ್‌ನ ಐತಿಹಾಸಿಕ ಸ್ಮಾರಕಗಳ ಚಿತ್ರಗಳು
- ಅಧಿಕಾರ ಶ್ರೇಣೀಕೃತ (ವಿಕೇಂದ್ರೀಕರಣ) ಕುರಿತ ಚಾರ್ಟ್‌ಗಳು
- ಸರ್ವಧರ್ಮ ಸಮನ್ವಯದ ಚಿತ್ರಪಟಗಳು

**9) ಮನನ ಮಾಡಿಕೊಳ್ಳಲೇ ಬೇಕಾದ ಅಂಶಗಳು**

- ಸಾಮರಸ್ಯದ ಆಡಳಿತ ಪದ್ಧತಿ
- ವಿಕೇಂದ್ರೀಕೃತ ಆಡಳಿತ ವ್ಯವಸ್ಥೆ
- ವ್ಯಾಪಾರದ ಮಹತ್ವ
- ಕಲೆ ಮತ್ತು ವಾಸ್ತುಶಿಲ್ಪದ ಶ್ರೀಮಂತಿಕೆ
- ರಾಷ್ಟ್ರರಕ್ಷಣೆ, ದೇಶಪ್ರೇಮಗಳಲ್ಲಿ ಪ್ರಜೆಗಳ ಪಾತ್ರ.
- ಸಮಾಜಮುಖಿ ಸಾಹಿತ್ಯ ರಚನೆಯ ಮಹತ್ವ.
- ವಿಜಯನಗರ ವೈಭವದ ಪರಿಕಲ್ಪನೆ.
- ಪ್ರತೀಕಾರದ ರಾಜನೀತಿಯನ್ನು ಕೈಬಿಡುವುದು.
- ಸೋತ ಮನಸ್ಸುಗಳನ್ನು ಸಂತೈಸುವುದು.
- ಸಾಂಸ್ಕೃತಿಕ ಪರಂಪರೆಗಳನ್ನು ಪರಸ್ಪರ ಗೌರವಿಸುವುದು.

**ಉದಾಹರಣೆ : 3**

## ಪಾಠದ ಹೆಸರು : ಆಧುನಿಕ ಯೂರೋಪ್

**ಜ್ಞಾನಾರ್ಜನೆಗೆ ಇರುವ ಅವಕಾಶಗಳು :**

- ಯೂರೋಪ್ ಖಂಡದ ಪರಿಕಲ್ಪನೆ
- ಪುನರುಜ್ಜೀವನಕ್ಕೆ ಅರ್ಥ
- ಪುನರುಜ್ಜೀವನಕ್ಕೆ ಕಾರಣ ಮತ್ತು ಪರಿಣಾಮಗಳು

- ಪುನರುಜ್ಜೀವನದ ಲಕ್ಷಣಗಳು
- ಪುನರುಜ್ಜೀವನ ಕಾಲದ ಸಾಹಿತ್ಯ, ಕಲೆ, ವಾಸ್ತುಶಿಲ್ಪ, ವಿಜ್ಞಾನ
- ಭೌಗೋಳಿಕ ಅನ್ವೇಷಣೆ ಅರ್ಥ
- ಭೌಗೋಳಿಕ ಅನ್ವೇಷಣೆಗೆ ಕಾರಣಗಳು.
- ಭೌಗೋಳಿಕ ಅನ್ವೇಷಣೆಗಳು ಪರಿಣಾಮಗಳು
- ಮತ ಸುಧಾರಣೆ ಅರ್ಥ ಮತ್ತು ಮಾರ್ಟಿನ್ ಲೂಥರ್‌ಕಿಂಗ್
- ಮತ ಸುಧಾರಣೆಯ ಪರಿಣಾಮಗಳು
- ಪ್ರತಿ ಸುಧಾರಣೆ ಮತ್ತು ಇಗ್ನೇಷಿಯಸ್ ಲಯೋಲ
- ಕೈಗಾರಿಕಾ ಕ್ರಾಂತಿ, ಅರ್ಥ, ಕಾರಣಗಳು
- ಕೈಗಾರಿಕಾ ಕ್ರಾಂತಿಯ ಪರಿಣಾಮಗಳು

**ವಿಮರ್ಶಾಯುಕ್ತ ಶಿಕ್ಷಣಕ್ರಮ ಅಳವಡಿಕೆಗೆ ಇರುವ ಅವಕಾಶಗಳು**

- ಕಾನ್‌ಸ್ಟಾಂಟಿನೋಪಲ್ ಘಟನೆ ಹೇಗೆ ಯೂರೋಪಿನಲ್ಲಿ ಪುನರುಜ್ಜೀವನದೊಂದಿಗೆ ಭೌಗೋಳಿಕ ಅನ್ವೇಷಣೆ, ಧಾರ್ಮಿಕ ಸುಧಾರಣೆ ಮತ್ತು ಕೈಗಾರಿಕಾ ಕ್ರಾಂತಿಗೆ ಪ್ರೇರಣೆಯಾಯಿತು ಎಂಬುದನ್ನು ಅರ್ಥೈಸಿಕೊಳ್ಳುವುದರೊಂದಿಗೆ ಪ್ರೇರಣೆಯಾಯಿತು ಎಂಬುದನ್ನು ಅರ್ಥೈಸಿಕೊಳ್ಳುವುದರೊಂದಿಗೆ ಒಂದು ಘಟನೆ ಏನೆಲ್ಲಾ ಬದಲಾವಣೆಗೆ ಕಾರಣವಾಗಿರುತ್ತದೆ ಎಂಬುದನ್ನು ಕುತೂಹಲದಿಂದ ಚರ್ಚೆ ಮಾಡಿ ತಿಳಿಯುವರು.
- ಅಂದಿನ ಸಂದರ್ಭದಲ್ಲಿ ಮಾನವತಾವಾದ ಹುಟ್ಟಿಕೊಂಡ ಸಂದರ್ಭದೊಂದಿಗೆ, ಆಧುನಿಕ ಜಗತ್ತಿನ, ಗಾಂಧಿ, ಅಂಬೇಡ್ಕರ್, ನೆಲ್ಸನ್ ಮಂಡೇಲರವರು ಈ ಮಾನವತಾವಾದದ ಪರವಾಗಿ ಹೆಜ್ಜೆ ಇಡಲು ಕಾರಣವೇನೆಂಬುದನ್ನು ತಿಳಿಯುವರು.
- ಶ್ರೇಷ್ಠ ಸಂಸ್ಕೃತಿ ಎಂದರೇನು? ಎಂಬುದನ್ನು ನೈಜ ಘಟನಾವಳಿಗಳೊಂದಿಗೆ ಅರ್ಥೈಸಿಕೊಂಡು ಅನುಕರಣೆ ಮಾಡುವ ಸಾಮರ್ಥ್ಯವನ್ನು ಪಡೆಯುವುದು.
- ಇಟಲಿಯ ಜ್ಞಾನ ಪುನರುಜ್ಜೀವನದ ತವರೆನಿಸಿಕೊಳ್ಳಲು ಆ ಕಾಲಘಟ್ಟದಲ್ಲಿ ತಂಡ ತಂಡವಾಗಿ ಇಟಲಿಗೆ ವಲಸೆ ಬಂದ ಬುದ್ಧಿ ಜೀವಿಗಳು ಕಾರಣರಾದರು ಎಂಬುದನ್ನು ಅಧ್ಯಯನ ಮಾಡುವುದರೊಂದಿಗೆ ಒಂದು ಬುದ್ಧಿ ಜೀವಿ ಜನ ಸಮೂಹ ಆಯಾ ಕಾಲದ ವರ್ತಮಾನದ ವಿಕಾಸ ನಿರಂತರವಾಗಿ ಕಾರಣವಾಗುತ್ತಲೇ ಬಂದಿದೆ ಎಂಬುದನ್ನು ಅರಿಯುವರು.

  ಉದಾ : ಪೆಟ್ರಾರ್ಕ್ – ಆಫ್ರಿಕಾ

  ಬಕಾಶಿಯಾ – ಡೆಕಾಮೆರಾನ್

  ಡಾಂಟೆ – ಡಿವೈನ್ ಕಾಮಿಡಿ ಕೃತಿಗಳ ಮೂಲಕ ಈ ಬುದ್ಧಿ ಜೀವಿಗಳು ಪುನರುಜ್ಜೀವನದ ಕಣ್ಣು ತೆರೆಸಿದರು.

* ಊಳಿಗಮಾನ್ಯ ಪದ್ಧತಿಯ ಆಡಳಿತದಿಂದ ನೊಂದಿದ್ದ ಯೂರೋಪಿನ ಸಾಮಾನ್ಯ ಜನ ಪುನರುಜ್ಜೀವನ ಸಂದರ್ಭವನ್ನು ಸ್ವೀಕರಿಸುವಲ್ಲಿ ವಹಿಸಿದ ಪಾತ್ರವನ್ನು ಒಂದು ಹೊಸ ಸ್ವತಂತ್ರ ಬೆಳವಣಿಗೆಯ ಪರಿಕಲ್ಪನೆ ಜಗತ್ತಿನ ವಿಕಾಸಕ್ಕೆ ಹೇಗೆ ಕಾರಣವಾಯಿತು ಎನ್ನುವುದನ್ನು ಪುನರುಜ್ಜೀವನದ ಕಾರಣಗಳೊಂದಿಗೆ ಚರ್ಚಾತ್ಮಕವಾಗಿ ತಿಳಿದುಕೊಳ್ಳುವರು.
* ಜನರಾಡುವ ಭಾಷೆಗಳು (ಪ್ರಾದೇಶಿಕ ಭಾಷೆ) ಪ್ರಾಬಲ್ಯಕ್ಕೆ ಬಂದಾಗ ಆ ಭಾಷೆಯನ್ನಾಡುವವರು ತಮ್ಮ ಬೌದ್ಧಿಕ ವಿಕಾಸವನ್ನು ಬೆಳಸಿಕೊಳ್ಳುವುದರೊಂದಿಗೆ ಸಾಮಾಜಿಕ ಸ್ಥಿತ್ಯಂತರಗಳು ಉಂಟಾಗುವ ಬಗೆಯನ್ನು ಅರ್ಥೈಸಿಕೊಂಡು ಈ ಹಿನ್ನಲೆಯಲ್ಲಿ ಮಾತೃಭಾಷೆಯ ಮಹತ್ವವನ್ನು ಅರಿಯುವರು.

  ಉದಾ : ಲ್ಯಾಟಿನ್ ಬದಲು ಪ್ರಾದೇಶಿಕ ಭಾಷೆಗಳಾದ ಇಂಗ್ಲೀಷ್, ಇಟಾಲಿಯನ್, ಫ್ರೆಂಚ್, ಜರ್ಮನ್ ಇತ್ಯಾದಿ.
* ಮಾನವ ಸಹಜ ಭಾವನೆಗಳನ್ನು ಶಿಲ್ಪ ಚಿತ್ರಗಳಲ್ಲಿ ಮೂಡಿಸುವುದರೊಂದಿಗೆ, ಕಲೆಯೂ ಸಹ ಮಾನವ ನಿರ್ಮಿತ ಸಮಾಜವನ್ನು ಅರ್ಥೈಸುವಲ್ಲಿ ವಹಿಸುವ ಪಾತ್ರವನ್ನು ತಿಳಿಯುವರು.
* 16ನೆಯ ಶತಮಾನದಲ್ಲಿ ಬೆಳಕಿಗೆ ಬಂದ ವಿಜ್ಞಾನದ ಬೆಳವಣಿಗೆ ಪ್ರತಿಯೊಬ್ಬರಲ್ಲೂ ಏಕೆ? ಏನು? ಹೇಗೆ? ಎಂಬ ಪ್ರಶ್ನೆಗಳನ್ನು ಮೂಡಿಸಿ ಹೊಸ ಹೊಸ ಆವಿಷ್ಕಾರಗಳಿಗೆ ನಾಂದಿಯಾದ ಈ ಸಂದರ್ಭ ಪುನರುಜ್ಜೀವನ ಕಾಲದಲ್ಲಾಗಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸುವರು. ಹಾಗೂ ಪ್ರಸ್ತುತ ಸಂದರ್ಭದ ವಿಜ್ಞಾನದ ಮಹತ್ವವನ್ನು ಅರಿಯುವರು.

  ಉದಾ : ಭೂಕೇಂದ್ರವಾದದ ಬಗ್ಗೆ ಇದ್ದಂತಹ ನಂಬಿಕೆ

  ಸೂರ್ಯ ಕೇಂದ್ರವಾದ – ಕೆಪ್ಲರ್

  ನ್ಯೂಟನ್ನನ – ಗುರುತ್ವಾಕರ್ಷಣೆ

  ಹ್ಯಾಂಡೂವಸಾಲಯಿಸ್ನ – ಶರೀರಶಾಸ್ತ್ರ ಇತ್ಯಾದಿ.
* ಪುನರುಜ್ಜೀವನವು ಸಮಾಜದಲ್ಲಿ ಮಾನವೀಯತೆಯ ಮಾರ್ಗ, ವೈಜ್ಞಾನಿಕ ಶೋಧ ತಂತ್ರಜ್ಞಾನ ಮತ್ತು ಕೈಗಾರಿಕಾ ಕ್ರಾಂತಿಗೆ ಹೊಸ ಚಿಂತನೆಗೆ ನಾಂದಿ ಹಾಡಿತಲ್ಲದೆ ಮುಂದಿನ ಧಾರ್ಮಿಕ ಸುಧಾರಣೆಗಳಿಗೂ ಕಾರಣವಾದ ಸಂದರ್ಭವನ್ನು ಹಾಗೂ ಅದರ ಪರಿಣಾಮದ ಮಹತ್ವವನ್ನು ತಿಳಿಯುವರು.
* 16ನೇ ಶತಮಾನ ಭೌಗೋಳಿಕ ಅನ್ವೇಷಣೆಗಳ ಯುಗವಾಗಿ ಪ್ರಪಂಚದ ಅನೇಕ ಭಾಗಗಳಿಗೆ ಹೊಸ ಜಲಮಾರ್ಗಗಳನ್ನು ಕಂಡು ಹಿಡಿದ ಹಿನ್ನಲೆಯಲ್ಲಿ ಯುರೋಪಿಯನ್ನರ ಸಾಹಸ ಗಾಥೆಯನ್ನು ಕುತೂಹಲ ಮತ್ತು ಆಸಕ್ತಿಯಿಂದ ಅರ್ಥೈಸಿಕೊಳ್ಳುವರು.
* ಯೂರೋಪಿಯನ್ನರ ಭೌಗೋಳಿಕ ಅನ್ವೇಷಣೆಗಳಿಗೆ ಬಹುಮುಖ್ಯ ಕಾರಣಗಳಾದ ವ್ಯಾಪಾರ, ಧರ್ಮಪ್ರಚಾರ, ಕುತೂಹಲ ಹಾಗೂ ಅರಬ್ಬರೊಂದಿಗೆ ಪೈಪೋಟಿಗಳು ಬಹು ಮುಖ್ಯ

ಅಂಶಗಳಾಗಿದ್ದು ಈ ಸಂದರ್ಭದಲ್ಲಿ ವಿಜ್ಞಾನ ಮತ್ತು ಇಲ್ಲಿನ ಸಂಶೋಧನೆಗಳು ಹೊಸ ಜಲಮಾರ್ಗ ಕಂಡು ಹಿಡಿಯುವಲ್ಲಿ ವಹಿಸಿದ ಪಾತ್ರವನ್ನು ಘಟನೆಗಳ ಮೂಲಕ ಅರ್ಥೈಸಿಕೊಳ್ಳುವರು.

ಉದಾ : – ನಾವಿಕರ ದಿಕ್ಸೂಚಿ

– ಅಸ್ಟ್ರೋಲೋಬ್, ನಕ್ಷೆಗಳು, ಭೂಪಟಗಳ ಸಂಶೋಧನೆಗಳು.

– ಭೂಮಿಯ ಗೋಳಾಕೃತಿ ತಿಳಿಯಿತು.

* ಭೌಗೋಳಿಕ ಅನ್ವೇಷಣೆಗಳ ಹಿನ್ನಲೆಯಲ್ಲಿ ಬೆಳಕಿಗೆ ಬಂದ ಭೂಶೋಧನೆಗಳನ್ನು ಮಕ್ಕಳು ಹೆಚ್ಚು ಕುತೂಹಲದಿಂದ ನಾವಿಕರ ಸಾಹಸಗಳನ್ನು ಮೆಚ್ಚಿಕೊಂಡು ತಾವು ಸಾಹಸ ಪ್ರವೃತ್ತಿಯನ್ನು ರೂಪಿಸಿಕೊಳ್ಳುವಲ್ಲಿ ತೊಡಿಗಿಸಿಕೊಳ್ಳುವರು.
* ಭೂ ಶೋಧನೆಗಳು ಪ್ರಾರಂಭದಲ್ಲಿ ವ್ಯಾಪಾರ, ಧರ್ಮಪ್ರಚಾರ, ಪೈಪೋಟಿಯ ಹಿನ್ನಲೆಯಲ್ಲಿ ಚಲಿಸಿ, ಮುಂದೆ ಬಲಾಢ್ಯ ರಾಷ್ಟ್ರಗಳು, ಅಬಲ ರಾಷ್ಟ್ರಗಳ ಮೇಲೆ ಸಾಮ್ರಾಜ್ಯಶಾಹಿ ಮತ್ತು ವಸಾಹತು ಶಾಹಿಯ ಪ್ರಾಭಲ್ಯವನ್ನು ಬೆಳಸಿದವಲ್ಲದೆ, ಐರೋಪ್ಯ ರಾಷ್ಟ್ರಗಳಲ್ಲಿ ಕಟ್ಟುಕೊಂಡ ಕೈಗಾರಿಕಾ ಕ್ರಾಂತಿಯಿಂದ ಬಡರಾಷ್ಟ್ರಗಳು ಮಾರುಕಟ್ಟೆ ಕೇಂದ್ರಗಳಾಗಿ ಬದಲಾಗತೊಡಗಿದವು ಎಂಬುದನ್ನು ಕಾರಣಗಳ ಮೂಲಕ ಅರ್ಥೈಸಿಕೊಳ್ಳುವರು.
* ಚರ್ಚಿನ ಏಕಸ್ವಾಮ್ಯವನ್ನು ಪ್ರಶ್ನಿಸಿ ನಡೆದ ಬಂಡಾಯವೇ ಮತಸುಧಾರಣೆಯಾಗಿದ್ದು ಇದು ಹೊಸಯುಗದ ಉದಯಕ್ಕೆ ಹೇಗೆ ಕಾರಣವಾಯಿತು ಎಂಬುದನ್ನು ಇಂದಿನ ಧರ್ಮ, ಜಾತಿಯಿಂದ ಬಂದೊದಗಿರುವ ಅಪಾಯಕಾರಿ ಸಮಾಜದ ಸುಸ್ಥಿತಿಗೆ ತಮ್ಮ ಪಾತ್ರವೇನು ಎಂಬುದನ್ನು ಈ ಮೂಲಕ ತಿಳಿಯಲೆತ್ನಿಸುವರು.
* ಚರ್ಚ್‌ನ ಏಕಸ್ವಾಮ್ಯವನ್ನು ಪ್ರಶ್ನಿಸಿದ ಮಾರ್ಟಿನ್ ಲೂಥರ್ ಕ್ಯಾಥೋಲಿಕ್ಕರ ಬೋಧನೆಗಳನ್ನು ಖಂಡಿಸಿ ಚರ್ಚ್‌ನ ಅಧಿಕಾರಗಳನ್ನು ಅವರ ಹಣದಾಹ, ಅಧಿಕಾರದಾಹ, ಬಳಸಿಕೊಳ್ಳುತ್ತಿದ್ದ ಕ್ಷಮಾಪಣೆ ಎಂಬ ಹುನ್ನಾರವನ್ನು ದಿಕ್ಕರಿಸಿ ಚರ್ಚ್ ಯಾರೊಬ್ಬರ ಸ್ವತ್ತಲ್ಲ. ಸರ್ವರನ್ನು ಸಮಾನತೆಯಿಂದ ಕಾಣುವ ಧರ್ಮ ಪ್ರಚಾರವೇ ಶ್ರೇಷ್ಠವಾದದ್ದು, ಎಂದು ಘೋಶಿಸಿ ಆ ಮೂಲಕ ಪ್ರಾಟಸ್ಟೆಂಟ್ ಎಂಬ ಅನುಯಾಯಿಗಳ ತಂಡದೊಂದಿಗೆ ಚರ್ಚ್‌ಗೆ ಹೊಸ ಭಾಷ್ಯ ಬರೆದ ಮಾರ್ಟಿನ್ ಲೂಥರ್ ಸಾಹಸ ಮತ್ತು ಧೈರ್ಯವನ್ನು ಮನದಲ್ಲಿ ಮೆಚ್ಚಿ ಅಂತಹ ಗುಣಗಳನ್ನು ತಮ್ಮಲ್ಲಿ ಬೆಳೆಸಿಕೊಳ್ಳುವರು.
* ಮತ ಸುಧಾರಣೆಯಿಂದ ಕ್ರೈಸ್ತ ಮತದ ಅಖಂಡತೆಗೆ ಭಾರೀ ಪೆಟ್ಟುಬಿದ್ದಿತು. ಈ ಹಿನ್ನಲೆಯಲ್ಲಿ ವಿಘಟನೆಗೊಂಡ ಕ್ಯಾಥೋಲಿಕ್ ಅರ್ಥೋಡಾಕ್ಸ್ ಮತ್ತು ಪ್ರಾಟಸ್ಟಂಟ್ ಗುಂಪುಗಳು ಬೆಳೆಯತೊಡಗಿ ರಾಜರು ಸ್ವತಂತ್ರರಾಗತೊಡಗಿ ರಾಷ್ಟ್ರೀಯ ಪ್ರಭುತ್ವಗಳು ಉದಯವಾಗತೊಡಗಿದ ಸಂದರ್ಭವನ್ನು ಇತಿಹಾಸದ ಮಹತ್ವ ವರ್ತಮಾನದ ಜೀವಂತಿಕೆಯ ಮೇಲೆ ಉಂಟು ಮಾಡುವ ಪರಿಣಾಮವನ್ನು ಆಶ್ಚರ್ಯದಿಂದ ಗ್ರಹಿಸಿಕೊಳ್ಳುವರು.

* ಮತ ಸುಧಾರಣೆಯಿಂದಾದ ಪ್ರಾಟಸ್ಟಂಟರ ಪ್ರಭಾವನ್ನು ತಪ್ಪಿಸಲು ಮತ್ತೆ ಕ್ಯಾಥೋಲಿಕ್ ಗುಂಪು ಚರ್ಚ್‌ನಲ್ಲಿ ಆಂತರಿಕವಾದ ಸುಧಾರಣೆಗಳನ್ನು ಪರಿಹಾರಗಳನ್ನು ತರುವ ಪ್ರಯತ್ನ ಪ್ರಾರಂಭಿಸಿತು. ಈ ಸಂಬಂಧ ಇಗ್ನೇಷಿಯಸ್ ಲಯೋಲ ಎಂಬುವನು 'ಜೀಸಸ್' ಎಂಬ ಸೊಸೈಟಿಯನ್ನು ಹುಟ್ಟು ಹಾಕುವುದರ ಮೂಲಕ, ಕಳೆದು ಹೋಗುತ್ತಿರುವ ಕ್ಯಾಥೋಲಿಕ್ ಚರ್ಚ್‌ನ ಖ್ಯಾತಿಯನ್ನು ಕಟ್ಟುವ ಪ್ರಯತ್ನದ ಮಾನವ ಸಹಜಗುಣದ ವರ್ತನೆಗಳನ್ನು ತಮ್ಮ ಸಮಾಜದ ಸುತ್ತಲ ಜನರೊಂದಿಗೆ ಹೋಲಿಸಿ ಕೊಳ್ಳುವರು.
* ವಸಾಹತುಗಳ ಸ್ಥಾಪನೆಯಿಂದ ವ್ಯಾಪಾರ ಹೆಚ್ಚಿ, ಸಿದ್ಧಪಡಿಸಿದ ವಸ್ತುಗಳಿಗೆ ಬೇಡಿಕೆ ಹೆಚ್ಚಿ ಲಾಭಗಳಿಕೆಯ ಪ್ರಮಾಣವು ಹೆಚ್ಚಾಗತೊಡಗಲು ಕಾರಣ ಉತ್ಪಾದನೆಯಲ್ಲಿ ಹೊಸ ವಿಧಾನಗಳು ಸಾರಿಗೆ ಕ್ಷೇತ್ರಗಳ ಬದಲಾಣೆಗಳೇ ಇಂಗ್ಲೇಡ್‌ನಲ್ಲೂ ಕಂಡುಬಂದುದರಿಂದ ಕ್ರಿ.ಶ. 1760 ರಿಂದ 1830ರ ವರೆಗಿನ ಈ ಅವಧಿ ಕೈಗಾರಿಕಾ ಕ್ರಾಂತಿಯುಗವೆಂದು ಪರಿಗಣಿಸಲ್ಪಟ್ಟ ವಿಜ್ಞಾನದ ಬೆಳವಣಿಗೆ ಹಿನ್ನಲೆಯ ಸಂದರ್ಭವನ್ನು ಉದಾಹರಣೆಗಳ ಮೂಲಕ ತಿಳಿಯುವರು.

  ಉದಾ : ಸ್ಯಾಮ್ಯುಯಲ್ ಕ್ರಾಮ್ಪನ್ – ಮ್ಯೂಲ್‌ಯಂತ್ರ

  ಎಲಿವಿಟ್ನ – ಕಾಟನ್‌ಜಿನ್

  ಜೇಮ್ಸ್‌ವ್ಯಾಟ್ – ಹಾವಿಯಯಂತ್ರ

  ಜಾರ್ಚ್ ಸ್ಟೀವನ್‌ಸನ್ – ರೈಲು ಬಂಡಿ ಇತ್ಯಾದಿ.
* ಕೈಗಾರಿಕಾ ಕ್ರಾಂತಿಯಿಂದ ಯಂತ್ರಗಳ ಬೇಡಿಕೆ ಹೆಚ್ಚಿ, ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಬದಲಾವಣೆಗಳು ಉಂಟಾದವಲ್ಲದೆ ಹೊಸ ಕೈಗಾರಿಕೆಗಳು ಹುಟ್ಟುಕೊಂಡು ಉತ್ಪಾದನಾ ವೆಚ್ಚ ಕಡಿಮೆಯಾಗಿ ಜೀವನಾವಶ್ಯಕ ವಸ್ತುಗಳು ಅಗ್ಗವಾಗಿ ದೊರೆಯತೊಡಗಿ ಗುಡಿ ಕೈಗಾರಿಕೆಗಳು ನಾಶವಾಗತೊಡಗಿ ಸಮಾಜದಲ್ಲಿ ಲಾಭಾಂಶ, ಹಣ, ಕಾರ್ಮಿಕ, ಮಾಲಿಕರ ನಡುವೆ ಸಾಮಾಜಿಕ ಮತ್ತು ಆರ್ಥಿಕ ತಾರತಮ್ಯ ಉಂಟಾಗಲು ಇಂತಹ ಕ್ರಾಂತಿಗಳು ಕಾರಣವಾಗುವ ಸಂದರ್ಭವನ್ನು ತಾರ್ಕಿಕವಾಗಿ ಅರ್ಥೈಸಿಕೊಳ್ಳುವರು.

**ಜ್ಞಾನ ಪುನರ್ರಚನೆಗಿರುವ ಅವಕಾಶಗಳು**

– ಕ್ರಿ.ಶ. 1453ರ ಕಾನ್‌ಸ್ಟಾಂಟಿನೋಪಲ್ ಪತನದಿಂದಾಗಿ ಪ್ರಪಂಚದ ಇತಿಹಾಸದ 15 ಮತ್ತು 16ನೇ ಶತಮಾನ ಯೂರೋಪಿನಲ್ಲಿ ಪುನರುಜ್ಜೀವನ, ಭೌಗೋಳಿಕ ಅನ್ವೇಷಣೆ, ಧಾರ್ಮಿಕ ಸುಧಾರಣೆ, ಕೈಗಾರಿಕಾ ಕ್ರಾಂತಿಗೆ ಕಾರಣವಾದಂತೆಯೇ ಅಂದಿನ ಊಳಿಗಮಾನ್ಯ ಪದ್ಧತಿಯ ಅವನತಿಗೂ ಕಾರಣವಾದುದನ್ನು ಸಾಮ್ರಾಜ್ಯಶಾಹಿ ಧೋರಣೆ ಇಂದಿನ ಘಟನಾವಳಿಗಳೊಂದಿಗೆ ತೌಲನಿಕ ಜ್ಞಾನವನ್ನು ಕಟ್ಟಿಕೊಳ್ಳುವರು.

  ಉದಾ : – ಇಂದಿನ ಸಾಮ್ರಾಜ್ಯಶಾಹಿ ದೊರೆಗಳಂತೆ ಕಂಡು ಬರುತ್ತಿರುವ ಬಹುರಾಷ್ಟ್ರೀಯ ಕಂಪನಿಗಳ ಸ್ಥಾಪನೆ

– ಜ್ಞಾನಸ್ಫೋಟದ ಪರಿಣಾಮಗಳು

– ಚಂದ್ರ ಮತ್ತು ಮಂಗಳ, ಗುರು ಗ್ರಹಗಳ ಕುರಿತ ಅನ್ವೇಷಣೆ ಮತ್ತು ಹುಡುಕಾಟ

– ನಗರೀಕರಣ ವ್ಯವಸ್ಥೆ

– ವಿಶ್ವಭ್ರಾತೃತ್ವದ ಪರಿಕಲ್ಪನೆಗಳು

* ಯೂರೋಪಿನಲ್ಲುಂಟಾದ ಪುನರುಜ್ಜೀವನ ಸಂದರ್ಭವು ಹೆಚ್ಚಾಗಿ ಮಾನವತವಾದ, ಶ್ರೇಷ್ಠಾನುಕರಣೆಗೆ, ಜನರನ್ನು ತರಲೆತ್ನಿಸಲು ಅಂದಿನ ಸಾಹಿತ್ಯ, ಕಲೆ, ವಾಸ್ತುಶಿಲ್ಪ ಮತ್ತು ವಿಜ್ಞಾನ ಪ್ರಮುಖ ಪಾತ್ರವನ್ನು ವಹಿಸಿದ ವಿಷಯವನ್ನು ಅರ್ಥೈಸಿಕೊಳ್ಳುವಾಗ ಮಕ್ಕಳು ಈ 21ನೇ ಶತಮಾನದಲ್ಲಿ ಹಾಗೂ ಈ ಎಲ್ಲ ಬುದ್ಧಿಜೀವಿಗಳ ವಿಜ್ಞಾನ, ಸಾಹಿತ್ಯ ಕಲೆಯ ಬೆಳವಣಿಗೆಯಲ್ಲಿ ಮಾನವತಾವಾದದ ಕೊರಗುವಿಕೆಗೆ ಕಾರಣಗಳೇನೆಂಬುದನ್ನು ಪ್ರಶ್ನಿಸಿ ಉದಾಹರಣೆ ಮೂಲಕ ಕಂಡುಕೊಳ್ಳುವರು.

ಉದಾ : – ಷೇಕ್ಸ್‌ಪಿಯರ್ ವಿರಚಿತ ನಾಟಕಗಳ ಪ್ರಸ್ತುತತೆ

– ಲಿಯೋನಾರ್ಡೋಡ ವಿಂಚಿಯ Lost Supper ಮೊನಲಿಸಾ ಕಲಾಕೃತಿಗಳು.

– ವಿಜ್ಞಾನದ ಆವಿಷ್ಕಾರದಿಂದಾಗಿರುವ, ದಿಕ್ಸೂಚಿ, ಆಸ್ಟ್ರೋಲೋಬ್ ಈಗಿನ ಉಪಗ್ರಹ, ಬಾಂಬ್ ಬಳಕೆ, ಶಸ್ತ್ರಾಸ್ತ್ರಗಳ ತಯಾರಿ ಇತ್ಯಾದಿ.

* ಜಗತ್ತಿನಲ್ಲಿ ಜ್ಞಾನವೇ ಪ್ರಬಲವಾದುದು. ಈ ಜ್ಞಾನವು ಮಾನವನ ವಿಕಾಸಕ್ಕೆ ಪೂರಕವಾಗಿರುತ್ತದೆ. ಆದ್ದರಿಂದಲೇ ಯೂರೋಪಿನಲ್ಲಿ ಜ್ಞಾನ ಪುನರುಜ್ಜೀವನ ಸಂದರ್ಭದಿಂದಾಗಿ ಇಡೀ ವಿಶ್ವದಲ್ಲಿಯೇ ವೈಜ್ಞಾನಿಕ ದೃಷ್ಟಿ ಬೆಳೆಯಿತು. ಸಾಗರ ಮಾರ್ಗಗಳ ಶೋಧನೆ, ತಂತ್ರಜ್ಞಾನ, ಕೈಗಾರಿಕಾಕ್ರಾಂತಿ ಹೊಸ ಚಿಂತನೆಗಳು, ಧಾರ್ಮಿಕ ಸುಧಾರಣೆಗಳಿಗೆ ನಾಂದಿಯಾಯಿತು ಎಂಬುದನ್ನು ತಿಳಿದುಕೊಂಡು ತಮ್ಮ ಜೀವನದಲ್ಲಿಯೂ ಜ್ಞಾನದ ಮಹತ್ವವೇನು. ಇಂತಹ ಜ್ಞಾನವನ್ನು ಕಟ್ಟಿಕೊಳ್ಳಲು ತಮ್ಮ ಪಾತ್ರವೇನು ಎಂಬುದನ್ನು ಗ್ರಹಿಸಿಕೊಳ್ಳುವರು.

* ಭೂ ಅನ್ವೇಷಣೆಗಳಿಂದಾಗಿ 15 ಮತ್ತು 16ನೇ ಶತಮಾನದಲ್ಲಿ ಹೊಸ ಖಂಡಗಳಾದ ಉತ್ತರ ಅಮೇರಿಕಾ, ದಕ್ಷಿಣ ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ಹೊಸ ಹೊಸ ಪ್ರದೇಶಗಳ ಪರಿಚಯವಾಯಿತು. ಈ ಹಿನ್ನಲೆಯಲ್ಲಿ ಸಾಹಸಮಯ ಪ್ರವೃತ್ತಿಯಿಂದ ಮನುಷ್ಯನು ಕಂಡು ಹಿಡಿದ ಹೊಸ ಖಂಡಗಳ ಪರಿಚಯವನ್ನು ಮಕ್ಕಳು ಮಾಡಿಕೊಳ್ಳುವುದರೊಂದಿಗೆ ತಮ್ಮ ಜೀವನದಲ್ಲಿ ಸಾಹಸ ಹಾಗೂ ಸಂಶೋಧನಾತ್ಮಕ ಗುಣಗಳನ್ನು ತಮ್ಮದಾಗಿಸಿಕೊಳ್ಳುವರು.

* ಭೂ ಶೋಧನೆಗಳಿಂದಾಗಿ, ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಬೆಳವಣಿಗೆಗಳು ಅಸ್ತಿತ್ವಕ್ಕೆ ಬಂದು ಮುಂದೆ ಮಾನವ ಸಹಜ ಸ್ವಾತಂತ್ರ್ಯವನ್ನು ಕಳೆದುಕೊಂಡಂತಾಗಿ

ಶ್ರೀಮಂತ ಹಾಗೂ ಬಡ ರಾಷ್ಟ್ರಗಳೆಂಬ ವೈಷಮ್ಯ, ತಾರತಮ್ಯ ಉಂಟಾಗಿ ಇಂದಿನ ಜಗತ್ತಿನ ಸ್ಥಿತಿಗೆ ಕಾರಣವಾಯಿತೆಂಬುದನ್ನು ತಿಳಿದುಕೊಂಡು ಸಾಮ್ರಾಜ್ಯಶಾಹಿ ಧೋರಣೆಯನ್ನು ಖಂಡಿಸುವರು.

* ಚರ್ಚ್‌ನ ಏಕಸ್ವಾಮ್ಯವನ್ನು ಪ್ರಶ್ನಿಸುತ್ತಾ ಹುಟ್ಟಿಕೊಂಡ ಮತಸುಧಾರಣೆ ಮಾರ್ಟಿನ್ ಲೂಥರ್‌ನ ನೇತೃತ್ವದಲ್ಲಿ ಧಾರ್ಮಿಕ ವಿಚಾರಗಳ ಬಗ್ಗೆ ಹೊಸಯುಗದ ಉದಯಕ್ಕೆ ಕಾರಣವಾದುದನ್ನು ತಿಳಿದುಕೊಂಡ ಮಕ್ಕಳು ತಮ್ಮ ಅಂತರಾಳದಲ್ಲಿ ವೈಜ್ಞಾನಿಕ ದೃಷ್ಟಿ ಕುತೂಹಲ ಸಮಾನತೆಯ ಅಂಶಗಳೆಂಬ ಮೌಲ್ಯಗಳನ್ನು ಗ್ರಹಿಸುವರು.

* ಯೂರೋಪಿನಲ್ಲಿ ಸುಮಾರು 30 ವರ್ಷಗಳ ಕಾಲ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟಂಟರ ನಡುವೆ ನಡೆದ ಧಾರ್ಮಿಕ ಕಲಹ ದ್ವೇಶ, ಹೋರಾಟ, ಕಿರುಕುಳ, ಅಂಧಕಾರತ್ವಕ್ಕೆ ಕಾರಣವಾಗಿ, ಜನರಲ್ಲಿನ ಧಾರ್ಮಿಕ ಮನಸ್ಸುಗಳ ಅಶಾಂತಿಗೆ ನಾಂದಿಯಾಗಿ ಪ್ರಗತಿ ಶೂನ್ಯವಾಗುತ್ತದೆ. ಈ ರೂಪದ ಘಟನೆಗಳು ಬಹುಮತೀಯ ರಾಷ್ಟ್ರವಾಗಿರುವ ನಮ್ಮ ಭಾರತದಲ್ಲಿ ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿದ್ದು ಅಂತಹ ಘಟನೆಗಳು ಮರುಕಳಿಸದಂತೆ ತಡೆಯಲು ತಮ್ಮ ಜವಾಬ್ದಾರಿ ಏನೆಂಬ ಜ್ಞಾನವನ್ನು ಕಟ್ಟುಕೊಳ್ಳುವರು.

ಉದಾ : ಸಿಕ್ ನರಮೇಧ

ಗೋದ್ರಾ ನರಮೇಧ, ಕ್ರೈಸ್ತರ ಚರ್ಚ್‌ಗಳ ಮೇಲಿನ ದಾಳಿ.

* ಬಹು ಸೂಕ್ಷ್ಮವೆನಿಸಿಕೊಂಡಿರುವ ಧಾರ್ಮಿಕ ಅಪಮಾನತೆಗಳು, ಸಮಾಜದ ಏಕತೆಗೆ ಕುಂದುಂಟು ಮಾಡಿ, ಧಾರ್ಮಿಕ ಘಟನೆಗಳಿಗೆ ಕಾರಣವಾದ ಕ್ಯಾಥೋಲಿಕ್, ಪ್ರಾಟೆಸ್ಟಂಟ್ ಮತ್ತು ಆರ್ಥೋಡಾಕ್ಸ್ ಚರ್ಚ್‌ಗಳು ಹುಟ್ಟಿಕೊಂಡ ಈ ಘಟನೆ ಭಾರತದಂತಹ ರಾಷ್ಟ್ರಗಳಲ್ಲಿ ಇಲ್ಲಿನ ಅಖಂಡತೆಯನ್ನು ಎತ್ತಿಹಿಡಿಯುವ ಬದಲಾಗಿ ಇತ್ತೀಚೆಗೆ ಹಿಂದುಗಳೇ ಹಿಂದು ಧರ್ಮದಲ್ಲಿನ ಆಚರಣೆಗಳನ್ನು ಅನುಸರಿಸಲಾರದೆ ಮೇಲ್ಜಾತಿಯವರ ಕಪಿಮುಷ್ಟಿಯಿಂದ ಬಿಡಿಸಿಕೊಳ್ಳಲಾಗದೆ ಹಿಂದೂ ಧರ್ಮದಿಂದಲೇ ಮತಾಂತರಗೊಳ್ಳುವುದಕ್ಕೆ ಕಾರಣವೇನೆಂಬ ಜ್ಞಾನವನ್ನು ತಿಳಿದುಕೊಳ್ಳುವರು.

* ಚರ್ಚಿನ ವಿಘಟನೆಯಿಂದ ಕ್ಯಾಥೋಲಿಕ್ ತಮ್ಮ ಪ್ರಭಾಲ್ಯವನ್ನು ಕಳೆದುಕೊಳ್ಳತೊಡಗಿದಾಗ, ಇಗ್ನೇಷಿಯಸ್ ಲಯೋಲ ಎಂಬಾತನ ನೇತೃತ್ವದಲ್ಲಿ 'ಜೀಸಸ್' ಎಂಬ ಸೊಸೈಟಿ ಹುಟ್ಟಿಕೊಂಡು ಕ್ಯಾಥೋಲಿಕ್ ಚರ್ಚ್‌ನ ಕಳೆದು ಹೋದ ವೈಭವವನ್ನು ಮರಳಿ ಸ್ಥಾಪಿಸಲು ಯತ್ನಿಸಿದ ಸಂದರ್ಭದಿಂದ ಮಕ್ಕಳು ಮಾನವನ ಪಾರಂಪರಿಕ ಮನಸ್ಸು ತನ್ನ ಮೂಲ ನೆಲೆಯನ್ನು ಕಂಡುಕೊಳ್ಳಲು ಏನೆಲ್ಲಾ ಪ್ರಯತ್ನ/ಹೋರಾಟವನ್ನು ಇನ್ನಿಲ್ಲದಂತೆ ಮಾಡಬೇಕಾಗುತ್ತದೆ. ಹಾಗಾದ ಹೊಸದೊಂದನ್ನು ದಿಕ್ಕರಿಸಲು ಹವಣಿಸುವ ಹುನ್ನಾರದ ಮನಸ್ಥಿತಿಯನ್ನು ಅರ್ಥೈಸಿಕೊಂಡು ಪ್ರಸ್ತುತ ಸಂದರ್ಭದಲ್ಲಿಯೂ ಕೆಲವು ಧರ್ಮಗಳ

ಕಠಿಣವಾದ ಆಚರಣೆಗಳೇ ಈ ರೂಪದ ವಿಘಟನೆಗಳಿಗೆ ಹೇಗೆ ಕಾರಣವಾಗುತ್ತಿದೆ ಎಂಬುದನ್ನು ಹೋಲಿಸುವ ಸಾಮರ್ಥ್ಯದ ಜ್ಞಾನವನ್ನು ಕಟ್ಟುಕೊಳ್ಳುವರು.

ಉದಾ : ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂತಿರುಗಿ' ಘೋಷಣೆ.

* 18ನೇ ಶತಮಾನದ ವಸಾಹತುಗಳ ಸ್ಥಾಪನೆ, ಕೈಗಾರಿಕಾ ಕ್ರಾಂತಿಯಂತಹ ಘಟನೆಗೆ ಕಾರಣವಾಗಿ ವೈಜ್ಞಾನಿಕ ಸಿದ್ಧ ವಸ್ತುಗಳ ಬೇಡಿಕೆ. ಪೂರೈಕೆಗಳಿಂದಾಗಿ ಗುಡಿ ಕೈಗಾರಿಕೆಗಳು ಅವನತಿಯ ಹಾದಿ ಹಿಡಿದ ಸಂದರ್ಭವನ್ನು ಗ್ರಹಿಸಿದ ಮಕ್ಕಳು ಗೃಹ ಕೈಗಾರಿಕೆಗಳ ವಿನಾಶವನ್ನು ಪಡೆಯುವಲ್ಲಿ ನಮ್ಮ ಮುಂದಿನ ಸವಾಲುಗಳೇನೆಂಬ ಜ್ಞಾನವನ್ನು ಕಟ್ಟುಕೊಳ್ಳುವರು.

* ಇತ್ತೀಚೆಗೆ ಜಗತ್ತಿನಾದ್ಯಂತ ಸ್ಥಾಪನೆಯಾಗುತ್ತಿರುವ ಬೃಹತ್ ಕೈಗಾರಿಕೆಗಳಿಂದ ನಿರಂತರವಾಗಿ ಬಂಡವಾಳಶಾಹಿ ವರ್ಗವು ಉದಯವಾಗುತ್ತಲಿದ್ದು, ಅನೇಕ ರೀತಿಯ ವರ್ಗ ಸಂಘರ್ಷಗಳುಂಟಾಗುವುದಲ್ಲದೆ ಪರಿಸರ ಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯ ಇನ್ನಿತರ ರೋಗರುಜಿನಗಳಿಗೆ ಕಾರಣವಾಗಿ ಗುಡಿಕೈಗಾರಿಕೆಗಳು ಕಳೆಗುಂದಿರುವ ಹಿನ್ನಲೆಯಲ್ಲಿ ವೈಜ್ಞಾನಿಕ ಆವಿಷ್ಕಾರದ ಯಂತ್ರಬಳಕೆಯ ಈ ಬೃಹತ್ ಕೈಗಾರಿಕೆಗಳನ್ನು ಹಾಗೂ ಅವುಗಳ ಸ್ಥಾಪನೆಯನ್ನು ಮಕ್ಕಳು ಪ್ರತಿರೋಧ ವ್ಯಕ್ತಪಡಿಸುವ ಸಾಮರ್ಥ್ಯ ಕಲ್ಪಿಸಿಕೊಳ್ಳುವರು.

**ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನಕ್ಕಿರುವ ಅವಕಾಶಗಳು**

* ಪ್ರಶ್ನಾವಳಿಗಳ ಮೂಲಕ ಪುನರುಜ್ಜೀವನ, ಭೌಗೋಳಿಕ ಅನ್ವೇಷಣೆ, ಧಾರ್ಮಿಕ ಸುಧಾರಣೆ ಹಾಗೂ ಕೈಗಾರಿಕಾ ಕ್ರಾಂತಿಗಳಿಗೆ ಕಾರಣಗಳನ್ನು ಪಟ್ಟಿ ಮಾಡುವುದು.
* ಚಿತ್ರಪಟಗಳನ್ನು ಪ್ರದರ್ಶಿಸುವುದರ ಮೂಲಕ ಜ್ಞಾನವನ್ನು ಸಂಗ್ರಹಿಸುವುದು.
* ಕ್ಯಾಥೋಲಿಕ್ ಮತ್ತು ಪ್ರಾಟಿಸ್ಟಂಟ್ ಚರ್ಚ್‌ಗಳ ಧೋರಣೆಯನ್ನು ಗುಂಪುಗಳ ಮೂಲಕ ಚರ್ಚಿಸುವುದು.
* ಪುನರುಜ್ಜೀವನ ಕಾಲದ ಸಾಹಿತ್ಯ, ಕಲೆ ಮತ್ತು ವಿಜ್ಞಾನಗಳನ್ನು ಕುರಿತು ಲಿಖಿತ ಪರೀಕ್ಷೆ ಆಯೋಜಿಸುವುದು.

  (ಸೂಚನೆ : ಮಕ್ಕಳಿಗೆ ಪುಸ್ತಕನೀಡಿ ಓದಲು ಸೂಚಿಸುವುದು)
* ಕೈಗಾರಿಕಾ ಕ್ರಾಂತಿಗೆ ಸಂಬಂಧಿಸಿದಂತೆ ಮೌಖಿಕ ಪರೀಕ್ಷೆಯ ಪ್ರಶ್ನೆಗಳನ್ನು ಜ್ಞಾನ ಪುನರ್ರಚನೆಗೆ ಸಂಬಂಧಿಸಿದ ಪ್ರಶ್ನೆ ಕೋಠಿಯನ್ನು ತಯಾರಿಸಿಕೊಳ್ಳುವುದು.

ಉದಾ : ಬೃಹತ್ ಕೈಗಾರಿಕೆಗಳನ್ನು ಪ್ರತಿರೋಧಿಸಲು ಕಾರಣಗಳೇನೆಂಬುದನ್ನು ಮಕ್ಕಳಿಂದ ಹೇಳಿಸುವುದು.

* ಮಿಂಚು ಪಟ್ಟಿಗಳ ಬಳಕೆಯ ಮೂಲಕ ಮಕ್ಕಳು ಕಟ್ಟಿಕೊಂಡ ಜ್ಞಾನವನ್ನು ಪರೀಕ್ಷಿಸುವುದು.

ಉದಾ : ಮಾರ್ಟಿನ್ ಲೂಥರ್ – ಮತಸುಧಾರಣೆ

ಇಗ್ನೇಶಿಯಸ್ ಲಯೋಲ – ಪ್ರತಿ ಸುಧಾರಣೆ

* ಹೊಂದಿಸಿ ಬರೆಯುವ ವಿಧಾನ

ಉದಾ : ಲೇಖಕರ ಪಟ್ಟಿ – ಕೃತಿಗಳ ಪಟ್ಟಿ

* **ವೀಕ್ಷಣಾ ವಿಧಾನ**

– ಮಕ್ಕಳೊಂದಿಗೆ ಚರ್ಚ್‌ಗಳಿಗೆ ಭೇಟಿ ನೀಡುವುದು.

ಈ ಮೂಲಕ ಪ್ರಾಟಿಸ್ಟಂಟ್ ಮತ್ತು ಕ್ಯಾಥೋಲಿಕ್ ಚರ್ಚ್ ನಡುವಿನ ವ್ಯತ್ಯಾಸ ಗ್ರಹಿಸುವುದು.

* ನಕ್ಷೆ ಮತ್ತು ಭೂಪಟಗಳನ್ನು ಬಳಸಿ ಪ್ರದೇಶಗಳನ್ನು ಗುರುತಿಸುವುದು.

ಉದಾ : ಇಟಲಿ, ಇಂಗ್ಲೆಂಡ್ ಗುಡ್‌ಹೋಪ್ ಭೂಶಿರ, ಅರಬ್ಬೀ ಸಮುದ್ರ. ಪನಾಮ ಕಾಲುವೆ ಇತ್ಯಾದಿ.

* ಪಠ್ಯಪುಸ್ತಕದ ಪೂರ್ಣ ಘಟಕಾವಲೋಕನ ಕ್ರಮ
* ಭೌಗೋಳಿಕ ಅನ್ವೇಷಣೆಯನ್ನು ಕುರಿತ ಯೋಜನೆಯನ್ನು ತಯಾರಿಸುವುದು.
* ತರಗತಿಯಲ್ಲಿ ಸರ್ವ ಧರ್ಮ ಸಮನ್ವಯ ಬಿಂಬಿಸುವಂತಹ ಕಥೆ, ನಾಟಕ, ಘಟನೆಗಳನ್ನು ಸಂಗ್ರಹಿಸುವುದು.

ಉದಾ : – ಸುದ್ದಿ ಮಾಧ್ಯಮಗಳ ಮೂಲಗಳಿಂದ ಮಗು ತನ್ನ ಸುತ್ತ ನಡೆದ ಈ ತರದ ಘಟನೆಗಳನ್ನು ತರಗತಿಯಲ್ಲಿ ಹೇಳುವುದು.

– ಚಿತ್ರಪಟಗಳ ರಚನೆ

– ಚರ್ಚಾಸ್ಪರ್ಧೆ

– ಆಶುಭಾಷಣ ಸ್ಪರ್ಧೆ ಏರ್ಪಾಟು ಮಾಡುವುದು.

**ಕಲಿಕೆಯನ್ನು ಅನುಕೂಲಿಸುವ ವಿಧಾನಗಳು**

* **ಪ್ರಶ್ನೋತ್ತರ ವಿಧಾನ :** ಮಕ್ಕಳಿಗೆ ಘಟಕವನ್ನು ಅವಲೋಕನ ಮಾಡಲು ಮೊದಲೇ ಸೂಚಿಸಿ ತರಗತಿಯ ಸಂದರ್ಭದಲ್ಲಿ ಪ್ರಶ್ನೆಗಳನ್ನು ಮಕ್ಕಳ ಸಾಮರ್ಥ್ಯಕ್ಕನುಗುಣವಾಗಿ ಕೇಳಿ ಉತ್ತರಗಳನ್ನು ಪಡೆದುಕೊಳ್ಳುತ್ತಾ ಘಟಕದ ಬಗ್ಗೆ ಕುತೂಹಲ ಮೂಡುವಂತೆ ಮಾಡುವುದು.

ಉದಾ : ಭೌಗೋಳಿಕ ಸಂಶೋಧನೆಗಳು (ಘಟಕ) ಪ್ರಶ್ನಿಸಿ ಅಮೇರಿಕಾ ಎಂದು ಹೆಸರು ಬರಲು ಕಾರಣವೇನು?

* **ಸಮಸ್ಯಾ ಪರಿಹಾರ ವಿಧಾನ :** ಪ್ರಸ್ತುತ ಸಮಸ್ಯೆಗಳನ್ನು ಎತ್ತಿಹಿಡಿದು ತಾವು ಕಲಿಯುತ್ತಿರುವ ಘಟಕದ ಹಿನ್ನಲೆಯಲ್ಲಿ ಪರಿಹಾರ ಕಂಡುಕೊಳ್ಳುವಂತಹ ವಿಧಾನವನ್ನು ಅನುಕೂಲಿಸುವುದು.

ಉದಾ : ಘಟಕ (ಕೈಗಾರಿಕಾ ಕ್ರಾಂತಿ)

ಸಮಸ್ಯೆ : ಪರಿಸರ ಮಾಲಿನ್ಯ

ಪರಿಹಾರ : ಗೃಹ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ

ಸಮಸ್ಯೆ : ನಗರೀಕರಣ

ಪರಿಹಾರ : ಕೈಗಾರಿಕಾ ವಿಕೇಂದ್ರೀಕರಣ

* **ವಿಶ್ಲೇಷಣಾ ವಿಧಾನ :** ಘಟಕಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಜ್ಞಾನವನ್ನು ಮಕ್ಕಳಿಗೆ ಪೂರೈಸುವುದು.

ಉದಾ : ಕೆಪ್ಲರ್ ನಿಯಮ

ನ್ಯೂಟನ್ ನಿಯಮದ ಜೊತೆಗೆ

ಶರೀರ ಶಾಸ್ತ್ರ ವಿಚಾರಗಳು, ಕೊಪರ್ನಿಕಸ್,

ಟಾಲ್‌ಸ್ಟಾಯ್, ಥಾಮಸ್ ಅಲ್ವ ಎಡಿಸನ್ ವಿಚಾರಗಳನ್ನು ಪ್ರಸ್ತುತಪಡಿಸುವುದು.

* **ಚರ್ಚಾ ವಿಧಾನ :** ತರಗತಿಗಳಲ್ಲಿ ಗುಂಪುಗಳನ್ನು ಮಾಡಿ ಒಂದೊಂದು ಗುಂಪಿಗೂ ಒಂದು ಅಂಶವನ್ನು ಚರ್ಚಿಸಲು ತಿಳಿಸುವುದು.

ಉದಾ : ಜ್ಞಾನ ಪುನರುಜ್ಜೀವನ

ಧಾರ್ಮಿಕ ಸುಧಾರಣೆ

ಪ್ರತಿ ಸುಧಾರಣೆ.

**ಸಂಪನ್ಮೂಲಗಳ ಕ್ರೂಢೀಕರಣ**

- 9ನೇ ತರಗತಿ ಪಠ್ಯ ಪುಸ್ತಕ
- ಯೂರೋಪಿನ ಇತಿಹಾಸ ಟಿ. ಪಾಲಾಕ್ಷ, ಅಕಬರಾಲಿ
- ಚಿತ್ರದಲ್ಲಿ ಚರಿತ್ರೆ
- ಅಂತರ್ಜಾಲ
- ವಿಶ್ವಕೋಶಗಳು
- ಪಿ.ಪಿ.ಟಿ. ತಯಾರಿಕೆ
- ವಿಜ್ಞಾನಿ, ಸಾಹಿತ್ಯ, ಕಲಾವಿದರುಗಳು, ಚರ್ಚ್ ಮಾದರಿ ಚಿತ್ರ ಸಂಪುಟ
- ಪ್ರಶ್ನಾವಳಿಗಳ ತಯಾರಿಕೆ ಉದಾ : ಮೌಖಿಕ ಪರೀಕ್ಷೆ

- ಸಮಸ್ಯೆಗಳನ್ನು ಗುರುತಿಸಿರುವ ಮಿಂಚುಪಟ್ಟಿ
- ತರಗತಿಯಲ್ಲಿ ಗುಂಪು ರಚನೆ

**ಬೋಧನೋಪಕರಣಗಳು**

- ಪ್ರಪಂಚದ ಭೂಪಟ
- ಯೂರೋಪ್ ಖಂಡದ ಭೂಪಟ
- ವಿಜ್ಞಾನಿ ಮತ್ತು ಬರಹಗಾರರ ಚಿತ್ರಪಟಗಳು
- ಪರಿಸರ ಮಾಲಿನ್ಯ ತೋರಿಸುವ ಅಂತರ್ಜಾಲ ಚಿತ್ರಗಳು
- ಮೊನಲಿಸಾ ಚಿತ್ರಪಟ
- ಮಿಂಚು ಪಟ್ಟಿಗಳು
- ಹೋಲಿಕೆ ವ್ಯತ್ಯಾಸಗಳ ಪಟ್ಟಿ
- ಗುರುತ್ವಾಕರ್ಷಣ ನಿಯಮದ ಚಿತ್ರ
- ಹಡಗಿನ ಚಿತ್ರ
- ದಿಕ್ಸೂಚಿ ಮತ್ತು ಆಸ್ಟ್ರೋಲ್ಯಾಬ್ ಮಾದರಿಗಳು

**ಮನನ ಮಾಡಿಕೊಳ್ಳಲೇ ಬೇಕಾದ ಅಂಶಗಳು**

- ಜ್ಞಾನ ಪುನರುಜ್ಜೀವನ ಅರ್ಥ ಮತ್ತು ಪ್ರಾಮುಖ್ಯತೆ
- ಪುನರುಜ್ಜೀವನಕ್ಕೆ ಕಾರಣವಾದ ಅಂಶಗಳು
- ಧಾರ್ಮಿಕ ಅಸಮತೋಲನದಿಂದಾಗುವ ಪರಿಣಾಮಗಳು
- ಭೌಗೋಳಿಕ ಸಂಶೋಧನೆಗೆ ಕಾರಣಗಳು
- ಭೂ ಶೋಧನೆ ಪರಿಣಾಮಗಳು
- ವಸಾಹತುಶಾಹಿ ಮತ್ತು ಸಾಮ್ರಾಜ್ಯ ಶಾಹಿ ಸ್ಥಾಪನೆಗೆ ಕಾರಣ ಪರಿಣಾಮಗಳು.
- ವೈಜ್ಞಾನಿಕ ಸಂಶೋಧನೆ ಮತ್ತು ಪರಿಣಾಮಗಳು.
- ಕೈಗಾರಿಕಾ ಕ್ರಾಂತಿ ಮತ್ತು ನಗರೀಕರಣ
- ಗುಡಿ ಕೈಗಾರಿಕೆಗಳ ಪ್ರಾಮುಖ್ಯತೆ.
- ಗುಡಿ ಕೈಗಾರಿಕೆಗಳ ವಿನಾಶಕ್ಕೆ ಕಾರಣಗಳು
- ಸಮಾಜದ ವರ್ಗ ವ್ಯವಸ್ಥೆಗೆ ಕಾರಣಗಳು
- ಚರ್ಚ್ ಏಕಸ್ವಾಮ್ಯದ ವಿರುದ್ಧದ ನಿಲವುಗಳು
- ಸಾಮ್ರಾಜ್ಯಶಾಹಿ ಧೋರಣೆಯ ವಿರುದ್ಧದ ನಿಲುವುಗಳು.

**ಉದಾಹರಣೆ : 4**

## ಪಾಠದ ಹೆಸರು : ಭಾರತದ ಮತ ಪ್ರವರ್ತಕರು

**ಜ್ಞಾನ ರಚನೆಗೆ ಇರುವ ಅವಕಾಶಗಳು :**

- ಭಾರತದ ಮತ ಪ್ರವರ್ತಕರುಗಳ ಪರಿಚಯ
- ಮತ ಪ್ರವರ್ತಕರುಗಳು ಪ್ರತಿಪಾದಿಸಿದ ತತ್ವಗಳು
- ಭಾರತದ ಮತ ಪ್ರವರ್ತಕರ ಬೋಧನೆಗಳು
- ಶಂಕರಾಚಾರ್ಯರ ಜೀವನ ಮತ್ತು ಆದರ್ಶಗಳು
- ಮಧ್ವಾಚಾರ್ಯರ ಜೀವನ ಮತ್ತು ಬೋಧನೆಗಳು
- ರಾಮಾನುಜಾಚಾರ್ಯರ ಹುಟ್ಟು ಮತ್ತು ಚಿಂತನೆಗಳು
- ಬಸವಣ್ಣನವರ ಬದುಕು, ಬರಹ, ಆಡಳಿತ ಮತ್ತು ಆಚರಣೆಗಳು.
- ಮತ ಪ್ರವರ್ತಕರು ಪ್ರತಿಪಾದಿಸಿದ ಸಿದ್ಧಾಂತಗಳು

**ವಿಮರ್ಶಾಯುಕ್ತ ಶಿಕ್ಷಣ ಕ್ರಮ ಅಳವಡಿಕೆಗೆ ಇರುವ ಅವಕಾಶಗಳು :**

- ಭಾರತದಲ್ಲಿ 9 ರಿಂದ 14ನೇ ಶತಮಾನದಲ್ಲಿ ಆದಂತಹ ವೈಚಾರಿಕ ಆಂದೋಲ ಸನಾತನ ಧರ್ಮದೊಳಗಿನ ಜಾತಿ, ಸಂಪ್ರದಾಯ ಮತ್ತು ದರ್ಶನಗಳನ್ನು ಅರ್ಥೈಸಿಕೊಂಡ ಹಿನ್ನಲೆಯಲ್ಲಿ ಹುಟ್ಟಿಕೊಂಡ ಭಾವನೆಗಳೇಂಬುದನ್ನು ವಿಮರ್ಶಾಯುಕ್ತವಾಗಿ ವ್ಯಾಖ್ಯಾನಿಸುವುದು.
- ಭಾರತೀಯ ಧಾರ್ಮಿಕ ಕ್ಷೇತ್ರದಲ್ಲಿನ ತತ್ವ ಸಂಪತ್ತು, ಅಭಿವ್ಯಕ್ತಿ, ಸ್ವಾತಂತ್ರ್ಯ ಹಾಗೂ ಧಾರ್ಮಿಕ ಸುಧಾರಣೆಯ ಆಂದೋಲನಗಳು ಧರ್ಮ ಸುಧಾರಕರ ವೈವಿಧ್ಯಮಯ ದೃಷ್ಟಿಕೋನಗಳಿಂದ ಹೊಸ ಪಂಥವಾದ ಭಕ್ತಿ ಚಳುವಳಿ ಉದಯವಾಗಲು ಕಾರಣವಾದ ಸನ್ನಿವೇಶಗಳನ್ನು ಅರ್ಥೈಸಿಕೊಳ್ಳುವರು.
- ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಶಂಕರಾಚಾರ್ಯರು 'ಈ ಜಗತ್ತಿಗೆ ಬ್ರಹ್ಮನೊಬ್ಬನೇ ಸತ್ಯ, ಉಳದದ್ದು ಮಿತ್ಯ. ಜೀವನು ಮತ್ತು ಬ್ರಹ್ಮನು ಬೇರೆಯಲ್ಲ' ಎಂಬ ನಿರೂಪಣೆಯನ್ನು ತಮ್ಮ ಆಳವಾದ ಆಧ್ಯಯನದ ಮೂಲಕ ಪ್ರತಿಪಾದಿಸಿದುದನ್ನು ಜ್ಞಾನ ಮಾರ್ಗದ ಬೋಧನೆಗಳ ಅಡಿಯಲ್ಲಿ ಅರ್ಥೈಸಿಕೊಳ್ಳುವರು.
- ಜನಸಾಮಾನ್ಯರಿಗೆ ಮುಕ್ತಿ ಮಾರ್ಗವನ್ನು ತೋರಿಸುವ ಹಿನ್ನಲೆಯಲ್ಲಿ ಮುಂದೆ ಬಂದ ರಾಮಾನುಜಾಚಾರ್ಯರು ಭಕ್ತಿ ತತ್ವಕ್ಕೆ ಪ್ರಾಧಾನ್ಯತೆ ನೀಡುವುದರೊಂದಿಗೆ, ಜೀವ ಮತ್ತು ಪ್ರಕೃತಿ ಬ್ರಹ್ಮನ ಅಧೀನ, ಇದರಿಂದ ಆತ್ಮ, ಪರಮಾತ್ಮ ಏಕಕಾಲದಲ್ಲಿ ಒಂದಾಗಲು ಸಾಧ್ಯವೇ ಇಲ್ಲ ಎಂದು ಪ್ರತಿಪಾದಿಸಿ ಜಾತಿ ಪದ್ಧತಿಯನ್ನು ಖಂಡಿಸುತ್ತಾ ಭಗವಂತನಿಗೆ ಶರಣಾಗತಿಯೆ ಮೋಕ್ಷ ಪಡೆಯುವ ಮಾರ್ಗ ಎನ್ನುವ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಮುಕ್ತಿಮಾರ್ಗದ ಚೌಕಟ್ಟಿನಲ್ಲಿ ಗ್ರಹಿಸುವರು.

- ದ್ವೈತ ಸಿದ್ಧಾಂತವನ್ನು ಪ್ರತಿಪಾದನೆ ಮಾಡಿದ ಮಧ್ವಾಚಾರ್ಯರು ತಮ್ಮ ಆಳವಾದ ಧರ್ಮಶಾಸ್ತ್ರಗಳ ಅಧ್ಯಯನದ ಜ್ಞಾನದಿಂದಾಗಿ ಸ್ವತಂತ್ರ ವಿಚಾರ ಶಕ್ತಿಯನ್ನು ಬಳಸಿಕೊಂಡು, "'ಜೀವ' ಮತ್ತು 'ಪರಮಾತ್ಮ' ಬೇರೆ ಬೇರೆ, ಈ ಜಗತ್ತು ಯಾವತ್ತೂ ಮಾಯೆಯಲ್ಲ ಅದು ಪರಮಾತ್ಮನಷ್ಟೆ ಸತ್ಯ. ಇಲ್ಲಿನ ಈಶ್ವರ ಮಾತ್ರ ಸ್ವತಂತ್ರ್ಯ, ಪರಮಾತ್ಮ ಹಾಗೂ ಜೀವಿಗಳ ಸಂಬಂಧ ಸ್ವಾಮಿ–ಸೇವಕ ಹಿನ್ನಲೆಯಲ್ಲಿ ಹುಟ್ಟಿಕೊಂಡವು ಎಂಬ ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿ ನಾರಾಯಣನನ್ನು ಭಕ್ತಿಯಿಂದ ಪೂಜಿಸುವುದರಿಂದ ಮಾತ್ರ ಮುಕ್ತಿ ಸಾಧ್ಯ" ಎಂಬ ಪರಿಕಲ್ಪನೆಯನ್ನು ಮಧ್ವಾಚಾರ್ಯರ ಜೀವನ ಮತ್ತು ಬೋಧನೆಗಳ ಹಿನ್ನಲೆಯಲ್ಲಿ ತಿಳಿಯುವರು.

- 'ಕಾಯಕ' ತತ್ವವನ್ನು ಪ್ರತಿಪಾದಿಸಿದ ಜಗಜ್ಯೋತಿ ಬಸವಣ್ಣನವರು ಕಾಯಕವೇ ಕೈಲಾಸ ಎಂಬ ತತ್ವದ ಅಡಿಗಲ್ಲಿನ ಮೇಲೆ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿ, ಶಿವಭಕ್ತನೇ ಶರಣ ಶರಣನಾದವನು ಜಾತಿ ಬೇಧವನ್ನು ಮಾಡಬಾರದು, ಪರಿಶುದ್ಧ ಭಕ್ತಿಯೇ ಶಿವನನ್ನು ಸೇರುವ ನಿಜವಾದ ಮಾರ್ಗ ಹಾಗೂ ಪ್ರತಿಯೊಬ್ಬರೂ ದುಡಿದು ತಿನ್ನಬೇಕು. ವೃತ್ತಿಗಳಲ್ಲಿ ಹಿರಿದು – ಕಿರಿದು ಎಂಬ ಭೇದವಿಲ್ಲ ಎನ್ನುವ ಹಿನ್ನಲೆಯಲ್ಲಿ ದುಡಿಮೆ ಸಂಸ್ಕೃತಿಯನ್ನು ಬೆಳೆಸಿದ ರೀತಿಯನ್ನು ಗ್ರಹಿಸಿಕೊಂಡು ಜಾತಿ, ಮತ, ಲಿಂಗ ಭೇದ ಎಣಿಸದೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಮಸ್ಯೆಗಳನ್ನು ಕುರಿತು ಚರ್ಚಿಸುವ ಹಾಗೂ ಸರ್ವರಿಗೂ ಸಮಾನತೆಯ ಅವಕಾಶ ಕಲ್ಪಿಸುತ್ತಿದ್ದ **ಅನುಭವಮಂಟಪ** ಎಂಬ ವಿಚಾರ ವೇದಿಕೆಯ ಪ್ರಾಮುಖ್ಯತೆಯನ್ನು ಮತ್ತು ಪರಿಶುದ್ಧ ಜೀವನಕ್ಕೆ ಬಸವಣ್ಣನವರ ಸಂದೇಶವೇನೆಂಬುದನ್ನು ತಿಳಿದುಕೊಳ್ಳುವರು.

**ಜ್ಞಾನದ ಪುನರ್ರಚನೆಗೆ ಇರುವ ಅವಕಾಶಗಳು :**

- ಭಾರತದ ಸಂದರ್ಭದಲ್ಲಿ 9 ರಿಂದ 14ನೇ ಶತಮಾನದ ಅವಧಿಯಲ್ಲಾದ ಧಾರ್ಮಿಕ ಸುಧಾರಣೆಗಳು ಪ್ರಬಲವಾಗಿ ಅನುಷ್ಠಾನಗೊಂಡರೂ, ಪ್ರಸ್ತುತ ಕಾಲಘಟ್ಟದಲ್ಲಿ ಇನ್ನೂ ಜಾತಿ, ಲಿಂಗ ವರ್ಗ ತಾರತಮ್ಯದ ಕರಿ ನೆರಳು ಹಾಗೆ ಇರುವುದನ್ನು ಗ್ರಹಿಸಿಕೊಂಡ ಮಕ್ಕಳು, ಧಾರ್ಮಿಕ ಕ್ಷೇತ್ರದೊಳಗಣ ತತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಮಾನತೆಯ ಪರಿಕಲ್ಪನೆಯ ಸಮಾಜಮುಖಿ ಚಾಲನೆಯನ್ನು ಜನಮಾನಸದಲ್ಲಿ ತುಂಬಿಕೊಳ್ಳಲು ಮಕ್ಕಳು ತಮ್ಮ ಜವಾಬ್ದಾರಿಗಳೇನೆಂಬ ವೈಚಾರಿಕ ಜ್ಞಾನವನ್ನು ಕಟ್ಟಿಕೊಳ್ಳುವರು.
- ಮನುಷ್ಯನ ಮೋಕ್ಷ ಸಾಧನೆಗೆ ಜ್ಞಾನಮಾರ್ಗವನ್ನು ಬೋಧಿಸಿದ ಶಂಕರಾಚಾರ್ಯರ ತತ್ವನಿಷ್ಠೆಯನ್ನು ಅರ್ಥೈಸಿಕೊಂಡ ಮಕ್ಕಳು ಜಗತ್ತಿನಲ್ಲಿ ಸತ್ಯವೇ ಶ್ರೇಷ್ಠ ಈ ಸತ್ಯ ಬ್ರಹ್ಮನೊಡನೆ ನಮ್ಮೆಲ್ಲರ ಜೀವಾತ್ಮವನ್ನೂ ವಿಲೀನಗೊಳಿಸುವುದು ಹೇಗೆ? ಸತ್ಯವಲ್ಲದ ಜಗತ್ತಿನ ಅಪ್ರಸ್ತುತತೆಯ ನಿರ್ಗುಣಯುಕ್ತ ಲಕ್ಷಣಗಳನ್ನು ದೂರಮಾಡಿ. ಜೀವಾತ್ಮಕ್ಕೆ ಪ್ರತ್ಯೇಕ ಅಸ್ಥಿತ್ವವೇ ಇಲ್ಲ. ಅದು ಸದಾ ಸತ್ಯವೆಂಬ ಬ್ರಹ್ಮನೊಡನೆ ವಿಲೀನ ಎಂಬುದನ್ನು ತಾರ್ಕಿಕವಾಗಿ ಚರ್ಚಿಸಿ,

ನಾನೇ ಬ್ರಹ್ಮ, ಆಹಂಬ್ರಹ್ಮಾಸ್ಮಿ ಎಂಬ ಪ್ರತಿಪಾದನೆಯ ಮೂಲ ಸತ್ವದ ವಿಶೇಷ ಜ್ಞಾನವನ್ನು ಪಡೆದುಕೊಂಡು ಈ ಹಿನ್ನಲೆಯಲ್ಲಿಯೇ ಹುಟ್ಟಿಕೊಂಡು ಶಂಕರಾಚಾರ್ಯರ ಮಠಗಳ ಇಂದಿನ ಕಾರ್ಯಕ್ಷಮತೆ ವೈಖರಿಯನ್ನು ಹೋಲಿಸಿ ಕೊಳ್ಳುವರು.

- ಮನುಷ್ಯನು ತನ್ನ ಜೀವನದಲ್ಲಿ ಮೋಕ್ಷ ಪಡೆಯಲು ಭಕ್ತಿಯೇ ಶ್ರೇಷ್ಠಮಾರ್ಗ. ಭಗವಂತನಿಗೆ ಶರಣಾಗತಿಯೇ ನಿಜವಾದ ಭಕ್ತಿ ಎಂದು ಪ್ರತಿಪಾದಿಸಿದ ರಾಮನುಜಾಚಾರ್ಯರ ಬೋಧನೆಯನ್ನು ತಿಳಿದುಕೊಂಡು ಮಕ್ಕಳು ಧ್ಯಾನ ಮತ್ತು ಏಕಾಗ್ರತೆಯಿಂದ ಮಾತ್ರ ಭಕ್ತಿಯುಂಟಾಗಲು ಸಾಧ್ಯ. ಇದು ಎಲ್ಲರಲ್ಲೂ ಬರಲು ಸಾಧ್ಯವಿಲ್ಲ. ಏಕೆಂದರೆ ಇಂದಿನ ಕಲುಶಿತ ಸಮಾಜದೊಳಗಣ ಜಾತಿಬೇಧ, ಲಿಂಗಭೇದ, ವರ್ಣಭೇದ, ಅಧಿಕಾರ, ಮೋಸ ವಂಚನೆಗಳಿಂದಾಗಿ ಇಡೀ ಮಾನವ ಕುಲವೇ ದಾರಿ ತಪ್ಪುತ್ತಿರುವ ಈ ಹೊತ್ತಿನಲ್ಲಿ ಭಕ್ತಿ ಪಾರಮ್ಯ ಅನಿವಾರ್ಯವಾಗಿದ್ದು ಇದರಿಂದ ಪರಮಾತ್ಮನ ಅಧೀನತೆಯನ್ನು ಪ್ರತಿಯೊಬ್ಬರು ಕಂಡುಕೊಳ್ಳಬೇಕು. ಆಗ ಮಾತ್ರ ಎಲ್ಲರಿಗೂ ಮೋಕ್ಷ ಎಂಬ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂಬ ಜ್ಞಾನವನ್ನು ತಿಳಿದುಕೊಳ್ಳುವುದು.

- ಜಗತ್ತು ಮಾಯೆಯಲ್ಲ ಅದು ಪರಮಾತ್ಮನಷ್ಟೆ ಸತ್ಯ ಎಂಬ ತತ್ವದಲ್ಲಿ ಜಗತ್ತಿನೊಳಗೆ ಈಶ್ವರನನ್ನು ಕಂಡುಕೊಂಡ ಮಧ್ವಾಚಾರ್ಯರ ತತ್ವಾ ಪ್ರತಿಪಾಧನೆಯನ್ನು ಅರ್ಥೈಸಿಕೊಂಡ ಮಕ್ಕಳು ಈ ಜಗತ್ತಿನಲ್ಲಿ ದೇವರು ಒಬ್ಬನೇ ಎನ್ನುವ ಎಲ್ಲಾ ಧರ್ಮಗಳ ಸಾರವನ್ನು ಹೋಲಿಸಿಕೊಂಡು ಸರ್ವೋತ್ತಮನಾದ ನಾರಾಯಣನ ಅಂದರೆ ಮೋಕ್ಷ (ನೆಮ್ಮದಿ) ಸನ್ನಿದಿ ದೊರೆಯುವಂತಾಗಲು ಪ್ರತಿಯೊಬ್ಬರು ಈ ಜಗತ್ತಿನಲ್ಲಿ ಇರುವವರೆಗೆ ಸೇವಕನಂತೆ ಎಲ್ಲಾ ಕಾರ್ಯಗಳನ್ನು ನಿರ್ವಹಿಸಬೇಕು, ಆಗ ಮಾತ್ರ ಈ ಜೀವಾತ್ಮ ಪರಮಾತ್ಮನನ್ನು ಕಾಣಲು ಸಾಧ್ಯ ಎಂಬ ವಿನೂತನ ಜ್ಞಾನವನ್ನು ಕಟ್ಟುಕೊಳ್ಳುವರು.

- 'ದುಡಿಮೆಯೇ ದೇವರು' ಎಂಬ ನೂತನ ಸಂಸ್ಕೃತಿಯನ್ನು ಆವಿಷ್ಕರಿಸಿಕೊಟ್ಟ ಬಸವಣ್ಣನವರ ಕಾಯಕನಿಷ್ಠೆಯ 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಗ್ರಹಿಸಿಕೊಂಡ ಮಕ್ಕಳು, ಶರಣನಾದವನಿಗೆ ಯಾವುದರ ಭೇದವಿಲ್ಲ. ಈತನ ಪರಿಶುದ್ಧ ಜೀವನ ಸಮಾನತೆಯ ಪರಿಕಲ್ಪನೆಯಲ್ಲಿ ಬೆಳೆದು, ನಡೆ-ನುಡಿಗಳು ಒಂದಾಗಿ, ಆಚಾರ ವಿಚಾರಗಳ ಪರಧಿಯೊಳಗೆ ಪ್ರತಿಯೊಬ್ಬನೂ ಕಾಯಕದಲ್ಲಿ ಭಗವಂತ (ಮೋಕ್ಷ)ನನ್ನು ಕಂಡುಕೊಂಡು ಪರಿಶುದ್ಧ ಜೀವನಕ್ಕೆ ಭಕ್ತಿಯೇ ಉದಾತ್ತ ಮಾರ್ಗ ಎಂದು ಪ್ರದಿಪಾದಿಸಿದ ಬಸವಣ್ಣನವರ ಬದುಕಿನ ಸಂದೇಶವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವರು.

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕೆ ಇರುವ ಅವಕಾಶಗಳು**

- ಮತ ಪ್ರವರ್ತಕರುಗಳ ತತ್ವ ಸಿದ್ಧಾಂತಗಳನ್ನು ಕುರಿತು ಪ್ರಬಂಧ ಮಂಡಿಸುವುದು.

ಉದಾ : * ಶಂಕರಾಚಾರ್ಯರು ಮತ್ತು ಅದ್ವೈತ ಸಿದ್ಧಾಂತ

* ವಿಶಿಷ್ಟಾದ್ವೈತ ಮತ್ತು ರಾಮಾನುಜಾಚಾರ್ಯರು
* ಶ್ರೀ ವೈಷ್ಣವ ಮಠಗಳನ್ನುಕುರಿತು ಮಾಹಿತಿ ಸಂಗ್ರಹ
* ಶಂಕರಾಚಾರ್ಯರ ಗುರು ಪೀಠಗಳು
* ಅಷ್ಟ ಮಠಗಳು
* ಉಡುಪಿಯ ಶ್ರೀಕೃಷ್ಣ
* ಬಸವಣ್ಣನವರ ಬದುಕು ಮತ್ತು ಕಾಯಕನಿಷ್ಠೆ
* ಮತ ಪ್ರವರ್ತಕರ ಕೃತಿ ದರ್ಶನ

- ಮತ ಪ್ರವರ್ತಕರ ತತ್ವ ಸಿದ್ಧಾಂತಗಳನ್ನು ಕುರಿತಂತೆ ಇಲ್ಲಿನ ಸಾಮ್ಯತೆ, ವ್ಯತ್ಯಾಸ ಮತ್ತು ವೈಶಿಷ್ಟ್ಯಗಳನ್ನು ಕುರಿತಂತೆ ಮಕ್ಕಳ ಗುಂಪು ಚರ್ಚೆ.
- ದುಡಿಮೆಯೇ ದೇವರು ಎಂದು ಕಾಯಕತತ್ವದ ಪ್ರತಿಪಾದನೆಯನ್ನು ನಿರೂಪಿಸಿದ ಬಸವಣ್ಣನವರ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ ಪರಿಕಲ್ಪನೆ ಸಾರ್ವಕಾಲಿಕ ಸತ್ಯ ಎನ್ನುವ ಹಿನ್ನಲೆಯಲ್ಲಿ ಭಾಷಣ ಸ್ಪರ್ಧೆಗಳು.
- ಕಲಿಕಾ ನಿಲ್ದಾಣಗಳ ಮೂಲಕ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಶಕ್ತಿ ವಿಶಿಷ್ಟಾದ್ವೈತಗಳ ನಡುವಿನ ವ್ಯತ್ಯಾಸ ಗುರುತಿಸುವುದು.
- ಮಿಂಚು ಪಟ್ಟಿಗಳನ್ನು ಬಳಸಿ, ಮತಪ್ರವರ್ತಕರ ಜೀವನ ಚರಿತ್ರೆಯನ್ನು ವಿಶ್ಲೇಷಿಸುವುದು.
- ಪ್ರಶ್ನಾವಳಿ, ಘಟಕ ಪರೀಕ್ಷೆ, ಕಿರು ಪರೀಕ್ಷೆಗಳನ್ನು ನಡೆಸಿ ಕಲಿಕಾ ಸಾಮರ್ಥ್ಯವನ್ನು ನಿರ್ಣಯಿಸುವುದು.
- ಮತ ಪ್ರವರ್ತಕರುಗಳ ಚಿಂತನೆಗಳನ್ನು ಪ್ರತ್ಯೇಕ ಚಾರ್ಟ್ ಮಾಡಿ ಪ್ರದರ್ಶಿಸುವುದು.
- ಮಕ್ಕಳನ್ನೇ ಶಂಕರ, ಮಧ್ವಾ, ರಾಮಾನುಜ ಹಾಗೂ ಬಸವಣ್ಣನವರ ಪಾತ್ರಧಾರಿಗಳಾಗಿಸಿ ಪ್ರದರ್ಶನ ಏರ್ಪಡಿಸುವುದು.
- ಭಕ್ತಿ, ಧ್ಯಾನ, ಏಕಾಗ್ರತೆ ಕುರಿತು ಟಿಪ್ಪಣಿ ಬರೆಸುವುದು.
- ಬಸವಣ್ಣನವರ ಬದುಕು ಕುರಿತ ನಾಟಕಾಭಿನಯ
- ಪ್ರಸ್ತುತ ಸಂದರ್ಭದಲ್ಲಿ ಬಸವಣ್ಣ ಮತ್ತೆ ಹುಟ್ಟಿ ಬಂದರೆ ತಾನು ಸಮಾಜ ಸುಧಾರಣೆಗಳ ಬಗ್ಗೆ ಕಲ್ಪನೆಯ ಕಥೆ ಬರೆಸುವುದು.
- ಬಸವಣ್ಣನವರ ವಚನಗಳ ಸಂಗ್ರಹ.
- ವಚನಗಾಯನ ಮತ್ತು ವ್ಯಾಖ್ಯಾನ
- ಉಡುಪಿಯ ಕನಕಕಿಂಡಿ ಮಹತ್ವ ಕುರಿತು ಚಿಂತನಾ ಕಾರ್ಯಗಾರ ಏರ್ಪಡಿಸುವುದು.

**ಕಲಿಕೆಯನ್ನು ಅನುಕೂಲಿಸುವ ವಿಧಾನಗಳು :**

ಕಥನ ವಿಧಾನ :
- ಶಂಕರಾಚಾರ್ಯರ ಜೀವನ ಚರಿತ್ರೆ ಕುರಿತು
- ರಾಮಾನುಜಾಚಾರ್ಯರ ನಡೆ ನುಡಿ ಕುರಿತು
- ಬಸವಣ್ಣನವರ ಆಚಾರ ವಿಚಾರ

ಚರ್ಚಾ ವಿಧಾನ :
- ತರಗತಿಯಲ್ಲಿ ಗುಂಪುಗಳ ರಚನೆ
- ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಠಾದ್ವೈತ ಕುರಿತು ಚರ್ಚೆ, ತೀರ್ಮಾನ

ಘಟಕ ವಿಧಾನ :
- ಶಂಕರಾಚಾರ್ಯರ ಬೋಧನೆಗಳು
- ಮಧ್ವಾಚಾರ್ಯರ ಜೀವನ ತತ್ವಗಳು
- ರಾಮಾನುಜಾಚಾರ್ಯರು ಮತ್ತು ವಿಶಿಷ್ಟಾದ್ವೈತ
- ಕಾಯಕವೇ ಕೈಲಾಸ

ಪ್ರವಾಸ ವಿಧಾನ :
- ಕೂಡಲಸಂಗಂಕ್ಕೆ ಕಾಲಡಿ, ಉಡುಪಿ, ಸ್ಥಳಗಳಿಗೆ ಭೇಟಿ, ಜ್ಞಾನ ಸಂಗ್ರಹ.

ಪಾತ್ರಾಭಿನಯ ವಿಧಾನ :
- ಮಕ್ಕಳಿಂದಲೇ ಮತ ಪ್ರವರ್ತಕರ ಪಾತ್ರಗಳನ್ನು ನಿರ್ವಹಿಸು ವಂತೆಯೂ ಹಾಗೂ ಶಿಕ್ಷಕರು ಸಕ್ರಿಯವಾಗಿ ಪಾಲ್ಗೊಳ್ಳುವುದು.

ಉದಾ :
- ಶಂಕರಾಚಾರ್ಯರು
- ಬಸವಣ್ಣ
- ಮಧ್ವಾಚಾರ್ಯರು
- ರಾಮಾನುಚಾರ್ಯರು

ಅವಲೋಕನ ವಿಧಾನ :
- ಪಠ್ಯಪುಸ್ತಕದಲ್ಲಿನ ಸಂಬಂಧಿಸಿದ ಘಟಕಕ್ಕೆ ಪೂರಕ ಅಂಶಗಳನ್ನು ಅವಲೋಕನ ಮಾಡುವುದು.

ಉದಾ :
- ಧರ್ಮಸುಧಾರಣೆ
- ಸ್ಪೃಷ್ಯ, ಅಸ್ಪೃಷ್ಯ
- ವರ್ಗ ತಾರತಮ್ಯ
- ಜಾತಿ ಭೇದ
- ಕಾಯಕದ ಮಹತ್ವವನ್ನು ಕುರಿತಂತೆ

ಪಠ್ಯ ಪುಸ್ತಕದ ಜ್ಞಾನವನ್ನು ಗ್ರಹಿಸುವುದು.

**ಸಂಪನ್ಮೂಲಗಳ ಕ್ರೂಢೀಕರಣ :**

- 9ನೇ ತರಗತಿ ಪಠ್ಯ ಪುಸ್ತಕ
- ಮಧ್ಯಕಾಲಿನ ಭಾರತದ ಇತಿಹಾಸ, ಪಾಲಕ್ಷ, ಅಕಬರಾಲಿ
- ಶಂಕರ, ರಾಮಾನುಜ, ಬಸವಣ್ಣ ಮಧ್ವರನ್ನು ಕುರಿತ ಜೀವನ ಚರಿತ್ರೆ ಕೃತಿಗಳ ಸಂಗ್ರಹ.
- ಬಸವಣ್ಣನವರ ವಚನಗಳ ಸಂಗ್ರಹ
- ಭಾವ ಚಿತ್ರಗಳು
- ಭಾರತದ ಭೂಪಟ
- ಉಡುಪಿಯ ಐತಿಹಾಸಿಕ ಹಿನ್ನಲೆ ಕುರಿತ ಮಾಹಿತಿ ಸಂಗ್ರಹ
- ಕೂಡಲ ಸಂಗಮದ ಚರಿತ್ರೆಯ ಮಹತ್ವ ಸಂಗ್ರಹ
- ಚಿತ್ರದಲ್ಲಿ ಚರಿತ್ರೆ
- ಅಂತರ್ಜಾಲ
- ವಿಶ್ವಕೋಶ ಬಳಕೆ
- ಮತ ಪ್ರವರ್ತಕರ ಚಾರ್ಟ್ ಸಂಗ್ರಹ

**ಬೋಧನೋಪಕರಣಗಳು :**

- ಕರ್ನಾಟಕ ಮತ್ತು ಭಾರತದ ಭೂಪಟ
- ಮಧ್ವ, ಬಸವ, ರಾಮಾನುಜ, ಶಂಕರರ ಭಾವ ಚಿತ್ರಗಳು, ಮಿಂಚು ಪಟ್ಟಿಗಳು
- ಚರ್ಚಾಂಶಗಳ ಪಟ್ಟಿ
- ಆಯಾ ಮತಪ್ರವರ್ತಕರ ನಂತರ ಬೆಳಕಿಗೆ ಬಂದ ಮಠಗಳ ಪಟ್ಟಿ
- ವಚನಕಾರರ ಹೆಸರುಗಳ ಸಂಗ್ರಹ
- ವಚನಗಳ ಸಂಗ್ರಹ
- ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಅಬ್ದುಲ್ ಕಲಾಂ ಇವರುಗಳ ನಡುವೆ ಸಾಮ್ಯತೆ ಕುರಿತು ನಾಟಕ ರಚನೆ ಮತ್ತು ಅಭಿನಯ.

**ಮನನ ಮಾಡಿಕೊಳ್ಳಲೇ ಬೇಕಾದ ಅಂಶಗಳು**

- ಧಾರ್ಮಿಕ ಸುಧಾರಣೆ ಎಂದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಭಕ್ತಿ, ಧ್ಯಾನ, ಏಕಾಗ್ರತೆಗಳ ಮಹತ್ವ.
- ಜಗತ್ತಿನಲ್ಲಿ ಅಮೂಲ್ಯವಾದುದು ಸತ್ಯ
- ಬದುಕಿನಲ್ಲಿ ಜ್ಞಾನಮಾರ್ಗವೇ ಶ್ರೇಷ್ಠವಾದುದು
- ಆತ್ಮೋದ್ಧಾರ ಭಕ್ತಿಯಿಂದ ಮಾತ್ರ ಸಾಧ್ಯ.
- ಕಾಯಕವೇ ಕೈಲಾಸ
- ಸಮಾನತೆ ಕಲ್ಪನೆಯ ಸರಳ ಜೀವನ ಶೈಲಿ
- ಕೆಲಸ ನಿರ್ವಹಿಸುವಲ್ಲಿನ ಸೇವಕತ್ವ
- ಸರ್ವರ ಅಭಿಪ್ರಾಯಗಳಿಗೂ ಮನ್ನಣೆ ದೊರೆಯಬೇಕು
- ದೇವರು ಒಬ್ಬನೇ
- ಮನುಜಮತ ವಿಶ್ವಪಥದ ಪರಿಕಲ್ಪನೆ.

## 12. (ಬಿ) ರಾಜ್ಯಶಾಸ್ತ್ರ ವಿಭಾಗ

**ಉದಾಹರಣೆ : 1**

1) **ಪಾಠದ ಹೆಸರು : ರಾಷ್ಟ್ರೀಯ ಭಾವೈಕ್ಯತೆ**

2) **ಜ್ಞಾನ ರಚನೆಗೆ ಇರುವ ಅವಕಾಶಗಳು :**

* ರಾಷ್ಟ್ರ ಪದದ ಅರ್ಥ
* ರಾಷ್ಟ್ರೀಯತೆಯ ಪರಿಕಲ್ಪನೆ
* ಭಾರತ ದೇಶದ ವಿವಿಧತೆಯ ವ್ಯಾಪ್ತಿ
* ಏಕತೆಯ ಮಹತ್ವ ಮತ್ತು ಅಂಶಗಳು
* ರಾಷ್ಟ್ರೀಯ ಭಾವೈಕ್ಯತೆಯ ಪರಿಕಲ್ಪನೆ
* ರಾಷ್ಟ್ರೀಯ ಭಾವೈಕ್ಯತೆ ಬೆಳಸುವುದು
* ರಾಷ್ಟ್ರೀಯ ಭಾವೈಕ್ಯತೆ ಹೇಗೆ ಸಾಧ್ಯ?
* ರಾಷ್ಟ್ರೀಯ ಭಾವೈಕ್ಯತೆ ಇರುವ ಅಡತಡೆಗಳು
* ಭಾರತೀಯತೆಯ ಪರಿಭಾವನೆ.

3) **ವಿಮರ್ಶಾಯುಕ್ತ ಶಿಕ್ಷಣಕ್ರಮ ಅಳವಡಿಕೆಗೆ ಇರುವ ಅವಕಾಶಗಳು**

* ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಹಿನ್ನಲೆಯಲ್ಲಿ ಭಾರತ ದೇಶದ ಅಖಂಡತೆಯ ಪರಿಕಲ್ಪನೆಯನ್ನು ನಾವೆಲ್ಲಾ ಭಾರತೀಯರು ಎಂಬ ಪರಿಭಾಷೆಯೊಂದಿಗೆ ಅರ್ಥೈಸಿಕೊಳ್ಳುವರು.
* ರಾಷ್ಟ್ರೀಯತೆಯ ಪರಿಭಾವನೆ ಅಲ್ಲಿನ ಜನರು ತಮ್ಮ ರಕ್ಷಣೆಗೆ ಹೋರಾಟ ಮಾಡಲು ಕಾರಣವಾದ ಮೂಲಸ್ಫೂರ್ತಿ ಯಾವುದು ಎಂದು ಚಿಂತಿಸುವರು.
* ರಾಷ್ಟ್ರೀಯ ಭಾವೈಕ್ಯತೆಯ ಪರಿಧಿಯಲ್ಲಿ ವಿವಿಧ ಜಾತಿ, ಧರ್ಮ, ಪ್ರಾದೇಶಿಕತೆ, ಭಾಷೆಗಳನ್ನು ಒಳಗೊಂಡಂತೆ ಶಕ್ತಿಯುತವಾದ ಐಕ್ಯತೆಯನ್ನು ಕಟ್ಟುಕೊಳ್ಳುವುದು ಹೇಗೆ ಎಂದು ಚರ್ಚಿಸುವರು.
* ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ಭಾರತದಂತಹ ರಾಷ್ಟ್ರ ವಿಶಾಲವಾದ ಭೌಗೋಳಿಕ ಮತ್ತು ಪ್ರಾಕೃತಿಕ ವೈವಿಧ್ಯತೆಯನ್ನು ಹೊಂದಿರುವುದಲ್ಲದೆ ವಿವಿಧ ಧರ್ಮಗಳ, ಮತಗಳ ಆಚರಣೆಗಳ ನಡುವೆಯೂ ಅದ್ವಿತೀಯವಾದ ಅಖಂಡತೆಯನ್ನು ಉಳಿಸಿಕೊಂಡು ಬಂದಿರುವ ಹೆಮ್ಮೆಯನ್ನು ಅವಲೋಕಿಸಿ ಮೆಚ್ಚಿಕೊಳ್ಳುವರು.
* ಭಾರತ ದೇಶವು ತನ್ನೊಳಗಿನ ಭೌಗೋಳಿಕ, ಸಾಮಾಜಿಕ, ಭಾಷೆ, ಸಂಪ್ರದಾಯ, ರಾಜಕಾರಣ, ಧರ್ಮ, ಜನಾಂಗ, ಶಿಕ್ಷಣ, ಸಂಸ್ಕೃತಿಗಳನ್ನು ಏಕತೆಯ ಸ್ವಾಸ್ಥ್ಯಕ್ಕೆ ಹೊಂದಿಕೊಳ್ಳುವಂತೆ ಮಾಡಿರುವಲ್ಲಿನ ಮಹತ್ವವನ್ನು ಕುರಿತು ಚರ್ಚಿಸುವರು.

* ರಾಷ್ಟ್ರಗೀತೆಯನ್ನು ಹಾಡುವುದು ರಾಷ್ಟ್ರದ ಭೌಗೋಳಿಕ ಐಕ್ಯತೆಗೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ಕುರಿತು ವಿಶ್ಲೇಷಿಸುವರು.
* ಭಾರತದಲ್ಲಿನ ಏಕರೂಪ ಲಿಖಿತ ಸಂವಿಧಾನ ವ್ಯವಸ್ಥೆಯೇ ರಾಜಕೀಯ ಐಕ್ಯತೆಗೆ ಮಾನದಂಡವಾಗಿದೆ ಎಂದು ಚರ್ಚಿಸಿ ತೀರ್ಮಾನ ಕೈಗೊಳ್ಳುವರು.
* ಭಾರತದಲ್ಲಿ ಎಲ್ಲ ಮತೀಯರಿಗೂ ತಮ್ಮ ತಮ್ಮ ಮತ ಚಲಾಯಿಸುವ ಸಮಾನ ಹಕ್ಕಿನ ಅವಕಾಶ ನೀಡಿರುವುದೇ ಸರ್ವಮತ ಸಮನ್ವಯತೆಗೆ ಕಾರಣವಾಗಿದೆ ಎಂಬುದನ್ನು ಒಪ್ಪಿಕೊಳ್ಳುವರು.
* ಭಾರತದ ರಾಷ್ಟ್ರೀಯ ಐಕ್ಯತೆಯನ್ನು ಬಿಂಬಿಸುವಲ್ಲಿ ಭಾಷೆ ಮತ್ತು ಸಂಸ್ಕೃತಿಗಳು ಹೇಗೆ ಸಾಮ್ಯತೆಯನ್ನು ಹೊಂದಿವೆ ಎಂಬ ವಿಚಾರವನ್ನು ವಿಮರ್ಶಿಸುವರು.
* ಜಾತ್ಯತೀತತೆ, ಪ್ರಜಾಪ್ರಭುತ್ವ, ರಾಷ್ಟ್ರೀಯ ಹಬ್ಬಗಳು, ಬಂಧನಗಳು, ರಾಷ್ಟ್ರೀಯ ಐಕ್ಯತೆಯನ್ನು ವೃದ್ಧಿಸುವ ಅಂಶಗಳಾಗುವಲ್ಲಿ ವಹಿಸಿರುವ ಪ್ರಾಮುಖ್ಯತೆಯನ್ನು ಪರಸ್ಪರ ಚರ್ಚಿಸಿ, ತೀರ್ಮಾನ ಕೈಗೊಳ್ಳುವರು.
* ರಾಷ್ಟ್ರೀಯ ಐಕ್ಯತೆಗೆ ದಕ್ಕೆ ತರುತ್ತಿರುವ ಅಡತಡೆಗಳನ್ನು ಕುರಿತು ಚರ್ಚಿಸುವರು. ಉದಾ : ಕೋಮುಗಲಬೆ, ಪ್ರಾದೇಶಿಕತೆ, ಜಾತೀಯತೆ, ಜಲ, ಗಡಿ, ಭ್ರಷ್ಟಾಚಾರ ಭಾಷೆ ಕುರಿತ ವಿವಾದ ಇತ್ಯಾದಿಗಳು.

  ಉದಾ : ಹಿಂದೂ ಮುಸ್ಲಿಂ, ಕನ್ನಡಿಗ, ಪಂಜಾಬಿ, ಸ್ಪೃಶ್ಯ-ಅಸ್ಪೃಶ್ಯ, (ಚೀನಾ, ಭಾರತ, ಪಾಕಿಸ್ತಾನ ಗಡಿ ವಿವಾದ). ಕಾಸರಗೋಡು ವಿವಾದ, ಬೆಳಗಾಂ ವಿವಾದ, ಕಾವೇರಿ ಸಮಸ್ಯೆ.

**4) ಜ್ಞಾನ ಪುನರ್ರಚನೆಗೆ ಇರುವ ಅವಕಾಶಗಳು**

* ನಾವೆಲ್ಲಾ ಭಾರತೀಯರು ಎಂಬ ಹಿನ್ನಲೆಯಲ್ಲಿ ತಾವು ವಾಸಿಸುವ ಈ ನೆಲವನ್ನು ಮಾತೃಭೂಮಿ ಎಂದು ಪರಿಭಾವಿಸಿಕೊಂಡು, ರಾಷ್ಟ್ರದ ಇಡೀ ಜನ ಸಮೂಹದಲ್ಲಿ ಮೂಡುವ ಸೋದರತೆ, ಸಮಾನತೆ, ಆತ್ಮೀಯತೆ, ನಾವೆಲ್ಲಾ ಒಂದೇ ಎಂಬ ಭಾವನೆಯು ಮಕ್ಕಳಲ್ಲಿ ಬೆಳೆಯಲು ಅವಕಾಶ ಉಂಟಾಗುವುದು.

  ಉದಾ : – ತರಗತಿಯಲ್ಲಿ ನಾವೆಲ್ಲ ಒಂದೇ ಎಂಬ ಭಾವನೆ.
  – ಹುಟ್ಟೂರು, ಕುಟುಂಬದ ಬಗ್ಗೆ ಹೆಮ್ಮೆ.
* ಏಕತೆ, ಒಗ್ಗಟ್ಟು, ರಾಷ್ಟ್ರೀಯತೆಯ ಭಾವನೆಗಳಿಗೆ ಚ್ಯುತಿ ಬಂದಾಗ ಪ್ರತಿರೋಧಿಸುವುದು

  ಉದಾ : – ಶಾಲೆಯ ಬಗ್ಗೆ
  – ಶಿಕ್ಷಕರ ವಿಚಾರವಾಗಿ
  – ಕುಟುಂಬ

– ತಂದೆ ತಾಯಿ

– ದೇಶ/ಗಡಿ ಇತ್ಯಾದಿ.

* ವಿವಿಧತೆಯನ್ನು ಗೌರವಿಸುವುದು, ಅನುಸರಿಸುವುದು.

ಉದಾ : – ಸಂಸ್ಕೃತಿ, ಭಾಷೆ, ಧರ್ಮ, ಆಚಾರಗಳು

– ಶಾಲೆಗಳಲ್ಲಿ ವಿವಿಧ ಧರ್ಮಿಯರ ಜಯಂತಿ ಆಚರಣೆ

– ಒಟ್ಟಿಗೆ ಕುಳಿತು ಊಟ, ಆಟ, ಪಾಠಗಳನ್ನು ಆಲಿಸುವುದು

– ಸಾಮೂಹಿಕ ಭೋಜನ, ಅಂತರ್ಜಾತಿ ವಿವಾಹ.

* ಭಾರತೀಯರಾದ ನಾವೆಲ್ಲಾ ಒಂದೇ ಎಂಬ ಭಾವನೆಯನ್ನು ಮೂಡಿಸಿಕೊಳ್ಳುವುದು.

ಉದಾ : – ನೈಸರ್ಗಿಕ ವಿಕೋಪಗಳ ಸಂದರ್ಭ

– ರಾಷ್ಟ್ರೀಯ ಹಬ್ಬಗಳ ಆಚರಣೆ

– ಗಡಿತಂಟೆ

– ಜಾತ್ರಾ ಮಹೋತ್ಸವ

– ಆಟೋಟ ಸ್ಪರ್ಧೆ

* ಹಿಮಾಲಯದಿಂದ ಕನ್ಯಾಕುಮಾರಿವರೆಗಿನ ವಿಶಾಲವಾದ ಭಾರತದಲ್ಲಿ ಏಕರೀತಿಯ ಮನೋಭಾವನೆಯನ್ನು ಬೆಳಸಿಕೊಳ್ಳಲು ಇಲ್ಲಿನ ಆಡಳಿತ ವ್ಯವಸ್ಥೆ, ಸುಲಭ ಸಂಪರ್ಕ ಸಾಧನಗಳು, ಶಿಕ್ಷಣ ಸ್ವಾಸ್ಥ್ಯ ಹಾಗೂ ಕಾನೂನು ಪದ್ಧತಿಗಳ ಅನುಕೂಲಿಸಿರುವ ಹಿನ್ನಲೆಯಲ್ಲಿ ಮಕ್ಕಳು, ತಾರತಮ್ಯ ರಹಿತ ಮನೋಭಾವನೆ ಸುಲಭ ಹಾಗೂ ಸುಲಲಿತವಾದ ಸಂಪರ್ಕ ವ್ಯವಸ್ಥೆಯಿಂದ ವಿಜ್ಞಾನದ ಬಗ್ಗೆ ಮೆಚ್ಚುಗೆ ಹಾಗೂ ತಾನು ಕ್ರಿಯಾಶೀಲನಾಗಿ ಬೆಳೆಯಬೇಕೆಂಬ ಚಿಂತನೆ, ಉಚಿತ ಮತ್ತು ಕಡ್ಡಾಯ ಶಿಕ್ಷಣದಿಂದ ವಿನೂತನ ಜ್ಞಾನವನ್ನು ಕಟ್ಟಿಕೊಳ್ಳುವರು.

* ಹಿಮಾಲಯ ಪರ್ವತದ ಉಪಯೋಗಗಳು, ಭಾರತ ಪರ್ಯಾಯದ್ವೀಪ ಎನ್ನುವ ಹಿನ್ನಲೆಯಲ್ಲಿ ನೈಸರ್ಗಿಕ ಕೊಡುಗೆಗಳೂ ಐಕ್ಯತೆಗೆ ಪೂರಕವಾಗಿರುವುದನ್ನು ಗ್ರಹಿಸಿಕೊಂಡು, ಏಕತೆಯನ್ನು ಪುಷ್ಟೀಕರಿಸುವಲ್ಲಿ ರಾಷ್ಟ್ರಗೀತೆಯ ಮಹತ್ವವನ್ನು ಅರಿತು, ನಿಸರ್ಗ, ರಾಷ್ಟ್ರ, ರಾಷ್ಟ್ರಗೀತೆಯ ಬಗ್ಗೆ ಗೌರವವನ್ನು, ಅಭಿಮಾನ, ರಕ್ಷಣೆಯ ಮೌಲ್ಯಗಳ ಭಾವನೆಯನ್ನು ಹೊಂದುವರು.

* ರಾಷ್ಟ್ರ, ರಾಜಕೀಯ ಐಕ್ಯತೆಯನ್ನು ಸಾಧಿಸಿರುವ ಹಿನ್ನಲೆಯಲ್ಲಿ ಸಂವಿಧಾನದ ಬಗ್ಗೆ ಗೌರವ ಹಾಗೂ ಅನುಸರಣೀಯ ಭಾವನೆಯನ್ನು ಹೊಂದುವರು.

- ವಿವಿಧ ಧರ್ಮಗಳನ್ನು ಹೊಂದಿರುವ ಭಾರತದಂತಹ ರಾಷ್ಟ್ರದಲ್ಲಿ ಸರ್ವಮತ ಸಮನ್ವಯತೆಯ ಸಮಾನ ಹಕ್ಕು ನೀಡಿರುವುದರಿಂದ ಮಕ್ಕಳಲ್ಲಿ ಸಮಾನತೆ, ಗೌರವತೆ, ಮೆಚ್ಚುಗೆ, ಸಹೃದಯತೆ, ಸಮಾನತಾ ಭಾವದ ಗುಣಗಳನ್ನು ಬೆಳಸಿಕೊಳ್ಳುವರು.

  ಉದಾ : – ಉರುಸ್ ಆಚರಣೆ

  – ಕುಂಭಮೇಳ

  – ಸಾಂಸ್ಕೃತಿಕ ಹಬ್ಬ/ಜಾತ್ರೆಗಳ ಆಚರಣೆ

  – ಪೈಗಂಬರ್, ಬುದ್ಧ, ಏಸು, ಕೃಷ್ಣ ಜಯಂತಿಗಳ ಆಚರಣೆ.

* ಭಾರತ 'ಬಹುಭಾಷಾ ತವರು' ಎಂದು ಭಾವಿಸಿ, ರಾಷ್ಟ್ರೀಕೃತ ಭಾಷೆಗಳು ಸೇರಿದಂತೆ ಎಲ್ಲಾ ಭಾಷೆಗಳನ್ನು ಒಪ್ಪುವ, ಸ್ವೀಕರಿಸುವ ಮನೋಗುಣವನ್ನು ಬೆಳಸಿಕೊಂಡು ಪ್ರೀತಿ, ಸೌಹಾರ್ದತೆ, ಆತ್ಮೀಯತೆ, ಕೊಡುಕೊಳ್ಳುವಿಕೆಗಳ ಹೃದಯ ವೈಶಾಲ್ಯತೆಯನ್ನು ಬಳಸಿಕೊಳ್ಳುವರು.

  ಉದಾ : – ಸಂಸ್ಕೃತ ಮತ್ತು ಇತರ ಭಾಷೆಗಳ ಸಂಬಂಧ

  – ದ್ರಾವಿಡ ಭಾಷೆಗಳ ಒಡಂಬಡಿಕೆ

  – ಅನುವಾದ ಪ್ರಕ್ರಿಯೆ, ಪ್ರಶಸ್ತಿ ವಿತರಣೆ

  – ಶಾಸ್ತ್ರೀಯ ಸ್ಥಾನಮಾನ ಒದಗಿಸುವುದು

  – ಭಾಷಾವಾರು ರಾಜ್ಯ ವಿಂಗಡಣೆ

  – ತ್ರಿಭಾಷಾ ಸೂತ್ರ

* ಭಾರತದ ಸಾಂಸ್ಕೃತಿಕ ವೈವಿಧ್ಯತೆಯನ್ನು ಇಲ್ಲಿನ ಜನರ ಸಂಪ್ರದಾಯ, ಆಚಾರ, ವಿಚಾರ, ವೇಷಭೂಷಣಗಳು, ಆಹಾರ ಪದ್ಧತಿ, ಜೀವನಶೈಲಿಯಿಂದ ಗ್ರಹಿಸಿಕೊಂಡು ಇವುಗಳ ನಡುವಿನ ಸಾಮ್ಯತೆಯ ನಿರ್ದಶನವಾಗಿ ಮಕ್ಕಳು, ರಾಷ್ಟ್ರದ ಬಗ್ಗೆ ಹೆಮ್ಮೆ, ಅಭಿಮಾನ, ಸಮಾನತೆ, ಮಹತ್ವಗಳನ್ನು ಪಡೆದುಕೊಳ್ಳುವರು.

  ಉದಾ : – ಗುಡಿ ಚರ್ಚು, ಮಸೀದಿಗಳ ರಕ್ಷಣೆ

  – ಹಿಂದಿ, ಇಂಗ್ಲೀಷ್, ಉರ್ದು, ಕನ್ನಡ, ತೆಲುಗು ಭಾಷೆ ಕಲಿಕೆ.

* ರಾಷ್ಟ್ರೀಯ ಐಕ್ಯತೆಯನ್ನು ವೃದ್ಧಿಗೊಳಿಸುವ ಅಂಶಗಳಾದ ಜಾತ್ಯಾತೀತೆ, ರಾಷ್ಟ್ರೀಯ ಹಬ್ಬಗಳ ಆಚರಣೆ ರಾಷ್ಟ್ರೀಯ ಲಾಂಛನಗಳಿಗೆ ನೀಡುವ ಗೌರವದಿಂದಾಗಿ, ಮಕ್ಕಳಲ್ಲಿ ಸರ್ವಧರ್ಮ ಸಮನ್ವಯತೆ, ಸಾಮರಸ್ಯ ಆರೋಗ್ಯಕರವಾದ ಒಗ್ಗೂಡಿಕೆಯ ಮನೋಭಾವನೆ ತಮ್ಮದಾಗಿಸಿಕೊಳ್ಳುವರು.

ಉದಾ : – 'ವಸುದೈವ ಕುಟುಂಬಕಂ'
ಮಾನವ ಕುಲಂ ತಾನೊಂದೆವಲಂ
ರಾಷ್ಟ್ರೀಯ ಚಿಹ್ನೆಗಳ ಬಗ್ಗೆ ಗೌರವ

* **ಪ್ರಜಾಪ್ರಭುತ್ವದ ಪರಿಕಲ್ಪನೆ :** ಪ್ರಜೆಗಳೇ ಪ್ರಭುಗಳು ಎಂದು ಅರ್ಥೈಸಿಕೊಂಡು, ಪ್ರಜೆಗಳಾದವರ ಹಕ್ಕು, ಕರ್ತವ್ಯಗಳನ್ನು ಅರಿತು, ಪ್ರಜ್ಞಾವಂತ ಪ್ರಜೆಯಾಗುವ ಭಾವನೆಯನ್ನು ಬೆಳಸಿಕೊಳ್ಳುವರು.
* ಅನ್ಯೂನ್ಯತೆಯ ಗುಣವನ್ನು ಕಟ್ಟಿಕೊಳ್ಳುವರು

ಉದಾ : – ಪಂಜಾಬಿನ ಗೋಧಿ
– ಆಂಧ್ರದ ಭತ್ತ
– ಸಿಮ್ಲಾ, ಡಾರ್ಜಲಿಂಗ್‌ನ ಹಣ್ಣುಗಳು

ಇವೆಲ್ಲವನ್ನು ದೇಶದ ಇತರೆ ಭಾಗಗಲ್ಲಿ ಬಳಸಿಕೊಳ್ಳಲಾಗುತ್ತದೆ.

* ಅಖಂಡ ಭಾರತೀಯತೆಗೆ ದಕ್ಕೆ ತರುವಂತಹ ವಿಷಯಗಳಾದ ಕೋಮುಗಲಬೆ, ಅತಿಯಾದ ಪ್ರಾದೇಶಿಕ ನಿಷ್ಠೆ, ಜಾತೀಯತೆ, ಗಡಿವಿವಾದ, ಜಲವಿವಾದ, ಭಾಷಾ ವಿವಾದ, ಭ್ರಷ್ಟಾಚಾರ ಇವುಗಳ ಬಗ್ಗೆ ಮಕ್ಕಳಲ್ಲಿ ತಿರಸ್ಕಾರ ಭಾವನೆ ಬೆಳೆದು, ಪರಸ್ಪರ ಸಹಕಾರ, ಸಹಾಯ ಮನೋಭಾವನೆಗಳಿಗೆ ಆದ್ಯತೆಯನ್ನು ಕೊಟ್ಟುಕೊಳ್ಳುವರಲ್ಲದೆ ಮತೀಯ ಗುಂಪುಗಾರಿಕೆಯ ಬಗ್ಗೆ ಉದಾಸೀನತೆ ಶಿಕ್ಷಣಕ್ಕೆ ಹೆಚ್ಚು ಒತ್ತು. ಸಂಸ್ಕೃತಿ, ಮತಧರ್ಮಗಳಿಗೆ ಗೌರವ ಭಾವನೆಯನ್ನು ಕೊಟ್ಟು ಕೊಳ್ಳುವರು.

**5) ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಅಳವಡಿಕೆಗೆ ಇರುವ ಅವಕಾಶಗಳು**

* ರಾಷ್ಟ್ರೀಯತೆ ಬೆಳೆಸುವುದು

ಉದಾ : – ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆ ಓದಿಸುವುದು.
– ರಾಷ್ಟ್ರೀಯ ಹಬ್ಬಗಳ ಆಚರಣೆ
– ರಾಷ್ಟ್ರೀಯತೆ ಬಿಂಬಿಸುವ ಚಲನಚಿತ್ರಗಳ ಪ್ರದರ್ಶನ
– ರಾಷ್ಟ್ರಾಭಿಮಾನ ವ್ಯಕ್ತಪಡಿಸುವ ಗೀತೆಗಳ ಸಂಗ್ರಹ

* ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವುದು

ಉದಾ : – ತರಗತಿಗಳಲ್ಲಿ ಪ್ರತಿಯೊಬ್ಬರಿಗೂ ಸಮಾನ ಅವಕಾಶ ಕಲ್ಪಿಸುವುದು.
– ಎಲ್ಲಾ ಧರ್ಮಗಳ ಪವಿತ್ರ ಗ್ರಂಥಗಳ ವಾಚನ
– ಸರ್ವಧರ್ಮ ಸಮನ್ವಯ ಗೀತೆಗಳ ಪಠಣ
– ಗಾಂಧೀಜಿಯವರ ಸರ್ವೋದಯ ಕೃತಿ ಓದುವುದು
– ಕ್ರೀಡಾ ಸ್ಪರ್ಧೆಗಳ ಆಯೋಜನೆ

– ಸಾಂಸ್ಕೃತಿಕ ಉತ್ಸವಗಳ ಆಚರಣೆ

– ರಾಷ್ಟ್ರೀಯ ವೈವಿಧ್ಯತೆಯ ಪ್ರದರ್ಶನ

– ಹಿಂದು, ಮುಸ್ಲಿಂ, ಕ್ರೈಸ್ತ, ಬೌದ್ಧ, ಜೈನ, ಸಿಖ್ ದೇವಾಲಯಗಳಿಗೆ ಭೇಟಿ.

* ವೈವಿಧ್ಯತೆಯಲ್ಲಿ ಏಕತೆ

– ಭಾರತ ಒಂದು ಉಪಖಂಡ ಹೇಗೆ ಎಂಬುದರ ಬಗ್ಗೆ ಚರ್ಚೆ, (ನಿದರ್ಶನಗಳೊಂದಿಗೆ)

– ವಿವಿಧ ಕುಟುಂಬಗಳಿಂದ ಕೂಡಿರುವ ಗ್ರಾಮಗಳ ಭೇಟಿ.

– ಹೀಗೆ ಗ್ರಾಮ, ಹೋಬಳಿ, ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರಗಳ ರಚನೆಯಾಗಿದೆ ಎಂಬುದಾಗಿ ಅವಲೋಕಿಸಿ ತೀರ್ಮಾನ ತೆಗೆದುಕೊಳ್ಳುವುದು.

* ಧಾರ್ಮಿಕ ಐಕ್ಯತೆ

– ಸರ್ವಧರ್ಮಗಳ ಹಬ್ಬಗಳ ಆಚರಣೆ

– ಜಾತ್ರೆ, ಉತ್ಸವ, ಉರುಸ್‌ಗಳಿಗೆ ಪ್ರೋತ್ಸಾಹ

– ಸರ್ವ ಧಾರ್ಮಿಕ ಸಮ್ಮೇಳನಗಳನ್ನು ಆಯೋಜಿಸುವುದು.

– ಎಲ್ಲಾ ಧರ್ಮಗಳ ಸಾರ ಕುರಿತು ಚರ್ಚೆ

– ದಯವೇ ಧರ್ಮದ ಮೂಲ ವ್ಯಾಖ್ಯಾನಿಸುವುದು

– ಮೂಢನಂಬಿಕೆಗಳನ್ನು ಖಂಡಿಸುವ ಗೋಷ್ಠಿಗಳು

– ಧರ್ಮಗಳ ಸಾಮ್ಯತೆ ಕುರಿತು ವಿಚಾರ ಸಂಕಿರಣ

– ಧಾರ್ಮಿಕ ಗುರುಗಳನ್ನು ಆಹ್ವಾನಿಸುವುದು.

* ಭಾಷಾ ಐಕ್ಯತೆ

– ಭಾರತೀಯ ಭಾಷೆಗಳನ್ನ ಪಟ್ಟಿ

– ರಾಷ್ಟ್ರೀಕೃತ ಭಾಷೆಗಳು

– ಭಾಷಾವಾರು ಪ್ರಾಂತ್ಯಗಳ ವಿಂಗಡಣೆ ಕುರಿತು ಚರ್ಚೆ

– ಅನುವಾದ ಸಾಹಿತ್ಯ ಕುರಿತು ಅವಲೋಕನ

– ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು

– ಭಾಷಾ ವ್ಯತ್ಯಾಸ (ಧ್ವನಿ, ಲಿಪಿ, ಅರ್ಥ)

– ಭಾಷಾ ಸಾಮ್ಯತೆ ಮತ್ತು ಸಂಸ್ಕೃತ ಭಾಷೆಯ ಪ್ರಾಬಲ್ಯ

– ದ್ರಾವಿಡ ಭಾಷೆಗಳ ಹೊಂದಾಣಿಕೆ

* ಸಾಂಸ್ಕೃತಿಕ ಐಕ್ಯತೆ
    - ಮಕ್ಕಳ ಕುಟುಂಬಗಳ ಸಂಪ್ರದಾಯ ಮತ್ತು ಆಚರಣೆಗಳ ಸಂಗ್ರಹ
    - ತರಗತಿಯ ವಿವಿಧ ಮಕ್ಕಳ ಭಾಷಾ ಶೈಲಿ ಕುರಿತು ಚರ್ಚೆ
    - ವೇಷ ಭೂಷಣಗಳ ವ್ಯತ್ಯಾಸ, ಸಂಗ್ರಹ.
    - ಆಹಾರ ಪದ್ಧತಿಯಲ್ಲಿನ ವಿವಿಧತೆ ಕುರಿತು ವರದಿ ತಯಾರಿಕೆ
    - ಸಾಂಸ್ಕೃತಿಕ ಐಕ್ಯತೆಯನ್ನು ಮೂಡಿಸುವಲ್ಲಿ ಮಗುವಿನ ಪಾತ್ರ, ಪ್ರಬಂಧ ರಚನೆ.
    - ತನ್ನೂರಿನ ಸಾಂಸ್ಕೃತಿಕ ವೈವಿದ್ಯತೆ ಕುರಿತು ಸಂಗ್ರಹ
    - ವಿವಿಧ ಧರ್ಮೀಯರ ಸಾಂಸ್ಕೃತಿಕ ಸಾಮ್ಯತೆ ಕುರಿತು ಪ್ರಬಂಧ ರಚನೆ.
    - ಹರಿಹರ ನಂದಿಗುಡಿಯ ಅಜ್ಜಯ್ಯ
    - ಶಿವಮೊಗ್ಗ ಅಣಿಗೇರಿಕಟ್ಟೆ
    - ಕಾವಳಿಗೆ ಶಿವಲಿಂಗೇಶ್ವರ ಮಠ
    - ಸುರಪುರ ಹತ್ತಿರದ ತಿಂತಿಣಿ ಮೋನೇಶ್ವರ.

    ಉದಾ : – ಭಾವೈಕ್ಯತೆ ಸ್ಥಳಗಳಿಗೆ ಭೇಟಿ
    – ಮೊಹರಾಂ, ಬುದ್ಧ ಪೂರ್ಣಿಮೆ, ದುರ್ಗಮ್ಮದೇವಿ ಜಾತ್ರೆಗಳ ವೈಶಿಷ್ಟ್ಯಗಳ ಸಂಗ್ರಹ, ಚಿತ್ರ ಸಂಗ್ರಹಣೆ.

* **ರಾಷ್ಟ್ರೀಯ ಐಕ್ಯತೆಯನ್ನು ವೃದ್ಧಿಸುವುದು**

    ಉದಾ : – ಜಾತೀಯತೆಯನ್ನು ಖಂಡಿಸುವುದು ಹೇಗೆ ಎಂಬ ಚರ್ಚಾ ಗೋಷ್ಠಿ.
    – ರಾಷ್ಟ್ರೀಯ ಚಿಹ್ನೆಗಳ ಪ್ರದರ್ಶನ.

* ರಾಷ್ಟ್ರೀಯ ಐಕ್ಯತೆ ವೃದ್ಧಿಸಲು ಇರುವ ಅಡೆತಡೆಗಳು (ಮಾಹಿತಿ ಸಂಗ್ರಹ)
    - ಕೋಮುವಾದ
    - ಪ್ರಾದೇಶಿಕತೆ
    - ಜಾತೀಯತೆ

    – ಗಡಿ ವಿವಾದ, ಜಲ ವಿವಾದ, ಭಾಷಾ ವಿವಾದ, ಭ್ರಷ್ಟಾಚಾರ, ಅಸ್ಪೃಶ್ಯತೆ, ಇಚ್ಛಾಶಕ್ತಿ ಕೊರತೆ, ಜನರಲ್ಲಿ ಅಜಾಗರೂಕತೆ ಕುರಿತಂತೆ ಮೌಲ್ಯಮಾಪನ.

6) **ಕಲಿಕೆಯನ್ನು ಅನುಕೂಲಿಸುವ ವಿಧಾನಗಳು**

* ರಾಷ್ಟ್ರೀಯತೆಯನ್ನು ಬಿಂಬಿಸುವ ಹಾಡುಗಳು
* ರಾಷ್ಟ್ರೀಯ ಚಿಹ್ನೆಗಳ ಪ್ರದರ್ಶನ.

* ಸರ್ವಧರ್ಮೀಯರ ಸಂತೋಷ ಕೂಟ.
* ರಾಷ್ಟ್ರೀಯ ಭಾವೈಕ್ಯತೆ ಬಿಂಬಿಸುವ ಸ್ಥಳಗಳಿಗೆ ಭೇಟಿ
* ತರಗತಿಯಲ್ಲಿ ಎಲ್ಲಾ ಭಾಷೆಗಳ ಬಳಕೆ
* ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವ ಹಿನ್ನಲೆಯ ಮಹತ್ವ ತಿಳಿಸುವುದು.
* ಭಾರತದ ವಿವಿಧ ಆಹಾರ ಪದ್ಧತಿಗಳನ್ನು ಕುರಿತು ಸಂಗ್ರಹ.
* ವಿವಿಧ ವೇಷಭೂಷಣಗಳ ಪ್ರದರ್ಶನ
* ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರದರ್ಶಿಸುವ ಚಿತ್ರಗಳ ಪ್ರದರ್ಶನ.
* ವಿವಿಧ ಧರ್ಮಗಳ ಗ್ರಂಥಗಳ ಪ್ರದರ್ಶನ.
* ಅಂತರ್ ಜಾತಿ, ಅಂತರ್ ಧರ್ಮೀಯ ವಿವಾಹಗಳ ಅಣಕು ಪ್ರದರ್ಶನ.
* ಐಕ್ಯತೆ ಬಿಂಬಿಸುವ ಚಲನ ಚಿತ್ರಗಳ ಪ್ರದರ್ಶನ.
* ಭಾವೈಕ್ಯತಾ ದಿನ ಆಚರಣೆ.

7) **ಸಂಪನ್ಮೂಲ ಕ್ರೂಢೀಕರಣ**

* 9ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕ
* ಸರ್ವಧರ್ಮ ಸಮನ್ವಯ ಬಿಂಬಿಸುವ ಛಾಯಾ ಚಿತ್ರಗಳು
* ಚಿತ್ರದಲ್ಲಿ ಚರಿತ್ರೆ
* ಇಟಲಿ ಜರ್ಮನಿ, ಏಕೀಕರಣಗಳ ಹಿನ್ನಲೆ ಸಂಗ್ರಹ
* ಫ್ರಾನ್ಸ್ ಮತ್ತು ರಷ್ಯಾ ಕ್ರಾಂತಿಗಳಿಗೆ ಕಾರಣ ಕುರಿತು ಚರ್ಚಾಂಶಗಳ ಸಂಗ್ರಹ.
* ರಾಷ್ಟ್ರೀಯ ಭಾವೈಕ್ಯತೆ ಬಿಂಬಿಸುವ ಚಲನಚಿತ್ರಗಳ ಸಿ.ಡಿ. ಸಂಗ್ರಹ.
  ಉದಾ : ಲಗಾನ್, ಚಕ್‌ದೇ ಇಂಡಿಯಾ.
* ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ಮಾನವೀಯತೆ ಮರೆಯುವ ದೃಶ್ಯಗಳ ಸಂಗ್ರಹ.
* ಗಾಂಧಿ ಕುರಿತು ಚಲನಚಿತ್ರಗಳ ಸಂಗ್ರಹ.
* ರಾಷ್ಟ್ರೀಯ ಭಾವೈಕ್ಯತೆಯ ಹಾಡುಗಳ ಸಂಗ್ರಹ. (ಎಲ್ಲಾ ಭಾಷೆಗಳಿಗೆ ಸಂಬಂಧಿಸಿದಂತೆ)
* ವಿವಿಧ ಭಾಷೆಗಳಲ್ಲಿ ಐಕ್ಯತೆ ಬಿಂಬಿಸುವ ಅನುವಾದಿತ ಪುಸ್ತಕಗಳ ಸಂಗ್ರಹ.

8) **ಬೋಧನೋಪ್ರಕರಣಗಳು**

* ರಾಷ್ಟ್ರೀಯ ಚಿಹ್ನೆಗಳು
* ಭಾವೈಕ್ಯತೆ ಪ್ರದರ್ಶಿಸುವ ಚಿತ್ರಗಳು

* ಸಾಂಸ್ಕೃತಿಕ ಭಾರತ ಭೂಪಟ
* ಭಾರತ ಪ್ರಾಕೃತಿಕ ಭೂಪಟ
* ರಾಷ್ಟ್ರೀಕೃತ ಭಾಷೆಗಳ ಚಾರ್ಟ್
* ಉಡುಗೆ ತೊಡುಗೆಗಳ ಚಾರ್ಟ್
* ವಿವಿಧ ಧರ್ಮೀಯ ಪವಿತ್ರ ಸ್ಥಳಗಳ ಚಿತ್ರ
* ರಾಷ್ಟ್ರೀಯ ಹಬ್ಬಗಳ ಆಚರಣೆ ಸಂದರ್ಭದ ಚಿತ್ರಗಳು
* ಸರ್ವಧರ್ಮ ಸಮನ್ವಯದ ಫೋಟೋ
* ಮಕ್ಕಳನ್ನೇ ವಿವಿಧ ಧರ್ಮೀಯರನ್ನಾಗಿಸಿ ಪ್ರಾರ್ಥನೆಗಳ ಅಣಕು ಪ್ರದರ್ಶನ
* ಸರ್ವಧರ್ಮದ ಪ್ರಾತ್ಯಕ್ಷಿಕೆಗಳು

**9) ಮನನ ಮಾಡಿಕೊಳ್ಳಲೇ ಬೇಕಾದ ಅಂಶಗಳು**

* ಸೋದರತೆ
* ಭ್ರಾತೃತ್ವ
* ಸಮಾನತೆ
* ಜಾತ್ಯತೀತತೆ
* ಗೌರವ
* ಏಕತೆ
* ಭಾವೈಕ್ಯತೆ
* ಅಭಿಮಾನ
* ನಿಷ್ಠೆ
* ಮಾನವೀಯತೆ
* ನಿಷ್ಪಕ್ಷಪಾತಗುಣ
* ಮೆಚ್ಚುಗೆ
* ಸಹಿಷ್ಣುತೆ
* ಸಾಂಸ್ಕೃತಿಕ ಹಿರಿಮೆ
* ಪರಸ್ಪರ ಸಹಕಾರ
* ಸೌಹಾರ್ದತೆ
* ಮಾನಸಿಕ ಸ್ವಾಸ್ಥ್ಯತೆ
* ಸಂಘಟನೆ
* ಸ್ವೀಕಾರ ಭಾವನೆ
* ಹೋಲಿಕೆ
* ಹಕ್ಕು ಮತ್ತು ಕರ್ತವ್ಯ ಪ್ರಜ್ಞೆ

**ಉದಾಹರಣೆ : 2**

**1) ಪಾಠದ ಹೆಸರು : ಕೇಂದ್ರ ಸರ್ಕಾರ**

**2) ಜ್ಞಾನ ರಚನೆಗೆ ಇರುವ ಅವಕಾಶಗಳು :**

* ಭಾರತ ದೇಶದ ಅಖಂಡತೆಯ ಪರಿಕಲ್ಪನೆ
* ಭಾರತದಲ್ಲಿನ ಸರಕಾರ ಮತ್ತು ಆಡಳಿತಾತ್ಮಕ ವ್ಯವಸ್ಥೆ
* ಸರಕಾರ ವ್ಯವಸ್ಥೆಯ ಅಂಗಗಳು

* ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪರಿಕಲ್ಪನೆ
* ಕೇಂದ್ರ ಸರ್ಕಾರದ ಶಾಸಕಾಂಗದಲ್ಲಿನ ಮೇಲ್ಮನೆ, ಕೆಳಮನೆಗಳ ರಚನೆ
* ಸದಸ್ಯತ್ವ, ಅರ್ಹತೆ, ಕಾರ್ಯಗಳು
* ಕೇಂದ್ರ ಕಾರ್ಯಾಂಗ
* ರಾಷ್ಟ್ರಪತಿಯವರ ಆಯ್ಕೆ, ಅರ್ಹತೆ ಮತ್ತು ಅಧಿಕಾರಗಳು
* ಪ್ರಧಾನಮಂತ್ರಿ ಆಯ್ಕೆ, ಅರ್ಹತೆ ಮತ್ತು ಅವರ ಕಾರ್ಯಗಳು ಹಾಗೂ – (ಮಂತ್ರಿಮಂಡಲ ರಚಸಿ)
* ನ್ಯಾಯಾಂಗ ವ್ಯವಸ್ಥೆ
* ನ್ಯಾಯಾಂಗದೊಳಗಣ ಒಕ್ಕೂಟ ವ್ಯವಸ್ಥೆ ಉಚ್ಚ–ಸರ್ವೋಚ್ಚ ನ್ಯಾಯಾಲಯಗಳ ಜವಾಬ್ದಾರಿ ಮತ್ತು ಕಾರ್ಯಗಳು.

3) **ವಿಮರ್ಶಾಯುಕ್ತ ಶಿಕ್ಷಣಕ್ರಮ ಅಳವಡಿಕೆಗೆ ಇರುವ ಅವಕಾಶಗಳು**

* ಭಾರತವು ಸಾರ್ವಭೌಮ ಸ್ವತಂತ್ರ್ಯ ಪ್ರಜಾಸತ್ತಾತ್ಮಕ ರಾಜ್ಯವಾಗಿರುವುದಲ್ಲದೆ ಸಂವಿಧಾನಬದ್ಧವಾದ ಒಕ್ಕೂಟ ವ್ಯವಸ್ಥೆಯ ಒಳಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಯನಿರ್ವಹಿಸುತ್ತಿದ್ದು, ರಾಷ್ಟ್ರದ ಏಕತೆಯನ್ನು ಪ್ರತಿಬಿಂಬಿಸಿ ಜಾತ್ಯಾತೀತ ಪರಿಕಲ್ಪನೆಯ ಹಿನ್ನಲೆಯನ್ನು ಜಗತ್ತಿನ ಅಮೇರಿಕಾ, ಫ್ರಾನ್ಸ್, ಇಂಗ್ಲೆಂಡ್ ದೇಶಗಳ ಸರಕಾರ ವ್ಯವಸ್ಥೆಯೊಂದಿಗೆ ಹೋಲಿಸಿ ಅರ್ಥೈಸಿಕೊಳ್ಳುವರು.
* ಕೇಂದ್ರ ಸರ್ಕಾರದ ಬಹುಮುಖ್ಯ ಅಂಗವಾದ ಶಾಸಕಾಂಗವನ್ನು ಸಂಸತ್ತು ಎಂದು ಕರೆಯುತ್ತಿರುವ ಹಿನ್ನಲೆಯಲ್ಲಿ, ಸಂಸತ್ತು ಅದರ ಅರ್ಥ. ಇಲ್ಲಿನ ದ್ವಿಸದನ ವ್ಯವಸ್ಥೆಯನ್ನು (ಲೋಕಸಭೆ, ರಾಜ್ಯಸಭೆ) ಸಂವಿಧಾನದ 79ನೇ ವಿಧಿಯ ಅನ್ವಯ ಪ್ರಜಾತಂತ್ರೀಯ ವ್ಯವಸ್ಥೆಯ ರಚನೆಯ ಅಡಿಯಲ್ಲಿ ತಿಳಿಯುವುದು.
* ಸಂಸತ್ತಿನ/ಪಾರ್ಲಿಮೆಂಟ್ 'ಮೇಲ್ಮನೆಗೆ' ಸಂಬಂಧಿಸಿದಂತೆ, ಸಂವಿಧಾನ ಬದ್ಧವಾಗಿ ಇದರ ರಚನೆ, ಸದಸ್ಯರ ಸಂಖ್ಯೆ ಮತ್ತು ಆಯ್ಕೆ ಕುರಿತಂತೆ ರಾಷ್ಟ್ರಪತಿಯವರ ಜವಾಬ್ದಾರಿಗಳನ್ನು ತಿಳಿಯುತ್ತಾ ಈ ಖಾಯಂ ಸದನ ಸದಸ್ಯರ ಅರ್ಹತೆಗಳು, ಚುನಾವಣೆ ಮತ್ತು ನಾಮಕರಣ ಸದಸ್ಯರ ನೇಮಕಾತಿ ಹಾಗೂ ಸಭಾಪತಿ ಪ್ರಕ್ರಿಯೆಯನ್ನು ಪ್ರಜಾಸತ್ತಾತ್ಮಕ ಪರಿಕಲ್ಪನೆ ಅಡಿಯಲ್ಲಿ ಅರ್ಥೈಸಿಕೊಳ್ಳುವರು.
* ಸಂಸತ್ತಿನ ಜನತಾ ಸದನ ಎಂದೇ ಕರೆಯಲ್ಪಡುತ್ತಿರುವ ಲೋಕಸಭೆಯ ರಚನೆ, ಇಲ್ಲಿನ ಸದಸ್ಯರ ಸಂಖ್ಯೆ (ಮೀಸಲಾತಿ ಮತ್ತು ನಾಮಕರಣ ಸದಸ್ಯರನ್ನು ಒಳಗೊಂಡಂತೆ) ಸದಸ್ಯರ ಅರ್ಹತೆ, ಅಧಿಕಾರದ ಅವಧಿಯನ್ನು ಈ ಪ್ರಜಾ ಪ್ರತಿನಿಧಿ, ವ್ಯವಸ್ಥೆಯ ಅಡಿಯಲ್ಲಿನ ಚುನಾವಣೆಗಳ ಪಾವಿತ್ರದೊಂದಿಗೆ, ಪ್ರಜೆಗಳೇ ಪ್ರಭುಗಳಾಗಿರುವ ಹಿನ್ನಲೆಯ ಮಹತ್ವವನ್ನು ಅರಿಯುವರು.

* ಪ್ರಜಾಪ್ರಭುತ್ವ ಸರಕಾರ ವ್ಯವಸ್ಥೆಯಲ್ಲಿ ಸಂಸತ್ತಿನ ಕೆಳಮನೆಯಾದ ಲೋಕಸಭೆಗೆ ಪವಿತ್ರವಾದ ಸ್ಥಾನವಿದ್ದು, ರಾಷ್ಟ್ರದ ಪ್ರಗತಿಗೆ ಪೂರಕವಾಗುವ ಕಾರ್ಯಕಲಾಪಗಳನ್ನು ಸದನದಲ್ಲಿ ನಡೆಸಲು, ಸರ್ವಸದಸ್ಯರೂ ಒಬ್ಬ ಸಭಾಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಹೇಗೆ ಆಯ್ಕೆ ಮಾಡಲಾಗುತ್ತದೆ ಹಾಗೂ ಆಯ್ಕೆಯಾದ ಅಧ್ಯಕ್ಷರ ಅಧಿಕಾರದ ವ್ಯಾಪ್ತಿಯನ್ನು ಸಂವಿಧಾನದ ನಿರ್ದೇಶನದ ಅಡಿಯಲ್ಲಿ ಚರ್ಚಾತ್ಮಕವಾಗಿ ತೀರ್ಮಾನಿಸುವರು. ಈಗಿನ ಲೋಕಸಭೆಯ ಸಭಾಧ್ಯಕ್ಷರು ಮೀರಾಕುಮಾರ್, ಉಪಸಭಾಧ್ಯಕ್ಷರು ಮಹಮದ್ ಅನ್ಸಾರಿ.

* ಕೇಂದ್ರ ಸರ್ಕಾರದ ಶಾಸಕಾಂಗ ವ್ಯವಸ್ಥೆಯ ಕೆಳಮನೆಯಾದ (ಲೋಕಸಭೆಯಲ್ಲಿ ಬಹುಮತ ಪಡೆದ ಪಕ್ಷದ ಸದಸ್ಯರು, ಜೊತೆಗೆ ವಿರೋಧಪಕ್ಷವೆಂದು ಮಾನ್ಯತೆ ಪಡೆದ ಪಕ್ಷದ ಸದಸ್ಯರು ಮತ್ತು ಉಳಿದ ಎಲ್ಲಾ ಚುನಾಯಿತ ಸದಸ್ಯರು ಕಲಾಪ ಸಂದರ್ಭಗಳಲ್ಲಿ ತಪ್ಪದೇ ಹಾಜರಿರುತ್ತಾರೆ. ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕನೊಬ್ಬನನ್ನು ಆಯ್ಕೆ ಮಾಡಲಾಗುವುದಲ್ಲದೆ ಈತನು, ಅಧಿಕಾರ, ಕಾರ್ಯವ್ಯಾಪ್ತಿ ಸದನದಲ್ಲಿ ಪ್ರಧಾನಮಂತ್ರಿಗೆ ಸರಿಸಮನಾದ ಗೌರವ ಮನ್ನಣೆ, ಸವಲತ್ತುಗಳನ್ನು ಹೊಂದಿರುತ್ತಾನೆ. ಜೊತೆಗೆ ವಿರೋಧ ಪಕ್ಷದ ನಾಯಕನೆನಿಸಿಕೊಂಡವನು, ಜನತೆಯ ಪರವಾಗಿ ಸಮಾಜಮುಖಿ ಚಿಂತನೆಗಳ ಚೌಕಟ್ಟಿನಲ್ಲಿ ಸದನವನ್ನು ಪ್ರತಿನಿಧಿಸುವ ಗುರುತರ ಹೊಣೆಗಾರಿಕೆಯನ್ನು ಪಡೆದಿರುವ ಸಂವಿಧಾನಬದ್ಧ ಶ್ರೇಷ್ಠತೆಯನ್ನು ಗ್ರಹಿಸಿಕೊಳ್ಳುವರು ಕೇಂದ್ರದ ಈಗಿನ ವಿರೋಧ ಪಕ್ಷದ ನಾಯಕಿ ಶ್ರೀಮತಿ ಸುಷ್ಮ ಸ್ವರಾಜ್.

* ಸಂಸತ್ತು ಮೂಲಭೂತವಾಗಿ ಕಾನೂನು ಮಾಡುವ ಅಂಗವಾಗಿದ್ದು, ರಾಷ್ಟ್ರದ ಯಾವುದೇ ವಿಷಯಕ್ಕೆ ಸಂಬಂಧಿಸಿದ ಮಸೂದೆಯು ಸಂಸತ್ತಿನಲ್ಲಿ ಬಹುಮತ ಪಡೆದುಕೊಳ್ಳಬೇಕಾಗುತ್ತದೆ. ಅಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಡಿಯಲ್ಲಿ ಬಹುಮತಕ್ಕಿರುವ ಮಹತ್ವವನ್ನು ಅರ್ಥೈಸಿಕೊಳ್ಳುವರು. ಹಾಗೂ ಮಸೂದೆ ಶಾಸನವಾಗುವಲ್ಲಿ ರಾಷ್ಟ್ರಪತಿಗಳು ಕೈಗೊಳ್ಳುವ ತೀರ್ಮಾನಗಳನ್ನು ಸಭಾಧ್ಯಕ್ಷರ ಪಾತ್ರವನ್ನು ಅವಲೋಕಿಸಿ ತಿಳಿದುಕೊಳ್ಳುವರು.

* ಸಂಸತ್ತಿನ ಆಡಳಿತಾಧಿಕಾರವನ್ನು ಹೊಂದಿರುವ ಪ್ರಧಾನಮಂತ್ರಿ ಮತ್ತು ಆತನ ಮಂತ್ರಿಮಂಡಲದ ಜವಾಬ್ದಾರಿ ನಿಜವಾದ ಕಾರ್ಯಾಂಗವಾಗಿ ಅದು ಕೈಗೊಳ್ಳುವ ತೀರ್ಮಾನಗಳನ್ನು ಚರ್ಚಿಸುವುದಲ್ಲದೆ ಈ ಮಂತ್ರಿ ಮಂಡಲವು ಸಂಸತ್ತಿನ ವಿಶ್ವಾಸವನ್ನು ಕಳೆದುಕೊಳ್ಳುವ ಹಾಗೂ ರಾಜೀನಾಮೆ ನೀಡುವ ಸಂದರ್ಭಗಳನ್ನು ಸಂವಿಧಾನಾತ್ಮಕ ಹಿನ್ನಲೆಯಲ್ಲಿ ವಿಶ್ಲೇಷಿಸುವರು.

* ಹಣಕಾಸಿನ ಮಸೂದೆಯನ್ನು ಲೋಕಸಭೆಯಲ್ಲಿಯೇ ಏಕೆ ಮಂಡಿಸಲಾಗುತ್ತದೆ. ಈ ಹಣಕಾಸು ಮಸೂದೆಗೆ ಸಂಬಂಧಿಸಿದಂತೆ ರಾಜ್ಯಸಭೆಯ ಪಾತ್ರವೇನು? ಎಂಬುದನ್ನು ಲೋಕಸಭೆಯ ಹಣಕಾಸಿನ ಅಧಿಕಾರದ ವ್ಯಾಪ್ತಿಯ ಸಂವಿಧಾನದಬದ್ಧ ಚೌಕಟ್ಟಿನೊಳಗೆ ಅವಲೋಕಿಸುವರು.

* ಸಂಸತ್ತಿನ ಅಧಿಕಾರದ ಪರಿಧಿಯೊಳಗೆ ಬರುವ ನ್ಯಾಯಾಂಗದ ಮುಖ್ಯಸ್ಥರುಗಳಾದ ಮುಖ್ಯ ನ್ಯಾಯಾಧೀಶರನ್ನು ಪದಚ್ಯುತಗೊಳಿಸುವ ಸಂದರ್ಭ ಹೇಗೆ ಎನ್ನುವ ವಿಚಾರದಲ್ಲಿ ಪ್ರಜಾಪ್ರತಿನಿಧಿ ಸಭೆಯಂತಿರುವ ಸಂಸತ್ತಿನ ಶ್ರೇಷ್ಠತೆಯನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶ್ಲಾಘಿಸುವರು.

* ಸಂಸತ್ತಿಗೆ ನಮ್ಮ ಸಂವಿಧಾನವನ್ನು ತಿದ್ದಪಡಮಾಡುವ ಅಧಿಕಾರವನ್ನು ನೀಡಲಾಗಿದ್ದು, ಅದು ಹೇಗೆ? ಯಾವ ಸಂದರ್ಭಗಳು ಎನ್ನುವುದನ್ನು ಅರ್ಥೈಸಿಕೊಳ್ಳುವುದಲ್ಲದೆ ನ್ಯಾಯಾಂಗದ ಚೌಕಟ್ಟನ್ನು ನಿಯಂತ್ರಿಸುವ, ನ್ಯಾಯಾಲಯಗಳನ್ನು ಸ್ಥಾಪಿಸುವ, ಗಡಿರೇಖೆ ಹೊಸ ರಾಜ್ಯಗಳ ಸೃಷ್ಟಿ, ರಾಜ್ಯಗಳ ಹೆಸರು ಬದಲಾವಣೆ, ಕೇಂದ್ರದ ವಿವಿಧ ಆಯೋಗಗಳ ರಚನೆ, ವರದಿಗಳ ಬಗೆಗಿನ ಚರ್ಚೆ, ಹಾಗೂ ತುರ್ತು ಪರಿಸ್ಥಿತಿಯನ್ನು ಕುರಿತಂತೆ ಯಾವುದೇ ನಿರ್ಣಾಯಕ ತೀರ್ಮಾನಗಳನ್ನು ಕುರಿತಂತೆ ಸಂಸತ್ತಿನ ಕಾರ್ಯವ್ಯಾಪ್ತಿಯಲ್ಲಿ ಚರ್ಚಿಸಿ ಒಪ್ಪಿಕೊಳ್ಳುವರು.

* ಕೇಂದ್ರ ಸರ್ಕಾರದ ಕಾರ್ಯಾಂಗ, ಇದರೊಳಗಿನ ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿ, ಮಂತ್ರಿ ಮಂಡಲದ ವ್ಯಾಪ್ತಿ ಏನೆಂಬುದನ್ನು ಚರ್ಚಿಸುವರು.

* ಸಂವಿಧಾನದ 52ನೇ ವಿಧಿಯ ಅನ್ವಯ ರಾಷ್ಟ್ರಪತಿಯವರ ಅಧಿಕಾರ ವ್ಯಾಪ್ತಿಯನ್ನು ಅರ್ಥೈಸಿಕೊಂಡು, ಸಂವಿಧಾನದ 54 ಮತ್ತು 55ನೇ ವಿಧಿಯ ನಿರ್ದೇಶನದಂತೆ ಪ್ರಥಮ ಪ್ರಜೆ ರಾಷ್ಟ್ರಪತಿಯ ಅರ್ಹತೆ ಹಿನ್ನಲೆಯಲ್ಲಿ ನೇಮಕ ಆಯ್ಕೆ ಮಾಡಲಾಗುತ್ತದೆ ಎಂಬುದನ್ನು ಸಂವಿಧಾನದ ನಿರ್ದೇಶನದಂತೆ ಅವಲೋಕಿಸುವರು.

* ರಾಷ್ಟ್ರದ ಮೊದಲ ಪ್ರಜೆ ರಾಷ್ಟ್ರಪತಿಯವರ ಪ್ರಜಾಸತ್ತಾತ್ಮಕ ಅಧಿಕಾರಗಳನ್ನು ಅರ್ಥೈಸಿಕೊಳ್ಳುವ ಹಿನ್ನಲೆಯಲ್ಲಿ, ಕಾರ್ಯಾಂಗಾಧಿಕಾರ, ನ್ಯಾಯಾಂಗಾಧಿಕಾರ ಶಾಸನಾಧಿಕಾರ, ಹಣಕಾಸಿನ ಅಧಿಕಾರ, ಮಿಲಿಟರಿ ಅಧಿಕಾರ, ತುರ್ತು ಪರಿಸ್ಥಿತಿಯ ಅಧಿಕಾರ ಹಾಗೂ ವಿವೇಚನಾಧಿಕಾರಿಗಳನ್ನು ಒಳಗೊಂಡಂತೆ ಈ ಅಧಿಕಾರಗಳ ವ್ಯಾಪ್ತಿ, ಪ್ರಾಮುಖ್ಯತೆಯ ಸಂದರ್ಭದಲ್ಲಿ ರಾಷ್ಟ್ರದ ಅಖಂಡತೆಯ ಮಹತ್ವವನ್ನು ಕಾಪಾಡುವ ರಾಷ್ಟ್ರಪತಿಯವರ ಕಾರ್ಯವ್ಯಾಪ್ತಿಯನ್ನು ವಿಮರ್ಶಿಸಿ ತೀರ್ಮಾನ ಕೈಗೊಳ್ಳುವುದು.

  ಉದಾ : – ವೀರಪ್ಪನ್ ಸಹಚರರಿಗೆ ಗಲ್ಲುಶಿಕ್ಷೆ ವಿಧಿಸುವ ವಿಚಾರ
  – ಕ್ರಿ.ಶ. 2008ರಲ್ಲಿ ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿ ಘೋಷಣೆ
  – ಕಸಬ್‌ಗೆ ಗಲ್ಲು.

* ರಾಷ್ಟ್ರದ ಮುಖ್ಯಸ್ಥರಾಗಿ ರಾಷ್ಟ್ರಪತಿಯವರನ್ನು ಸರ್ಕಾರದ ಮುಖ್ಯಸ್ಥರಾಗಿ ಪ್ರಧಾನಮಂತ್ರಿಯ ನಡುವಿನ ಅಧಿಕಾರದ ಸಾಮ್ಯತೆ, ವ್ಯತ್ಯಾಸ, ಸಹಕಾರವನ್ನು ತಿಳಿದುಕೊಳ್ಳುವರು.

* ಸರಕಾರದ ಮುಖ್ಯಸ್ಥರಾದ ಪ್ರಧಾನಮಂತ್ರಿಗಳು ಅಧಿಕಾರಗಳಾದ ಮಂತ್ರಿಮಂಡಲ ನೇಮಕದೊಂದಿಗೆ ಖಾತೆಗಳನ್ನು ಮಂತ್ರಿಗಳ ಸಾಮರ್ಥ್ಯಾನುಸಾರ ಹಂಚಿಕೆ ಮಾಡಿ

ಸಚಿವ ಸಂಪುಟ ಸಂಪೂರ್ಣ ಜವಾಬ್ದಾರನಾಗಿ ರಾಷ್ಟ್ರರಕ್ಷಣೆ, ಯೋಜನೆ ಹಾಗೂ ಕಾಳಜಿಯುಕ್ತ ವಿದೇಶೀ ನೀತಿಯ ಅನುಷ್ಠಾನದೊಂದಿಗೆ, ರಾಷ್ಟ್ರ, ರಾಷ್ಟ್ರಪತಿ ಹಾಗೂ ಮಂತ್ರಿಮಂಡಲಗಳ ನಡುವೆ ಸಂಬಂಧ ಕಲ್ಪಿಸುವಲ್ಲಿ ಪ್ರಧಾನ ಮಂತ್ರಿಯವರ ಕಾರ್ಯಕ್ಷಮತೆ ಯನ್ನು ವಿಶ್ಲೇಷಿಸಿಕೊಳ್ಳುವರು.

ಉದಾ : – 2 ಜಿ. ತರಂಗಾಂಗತರ ಹಗರಣ
- ಕಲ್ಲಿದ್ದಲು ಹಗರಣ
- ಶಸ್ತ್ರಾಸ್ತ್ರಗಳ ಕೊಳ್ಳುವಿಕೆಯ ಹಗರಣ
- ಬೋಫೋರ್ಸ್ ಹಗರಣ ಇತ್ಯಾದಿ.
- ಭಾರತ ಮತ್ತು ಪಾಕಿಸ್ತಾನದ ನಡುವಿನ ಭಯೋತ್ಪಾದಕ ಚಟುವಟಿಕೆಗಳು

* ಸರಕಾರದ ನ್ಯಾಯಾಂಗ ವ್ಯವಸ್ಥೆಯಲ್ಲಿ ಭಾರತದ ಮಟ್ಟಿಗೆ ಸರ್ವೋಚ್ಚ ನ್ಯಾಯಾಲಯವೇ ರಾಷ್ಟ್ರದ ಅತ್ಯುನ್ನತ ನ್ಯಾಯಾಲಯವಾಗಿದ್ದು, ಇದು ಇತರ ಅಧೀನ ನ್ಯಾಯಾಲಯಗಳನ್ನು ಹೇಗೆ ನಿಯಂತ್ರಿಸುತ್ತದೆ ಮತ್ತು ನ್ಯಾಯ, ಸಂವಿಧಾನ ಶಾಸನ ಸಂಪ್ರದಾಯಗಳನ್ನು ಇದು ರಕ್ಷಿಸುವ ಹೊಣೆಗಾರಿಕೆಯ ಚೌಕಟ್ಟಿನಲ್ಲಿ ಏಕರೂಪ ನ್ಯಾಯಾಂಗ ವ್ಯವಸ್ಥೆಯನ್ನು ಅರ್ಥೈಸಿಕೊಳ್ಳುವುದು.

* ಸರ್ವೋಚ್ಚ ನ್ಯಾಯಲಯದ ನ್ಯಾಯಾಧೀಶರ ನೇಮಕಕ್ಕೆ ಸಂಬಂಧಿಸಿದಂತೆ, ಈತನಿಗೆ ಇರಬೇಕಾದ ಅರ್ಹತೆ, ನೇಮಕಾತಿ ಮಾನದಂಡವನ್ನು ಸಂವಿಧಾನದ ನಿರ್ದೇಶನದಂತೆ ತಿಳಿದುಕೊಂಡು, ಮುಖ್ಯ ನ್ಯಾಯಧೀಶರ ಕಾರ್ಯವ್ಯಾಪ್ತಿಯನ್ನು ಅವಲೋಕಿಸುವರು.

* ಒಕ್ಕೂಟ ನ್ಯಾಯಾಂಗ ವ್ಯವಸ್ಥೆಯಲ್ಲಿ ರಚನೆಯಾಗಿರುವ ರಾಷ್ಟ್ರದ ತಾಲ್ಲೂಕು ಹಂತದ ನ್ಯಾಯಾಲಯಗಳಾದ ಹಿರಿಯ ಶ್ರೇಣಿ ನ್ಯಾಯಾಲಯಗಳು ಮತ್ತು ಚೀಫ್ ಜುಡೀಷಿಯಲ್ ನ್ಯಾಯಾಲಯಗಳು, ಜಿಲ್ಲಾ ಹಂತದಲ್ಲಿ ಸೆಷನ್ ನ್ಯಾಯಾಲಯಗಳು ಹಾಗೂ ರಾಜ್ಯ ಹಂತದಲ್ಲಿ ಉಚ್ಚ ನ್ಯಾಯಾಲಯಗಳ ಸ್ಥಾಪನೆ ಮಾಡಲಾಗಿದ್ದು, ಆಯಾ ಹಂತದ ಈ ನ್ಯಾಯಾಲಯಗಳ ಕಾರ್ಯವ್ಯಾಪ್ತಿಯನ್ನು ಕೂಲಂಕುಶವಾಗಿ, ಅರ್ಥೈಸಿಕೊಂಡು ವಿಶ್ಲೇಷಿಸುವರು.

4) **ಜ್ಞಾನ ಪುನರ್ರಚನೆಗಿರುವ ಅವಕಾಶಗಳು**

* ಭಾರತದ ಪ್ರಜಾಪ್ರಭುತ್ವವು ಸ್ವಾತಂತ್ರ್ಯ ಸಮಾನತೆ, ಸಮಾಜವಾದಿ, ಜಾತ್ಯತೀತ ನಿಲವುಗಳೊಂದಿಗೆ ರಾಷ್ಟ್ರದ ಅಖಂಡತೆಯನ್ನು, ಸಾರ್ವಭೌಮತ್ವವನ್ನು ಕಂಡುಕೊಂಡಿರುವ ಹಿನ್ನಲೆಯಲ್ಲಿ ಮಕ್ಕಳು ತಮ್ಮ ಕುಟುಂಬ ಮತ್ತು ಸುತ್ತಲಿನ ಸಮಾಜದ ಏಳಿಗೆಗೆ ಜಾತ್ಯತೀತ ಮನೋಭಾವದ ಸ್ವತಂತ್ರ್ಯ ವಿಚಾರಗಳು ತಮ್ಮ ತಮ್ಮ ವ್ಯಕ್ತಿತ್ವ ಮತ್ತು ಬದುಕನ್ನು ರೂಪಿಸಿಕೊಳ್ಳಲು ಬೇಕಾದ ಜ್ಞಾನವನ್ನು ಕಟ್ಟಿಕೊಳ್ಳುವ ಮನಸ್ಥಿತಿಯನ್ನು ಹೊಂದುವರು.

ಉದಾ : – ಕೂಡಿ ಊಟ ಮಾಡುವುದು
– ಒಟ್ಟಾಗಿ ಆಟವಾಡುವುದು
– ಹಬ್ಬ ಜಾತ್ರೆಗಳಲ್ಲಿ ಪರಸ್ಪರ ಬೆರೆಯುವುದು

* ರಾಜ್ಯಸಭೆ ಮತ್ತು ಲೋಕಸಭೆಗೆ ಆಯ್ಕೆಯಾಗುವ ವ್ಯಕ್ತಿಯ ಅರ್ಹತೆಗಳೇನೆಂಬುದನ್ನು ಅವಲೋಕಿಸಿದ ಮಕ್ಕಳು ಪ್ರಜಾತಂತ್ರೀಯ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಪ್ರತಿಯೊಬ್ಬರು ಕಟ್ಟಿಕೊಳ್ಳುವ ಪ್ರಜಾ ಪ್ರತಿನಿಧಿಯಾದವನ ಈ ಅರ್ಹತೆಗಳು ಪ್ರತಿಯೊಬ್ಬರಲ್ಲಿ ಬೆಳೆಯಬೇಕೆಂದು ಆಶಿಸಿ, ಆರೋಗ್ಯವಂತ ಸಮಾಜಕ್ಕೆ ತನ್ನ ಪಾತ್ರವೇನೆಂಬುದನ್ನು ತಿಳಿದುಕೊಳ್ಳುವರು ತನ್ನಲ್ಲಿ ಈ ನಾಯಕತ್ವದ ಗುಣಗಳನ್ನು ಅಳವಡಿಸಿಕೊಳ್ಳುವರು ಹಾಗೂ ಅನುಸರಿಸುವರು.

* ಸಂಸತ್ತಿನ ಕಾರ್ಯಕಲಾಪಗಳಲ್ಲಿ ನಿಯಮದಂತೆ ತೊಡಗಿಕೊಳ್ಳುವ ರಾಷ್ಟ್ರಪತಿ, ಉಪರಾಷ್ಟ್ರಪತಿ, ಸಭಾಧ್ಯಕ್ಷ, ಪ್ರಧಾನಮಂತ್ರಿ ಹಾಗೂ ವಿರೋಧ ಪಕ್ಷದ ನಾಯಕರ ನಡುವಿನ ಕರ್ತವ್ಯಗಳನ್ನು ಗ್ರಹಿಸಿ, ತಮ್ಮ ಕುಟುಂಬ, ಶಾಲೆ, ಸುತ್ತಲಿನ ಸಮಾಜದಲ್ಲಿ ಸಮಾಜಮುಖಿ ಆಲೋಚನೆಗಳನ್ನು ಹೇಗೆ ರೂಪಿಸಿಕೊಳ್ಳಬಹುದು ಎಂಬುದನ್ನು ಸ್ವೀಕರಿಸಲೆತ್ನಿಸುವರು.

ಉದಾ : – ತರಗತಿ ನಾಯಕನಾಗಿ
– ಕುಟುಂಬದ ಹೊಣೆಗಾರಿಕೆ ಹೊಂದಿದವನಾಗಿ
– ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಜವಾಬ್ದಾರಿ ಹೊಂದುವುದು.

* ಸಂಸತ್ತಿನ ಅಧಿಕಾರ ಮತ್ತು ಕಾರ್ಯಗಳ ಹಿನ್ನಲೆಯಲ್ಲಿ ತಮ್ಮ ಮನೆ/ಕುಟುಂಬವನ್ನೇ ಸಂಸತ್ತು ಎಂದು ಅರ್ಥೈಸಿಕೊಂಡು ಇಲ್ಲಿನ ವಿವಿಧ ಸದಸ್ಯರ ವಿವಿಧ ರೂಪದ ಕಾರ್ಯರೂಪಗಳು ಯಾವುವು ಹಾಗೂ ಮಗು ಕುಟುಂಬದಲ್ಲಿ ನನ್ನ ಹೊಣೆಗಾರಿಕೆ ಏನು ಎಂಬ ಜ್ಞಾನವನ್ನು ಸಂಪಾದಿಸಿಕೊಳ್ಳುವುದು.

ಉದಾ : – ತಂದೆ ತಾಯಿ ಜವಾಬ್ದಾರಿಗಳು
– ಮಕ್ಕಳ ಕರ್ತವ್ಯಗಳು
– ಹಿರಿಯರಾದವರ ನಡೆ ನುಡಿಗಳು
– ಊರಿನ ಪಟೇಲ, ಅಧ್ಯಕ್ಷ, ಗೌಡ, ಇವರ ಕಾರ್ಯಗಳು

* ಸಂಸತ್ತಿನಲ್ಲಿ ವಿಶ್ವಾಸ ಕಳೆದುಕೊಂಡ ರಾಷ್ಟ್ರಪತಿ, ಪ್ರಧಾನಮಂತ್ರಿ ಅಥವಾ ಸರಕಾರ ಅವಿಶ್ವಾಸ ನಿರ್ಣಯ ಅನುಭವಿಸುವ ಸಂದರ್ಭದಿಂದ ಮಕ್ಕಳು, ತಮ್ಮ ಬದುಕಿನಲ್ಲಿ, ನಡೆ–ನುಡಿ ಆಚಾರ ವಿಚಾರಗಳಲ್ಲಿ, ಕಾರ್ಯನಿಷ್ಠೆಯಲ್ಲಿ, ಹೊಂದಾಣಿಕೆಯಲ್ಲಿನ ಅನಿವಾರ್ಯತೆಯನ್ನು ಕಂಡುಕೊಂಡು ಮೌಲ್ಯಯುಕ್ತ ಬದುಕು ಕಟ್ಟಿಕೊಳ್ಳುವರು.

ಉದಾ : – ಕಾಯಕವೇ ಕೈಲಾಸ

– ಆಳಾಗಿ ಉಣ್ಣು ಅರಸಾಗಿ ದುಡಿ

– ಸರ್ವರೊಳು ಒಂದಾಗು

– ಅತಿ ಆಸೆ ಗತಿಗೇಡು

– ನಡೆ ನುಡಿಗಳಲ್ಲಿ ಪರಿಪೂರ್ಣತೆಯಿರಲಿ

* ಏಕರೂಪವಾಗಿರುವ ಭಾರತ ನ್ಯಾಯಾಂಗ ವ್ಯವಸ್ಥೆಯ ಪರಿಕಲ್ಪನೆಯಿಂದ, ನ್ಯಾಯವೇ ದೇವರು, ಅನ್ಯಾಯಕ್ಕೆ ಇದು ಕಾಲವಲ್ಲ. ಪ್ರಜಾಪ್ರಭುತ್ವದಲ್ಲಿ ಜನಪರ ನ್ಯಾಯಕ್ಕೆ ಅತಿ ಮೌಲ್ಯಯುತವಾದುದು, ನ್ಯಾಯಕ್ಕಿಂತ ದೊಡ್ಡವರು ಇಲ್ಲಿ ಯಾರೂ ಇಲ್ಲ ಸತ್ಯಮೇವ ಜಯತೇ. ನ್ಯಾಯವೇ ಶ್ರೇಷ್ಠ ಎಂಬ ನ್ಯಾಯಪರ ಚಿಂತನೆಗಳನ್ನು ಕಟ್ಟಿಕೊಳ್ಳುವರು.

**5) ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕಿರುವ ಅವಕಾಶಗಳು**

* ಭಾರತ ಅಖಂಡತೆಯನ್ನು ಪರಿಭಾವಿಸುವುದು.

ಉದಾ : – ಪ್ರಬಂಧ ರಚನೆ

– ಚರ್ಚಾಕೂಟ

– ಭಾಷಣ ಸ್ಪರ್ಧೆ

* ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳ ಮಹತ್ವ

ಉದಾ : – ಅರ್ಹತೆ ಕುರಿತ ಚಾರ್ಟ್ ತಯಾರಿಕೆ

– ಉತ್ತಮ ನಾಯಕನ ಗುಣಗಳ ಪಟ್ಟಿ

– ಸಂವಿಧಾನದ ಆಶಯ ಕುರಿತ ಪ್ರಬಂಧ ಮಂಡನೆ

* ಉತ್ತಮ ಸಂಸತ್ತಿನ ಅಧಿಕಾರ ಮತ್ತು ಕಾರ್ಯಗಳು

ಉದಾ : – ಸಂಸತ್ತಿನ ಅಧಿಕಾರ ಕುರಿತು ಟಿಪ್ಪಣಿ ಸಂಗ್ರಹ

– ಮಿಂಚು ಪಟ್ಟಿ ಬಳಕೆ

* ರಾಷ್ಟ್ರಪತಿ ಮತ್ತು ಸಂವಿಧಾನದ ಆಶಯಗಳು

ಉದಾ : – ಸಂವಿಧಾನದ ಭಾಗವಾಗಿ ರಾಷ್ಟ್ರಪತಿ ಈ ವಿಷಯ ಕುರಿತ ಭಾಷಣ ಸ್ಪರ್ಧೆ

– ಊರಿನ ಮುಖ್ಯಸ್ಥನೊಬ್ಬನ ಮೌಲ್ಯಗಳ ಪಟ್ಟಿ

– ತನ್ನ ತಂದೆಯ ವ್ಯಕ್ತಿತ್ವ ಕುರಿತು ಪ್ರಬಂಧ ರಚನೆ

* ರಾಷ್ಟ್ರ ರಕ್ಷಣೆ

ಉದಾ : – ಸೇನೆಯ ಪಾತ್ರ ಕುರಿತು ಗುಂಪು ಚರ್ಚೆ

– ತಮ್ಮ ರಕ್ಷಣೆಗೆ ಮಕ್ಕಳು ಕೈಗೊಳ್ಳುವ ಕ್ರಮಗಳ ಸಂಗ್ರಹ

– ಹೋಮ್ ಗಾರ್ಡ್ಸ್ ಎನ್.ಸಿ.ಸಿ. ಕೆಡೆಟ್‌ಗಳ ಸೇವಾ ಮನೋಭಾವವನ್ನು ಅನುಸರಿಸುವುದು.

– ಸೇನೆಯ ಧೈರ್ಯೋತ್ಸಾಹವನ್ನು ಮೆಚ್ಚಿ ತಾನು ರಾಷ್ಟ್ರದ ಸೈನಿಕನಾಗಲು ತೀರ್ಮಾನಿಸುವುದು.

* ಕಾರ್ಯಹಂಚಿಕೆ / ಅಧಿಕಾರ ವಿಕೇಂದ್ರೀಕರಣ

– ಕುಟುಂಬ ಸಂದರ್ಭದಲ್ಲಿನ ಕಾರ್ಯಕ್ರಮಗ/ಕರ್ತವ್ಯಗಳ ಹಂಚಿಕೆ

– ಶಾಲೆಯಲ್ಲಿನ ಕಲಾವಿಭಾಗ, ವಿಜ್ಞಾನ, ಗಣಿತ, ಭಾಷೆ, ಕ್ರೀಡೆ, ಸಾಂಸ್ಕೃತಿಕ ವಿಭಾಗಗಳ ನಿರ್ವಹಣೆ

– ಗ್ರಾಮ ಪಂಚಾಯಿತಿ/ಪಟ್ಟಣ ಪಂಚಾಯಿತಿ/ನಗರಸಭೆ/ಮಹಾನಗರ/ಪಾಲಿಕೆಗಳ ಅಧಿಕಾರ ನಿರ್ವಹಣೆ ಕುರಿತ ಮಾಹಿತಿ ಸಂಗ್ರಹ.

* ಏಕರೂಪ ನ್ಯಾಯಂಗ ವ್ಯವಸ್ಥೆ

– ತಾಲ್ಲೂಕು ಮಟ್ಟದ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳಿಗೆ ಭೇಟಿ

– ತಾಲ್ಲೂಕು ಮಟ್ಟದ ಸೆಷನ್ ನ್ಯಾಯಾಲಯಗಳಿಗೆ ಭೇಟಿ

– ನ್ಯಾಯಾಧೀಶರ ಸಂದರ್ಶನ

– ಊರಿನ ವಕೀಲರೊಂದಿಗೆ ಚರ್ಚೆ

– ಸುದ್ದಿ ಮಾಧ್ಯಮಗಳಿಂದ ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯಗಳ ಕರ್ತವ್ಯ, ದೂರು, ದುಮ್ಮಾನಗಳು, ದಂಡನೆ, ವಾದ ವಿವಾದಗಳ ಸಂಗ್ರಹ.

**6) ಕಲಿಕೆಯನ್ನು ಅನುಕೂಲಿಸುವ ವಿಧಾನಗಳು**

* ಅಣಕು ಸಂಸತ್ತು ರಚನೆ

* **ಸಂದರ್ಶನ :** ವಿದ್ಯಾರ್ಥಿಗಳೇ ರಾಷ್ಟ್ರಪತಿ, ಪ್ರಧಾನಮಂತ್ರಿ, ವಿರೋಧಪಕ್ಷದ ನಾಯಕ ಇತ್ಯಾದಿಯವರನ್ನು ವಿದ್ಯಾರ್ಥಿಗಳೇ ನಿರ್ವಹಿಸುವುದು/ಸಂದರ್ಶಿಸುವುದು.

* ಲೋಕ್ ಅದಾಲತ್ ಭೇಟಿ ಮಾಡುವುದು.

* ಅಣಕು ನ್ಯಾಯಾಂಗ ವ್ಯವಸ್ಥೆಯನ್ನು ಆಯೋಜಿಸುವುದು.

* ತಹಶೀಲ್ದಾರ್, ಉಪವಿಭಾಗಾಧಿಕಾರ ಹಾಗೂ ಜಿಲ್ಲಾಧಿಕಾರಿಗಳ ನ್ಯಾಯಾಲಯ ಭೇಟಿ, ಕಲಾಪ ವೀಕ್ಷಣೆ.
* ಪಂಚಾಯಿತಿ ಕಟ್ಟೆಯ ಭೇಟಿ
* ಸುದ್ಧಿ ಮಾಧ್ಯಮಗಳಲ್ಲಿ ಪ್ರಕಟಗೊಳ್ಳುವ ಸಂಸತ್ತು, ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ವೀಕ್ಷಿಸುವುದು.
* ವಿದ್ಯಾರ್ಥಿ ಕಾನೂನು ಅರಿವು ಕಾರ್ಯಕ್ರಮ ಆಯೋಜನೆ.
* ಗ್ರಾಹಕರ ಹಿತರಕ್ಷಣಾ ವೇದಿಕೆಗೆ ಭೇಟಿ.

7) **ಸಂಪನ್ಮೂಲಗಳ ಕ್ರೋಢೀಕರಣ**

* 9ನೇ ತರಗತಿ ಸಮಾಜ–ವಿಜ್ಞಾನ ಪಠ್ಯ ಪುಸ್ತಕ
* ಭಾರತದ ಸಂವಿಧಾನ – ಡಾ॥ ರಾಜಶೇಖರಮೂರ್ತಿ
* ಭಾರತದ ಸಂವಿಧಾನ – ಎಚ್.ಟಿ. ರಾಮಕೃಷ್ಣ
* ಭಾರತದ ಸಂವಿಧಾನ – ಎಂ.ಎನ್. ನಂಜುಂಡಸ್ವಾಮಿ
* ಕಾನೂನು ಕುರಿತ ಪುಸ್ತಕಗಳು
* ಸುದ್ಧಿ ಮಾಧ್ಯಮಗಳ ಮೂಲಕ ಪ್ರಕಟಗೊಳ್ಳುವ ಪೂರಕ ಚಿತ್ರಗಳು, ವಿಷಯಾಂಶಗಳು
* ವಕೀಲರೊಬ್ಬರನ್ನು ಶಾಲೆಗೆ ಆಹ್ವಾನಿಸಿ ಮಾಹಿತಿ ಸಂಗ್ರಹ.

8) **ಬೋಧನೋಪಕರಣಗಳು**

* **ಅಧಿಕಾರದ ಕಾಲಾವಧಿಯೊಂದಿಗೆ ಭಾವಚಿತ್ರಗಳು :** ರಾಷ್ಟ್ರಪತಿ ಪ್ರಧಾನಮಂತ್ರಿ, ಉಪರಾಷ್ಟ್ರಪತಿ, ಸಭಾಧ್ಯಕ್ಷ, ವಿರೋಧಪಕ್ಷದ ನಾಯಕರು ಇತ್ಯಾದಿ.
* ಸಂಸತ್ತಿನ ಚಿತ್ರಪಟ.
* ಸಂಸತ್ತಿನ ಕಾರ್ಯಕಲಾಪಗಳು ನಡೆಯುತ್ತಿರುವ ಸಂದರ್ಭದ ಸಿ.ಡಿ. ಸಂಗ್ರಹ.
* ಸಂಸತ್ತಿನ ಚಾರ್ಟ್
* ನ್ಯಾಯಾಲಯಗಳ ಚಿತ್ರ – ಉಚ್ಚ ಮತ್ತು ಸರ್ವೋಚ್ಚ
* ರಾಷ್ಟ್ರಪತಿ ಭವನದ ಚಿತ್ರ
* ಗ್ರಾಮಪಂಚಾಯಿತಿ ನಡೆಯುತ್ತಿರುವ ಸಂದರ್ಭದ ಚಿತ್ರ.
* ವಿದ್ಯಾರ್ಥಿ ಯುವ ಸಂಸತ್ತಿಗೆ ಅಣಕು ಮತದಾನ ವ್ಯವಸ್ಥೆ.
* ರಸ್ತೆ ಸುರಕ್ಷತೆಯ ನಿಯಮಗಳ ಒಳಗೊಂಡ ಪ್ರಾತ್ಯಕ್ಷಿಕೆ.
* ಪ್ರಾತ್ಯಕ್ಷಿಕೆ, ಪ್ರಜಾಪ್ರತಿನಿಧಿಗಳ ಆಯ್ಕೆ ಕುರಿತು
  ಉದಾ : ರಾಷ್ಟ್ರಪತಿ, ಪ್ರಧಾನಮಂತ್ರಿ, ಸಭಾಧ್ಯಕ್ಷ ಇತ್ಯಾದಿ.

* ಭೂಪಟಗಳು; ಭಾರತದ ಭೂಪಟ.
* ರಾಷ್ಟ್ರದ ವೈವಿಧ್ಯತೆಯ ಪರಿಕಲ್ಪನೆ ಮೂಡಿಸಲು ವಿವಿಧ ರಾಜ್ಯಗಳ ವೇಷ ಭೂಷಣಗಳನ್ನು ಮಕ್ಕಳಿಗೆ ಹಾಕಿಸುವುದು.
* ಉತ್ತಮ ಸರಕಾರದ ಅಂಶಗಳನ್ನು ಮಕ್ಕಳಿಂದ ಚಾರ್ಟ್ ಮಾಡಿಸಿ ಪ್ರದರ್ಶನ.

**9) ಮನನ ಮಾಡಿಕೊಳ್ಳಲೇ ಬೇಕಾದ ಅಂಶಗಳು**

* ಕೇಂದ್ರ ಸರ್ಕಾರದ ರಚನೆ/ರಾಷ್ಟ್ರದ ಅಖಂಡತೆ
* ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆಯ ಪರಿಕಲ್ಪನೆ.
* ನಾಯಕತ್ವದ ಗುಣಗಳು
* ಮತದಾನದ ಪ್ರಕ್ರಿಯೆ
* ನ್ಯಾಯವೇ ಅಮೂಲ್ಯವಾದುದು
* ಸಂವಿಧಾನದ ಮಹತ್ವ
* ಸಂವಿಧಾನದ ಅನುಪಾಲನೆ
* ಒಳ್ಳೆಯ ಸರಕಾರದ ಕಾರ್ಯಕ್ಷಮತೆ
* ರಾಷ್ಟ್ರ ನಾಯಕರ ಗುಣಗಳು
* ಸತ್ಯವೇವ ಜಯತೇ
* ಸ್ವತಂತ್ರ ವಿಚಾರಶಕ್ತಿ
* ಹಕ್ಕು ಮತ್ತು ಕರ್ತವ್ಯಗಳು
* ಭಾಷಣಕಲೆ
* ನೇರವಾದ ನಡೆ ನುಡಿ
* ಜನಪರ ಕಾಳಜಿ
* ಪರಸ್ಪರ ಗೌರವ ಭಾವನೆ
* ನಿಷ್ಪಕ್ಷಪಾತ
* ಸಾರ್ವಜನಿಕ ಹಣದ ಬಗ್ಗೆ ಎಚ್ಚರಿಕೆ
* ಕ್ರಿಯಾಶೀಲ ತೆರಿಗೆ ವ್ಯವಸ್ಥೆ (ಪಾರದರ್ಶಕತ್ವ)
* ರಾಷ್ಟ್ರ ರಕ್ಷಣೆ

## 12. (ಸಿ) ಭೂಗೋಳಶಾಸ್ತ್ರ ವಿಭಾಗ

1) **ಪಾಠದ ಹೆಸರು : ಪ್ರಾಕೃತಿಕ ವಿಭಾಗಗಳು (ಕರ್ನಾಟಕ)**

2) **ಜ್ಞಾನ ರಚನೆಗೆ ಇರುವ ಅವಕಾಶಗಳು :**

* ಕರ್ನಾಟಕದ ಪ್ರಾಕೃತಿಕ ಲಕ್ಷಣಗಳನ್ನು ಅವಲೋಕಿಸುವುದು.
* ಕರ್ನಾಟಕದ ಪ್ರಾಕೃತಿಕ ವಿಭಾಗಗಳನ್ನು ಪಟ್ಟಿ ಮಾಡಿಕೊಳ್ಳುವುದು.
* ಕರ್ನಾಟದಲ್ಲಿನ ಎತ್ತರವಾದ ಶಿಖರಗಳು ಮತ್ತು ಬೆಟ್ಟಗಳನ್ನು ಗಮನಿಸುವುದು.
* ಕರ್ನಾಟಕದ ಘಟ್ಟ ಪ್ರದೇಶಗಳನ್ನು ತಿಳಿಯುವರು.

3) **ವಿಮರ್ಶಾತ್ಮಕ / ವಿಶ್ಲೇಷಣಾತ್ಮಕ ಕಲಿಕೆಗೆ ಇರುವ ಅವಕಾಶಗಳು**

* ಕರಾವಳಿ, ಪಶ್ಚಿಮದ ಕಡಿದಾದ ಇಳಿಜಾರು, ಪೂರ್ವದ ಇಳಿಜಾರು, ಉತ್ತರ ಮತ್ತು ಮೈದಾನ ಪ್ರದೇಶಗಳ ರಚನೆ ಕರ್ನಾಟಕದ ಭೂಭಾಗದಲ್ಲಿ ಹೇಗೆ ರಚಿಸಲ್ಪಟ್ಟಿವೆ ಎಂಬುದನ್ನು ವಿಶ್ಲೇಷಣಾತ್ಮಕವಾಗಿ ಅರಿಯುವರು.
* ಅಳಿವೆಗಳು ಕರ್ನಾಟಕದ ಭೂ ಭಾಗದಲ್ಲಿ ಹೇಗೆ ರಚಿಸಲ್ಪಟ್ಟಿವೆ ಎಂಬುದನ್ನು ರಾಜ್ಯದ ಕರಾವಳಿ ಮೈದಾನಗಳ ಹಿನ್ನಲೆಯಲ್ಲಿ ಸ್ಪಷ್ಟಪಡಿಸಿಕೊಳ್ಳುವರು.
* ಬಂದರುಗಳ ನಿರ್ಮಾಣ ಹಾಗೂ ಕರ್ನಾಟಕದ ಕೆಲವು ಮೀನುಗಾರಿಕಾ ಬಂದರುಗಳ ರಚನೆ, ಕರಾವಳಿ ತೀರದ ದ್ವೀಪಗಳೂ ಸೇರಿದಂತೆ ಇಲ್ಲಿನ ಬೆಳೆಗಳ ವಿಧಗಳನ್ನು ವಿಶ್ಲೇಷಣಾತ್ಮಕವಾಗಿ ಅರಿಯುವರು.
* ಕರ್ನಾಟಕದ ಮಲೆನಾಡು ಪ್ರದೇಶವನ್ನು ಅರ್ಥೈಸಿಕೊಂಡಂತೆ, ಇಲ್ಲಿನ ಶಿಖರ ಪ್ರದೇಶಗಳು, ಘಾಟಿ ಪ್ರದೇಶಗಳು, ನದಿ ಉಗಮ ಕೇಂದ್ರಗಳು ಸೇರಿದಂತೆ ಇಲ್ಲಿನ ಮಲೆನಾಡು (ಸಹ್ಯಾದ್ರಿ) ಶ್ರೇಣಿಯ ಮಹತ್ವವನ್ನು ಸ್ಮರಿಸಿಕೊಳ್ಳುವರು ಹಾಗೂ ಮಲೆನಾಡಿನ ಸಂರಕ್ಷಣೆಯ ಅಗತ್ಯತೆ ಅರಿಯುವರು.
* ಕಾಫಿಯ ನಾಡಾಗಿ ಚಿಕ್ಕಮಗಳೂರು ಹಾಗೂ ಕರ್ನಾಟಕದ ಕಾಶ್ಮೀರವಾಗಿ ಕೊಡಗಿನ ಮಹತ್ವವನ್ನು ಇಲ್ಲಿನ ಬೆಳೆಗಳ ಹಿನ್ನಲೆಯಲ್ಲಿ ತಿಳಿದುಕೊಳ್ಳುವರು.
* ಕರ್ನಾಟಕದಲ್ಲಿ ಮೈದಾನ ಪ್ರದೇಶಗಳು ಹೇಗೆ ಸೃಷ್ಟಿಯಾಗಿವೆ ಎಂಬುದಕ್ಕೆ ಪೂರಕವಾಗಿ ಕರ್ನಾಟಕ ಭೂ ಮೇಲ್ಮೈ ಪಶ್ಚಿಮದಿಂದ ಪೂರ್ವದ ಕಡೆ ಬಂದಂತೆಲ್ಲಾ ಇಳಿಜಾರಾಗಿರುತ್ತದೆ ಎಂದು ಗಮನಿಸಿಕೊಂಡು ಉತ್ತರ ಮತ್ತು ದಕ್ಷಿಣ ಮೈದಾನಗಳ ವ್ಯತ್ಯಾಸ ಮತ್ತು ಸಾಮ್ಯತೆಯನ್ನು ತಿಳಿಯುವರು.

* ಹಾಗೆಯೇ ಉತ್ತರ ಮೈದಾನದಲ್ಲಿ ಕಂಡುಬರುವ ಬೆಟ್ಟ ಪ್ರದೇಶಗಳಿಗಿಂತ ದಕ್ಷಿಣ ಭಾಗದ ಬೆಟ್ಟ ಪ್ರದೇಶಗಳು ಹೆಚ್ಚಾಗಿರಲು ಕಾರಣ ಮತ್ತು ಹಿನ್ನಲೆಯನ್ನು ವಿಶ್ಲೇಷಿಸಿ ಅರ್ಥೈಸಿಕೊಳ್ಳುವರು.

4) **ಜ್ಞಾನ ಪುನರ್ರಚನೆಗೆ ಇರುವ ಅವಕಾಶಗಳು**

* ಸಹ್ಯಾದ್ರಿ ಶ್ರೇಣಿಯು ಎತ್ತರವಾಗಿರುವುದರಿಂದ ಅತಿಯಾದ ಮಳೆಬರಲು ಸಾಧ್ಯವಾಗಿದೆ ಹಾಗೂ ಇದರಿಂದಲೇ ಮಲೆನಾಡು ಪ್ರದೇಶ ಸದಾ ನಿತ್ಯ ಹರಿದ್ವರ್ಣದ ಕಾಡುಗಳಿಂದ ಕಂಗೊಳಿಸಲು ಕಾರಣವಾಗಿದೆ ಎಂಬುದನ್ನು ಮನನ ಮಾಡಿಕೊಳ್ಳುವರು.

* ಪಶ್ಚಿಮ ಭಾಗವು ಕಡಲತೀರವಾಗಿರುವುದರಿಂದ ಇಲ್ಲಿನ ಕೃಷಿ ಪ್ರಧಾನ ಬೆಳೆಗಳು ಉತ್ತಮವಾದ ಇಳುವರಿ ಕೊಡುವುದರ ಜೊತೆಗೆ, ಮೀನುಗಾರಿಕಾ ಉದ್ಯೋಗವು ಲಾಭದಾಯಕವಾಗಿದ್ದು, ಈ ಎಲ್ಲಾ ಆರ್ಥಿಕ ಚಟುವಟಿಕೆಗಳಿಗೆ ಪೂರಕವೆಂಬಂತೆ ನವ ಮಂಗಳೂರು ಬಂದರು ಕರ್ನಾಟಕದ ವ್ಯಾಪಾರದ ಹೆಬ್ಬಾಗಿಲಾಗಿ ಪರಿವರ್ತಿತವಾಗಿದೆ. ಈ ಎಲ್ಲಾ ಅಂಶಗಳ ಆರ್ಥಿಕ ಸಂರಚನೆಯಲ್ಲಿ ನಿರ್ವಹಿಸುವ ಪಾತ್ರವನ್ನು ಸ್ಪಷ್ಟಪಡಿಸಿಕೊಳ್ಳುವರು.

* ಕರ್ನಾಟಕದ ಪಶ್ಚಿಮ ಘಟ್ಟಗಳು ಎತ್ತರವಾಗಿದ್ದು, ಕಡಿದಾದ ಕಣಿವೆಗಳನ್ನು ಹೊಂದಿರುವುದರಿಂದಲೇ 'ಘಾಟಿ' ಪ್ರದೇಶಗಳು ರಚನೆಯಾಗಲು ಸಾಧ್ಯ ಎಂಬ ಜ್ಞಾನವನ್ನು ಕಟ್ಟಿಕೊಳ್ಳುವರು.

* ಕಣಿವೆ ಪ್ರದೇಶಗಳಲ್ಲಿಯೇ ಜಲಪಾತಗಳು ಕಂಡುಬರುತ್ತವೆ ಹಾಗೂ ಅಳಿವೆಗಳು ಉಂಟಾಗುತ್ತವೆ ಎಂಬ ಪರಿಜ್ಞಾನವನ್ನು ತಮ್ಮದಾಗಿಸಿಕೊಳ್ಳುವರು.

* ಘಟ್ಟ ಪ್ರದೇಶಗಳಲ್ಲಿ ಅತಿಯಾಗಿ ಮಳೆಯಾಗುವುದರಿಂದ ಹಾಗೂ ಇಳಿಜಾರು ಮತ್ತು ಮರಗಳ ಪ್ರದೇಶವಾಗಿರುವುದರಿಂದ ಕಾಫಿ ಮತ್ತು ಕಿತ್ತಲೆ ಹಣ್ಣು, ಚಹಾ, ರಬ್ಬರ್ ಮತ್ತು ಸಾಂಬಾರು ಪದಾರ್ಥಗಳನ್ನು ಬೆಳೆಯಲು ಸಾಧ್ಯವಾಗಿದೆ ಎಂಬುದನ್ನು ಮನನ ಮಾಡಿಕೊಂಡು ಕರ್ನಾಟಕದ ಆರ್ಥಿಕ ಹಿನ್ನಲೆಯಲ್ಲಿ ಈ ಜಿಲ್ಲೆಗಳ ಪ್ರಾಧಾನ್ಯತೆ ತಿಳಿಯುವರು.

* ಉತ್ತರದ ಮೈದಾನದ ಮಣ್ಣು, ಇಲ್ಲಿ ಬೆಳೆಯುವ ಬೆಳೆಗಳು, ಬೀಳುವ ಮಳೆ, ಇಲ್ಲಿನ ಉಷ್ಣಾಂಶವನ್ನು ಇವುಗಳ ನಡುವೆ ಸಾಮ್ಯತೆಯನ್ನು ಅರ್ಥೈಸಿಕೊಳ್ಳುವರು. ಅಲ್ಲದೆ ಸಮತಟ್ಟಾದ ಈ ಮೈದಾನ ಪ್ರದೇಶದಲ್ಲಿ ಕಂಡುಬರುವ ಘಟ್ಟ ಭಾಗಗಳಾದ ನರಗುಂದ ಬೆಟ್ಟ, ಪರಸಗಡ ಗುಡ್ಡ, ಇಳಕಲ್ ಗುಡ್ಡ ಪ್ರದೇಶವನ್ನು ಪರಿಚಯ ಮಾಡಿಕೊಳ್ಳುವರು.

* ಕರ್ನಾಟಕದ ಉತ್ತರದ ಮೈದಾನ ಪ್ರದೇಶಗಳಲ್ಲಿಯೂ ಹೆಚ್ಚು ಏರಿಳಿತದ ಭೂ ಸ್ವರೂಪಗಳುಂಟಾಗಿದ್ದು ಛಾಯಭಗವತಿ ಹಾಗೂ ಸೊಗಲ ಜಲಪಾತಗಳು ಇಲ್ಲಿ ಕಂಡುಬರಲು ಕಾರಣಗಳೇನೆಂಬುದನ್ನು ತಿಳಿದುಕೊಳ್ಳುವರು.

* ಕರ್ನಾಟಕದ ದಕ್ಷಿಣದ ಮೈದಾನ ಭಾಗವು ಸಮುದ್ರ ಮಟ್ಟಕ್ಕಿಂತ 900-975 ಮೀಟರ್ ಎತ್ತರವುಳ್ಳದ್ದಾಗಿದ್ದು ಪೂರ್ವದ ಕಡೆಗೆ ಇಳಿಜಾರಾಗಿ ನದಿ ಪ್ರದೇಶಗಳನ್ನು ಹೊಂದಿದ ಭಾಗವಾಗಿದೆ. ಹಾಗೂ ಎತ್ತರವಾದ ಬೆಟ್ಟ ಗುಡ್ಡಗಳ ಸಾಲುಗಳನ್ನು ಹೊಂದಿದೆ. ಈ ಬೆಟ್ಟ ಪ್ರದೇಶಗಳೇ ಚಿತ್ರದುರ್ಗ, ನಾರಾಯಣದುರ್ಗ, ಸಾವನದುರ್ಗ, ಶಿವಗಂಗೆ, ಮಧುಗಿರಿ ಬೆಟ್ಟ, ನಂದಿಬೆಟ್ಟ, ಚೆನ್ನಕೇಶವ ಬೆಟ್ಟ, ಕವಲೆದುರ್ಗ, ಆದಿಚುಂಚನಗಿರಿ ಬೆಟ್ಟ, ಮಲೈ ಮಹದೇಶ್ವರ ಬೆಟ್ಟ, ಬಿಳಿಗಿರಿ ರಂಗಯ್ಯನ ಬೆಟ್ಟ, ಚಾಮುಂಡಿ ಬೆಟ್ಟಗಳೆಂದು ಗುರುತು ಮಾಡಿಕೊಳ್ಳುವರು. ಹಾಗೂ ತಮ್ಮ ಜಿಲ್ಲೆಗಳು ಕರ್ನಾಟಕದ ಯಾವ ಭಾಗದಲ್ಲಿವೆ ಎಂದು ತಿಳಿದುಕೊಳ್ಳುವರು.

5) **ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕೆ ಇರುವ ಅವಕಾಶಗಳು**

* ಕರ್ನಾಟಕದ ಪ್ರಾಕೃತಿಕ ಲಕ್ಷಣಗಳನ್ನು ಪಟ್ಟಿಮಾಡಿ ಅವುಗಳನ್ನು ಕರ್ನಾಟಕದ ನಕ್ಷೆಯಲ್ಲಿ ಗುರುತು ಮಾಡುವುದು.

* ಕರ್ನಾಟಕದ ಹೆಚ್ಚು ನದಿಗಳು ಪಶ್ಚಿಮದಿಂದ ದಕ್ಷಿಣಕ್ಕೆ ಏಕೆ ಹರಿಯುತ್ತವೆ ಎಂಬುದನ್ನು ತರಗತಿಯಲ್ಲಿ ಗುಂಪುಗಳನ್ನು ಮಾಡಿ ಚರ್ಚಿಸಿ ತೀರ್ಮಾನಕ್ಕೆ ಬರುವುದು.

* ಕರ್ನಾಟಕದ ಪ್ರಮುಖ ಕರಾವಳಿ ಬಂದರುಗಳನ್ನು ಗುರುತಿಸುವಿಕೆ ಹಾಗೂ ಈ ಬಂದರುಗಳು ಉಂಟಾಗಲು ಪ್ರಮುಖ ನೈಸರ್ಗಿಕ ಕಾರಣಗಳನ್ನು ಅನುಕೂಲಕಾರರ ಮಾರ್ಗದರ್ಶನದಲ್ಲಿ ತಿಳಿದುಕೊಳ್ಳುವರು.

* ಕರ್ನಾಟಕಕ್ಕೆ ಪಶ್ಚಿಮ ಘಟ್ಟಗಳಿಂದಾಗುವ ಅನುಕೂಲಗಳನ್ನು ಪಟ್ಟಿ ಮಾಡಿ ಪ್ರತಿಯೊಂದು ಅಂಶವನ್ನು ಮಿಂಚು ಪಟ್ಟಿಗಳನ್ನು ಬಳಸಿ ಮನನ ಮಾಡಿಕೊಳ್ಳುವಂತೆ ತಿಳಿಸುವುದು.

* ಪಶ್ಚಿಮ ಘಟ್ಟಗಳ ಘಾಟಿ ಪ್ರದೇಶಗಳು, ಅವುಗಳ ನಡುವಿನ ದುರ್ಗಮ, ಕಿರಿದಾದ, ಅಂಕುಡೊಂಕಿನ ದಾರಿಗಳ ಚಿತ್ರರಚನೆ ಮತ್ತು ಈ ಭಾಗದ ಸಂಚಾರದ ತೊಂದರೆಗಳೇನೆಂಬುದನ್ನು ಚರ್ಚಿಸಿ, ಸ್ಮರಿಸಿಕೊಂಡು ಅನುಭವಗಳ ಮೂಲಕ ಉತ್ತರಗಳನ್ನು ಕಂಡುಕೊಳ್ಳುವರು.

* ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಕಾಡುಗಳು ದಟ್ಟವಾಗಿದ್ದು ಸದಾ ಹಸಿರಿನಿಂದ ಕೂಡಿರುತ್ತವೆ. ಇಂತಹ ದಟ್ಟ ಅರಣ್ಯ ಪ್ರದೇಶವು ಎತ್ತರವಾದ ಘಟ್ಟ ಪ್ರದೇಶಗಳಲ್ಲಿ

ಕಂಡುಬರುತ್ತವೆ. ಆದ್ದರಿಂದಲೇ ಇಲ್ಲಿ ನದಿಗಳು ಜನಿಸುತ್ತವೆ. ಜಲಪಾತಗಳು ಕಂಗೊಳಿಸುತ್ತವೆ ಎಂಬ ತಾರ್ಕಿಕ ವಿಚಾರದಿಂದ ಜ್ಞಾನ ಕಟ್ಟಿಕೊಳ್ಳುವರು.

* ಇಂತಹ ಜಲಪಾತಗಳೆಂದರೆ ಪಶ್ಚಿಮಘಟ್ಟದ ಜೋಗ್ ಜಲಪಾತ, ಮಾಗೋಡು, ಗೋಕಾಕ್, ಶಿವನಸಮುದ್ರ, ಅಬ್ಬಿ ಜಲಪಾತಗಳ ಬಗ್ಗೆ ಚಿತ್ರಸಂಗ್ರಹ, ಇವುಗಳ ಸಾಂಸ್ಕೃತಿಕ ಹಿರಿಮೆ, ಪ್ರಕೃತಿ ರಮ್ಯತೆಯನ್ನು ಕುರಿತು ಪ್ರಬಂಧ ರಚಿಸಲು ತಿಳಿಸುವುದು.

* ಕೊಡಗು, ಚಿಕ್ಕಮಗಳೂರು ಜಿಲ್ಲೆಗಳನ್ನು ಕಾಫಿಯ ನಾಡೆಂದು ಕರೆಯಲು ಕಾರಣಗಳೇನೆಂದು ಚರ್ಚೆ ಮಾಡುವುದು.

* ಉತ್ತರದ ಮೈದಾನಗಳು ಮತ್ತು ದಕ್ಷಿಣದ ಮೈದಾನಗಳಿಗಿರುವ ವ್ಯತ್ಯಾಸವನ್ನು ಸಂಗ್ರಹಿಸುವುದು.

* ಕರ್ನಾಟಕದ ನಕ್ಷೆಯಲ್ಲಿ ಜೋಳ, ಸಜ್ಜೆ, ಶೇಂಗಾ, ರಾಗಿ, ಹತ್ತಿ ಬೆಳೆಯುವ ಪ್ರದೇಶಗಳನ್ನು ಗುರುತಿಸುವುದು.

* ಕರ್ನಾಟಕದ ಪ್ರಮುಖ ಬೆಟ್ಟ ಪ್ರದೇಶಗಳು, ಇವುಗಳ ನಡುವಿನ ವ್ಯತ್ಯಾಸವನ್ನು ಗುಂಪಿನಲ್ಲಿ ಕಲಿಕಾ ನಿರ್ಧಾಣದ ಮೂಲಕ ಚರ್ಚಿಸುವುದು.

6) **ಕಲಿಕೆ ಅನುಕೂಲಿಸುವ ವಿಧಾನ**

– ಚರ್ಚಾ ವಿಧಾನ

ತರಗತಿಯಲ್ಲಿ ಅನುಕೂಲಕಾರರು ನಾಲ್ಕು ಗುಂಪುಗಳನ್ನು ಮಾಡಿ ಒಂದೊಂದು ಗುಂಪಿಗೆ ಒಂದೊಂದು ಜ್ಞಾನರಚನಾ ಅಂಶವನ್ನು ನಿಗಧಿಪಡಿಸಿ ಗುಂಪಿನಲ್ಲಿ ಚರ್ಚೆ ಮಾಡುವುದರ ಮೂಲಕ ಜ್ಞಾನ ಕಟ್ಟಿಕೊಂಡು ಪ್ರತಿ ಗುಂಪಿನಿಂದ ಒಂದಿಬ್ಬರು ಕಲಿತ ವಿಷಯದ ಅನುಭವವನ್ನು ತರಗತಿಗೆ ಪ್ರಸ್ತುತಪಡಿಸುವರು. ನಂತರ ಪೂರ್ಣತರಗತಿ ಕಲಿಕೆಯಲ್ಲಿ ಪರಿಪೂರ್ಣತೆ ಸಾಧಿಸುವುದು.

7) **ಕೈಗೊಳ್ಳಬಹುದಾದ ಚಟುವಟಿಕೆಗಳು**

1) ಕರ್ನಾಟಕದ ನಕ್ಷೆ ಬರೆಸುವುದು

2) ಪ್ರಮುಖ ಘಟ್ಟ ಪ್ರದೇಶಗಳನ್ನು ಗುರುತಿಸಲು ತಿಳಿಸುವುದು.

3) ನದಿ ಪ್ರದೇಶಗಳ ಗುರುತು

4) ಧಾನ್ಯಗಳ ಸಂಗ್ರಹ

5) ಕಪ್ಪು ಮತ್ತು ಕೆಂಪು ಮಣ್ಣು ಸಂಗ್ರಹ

6) ಪಶ್ಚಿಮ ಘಟ್ಟಗಳಿಗೆ ಪ್ರವಾಸ ಕೈಗೊಳ್ಳುವುದು.

7) ನಂದಿ ಬೆಟ್ಟ ಬೇಸಿಗೆಯಲ್ಲಿ ತಂಪಾಗಿರಲು ಕಾರಣ ಬರೆಯುವುದು.

8) ಉತ್ತರ ಮತ್ತು ದಕ್ಷಿಣ ಮೈದಾನ ಕುರಿತ ಗುಂಪು ಚರ್ಚೆ.

9) ಬೇಸಿಗೆಯಲ್ಲಿ ಬಿಸಿಲ ನಾಡಿನ ಅನುಭವ ಕುರಿತು ಪ್ರಬಂಧ ರಚನೆ.

10) ಮಳೆಗಾಲದ ಒಂದು ದಿನದ ಅನುಭವ ಕುರಿತು ಗೆಳೆಯರೊಂದಿಗೆ ಚರ್ಚಿಸಿ.

**8) ಸಂಪನ್ಮೂಲ ಕ್ರೂಢೀಕರಣ / ಕಲಿಕಾ ಸಾಮಗ್ರಿಗಳು**

1) ಕರ್ನಾಟಕದ ಭೂಗೋಳಶಾಸ್ತ್ರ

2) ಭಾರತದ ಭೂಗೋಳ ನಕ್ಷೆ

3) ಮಲೆನಾಡು ಪ್ರದೇಶದ ಚಿತ್ರ

4) ಬೆಟ್ಟಗಳ ಚಿತ್ರ. ಉದಾ : (ಮಧುಗಿರಿ ಏಕಶಿಲಾ ಬೆಟ್ಟ)

5) ನದಿ ಹರಿಯುತ್ತಿರುವ ಚಿತ್ರ.

6) ಭೂಗೋಳ ಸಂಗಾತಿ.

7) ಬಾಬಾ ಬುಡನ್‌ಗಿರಿ ಬಿಳಿಗಿರಿ ರಂಗಯ್ಯನ ಬೆಟ್ಟ ಚಿತ್ರ.

**9) ಮನನ ಮಾಡಿಕೊಳ್ಳಲೇ ಬೇಕಾದ ಅಂಶಗಳು**

1) ನಾಡಿನ ಬಗ್ಗೆ ಹೆಮ್ಮೆ

2) ನೈಸರ್ಗಿಕ ಸಂಪನ್ಮೂಲಗಳು ಕಡಿಮೆಯಾಗುವುದರ ಬಗ್ಗೆ ಎಚ್ಚರ

3) ಪರಿಸರ ಜಾಗೃತಿ

4) ಕಾಡು ಪ್ರಾಣಿಗಳ/ಪಕ್ಷಿಗಳ ರಕ್ಷಣೆ

5) ಕರ್ನಾಟಕದ ಬಹುತೇಕ ನದಿಗಳು ಪೂರ್ವಕ್ಕೆ ಹರಿಯಲು ಕಾರಣ.

6) ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು.

7) ನೈಸರ್ಗಿಕ ಬಂದರುಗಳು ಉಂಟಾಗಲು ಕಾರಣ ತಿಳಿಯುವುದು.

8) ಬೆಟ್ಟಗಳುಂಟಾಗಲು ಜ್ವಾಲಾಮುಖಿಗಳೇ ಕಾರಣವೆಂದು ಅರ್ಥೈಸಿಕೊಳ್ಳುವುದು.

## 12. (ಡಿ) ಸಮಾಜ ಶಾಸ್ತ್ರ ವಿಭಾಗ

1) **ಪಾಠದ ಹೆಸರು : ಸಾಮಾಜೀಕರಣ ಹಾಗೂ ಕುಟುಂಬದ ಸಂಬಂಧಗಳು**

2) **ಜ್ಞಾನ ರಚನೆಗೆ ಇರುವ ಅವಕಾಶಗಳು :**

* ಸಮಾಜ ಮತ್ತು ಕುಟುಂಬ ಪದಗಳ ಅರ್ಥ ವ್ಯತ್ಯಾಸ
* ಮಗುವಿನ ವ್ಯಕ್ತಿತ್ವ ರೂಪಿಸುವಲ್ಲಿ ಸಾಮಾಜೀಕರಣ
* ಸಾಮಾಜಿಕರಣದ ಮಹತ್ವ ಕಾರ್ಯಗಳು
* ಸಾಮಾಜಿಕರಣದಲ್ಲಿ ನಿಯೋಗಗಳ ಪಾತ್ರ. (ಕುಟುಂಬ, ಸಮವಯಸ್ಕರು, ಧರ್ಮ, ಶಾಲೆ, ಸಮೂಹ ಮಾಧ್ಯಮ, ನೆರೆಹೊರೆ ಕುರಿತಂತೆ).
* ಕುಟುಂಬದ ವಿವಿಧ ರೂಪಗಳು
* ಸಾಮಾಜೀಕರಣದಲ್ಲಿ ಲಿಂಗತಾರತಮ್ಯ.
* ಆಧುನಿಕ ಸಂಕೀರ್ಣ ಸಮಾಜದಲ್ಲಿನ ಸ್ತ್ರೀಯರು.

3) **ವಿಮರ್ಶಾಯುಕ್ತ ಶಿಕ್ಷಣ ಕ್ರಮ ಅಳವಡಿಕೆಗೆ ಇರುವ ಅವಕಾಶಗಳು**

* ಮಗುವಿನ ಬೆಳವಣಿಗೆಯಲ್ಲಿ ಕುಟುಂಬದ ಪಾತ್ರ ನಿರ್ವಹಣೆಯ ಮಹತ್ವವನ್ನು ಕುರಿತು ಚರ್ಚಿಸುವರು.
* ಮನುಷ್ಯನು ಹೇಗೆ ಪ್ರಾಣಿಗಳಿಗಿಂತ ಭಿನ್ನ ಎಂಬುದನ್ನು ಸಾಮಾಜೀಕರಣದ ಹಿನ್ನಲೆಯೊಂದಿಗೆ ವಿಶ್ಲೇಷಿಸುತ್ತಾ, ಸಾಮಾಜೀಕರಣದ ಪ್ರಾಮುಖ್ಯತೆಯನ್ನು ಅರಿಯುವರು.
* ಮಾನವನಿಗೆ ಹುಟ್ಟಿನಿಂದಲೇ ಬರುವ ಕೆಲವು ಸಹಜ ಪ್ರವೃತ್ತಿಗಳು ಹಾಗೂ ಸಂಸ್ಕೃತಿಗಳ ಮೇಲೆ ಆತನ ಕಲಿಕಾ ಸಾಮರ್ಥ್ಯಗಳು ಹೇಗೆ ಹೊಂದಿಕೊಳ್ಳುತ್ತವೆ. ಇದರಿಂದ ವ್ಯಕ್ತಿಯ ವರ್ತನೆಯಲ್ಲಾಗುವ ಬದಲಾವಣೆಗಳಿಗೆ ಸಾಮಾಜಿಕರಣದ ಪಾತ್ರವನ್ನು ಅರ್ಥೈಸಿಕೊಳ್ಳುವರು.
* ಮಗು ಬೆಳೆಯುತ್ತಾ, ತನ್ನ ಮನಸ್ಸು, ಚಲನೆ, ಆಸಕ್ತಿ ಹಾಗೂ ಸಂಬಂಧಗಳಲ್ಲಿ ಅಭಿವೃದ್ಧಿಪಡಿಸಿಕೊಳ್ಳಲು ಸಾಮಾಜೀಕರಣ ಯಾವ ರೀತಿಯಲ್ಲಿ ಪ್ರಚೋದನೆಯನ್ನು ನೀಡುತ್ತದೆ ಎಂಬುದನ್ನು ಚರ್ಚಿಸುವರು.
* ಸುಭದ್ರ ಸಮಾಜದ ರಚನೆಯಲ್ಲಿ, ಸಾಮಾಜೀಕರಣವು ಮಗುವಿನ ಮೇಲೆ ಬೀರುವ ಪ್ರಭಾವದ ಹಿನ್ನಲೆಯಲ್ಲಿ ಮಗು ಪಡೆದುಕೊಳ್ಳುವ ಶಿಸ್ತು, ಕೌಶಲ್ಯ, ಕಲಿಕೆ, ಆಸೆ

ಆಕಾಂಕ್ಷೆಗಳು, ತನ್ನ ಗುರಿ ಹಾಗೂ ಸಾಂಸ್ಕೃತಿಕ ಮುಂದುವರಿಕೆಯು ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾಗುವ ಸಂದರ್ಭವನ್ನು ಅವಲೋಕಿಸುವರು.

* ಮಗುವಿನ ವಯಸ್ಸು, ಅನುಭವ ಹಾಗೂ ಸಮಾಜದ ಹಿರಿಯರ ಪ್ರಭಾವ ಅದರ ಸಾಮಾಜೀಕರಣದ ಮೇಲೆ ಬೀರುವ ಅಂಶಗಳು ಹಾಗೂ ತಂದೆ, ತಾಯಿ, ಅಧಿಕಾರಿಗಳು, ತನ್ನ ಸಹಪಾಟಿಗಳು ಬೀರುವ ಪ್ರಭಾವವನ್ನು ತುಲನಾತ್ಮಕವಾಗಿ ವಿಮರ್ಶಿಸುವುದು.

* ಮಗುವು ಸಮಾಜದಲ್ಲಿ ಮಲ್ಲಿಗೆ ಮೊಗ್ಗಿನಂತೆ ಅರಳಲು ಕುಟುಂಬ ಅಲ್ಲಿನ ರಕ್ತ ಸಂಬಂಧಗಳು ಬೀರುವ ಪ್ರಭಾವವನ್ನು ಆಧರಿಸಿ ಸಾಮಾಜೀಕರಣದಲ್ಲಿ ಕುಟುಂಬದ ಪಾತ್ರವೇನು? ಇದರಿಂದ ಮಗುವಿನ ವ್ಯಕ್ತಿತ್ವದಲ್ಲಾಗುವ ಬದಲಾವಣೆಗಳು ಏನು ಎಂಬುದನ್ನು ಗ್ರಹಿಸಿಕೊಳ್ಳುವರು.

* ಮಗು ತನ್ನ ಸಾಮಾಜೀಕರಣದಲ್ಲಿ ಸಹಕಾರ, ಹೊಂದಾಣಿಕೆ ಹಾಗೂ ನಾಯಕತ್ವದ ಗುಣಗಳನ್ನು ತನ್ನ ಸಹಪಾಟಿಗಳಿಂದ ಹೇಗೆ ತಿಳಿಯುತ್ತದೆ. ಅಂತಹ ಸಂದರ್ಭಗಳು ಕೂಡ ಯಾವ ರೀತಿಯ ಪರಿಣಾಮವನ್ನು ಉಂಟು ಮಾಡುತ್ತವೆ ಎಂಬುದರ ಹೋಲಿಕೆಯನ್ನು ತಿಳಿಯುವರು.

* ಮಗುವಿನ ಸಾಮಾಜಿಕ ಜೀವನಕ್ಕೆ ಧರ್ಮ ಹೇಗೆ ಆದರ್ಶದ ತಳಹದಿಯಾಗುತ್ತದೆ ಎಂಬುದನ್ನು ವಿಮರ್ಶಿಸಿ ತೀರ್ಮಾನ ಕೈಗೊಳ್ಳುವರು.

* ಮಗುವಿನ ವರ್ತನೆ, ಜ್ಞಾನ, ಶೀಲ ಗುಣಗಳು ವೃದ್ಧಿಯಾಗುವಲ್ಲಿ ಶಾಲೆ ಹಾಗೂ ಇಲ್ಲಿನ ಗುರುವೃಂದದ ಪಾತ್ರ ಮತ್ತು ವಿವಿಧ ವಿಷಯಗಳ ಶಿಕ್ಷಣ ಮತ್ತು ಗ್ರಹಿಕೆಯಿಂದ ಮಗು ಕಲಿತಿರುವುದೇನೆಂಬುದನ್ನು ಶಾಲೆ ಎಂಬ ಸಾಮಾಜೀಕರಣದ ನಿಯೋಗದ ಮೂಲಕ ಪರಾಮರ್ಶಿಸುವರು.

* ಮಗು ತನ್ನ ಸಾಂಸ್ಕೃತಿಕ ಮೌಲ್ಯ ಹಾಗೂ ಸಂಸ್ಕಾರಯುಕ್ತ ಸ್ವಭಾವವನ್ನು ಸಮೂಹ ಮಾಧ್ಯಮಗಳಿಂದ ಗ್ರಹಿಸಿಕೊಂಡು ತನ್ನ ವ್ಯಕ್ತಿತ್ವವನ್ನು ಹೇಗೆ ರೂಪಿಸಿಕೊಳ್ಳುತ್ತದೆ ಎಂಬುದನ್ನು ವಿವೇಚಿಸುವರು.

* ಮಗುವಿನ ಸಾಮಾಜೀಕರಣದಲ್ಲಿ ನೆರೆಹೊರೆಯವರು ಬೀರುವ ಪ್ರಭಾವವನ್ನು ಗ್ರಾಮೀಣ ಭಾಗದ ಮತ್ತು ನಗರೀಕರಣಗಳ ಸಂದರ್ಭದಲ್ಲಿ ಹೋಲಿಸಿ ಅರ್ಥೈಸಿಕೊಳ್ಳುವರು.

* ಲಿಂಗ ತಾರತಮ್ಯದ ವಿಚಾರವಾಗಿ (ಹೆಣ್ಣು–ಗಂಡು) ಸಮಾಜ, ಕುಟುಂಬಗಳು, ಬೀರುವ ಪ್ರಭಾವ, ಪರಿಣಾಮವನ್ನು ಸಾಮಾಜೀಕರಣ ಹಿನ್ನಲೆಯಲ್ಲಿ ಚರ್ಚಿಸುವರು.

* ಇತ್ತೀಚೆಗೆ ಮಹಿಳೆಯರು ಪುರಷರಂತೆ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮನ್ನು ಇನ್ನಿಲ್ಲದಂತೆ ತೊಡಗಿಸಿಕೊಂಡಿರುವುದಕ್ಕೆ ಇಂದಿನ ಸಾಮಾಜೀಕರಣದ ವ್ಯವಸ್ಥೆಯನ್ನು ಕುರಿತು, ಶ್ಲಾಘಿಸುವರು.

**4) ಜ್ಞಾನ ಪುನರ್ರಚನೆಗೆ ಇರುವ ಅವಕಾಶಗಳು**

* ಮಗು ಸಾಮಾಜೀಕರಣದಿಂದಾಗಿ ತಾನು ಪ್ರಾಣಿಗಳಿಗಿಂತ ಭಿನ್ನ ಎಂಬ ಜ್ಞಾನವನ್ನು ತಿಳಿದುಕೊಳ್ಳುವುದು.

ಉದಾ : ಮಾತನಾಡುವುದು, ಪ್ರಶ್ನಿಸುವುದು, ನಗು, ಅಳು ಇತ್ಯಾದಿ.

* ಸಾಮಾಜೀಕರಣದಿಂದ ಮನುಷ್ಯನು ಹೊಂದಿಕೊಳ್ಳುವ ಸಂಸ್ಕೃತಿ ಆಚರಣೆಗಳನ್ನು ಅನುಸರಿಸುವ, ನೈತಿಕ ನಿಯಮಗಳನ್ನು ಅಳವಡಿಸಿಕೊಳ್ಳುವ ವಿಶಿಷ್ಟವಾದ ಮನಸ್ಥಿತಿಯನ್ನು ಪಡೆಯುತ್ತಾನೆ.

ಉದಾ :
- ಕುಟುಂಬದಲ್ಲಿ ಒಟ್ಟಿಗೆ ವಾಸಿಸುವುದು.
- ಹಬ್ಬ ಹರಿದಿನಗಳನ್ನು ಆಚರಿಸುವುದು.
- ಸುಳ್ಳು ಹೇಳದಿರುವುದು
- ಕಾನೂನನ್ನು ಪಾಲಿಸುವುದು
- ಹಿರಿಯರನ್ನು, ಗುರುಗಳನ್ನು, ತಂದೆ ತಾಯಿಗಳನ್ನು ಗೌರವಿಸುವುದು.

* ಮಗು ಸಾಮಾಜೀಕರಣದಿಂದ ಶಿಸ್ತು, ಸಮೂಹ ಜೀವನ ಕೌಶಲ್ಯಗಳ ವೃದ್ಧಿ, ಬಯಕೆ ಮತ್ತು ತನ್ನ ಜೀವನದ ಗುರಿಗಳನ್ನು ರೂಪಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದುತ್ತವೆ.

ಉದಾ :
- ಗುಂಪುಗಳಲ್ಲಿ ಆಟವಾಡುವುದು
- ಮಾತಗಾರಿಕೆ, ವಿನಯ, ಸ್ವಚ್ಛತೆ
- ಹೆಸರು ಗಳಿಸುವುದು, ಬಹುಮಾನ, ಹೊಗಳಿಕೆ
- ಅಧಿಕಾರಿ, ಸುಧಾರಕ, ತಾಯ್ತನ
- ಸಮಯಪಾಲನೆ, ಸರಳತೆ, ಮಿತವ್ಯಯ

* ರಕ್ತ ಸಂಬಂಧಗಳ ಬಗ್ಗೆ ಒಲವು, ವ್ಯವಹಾರಜ್ಞಾನ, ನೈತಿಕತೆ ಮತ್ತು ಭಾವನಾತ್ಮಕ ಬೆಳವಣಿಗೆ, ಪ್ರೀತಿ, ವಾತ್ಸಲ್ಯ, ವಿಶ್ವಾಸ, ಸಹನೆ, ಸಹೃದಯತೆ, ಸಹಕಾರ ಮತ್ತು ಜೀವನ ಮೌಲ್ಯಗಳ ಜ್ಞಾನವನ್ನು ಸಾಮಾಜೀಕರಣದ ಕುಟುಂಬ ನಿಯೋಗದಿಂದ ಹಿನ್ನಲೆಯಿಂದ ತಿಳಿಯುವರು.

ಉದಾ : – ತಂದೆ, ತಾಯಿ, ಮಗುವಿನ ಸಂಬಂಧ

– ಹಣ ನೀಡಿ ಅಗತ್ಯ ವಸ್ತುಗಳನ್ನು ತರುವುದು

– ಕುಟುಂಬದ, ಸಮಾಜದ ಹಿರಿಯರಿಗೆ ಗೌರವ

– ಕಷ್ಟದಲ್ಲಿರುವವರಿಗೆ ಸಹಾಯ ಹಸ್ತ ಇತ್ಯಾದಿ

– ತಪ್ಪಿಗೆ ಶಿಕ್ಷೆ ನಿಡುವುದು/ಪಡೆಯುವುದು.

* ಆದರ್ಶ ವ್ಯಕ್ತಿತ್ವ, ಧಾರ್ಮಿಕ ಸ್ಥಳಗಳ ಬಗ್ಗೆ ಭಕ್ತಿ, ಸಮಾಜಸೇವೆ ಆಸಕ್ತಿ, ದಾನ, ಧರ್ಮ, ಮುಂತಾದ ಮಾನವೀಯ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವರು.

ಉದಾ : – ತಾಯಿಯೇ ದೇವರು

– ದೇವಾಲಯಗಳಿಗೆ ಭೇಟಿ

– ದಾನ ಗುಣ, ಸರ್ವಧರ್ಮ ಸಮನ್ವಯತೆ

– ದಾನ, ದತ್ತಿ ನೀಡುವುದು.

* ಶಾಲೆ ಎಂಬ ಸಾಮಾಜೀಕರಣದ ನಿಯೋಗವು ಮಗುವಿನಲ್ಲಿ ಸನ್ನಡತೆ, ಸದ್ಭಾವನೆ, ಸಮಾನತೆ, ಪ್ರೀತಿ ವಿಶ್ವಾಸ, ಸಹೃದಯತೆಯ ಜೊತೆಗೆ ಲೈಂಗಿಕತೆ, ದೈಹಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣಗಳ ಅರಿವಿನ ಜ್ಞಾನದಿಂದಾಗಿ ಜೀವನ ಕೌಶಲ್ಯಗಳನ್ನು ತಮ್ಮದಾಗಿಸಿ ಕೊಳ್ಳುವರು.

ಉದಾ : – ಗುರು ಹಿರಿಯರನ್ನು ಗೌರವಿಸುವುದು

– ಶಾಲಾ ನಿಯಮಗಳನ್ನು ಪಾಲಿಸುವುದು

– ಸಹಪಾಟಿರೊಂದಿಗೆ ಸ್ನೇಹಭಾವ

– ಹೆಣ್ಣು ಗಂಡು ಒಂದೇ ಎಂದು ಭಾವಿಸುವುದು

– ಪರಸ್ಪರ ಅಭಿಪ್ರಾಯ ಗೌರವಿಸುವುದು

– ತೀರ್ಮಾನ, ಒಪ್ಪಿತ ಮಾತುಗಳನ್ನು ಆಡುವುದು

* ಸಮೂಹ ಮಾಧ್ಯಮಗಳ ಪ್ರಭಾವದಿಂದಾಗಿ ಮಗುವಿನಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ, ಸಾಂಸ್ಕೃತಿಕ ಹಿರಿಮೆಯ ಬಗ್ಗೆ ಹೆಮ್ಮೆ ಅನ್ವೇಷಣಾ ಭಾವನೆ, ಮನಸ್ಸಿನಲ್ಲಿ ಉಲ್ಲಾಸ ಹಾಗೂ ಕ್ರಿಯಾಶೀಲತೆಯನ್ನು ಬೆಳಸಿಕೊಳ್ಳುವರು.

* ನೆರೆಹೊರೆಯ ಮೂಲದಿಂದ ಮಗುವಿನ ಮೇಲಾಗುವ ಸಾಮಾಜೀಕರಣದಿಂದಾಗಿ, ಮಗುವಿನಲ್ಲಿ ಹಂಚಿಕೊಂಡು ಬಾಳುವುದು ಒಳ್ಳೆಯ ಅಭಿರುಚಿ, ಹಬ್ಬ ಹರಿದಿನಗಳು,

ವಿವಾಹ ಮತ್ತು ಧಾರ್ಮಿಕ ಸಮಾರಂಭಗಳಲ್ಲಿ ಪರಸ್ಪರ ಸ್ಪಂದಿಸುವುದು ಮುಂತಾದ ಸಮಾಜಮುಖಿ ಸದ್ಭಾವನೆಗಳು ರೂಪಗೊಳ್ಳುವುದು.

ಉದಾ : – ಪೂಜಾ ವಿಧಾನಗಳಲ್ಲಿ ಭಾಗಿಯಾಗುವುದು

– ನೀರಿನ ಸಮಸ್ಯೆಗೆ ಸಹಾಯಹಸ್ತ ನೀಡುವುದು

– ಒಟ್ಟಿಗೆ ಪ್ರವಾಸ ಕೈಗೊಳ್ಳುವುದು

– ತಾವು ಬೆಳೆದ ಹಣ್ಣು ಹಂಪಲುಗಳನ್ನು ಹಂಚುವುದು.

* ಲಿಂಗ ತಾರತಮ್ಯವನ್ನು ತಿರಸ್ಕರಿಸುವ ಗುಣವನ್ನು ಕಲಿತು ಹಾಗೆ ನಡೆದುಕೊಳ್ಳುವರು.

* ಶ್ರಮ ವಿಭಜನೆಯ ಮಹತ್ವವನ್ನು ಅರಿತು ಮಹಿಳೆಯರ ಇಂದಿನ ಕಾರ್ಯ ಕ್ಷಮತೆಯನ್ನು ಧೈರ್ಯವನ್ನು ಮೆಚ್ಚಿಕೊಳ್ಳುವರು.

ಉದಾ : – ಸ್ತ್ರೀಯರು ವಕೀಲಿ ವೃತ್ತಿ, ವೈದ್ಯಕೀಯ, ಬಾಹ್ಯಾಕಾಶ, ಸಾಗರದಾಳಗಳಲ್ಲಿ ಕೆಲಸ ನಿರ್ವಹಿಸುವುದು.

**5) ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಅಳವಡಿಕೆಗೆ ಇರುವ ಅವಕಾಶಗಳು**

* ಸಾಮಾಜೀಕರಣ ಸಮಾಜಮುಖಿಯಾಗಿ ಬೆಳೆಯಲಿ

ಉದಾ : – ಪ್ರಚಲಿತ ಸಂಪ್ರದಾಯಗಳ ಆಚರಣೆ ಕುರಿತ ಗುಂಪು ಚರ್ಚೆ

– ಆಚಾರ ವಿಚಾರಗಳ ವ್ಯತ್ಯಾಸ

– ಮಗುವಿನ ವರ್ತನೆಗಳ ಪಟ್ಟಿ

– ಸಾಂಸ್ಕೃತಿಕ ಹಿರಿಮೆಗಳ ಸಂಗ್ರಹ

– ಉತ್ತಮ ಸಂಬಂಧಗಳನ್ನು ಪೋಷಿಸುವುದರ ಬಗ್ಗೆ ಅಭಿಪ್ರಾಯ ಸಂಗ್ರಹ

– ಸ್ವತಂತ್ರ ವಿಚಾರಶಕ್ತಿ ಬೆಳವಣಿಗೆಗೆ ಒತ್ತು ಈ ಕುರಿತು ಪ್ರಬಂಧ ರಚನೆ.

– ಮಾನವ ಮತ್ತು ಪ್ರಾಣಿಗಳ ನಡುವಿನ ವ್ಯತ್ಯಾಸ ಗುರುತಿಸುವುದು.

– ಮಗು ತನ್ನ ಜೀವನದಲ್ಲಿ ಶಿಸ್ತು ಮತ್ತು ಉತ್ತಮ ಭವಿಷ್ಯ ರೂಪಿಸಿಕೊಳ್ಳುವುದು.

– ಶಾಲೆಯ ಕಲಿಕಾ ಪ್ರಕ್ರಿಯೆಯಲ್ಲಿ ನಿರಂತರವಾಗಿ ತೊಡಗಿಸುವುದು. (ಆಸಕ್ತಿ, ಮೆಚ್ಚುಗೆ, ಪ್ರೇರಣೆ, ಪ್ರೋತ್ಸಾಹಗಳ ಮೂಲಕ)

– ರಾಷ್ಟ್ರ ನಾಯಕನ ಜೀವನ ಚರಿತ್ರೆ ಓದಿಸುವುದು.

– ಶಿಕ್ಷಕರ ಆದರ್ಶ ವ್ಯಕ್ತಿತ್ವವನ್ನು ಅನುಕರಿಸುವಂತೆ ತಿಳಿಸುವುದು.

– ಕಲ್ಪನಾ ಚಾವ್ಲಾ, ವಿವೇಕಾನಂದ, ಶಿವಾಜಿ, ಇವರ ವಿದ್ಯಾರ್ಥಿ ಜೀವನವನ್ನು ಗ್ರಹಿಸುವುದು.

– ತಂದೆ ತಾಯಿಗಳನ್ನು ಹಿರಿಯರನ್ನು ಅನುಕರಿಸುವುದು.

– ಎನ್.ಸಿ.ಸಿ. ಎನ್.ಎಸ್.ಎಸ್. ಸ್ಕೌಟ್ಸ್ ಗೈಡ್ಸ್‌ಗಳಲ್ಲಿ ಭಾಗವಹಿಸುವುದು

– ತಮ್ಮ ಸುತ್ತಲಿನಲ್ಲಿ ಕಷ್ಟಪಟ್ಟು ಗುರಿಸಾಧಿಸಿದ ವ್ಯಕ್ತಿಯ ಸಂದರ್ಶನ

* **ಕೌಶಲ್ಯಗಳ ಬೆಳಣಿಗೆ**

– ಗ್ರಾಮೀಣ ಕಸುಬುಗಳ ಅವಲೋಕನ

– ಉತ್ತಮಗೃಹ ಕಸುಬು ಹೊಂದಿರುವವರ ಸಂದರ್ಶನ

– ಗಾಂಧೀಜಿಯವರ 'ಚರಕತತ್ವದ ವಿಶ್ಲೇಷಣೆ'

– ರೈತ ಕಸಬುಗಳ ಪರಿಚಯ

– ಹೊಲಿಗೆ, ಚಿತ್ರಕಲೆ, ತೋಟಗಾರಿಕೆ, ಮುಂತಾದ ಕಸುಬುಗಳನ್ನು ಶಾಲಾ ಅವಧಿಯಲ್ಲಿ ಕಲಿಸುವುದು.

– ಸಮಾಜದೊಂದಿಗೆ ಹೊಂದಿಕೆ, ಸಹಕಾರ, ಕೊಡುಕೊಳ್ಳುವಿಕೆಗಳ ಕುರಿತು ಚರ್ಚೆ

– ಕೂಡಿ ಬಾಳುವುದು ಹೇಗೆ ಎಂದು ವಿಶ್ಲೇಷಣೆ

– ಬದುಕಿ, ಬದುಕಲು ಬಿಡುವುದು ಯಾವ ರೀತಿ ಎಂಬುದಾಗಿ ಪರಾಮರ್ಶೆ.

* **ಕುಟುಂಬ ಜೀವನ**

– 'ಮನೆಯೇ ಮೊದಲ ಪಾಠಶಾಲೆ' – ಚರ್ಚೆ

– ತಾಯಿಯೇ ಮೊದಲ ಗುರು, ನಾಣ್ನುಡಿ ಅರ್ಥೈಸುವುದು.

– ಪ್ರೀತಿ, ವಾತ್ಸಲ್ಯ, ವಿಶ್ವಾಸ, ಸಹನೆ, ಸಹೃದಯತೆ ಸಹಕಾರ ಮುಂತಾದ ಜೀವನ ಮೌಲ್ಯಗಳ ಕಥೆ ಹೇಳುವುದು.

– ಬದುಕಿನ ತಪ್ಪು ಮತ್ತು ಸರಿಗಳ ಪರಾಮರ್ಶೆ–ಉದಾಹರಣೆಗಳೊಂದಿಗೆ

– ಕುಟುಂಬದ ಸದಸ್ಯರೊಂದಿಗಿನ ಸಂಬಂಧಗಳನ್ನು ಕುರಿತು ಅಭಿಪ್ರಾಯ ಸಂಗ್ರಹ.

– ಅಂಬೇಡ್ಕರ್, ಅಬ್ದುಲ್ ಕಲಾಂ, ವಿಶ್ವೇಶ್ವರಯ್ಯ, ಕೆಂಗಲ್ ಹನುಮಂತಯ್ಯ, ಶಾಂತವೇರಿ ಗೋಪಾಲಗೌಡರ ಕುಟುಂಬದ ಜೀವನ ಕುರಿತ ಪಿ.ಪಿ.ಟಿ. ತಯಾರಿಕೆ

* **ಸ್ನೇಹ ಸಂಬಂಧ ವೃದ್ಧಿಸುವುದು**

– ಉತ್ತಮ ಸಹಪಾಟಗಳ ವ್ಯಕ್ತಿತ್ವ ಕುರಿತು ಚರ್ಚೆ

– ಆಟ ಕೂಟಗಳನ್ನು ಏರ್ಪಡಿಸುವುದು.

- ಗ್ರಾಮ ಪಂಚಾಯಿತಿ ಸಭೆಗಳಿಗೆ ಭೇಟಿ
- ವೈವಿಧ್ಯವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು
- ಹಬ್ಬ ಹರಿದಿನಗಳ ಆಚರಣೆ
- ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವುದು
- ಸಾಮೂಹಿಕ ಕೃಷಿ ಚಟುವಟಿಕೆಗಳ ವೀಕ್ಷಣೆ
- ಭೋಜನ ಕೂಟಗಳಲ್ಲಿ ಭಾಗಿಯಾಗುವುದು
- ಪ್ರವಾಸಗಳನ್ನು ಏರ್ಪಡಿಸುವುದು.

* **ಸರ್ವಧರ್ಮ ಸಮನ್ವಯತೆ**

- ಧಾರ್ಮಿಕ ಸ್ಥಳಗಳಿಗೆ ಭೇಟಿ – ಉದಾ : ಧರ್ಮಸ್ಥಳ
- ಪೂಜೆ, ಜಾತ್ರೆ, ಉತ್ಸವ, ಹಬ್ಬಗಳ ಸಾಮ್ಯತೆ ಕುರಿತು ಪ್ರಬಂಧ ರಚನೆ.
- ಧಾರ್ಮಿಕ ಆಚರಣೆಗಳಿಗೆ ಪರಸ್ಪರ ಭೇಟಿ.
- ಧಾರ್ಮಿಕ ಗುರುಗಳ ಸಂದರ್ಶನ.
- ವಿವಿಧ ಧಾರ್ಮಿಕ ತತ್ವಗಳ ಪಟ್ಟಿ.
- ಅಂತರ್ಜಾತಿ ವಿವಾಹಗಳನ್ನು ಕುರಿತು ಚರ್ಚೆ.
- ಧಾರ್ಮಿಕ ಗೋಷ್ಠಿಗಳಲ್ಲಿ ಭಾವಹಿಸುವುದು.
- ಸರ್ವಧರ್ಮ ಸಮನ್ವಯತೆ ಮತ್ತು ಸಂವಿಧಾನ ಕುರಿತು ಗುಂಪು ಚರ್ಚೆ.
- ಸಮಾಜಕ್ಕೆ ವಿವಿಧ ಧರ್ಮ ಸುಧಾರಕರು ನೀಡಿರುವ ಕೊಡುಗೆಗಳ ವಿಚಾರವಾಗಿ ಮಾಹಿತಿ ಸಂಗ್ರಹ.

* **ಸಾಮಾಜೀಕರಣದ ನಿಯೋಗವಾಗಿ ಶಾಲೆ**

- ಜ್ಞಾನದೇಗುಲವಿದು ಕೈ ಮುಗಿದು ಒಳಗೆ ಬಾ ವಿಶ್ಲೇಷಣೆ.
- ಶಾಲೆಯ ಶೈಕ್ಷಣಿಕ ಚಟುವಟಿಕೆ ಕುರಿತು ಚರ್ಚೆ.
- ಆದರ್ಶ ಶಿಕ್ಷಕರಾಗಿ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಜೀವನ ಚರಿತ್ರೆ ಅವಲೋಕನ.
- ಆದರ್ಶ ವಿದ್ಯಾರ್ಥಿಯಾಗಿ ಶಿವಾಜಿ ಜೀವನ ಚರಿತ್ರೆ ಓದುವುದು.
- 'ಶಾಂತಿನಿಕೇತನ' ಕುರಿತು ವಿಷಯ ಸಂಗ್ರಹ.
- ನೀನು ಮೆಚ್ಚೊ ಸಹಪಾಠಿ ಯಾರು? ಏಕೆ? ಹೇಗೆ?

* **ಸಾಮಾಜೀಕರಣದಲ್ಲಿ ಪರಿಣಾಮಕಾರಿ ಸಮೂಹ ಮಾಧ್ಯಮಗಳು**
  - ಸಮೂಹ ಮಾಧ್ಯಮಗಳ ಪಟ್ಟಿ
  - ಉತ್ತಮ ವ್ಯಕ್ತಿತ್ವ ನಿರ್ಮಾಣದಲ್ಲಿ ದೂರದರ್ಶನದ ಪಾತ್ರ ವಿಶ್ಲೇಷಣೆ.
  - ಕಲಿಕೆಯಲ್ಲಿ ರೇಡಿಯೋ ಮಹತ್ವ ಕುರಿತ ಚರ್ಚೆ.
  - ಗಾಂಧೀಜಿಯವರ ಮೇಲೆ ಬೀರಿದ ಎರಡು ನಾಟಗಳ ಪರಿಚಯ.
  - ನನ್ನ ಮೇಲೆ ಪ್ರಭಾವ ಬೀರಿದ ಒಂದು ಪುಸ್ತಕ (ಪ್ರಬಂಧ ರಚನೆ).
  - ಸಮಾಜದ ಇಂದಿನ ಸ್ಥಿತಿಗೆ ಸಮೂಹ ಮಾಧ್ಯಮಗಳೇ ಕಾರಣ ಪರ, ವಿರೋಧದ ಚರ್ಚೆ.
  - ಜಾಹಿರಾತುಗಳು ಕುರಿತ ನಿಮ್ಮ ಅಭಿಪ್ರಾಯ.
  - ದಿನಪತ್ರಿಕೆ, ನಿಯತಕಾಲಿಕೆಗಳಿಂದ ಪ್ರಭಾವಿತರಾದ ಸಂದರ್ಭ, ಪರಿಣಾಮ.
  - ವಿವಿಧ ಸಂಸ್ಕೃತಿಗಳನ್ನು ಸುದ್ಧಿ ಮಾಧ್ಯಮಗಳಿಂದ ಸಂಗ್ರಹಿಸಿ ಪಟ್ಟಿ ಮಾಡುವುದು.
* **ನೆರೆಹೊರೆಯ ಮಹತ್ವ**
  - 'ಅರಮನೆಗಿಂತ ನೆರಮನೆಯೇ ಲೇಸು' ಹೇಗೆ?
  - 'ಆಪತ್ತಿಗಾದವನೇ ನೆಂಟ'. ಸಮರ್ಥನೆ
  - 'ಹಣದ ಗಂಟಿದ್ದರೆ ಊರೆಲ್ಲ ನೆಂಟರು'. ಅರ್ಥೈಸಿ.
  - ನಗರ ಮತ್ತು ಗ್ರಾಮೀಣ ನೆರೆಹೊರೆಗಳಿರುವ ವ್ಯತ್ಯಾಸ.
  - ಸುಖ ದುಃಖ, ಹಬ್ಬ ಹರಿದಿನ, ಜಾತ್ರೆಯ ಉತ್ಸವಗಳಲ್ಲಿ ನೆರೆ ಹೊರೆಯವರ ಪಾತ್ರ.
* **ಲಿಂಗ ತಾರತಮ್ಮ**
  - ಹೆಣ್ಣು ಹುಟ್ಟುವುದಿಲ್ಲ. ರೂಪುಗೊಳ್ಳುತ್ತದೆ ಹೇಗೆ ವಿಶ್ಲೇಷಣೆ
  - ಆಧುನಿಕ ಸಮಾಜದಲ್ಲಿ ಹೆಣ್ಣಿಗಿರುವ ಸಮಾನತೆ ಕುರಿತು ಚರ್ಚೆ, ತೀರ್ಮಾನ.
  - ಹೆಣ್ಣು ಇಂದು ಅನುಭವಿಸುತ್ತಿರುವ ಎಲ್ಲಾ ಅವಗಡಗಳಿಗೂ ಸಮಾಜ ನೀಡಿರುವ ಸ್ವಾತಂತ್ರ್ಯವೇ ಕಾರಣ, ಒಪ್ಪಿಕೊಳ್ಳುವಿರಾ? ಚರ್ಚಿಸಿ ತೀರ್ಮಾನಕ್ಕೆ ಬನ್ನಿರಿ.
  - ಹೆಣ್ಣು ಭ್ರೂಣಹತ್ಯೆಯ ಬಗ್ಗೆ ನಿಮ್ಮ ತೀರ್ಮಾನ
  - ಹೆಣ್ಣು, ಗಂಡಿನ ನಡುವಿನ ಅನುಪಾತ, ಅಂತರದಲ್ಲಿನ ವ್ಯತ್ಯಾಸ. ಕಾರಣ, ಪರಿಣಾಮ.
  - ಮಹಿಳಾ ಮೀಸಲಾತಿ ಕುರಿತು ಅಭಿಪ್ರಾಯ.

– ಪರೀಕ್ಷೆಗಳಲ್ಲಿ ಹೆಣ್ಣು ಮಕ್ಕಳೇ ಮೇಲುಗೈ ಏಕೆ?
– ತಾಯಿಯಾಗಿ ಹೆಣ್ಣು–ವಿವರಿಸಿ.

6) **ಕಲಿಕೆಯನ್ನು ಅನುಕೂಲಿಸುವ ವಿಧಾನಗಳು**

* **ಸಮಾಜದ ಉತ್ತಮ ವ್ಯಕ್ತಿಗಳ ಸಂದರ್ಶನ**

ಉದಾ : – ಊರಿನ ಸಮಾಜ ಸೇವಕನೊಬ್ಬನ ಸಂದರ್ಶನ.

– ಅವಿಭಕ್ತ ಕುಟುಂಬ ವ್ಯವಸ್ಥೆಯಿರುವ ಕುಟುಂಬಕ್ಕೆ ಭೇಟಿ.
– ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳ ಹೋಲಿಕೆ ಮತ್ತು ವ್ಯತ್ಯಾಸ ಸಂಗ್ರಹ ಗುಂಪು ಚರ್ಚೆ.
– ಮಗುವಿನ ಬೆಳವಣಿಗೆ ಕುರಿತ ಸಾಕ್ಷ್ಯ ಚಿತ್ರ.
– ಸಮಾಜದ ವಿವಿಧ ವರ್ಗದ ಜನರ ಜೀವನ ಕ್ರಮ ಕುರಿತು ವಿಷಯ ಸಂಗ್ರಹ (ಉದಾ : ನಗರ ಜೀವನ, ಗ್ರಾಮೀಣ ಜೀವನ, ಗುಡ್ಡಗಾಡು ಜನರ ಜೀವನ).
– ತಮ್ಮ ಕುಟುಂಬ ಜೀವನವನ್ನು ಕುರಿತು ಪ್ರಬಂಧ ರಚನೆ.
– ಸಮವಯಸ್ಕರಲ್ಲಾಗುವ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಕುರಿತ ಟಪ್ಪಣಿ.
– ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಧರ್ಮದ ಪಾತ್ರ, ಚರ್ಚೆ.
– ಸಾಮಾಜೀಕರಣದಲ್ಲಿ ಶಾಲೆಯ ಮಹತ್ವ ಈ ವಿಷಯ ಕುರಿತಂತೆ ಅನುಭವದ ಹಂಚಿಕೆ.
– ಗಾಂಧೀ, ಅಂಬೇಡ್ಕರ್, ಅಬ್ದುಲ್‌ಕಲಾಂ, ನೇತಾಜಿ ಇಂತಹ ವ್ಯಕ್ತಿಗಳ ಶಾಲಾ ಜೀವನ ಕುರಿತು ಮಾಹಿತಿ ಸಂಗ್ರಹ.
– ರೇಡಿಯೋ ಮಕ್ಕಳ ನಾಟಕಗಳನ್ನು ಆಲಿಸುವುದು.
– ಮಕ್ಕಳ ಸಾಹಸಮಯ ಚಿತ್ರಗಳ ವೀಕ್ಷಣೆ.
– ಸಾಮಾಜೀಕರಣ ಕುರಿತು ಸಂವಾದ.
– ಇತ್ತೀಚಿನ ದಿನಗಳಲ್ಲಿ ನೆರೆ ಹೊರೆ ಸಂಬಂಧ ಉತ್ತಮಗೊಳ್ಳುತ್ತಿಲ್ಲ. ಈ ವಿಷಯ ಕುರಿತು ಚರ್ಚಾ ಸ್ಪರ್ಧೆ.
– ನಿಮ್ಮ ಸುತ್ತ ಮುತ್ತಲಿನ ಸ್ತ್ರೀ ಪುರುಷರ ಸಂಖ್ಯೆ ಪಟ್ಟಿಮಾಡಿ
– ನಿಮ್ಮ ಸುತ್ತ ಮುತ್ತಲಿನವರಲ್ಲಿ ಹೆಚ್ಚು ಉದ್ಯೋಗ (ಹೊರಗೆಹೋಗಿ) ಹೊಂದಿರುವ ಸ್ತ್ರೀ, ಪುರುಷರ ಪ್ರಮಾಣವನ್ನು ಹುಡುಕಿ ಸಂಗ್ರಹಿಸುವುದು.

7) **ಸಂಪನ್ಮೂಲಗಳ ಕ್ರೋಢೀಕರಣ**

- 9ನೇ ತರಗತಿ ಸಮಾಜ ವಿಜ್ಞಾನ ಪುಸ್ತಕ.
- ಪಿ.ಯು. ಮತ್ತು ಪದವಿ ತರಗತಿಗಳ ಸಮಾಜ ಶಾಸ್ತ್ರ ಪಠ್ಯಪುಸ್ತಕ.
- ಗುಡ್ಡಗಾಡು ಜನರ ಜೀವನ ಶೈಲಿ ಕುರಿತು ಸಾಕ್ಷ್ಯಚಿತ್ರ.
- ದೂರದರ್ಶನದಲ್ಲಿ ಪ್ರಸಾರವಾಗುವ ಜನಜೀವನದ ಕುರಿತು ಕಾರ್ಯಕ್ರಮ ವೀಕ್ಷಣೆ.
- ಮಹಾತ್ಮರ ಅಮೃತವಾಣಿಗಳ ಸಂಗ್ರಹ.
- ಸತ್ಯಹರಿಶ್ಚಂದ್ರ, ಶ್ರವಣಕುಮಾರ, ಕುವೆಂಪು ಮಕ್ಕಳ ನಾಟಕಗಳ ಸಂಗ್ರಹ.
- ಅಂತರ್ಜಾಲದಲ್ಲಿ ವಿವಿಧ ವರ್ಗದ ಕುಟುಂಬ, ಜನಾಂಗಗಳ ಮಾಹಿತಿ ಸಂಗ್ರಹ.
- ಬೇಂದ್ರೆ, ಕಾರಂತ, ಮಾಸ್ತಿ, ಎ.ಎನ್. ಮೂರ್ತಿರಾವ್ ಇವರು ರಚಿಸಿದ ಮಕ್ಕಳ ನಾಟಕಗಳ ಸಂಗ್ರಹ.
- ಚಲನಚಿತ್ರಗಳು. ಉದಾ : ಸ್ಲಂಬಾಯ್ .....
- ದೂರದರ್ಶನ ಚಂದನದ ರಸಪ್ರಶ್ನೆ ಕಾರ್ಯಕ್ರಮ.
- ಯು.ಜಿ.ಸಿ. ಕಾರ್ಯಕ್ರಮ, (ದೂರದರ್ಶನ)
- ಹಬ್ಬದ ಆಚರಣೆಯ ಬಗೆಗಿನ ಮಾಹಿತಿಗಳು.
- ಎನ್.ಸಿ.ಸಿ. ಎನ್.ಎಸ್.ಎಸ್. (ಸ್ಕೌಟ್, ಗೈಡ್ಸ್ ಗ್ರಾಮ ಸಭೆಗಳು SDMC ಸಭೆ) ಕುರಿತು ಮಾಹಿತಿ ಅಂಕಿ ಅಂಶಗಳು.
- ಸಮಾಜದಲ್ಲಿ ಸ್ತ್ರೀ ನಡೆದುಬಂದ ದಾರಿ ಕುರಿತ ಪ್ರಬಂಧಗಳ ಸಂಗ್ರಹ.
- ಮಹಿಳಾ ಉದ್ಯೋಗ ಕುರಿತ ಸಾಕ್ಷ್ಯ ಚಿತ್ರ ಸಂಗ್ರಹ.
- ಸಾಧನೆ ಮಾಡಿರುವ ಮಹಿಳೆಯರನ್ನು ಕುರಿತು ಮಾಹಿತ ಸಂಗ್ರಹ.

8) **ಬೋಧನೋಪಕರಗಳು**

- ಶಾಲೆಯ ಚಿತ್ರಣ
- ವಿಭಕ್ತ, ಅವಿಭಕ್ತ ಕುಟುಂಬಗಳ ಚಿತ್ರಣ, ಮಕ್ಕಳು ಆಟವಾಡುತ್ತಿರುವ ಚಿತ್ರಗಳು.
- ಸಾಕ್ಷ್ಯ ಚಿತ್ರಗಳು, (ಹಬ್ಬ, ಜಾತ್ರೆ, ಮಹಿಳಾ ಉದ್ಯೋಗ ಇತ್ಯಾದಿ).
- ರೇಡಿಯೋ ಕಾರ್ಯಕ್ರಮಗಳ ಬಳಕೆ (ಮಕ್ಕಳ ನಾಟಕ)

– ಚಲನಚಿತ್ರಗಳು ತೊತ್ತೋಚಾನ್ ತುತ್ತೂರಿ, ಕೇರ್‌ಆಫ್ ಫುಟ್‌ಬಾತ್, ಬೂಟ್ ಪಾಲಿಶ್ (ಬೂಕರ್), ಸ್ಲಂಡಾಗ್ ಮಿಲೇಸಾರ್ಖ ಇತ್ಯಾದಿ) ಕೊಡುಗೆಗಳು.

– ಕುಟುಂಬದಲ್ಲಿ ಹೆಣ್ಣು ಮಗು ಮತ್ತು ಗಂಡು ಮಗುವನ್ನು ನಡೆಸಿಕೊಳ್ಳುವ ರೀತಿ ಕುರಿತ ರೂಪಕ ಪ್ರದರ್ಶನ.

**9) ಮನನ ಮಾಡಿಕೊಳ್ಳಲೇ ಬೇಕಾದ ಅಂಶಗಳು**

– ಮನುಷ್ಯ ಸಂಘ ಜೀವಿ

– ಮಾನವ ಪ್ರಾಣಿಗಳಿಗಿಂತ ವಿಭಿನ್ನ

– ಹೊಂದಿಕೊಂಡು ಬಾಳುವುದು.

– ಸಾಮಾಜೀಕರಣ ಎಂದರೆ ಒಂದು ಸಂಸ್ಕೃತಿ

– ಧರ್ಮನಿರಾಪೇಕ್ಷತೆ

– ಜೀವನದಲ್ಲಿ ಶಿಸ್ತು

– ಕೌಶಲ್ಯಯುಕ್ತ ಜೀವನ

– ಮನೆಯೇ ಮೊದಲ ಪಾಠಶಾಲೆ

– ಪ್ರೀತಿ ಸ್ನೇಹ, ಸಹನೆ, ಸಹೃದಯತೆ

– ಗೆಳೆತನ

– ಆದರ್ಶ ಸಮಾಜ ಜೀವನಕ್ಕೆ ಧರ್ಮವೇ ತಳಹದಿ

– ಜೀವನದ ಗುರಿಗೆ ಗುರು ಅನಿವಾರ್ಯ

– ಹಣ ಗಂಟಿದ್ದರೆ ಊರೆಲ್ಲಾ ನೆಂಟರು.

– ಸಾಮಾಜೀಕರಣದಲ್ಲಿ ಪರಿಣಾಮಕಾರಿ ಸಮೂಹ ಮಾಧ್ಯಮಗಳು ಅಗತ್ಯ. (ಮಹಾತ್ಮರ) ಹಿರಿಯರ ದಾರಿ ನಮಗೆ ಹೆದ್ದಾರಿಯಾಗಬೇಕು.

– ಸರ್ವರಲ್ಲೂ ಸಮಾನತೆ ಕಾಣುವುದು.

– ಮಹಿಳೆಯರೂ ಪುರುಷರಂತೆ ಬದುಕಬಲ್ಲರು.

– ಉತ್ತಮ ಶಿಕ್ಷಣದಿಂದ ಉತ್ತಮ ವ್ಯಕ್ತಿತ್ವ ನಿರ್ಮಾಣ ಸಾಧ್ಯ.

– ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ.

– ಉತ್ತಮ ಸಾಮಾಜಿಕ ಸಂಬಂಧದಿಂದ ಮಾತ್ರ ಆರೋಗ್ಯವಂತ ಮನಸ್ಸು ಸೃಷ್ಟಿ.

## 12. (ಇ) ಅರ್ಥಶಾಸ್ತ್ರ ವಿಭಾಗ

**ಉದಾಹರಣೆ–1**

1) **ಪಾಠದ ಹೆಸರು : ಆರ್ಥಿಕ ರಚನೆ**

2) **ಜ್ಞಾನ ರಚನೆಗೆ ಇರುವ ಅವಕಾಶಗಳು :**

- ಆರ್ಥಿಕ ಪರಿಕಲ್ಪನೆ ಅರಿಯುವುದು
- ಪುರಾತನ ಅರ್ಥವ್ಯವಸ್ಥೆ, ಲಕ್ಷಣಗಳು
- ಸಾಂಪ್ರದಾಯಿಕ ಅರ್ಥವ್ಯವಸ್ಥೆ ಲಕ್ಷಣಗಳು
- ವರಮಾನ ಮತ್ತು ಉದ್ಯೋಗ ಇವುಗಳ ಮೌಲ್ಯವನ್ನು ಅರ್ಥೈಸಿಕೊಳ್ಳುವುದು.
- ಆರ್ಥಿಕತೆಯ ಲಕ್ಷಣಗಳನ್ನು ಗ್ರಹಿಸಿಕೊಳ್ಳುವುದು.
- ಸ್ವಾವಲಂಬಿ ಅರ್ಥವ್ಯವಸ್ಥೆ ಹಿನ್ನಲೆಯಲ್ಲಿ ಭಾರತವನ್ನು ತಿಳಿದುಕೊಳ್ಳುವುದು.
- ಪುರಾತನ ಮತ್ತು ಆಧುನಿಕ ಅರ್ಥವ್ಯವಸ್ಥೆ ನಡುವಿನ ವ್ಯತ್ಯಾಸವನ್ನು ಅರಿಯುವುದು.

3) **ವಿಮರ್ಶಾತ್ಮಕ ಶಿಕ್ಷಣಕ್ರಮ ಅಳವಡಿಕೆಗೆ ಇರುವ ಅವಕಾಶಗಳು**

- ಮಾನವ ಜೀವನ ಶೈಲಿ ಆತನ ಆರ್ಥಿಕ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ ಎಂಬುದನ್ನು ಆತನ ಹಣಕಾಸಿನ ಆದಾಯದ ಹಿನ್ನಲೆಯಲ್ಲಿ ವಿಶ್ಲೇಶಿಸುವುದು.
- ಮಾನವ ವಿವಿಧ ಬಗೆಯ ಆರ್ಥಿಕ ಚಟುವಟಿಕೆಗಳು ಯಾವುವು ಎಂಬುದನ್ನು ಉದ್ಯೋಗ ಸ್ವರೂಪದ ಸಂದರ್ಭದಲ್ಲಿ ಅರ್ಥೈಸಿಕೊಳ್ಳುವುದು.
- ಮನುಷ್ಯನು ಒಬ್ಬ ಮಾನಸಿಕ ಮತ್ತು ಭೌತಿಕ ಬಂಡವಾಳ, ಹೇಗೆಂಬುದನ್ನು ಚರ್ಚಾತ್ಮಕವಾಗಿ ವಿಶ್ಲೇಷಿಸುವುದು.
- ಇತ್ತೀಚೆಗೆ ಕೃಷಿ ವಲಯದ ಆದಾಯ ಪ್ರಮಾಣ ಕಡಿಮೆಯಾಗಲು ಕಾರಣವೇನೆಂಬುದನ್ನು ತಾರ್ಕಿಕವಾಗಿ ಚರ್ಚಿಸುವುದು.
- ಇಂದಿನ ನಗರೀಕರಣ ವ್ಯವಸ್ಥೆ ಹೆಚ್ಚಾಗುತ್ತಿರಲು ಕಾರಣಗಳನ್ನು ತಿಳಿದುಕೊಳ್ಳುವುದು.
- ಹಳ್ಳಿಗಳು ಬರಿದಾಗುತ್ತಿರಲು ನಗರೀಕರಣವೇ ಕಾರಣ ಹೇಗೆ? ಚರ್ಚಿಸುವರು.
- ಕೃಷಿಯಲ್ಲಿ ವಾಣಿಜ್ಯ ಬೆಳೆಗಳ ಪ್ರಭಾವ ಅಧಿಕವಾಗುತ್ತಿದೆ. ಏಕೆ? ಎಂಬುದನ್ನು ಅರ್ಥೈಸಿಕೊಳ್ಳುವರು.

- ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯಿಂದ ಆದಂತಹ ಪರಿಣಾಮ ಮತ್ತು ಪ್ರಭಾವ ಕುರಿತು ಚರ್ಚಿಸುತ್ತಾ, ಇದು ಭಾರತೀಯ ಸಮಾಜದ ಮೇಲೆ ಯಾವ ರೀತಿಯ ವ್ಯವಸ್ಥೆಗೆ ಕಾರಣವಾಗಿದೆ ಎಂಬುದನ್ನು ತಿಳಿಯುವರು.
- ಇತ್ತೀಚೆಗೆ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ ಎಂಬುದನ್ನು ಒಪ್ಪಿಕೊಳ್ಳಲು ಚರ್ಚೆ ಮಾಡಿ ತೀರ್ಮಾನಿಸುವುದು.
- ಗೃಹ ಘಟಕ ಮತ್ತು ಉದ್ಯಮ ಘಟಕಗಳ ನಡುವಿನ ವ್ಯತ್ಯಾವನ್ನು ಅರ್ಥೈಸಿಕೊಳ್ಳುವರು.
- ಆರ್ಥಿಕ ಚಟುವಟಿಕೆಗಳಲ್ಲಿ ಉತ್ಪಾದನಾಂಗಗಳು ಯಾವುವು? ಎಂಬುದನ್ನು ವಿಶ್ಲೇಷಿಸುವರು.
- ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರ ಮಧ್ಯ ಪ್ರವೇಶದ ಮಹತ್ವವನ್ನು ಗ್ರಹಿಸಿಕೊಳ್ಳುವರು.
- ಆರ್ಥಿಕ ವ್ಯವಸ್ಥೆಯಲ್ಲಿ ಉದ್ಯೋಗ ಮೂಲಗಳು ಯಾವುವು? ಎಂಬುದನ್ನು ಉದ್ಯೋಗವಕಾಶಗಳ ಹಿನ್ನಲೆಯಲ್ಲಿ ಕಂಡುಕೊಳ್ಳುವರು.
- ಕೃಷಿ ವಲಯ ಮತ್ತು ಕೈಗಾರಿಕಾ ವಲಯಗಳ ನಡುವಿನ ವ್ಯತ್ಯಾಸವನ್ನು ಗಮನಿಸುವರು.
- ಕೌಶಲ್ಯಾಧಾರಿತ ಉದ್ಯೋಗದ ಪರಿಕಲ್ಪನೆಯಲ್ಲಿ ಆದಾಯವನ್ನು ಹೇಗೆ ಹೆಚ್ಚಿಸಿಕೊಳ್ಳಬಹುದು ಎಂಬುದನ್ನು ತಿಳಿದುಕೊಳ್ಳುವರು.
- ಸ್ಥಿರಾತ್ಮಕ ಮತ್ತು ಚಲನಾತ್ಮಕ ಅರ್ಥಶಾಸ್ತ್ರದ ವ್ಯತ್ಯಾಸಗಳನ್ನು ವಿಮರ್ಶಾತ್ಮಕವಾಗಿ ಗ್ರಹಿಸುವರು.
- ಸ್ವಾತಂತ್ರ್ಯಾನಂತರ ಭಾರತದ ಅರ್ಥವ್ಯವಸ್ಥೆಯ ಸ್ಥಿತಿ–ಗತಿಗಳನ್ನು ಕುರಿತು ಚರ್ಚಿಸುವರು.

**4) ಜ್ಞಾನ ಪುನರ್ರಚನೆಗಿರುವ ಅವಕಾಶ**

- ಒಂದು ದೇಶದ ಆರ್ಥಿಕ ಚಟುವಟಿಕೆಗಳು ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳನ್ನು ಹೊಂದಿದ್ದು, ಈ ಮೂರೂ ಚಟುವಟಿಕೆಗಳು ಹಣಕಾಸಿನ ಮೂಲವಾದ ಉತ್ಪಾದನೆ, ಆದಾಯ, ಮತ್ತು ಉದ್ಯೋಗಗಳನ್ನು ಅವಲಂಬಿಸಿದೆ ಎಂಬ ಜ್ಞಾನವನ್ನು ಕಟ್ಟಿಕೊಳ್ಳುವರು.
- ಪ್ರತಿಯೊಂದು ಆರ್ಥಿಕ ಚಟುವಟಿಕೆಯು ತನ್ನ ನಿರಂತರ ಬದಲಾವಣೆಯನ್ನು ಉದ್ಯೋಗ, ಉತ್ಪಾದನೆಯ ಪ್ರಮಾಣ, ಆದಾಯ ಮತ್ತು ಬಳಸಲಾಗಿರುವ ತಂತ್ರಜ್ಞಾನದ ಸ್ವರೂಪವನ್ನು ಅವಲಂಬಿಸಿರುತ್ತದೆ ಎಂಬ ಅಂಶವನ್ನು ತಿಳಿದುಕೊಳ್ಳುವರು.

  ಉದಾ :
  - ಐ.ಟಿ. ಬಿ.ಟಿ. ಕಂಪನಿಗಳ ಪ್ರಾರಂಭ.
  - ವೈಜ್ಞಾನಿಕ ಕೃಷಿ
  - ಸಾರಿಗೆ, ಸಂಪರ್ಕ (ಮೊಬೈಲ್, ಇಂಟರ್‌ನೆಟ್ ಇತ್ಯಾದಿ)

- ಇಂದು ನಗರೀಕರಣ ಬೆಳೆಯುತ್ತಿರಲು ಕಾರಣ, ಮಳೆಯ ಅಭಾವ, ಕೃಷಿಯಲ್ಲಿನ ಬೆಳೆಗಳಿಗೆ ಬೆಲೆ ಕಡಿಮೆಯಾಗುತ್ತಿರುವುದು ಬಹುಮುಖ್ಯ ಕಾರಣವಾಗಿದ್ದು, ಇದರಿಂದ ನಗರೀಕರಣವನ್ನು ತಡೆಯಲು ಗುಡಿ ಕೈಗಾರಿಕೆಗಳಿಗೆ ನೀರಾವರಿ ಸೌಕರ್ಯಗಳಿಗೆ ಹೆಚ್ಚು ಒತ್ತು ಕೊಡಬೇಕೆಂಬ ತೀರ್ಮಾನಕ್ಕೆ ಬರುವರು.
- ಜನರ ಬಯಕೆಗಳು ಕಡಿಮೆಯಾಗಿ, ಬದುಕು ಸರಳವಾಗಿರುವುದರಿಂದ ಪ್ರತಿಯೊಬ್ಬರು ಸಮೃದ್ಧಿಯ ಜೀವನವನ್ನು ನಡೆಸಲು ಸಾಧ್ಯ ಎಂಬ ಸತ್ಯವನ್ನು ತಮ್ಮದಾಗಿಸಿಕೊಳ್ಳುವರು.
- ಕೃಷಿ ಚಟುವಟಿಕೆಯು ಪುರಾತನ ಕಾಲದ ಮಾನವನ ಜೀವನ ನಿರ್ವಹಣೆಗೆ ಬದಲಾಗಿ, ಬರುಬರುತ್ತಾ ವಾಣಿಜ್ಯ ಬೆಳೆಯಲು ಪ್ರಾರಂಭಿಸಿ, ವ್ಯಾಪಾರೀಕರಣಗೊಂಡುದರಿಂದ ಹೊಸ ಹೊಸ ಉದ್ಯಮಗಳು ಬೆಳೆಯಲು ಪ್ರಾರಂಭವಾಯಿತು. ಇದರಿಂದ ನಗರೀಕರಣವೂ ಬೆಳೆಯತೊಡಗಿತು.

  ಉದಾ : ಸಕ್ಕರೆ ಕಾರ್ಖಾನೆ, ಬಟ್ಟೆ ಕೈಗಾರಿಕೆ, ಸೆಣಬಿನ ಕೈಗಾರಿಕೆ.
- ಯೂರೋಪಿನಲ್ಲಿ 18ನೇ ಶತಮಾನದಲ್ಲಾದ ವಿಜ್ಞಾನದ ಬೆಳವಣಿಗೆ ಕೈಗಾರಿಕಾ ಕ್ರಾಂತಿಗೆ ಕಾರಣವಾಯಿತು. ಇದು ಸಮಾಜದ ಎಲ್ಲಾ ವಲಯಗಳ ಆರ್ಥಿಕ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿತು. ಇದರಿಂದ ಬಂಡವಾಳವರ್ಗ ಹೆಚ್ಚಾಗಿ, ಉದ್ಯೋಗವಕಾಶಗಳು, ಆದಾಯದ ಪ್ರಮಾಣ ಹೆಚ್ಚಾಯಿತು. ಅಂದರೆ ಉದ್ಯೋಗವಕಾಶಗಳು ಹೆಚ್ಚಲು ಕೈಗಾರಿಕೆಗಳು ಕಾರಣ ಎಂಬ ತೀರ್ಮಾನಕ್ಕೆ ಬರುವರು.

  ಉದಾ : ಮುದ್ರಣಯಂತ್ರ, ಉಗಿ ಬಂಡಿ ತಯಾರಿಕೆ, ರಾಕೆಟ್, ವಿಮಾನ, ನೂಲುವ ಯಂತ್ರ ಇತ್ಯಾದಿ.
- ಆಧುನಿಕ ಅರ್ಥವ್ಯವಸ್ಥೆಯು ಮಾನವನ ಜೀವನವನ್ನು ಮಾರ್ಪಡಿಸುತ್ತಿದೆ ಎಂಬ ಸತ್ಯವನ್ನು ತಿಳಿಯುವರು.
- ಯಾವುದೇ ಮಾನವ ನಿರ್ಮಿತ ಆರ್ಥಿಕ ಚಟುವಟಿಕೆಯು ಲಾಭವಿಲ್ಲದೆ (ಪ್ರತಿಫಲ) ರೂಪುಗೊಳ್ಳುವುದಿಲ್ಲ ಎಂದು ಅರ್ಥೈಸಿಕೊಳ್ಳುವರು.

  ಉದಾ : ಭೂಮಿ, ಪಸಲು, ಶ್ರಮ, ಕೂಲಿ, ಕೈಗಾರಿಕೆ, ಉತ್ಪಾದನೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ.
- ಪ್ರತಿಯೊಂದು ಆರ್ಥಿಕ ಚಟುವಟಿಕೆಯಲ್ಲಿ ಸರ್ಕಾರದ ಮಧ್ಯಪ್ರವೇಶವಿದ್ದು, ತೆರಿಗೆಯನ್ನು ವಿಧಿಸುವ ಮೂಲಕ ಆದಾಯವನ್ನು ಸಂಗ್ರಹಿಸಿ, ಜನರಿಗೆ ಶಿಕ್ಷಣ, ಆರೋಗ್ಯ, ವಸತಿ, ಸಾರಿಗೆ, ನೀರು, ವಿದ್ಯುತ್ತನ್ನು ಪೂರೈಕೆ ಮಾಡುತ್ತದೆ ಎಂಬ ವಾಸ್ತವ ಜ್ಞಾನವನ್ನು ಅರಿಯುವರು.
- ಪ್ರತಿಯೊಬ್ಬ ಮಾನವನು ಜೀವನ ನಿರ್ವಹಣೆಗೆ ಯಾವುದಾದರೂ ದುಡಿಮೆ ಅನಿವಾರ್ಯ ಎಂಬ ತೀರ್ಮಾನಕ್ಕೆ ಬರುವರು ಹಾಗೂ ತಮ್ಮಿಷ್ಟದ ಉದ್ಯೋಗ ಪಡೆಯಲು ವಿದ್ಯಾರ್ಹತೆಯನ್ನು ಪಡೆಯುವರು.

ಉದಾ : ಶಿಕ್ಷಕ, ಕಾರ್ಮಿಕ, ವೈದ್ಯ, ಚಾಲಕ ಇತ್ಯಾದಿ.

- ಅರ್ಥವ್ಯವಸ್ಥೆಯಲ್ಲಿನ ಕೈಗಾರಿಕೆ ಮತ್ತು ಸೇವಾ ವಲಯಗಳಿಗೆ ಕೌಶಲ್ಯವುಳ್ಳ ಮಾನವಶಕ್ತಿ ಅನಿವಾರ್ಯವಾಗಲಾಗಿ, ಕೌಶಲ್ಯ ತರಬೇತಿ ವ್ಯವಸ್ಥೆ ಹುಟ್ಟಲು ಕಾರಣವಾಯಿತು. ಆದರೆ ಕೃಷಿಯಲ್ಲಿ ಮಾತ್ರ ಕೌಶಲ್ಯರಹಿತ ಕಾರ್ಮಿಕರೇ ಮುಂದುರೆಯಿತ್ತಿರುವುದರ ಕಾರಣಕ್ಕೆ ಪರಿಹಾರವನ್ನು ಕಂಡುಕೊಳ್ಳಲೆತ್ನಿಸುವರು.

ಉದಾ : ಐಟಿಐ ತರಬೇತಿ – ಕೈಗಾರಿಕೆ

ಡಿಪ್ಲಮೋ ತರಬೇತಿ – ಕೈಗಾರಿಕೆ

ಶಿಕ್ಷಕರ ತರಬೇತಿ – ಶಾಲಾ ಕಾಲೇಜುಗಳಿಗೆ

ಚಾಲಕ ತರಬೇತಿ – ಸಾರಿಗೆ

ಇತ್ತೀಚೆಗೆ (B.Sc., Ag, ಕೃಷಿ ವಿ.ವಿ. ವಿದ್ಯಾಲಯಗಳು, ತೋಟಗಾರಿಕಾ ತರಬೇತಿ ಇತ್ಯಾದಿ)

- ಪೌಷ್ಟಿಕ ಆಹಾರ ಮತ್ತು ಆರೋಗ್ಯ ಸೌಲಭ್ಯಗಳ ಕೊರತೆ ಜನಸಂಖ್ಯಾ ಬೆಳವಣಿಗೆಗೆ ಮಾರಕವಾಗುತ್ತದೆ ಎಂದು ತಿಳಿದುಕೊಳ್ಳುವರು.

ಉದಾ : ಹಿಂದಿನ ಪ್ಲೇಗ್‌ರೋಗ, ಸಿಡುಬುರೋಗ, ಇತ್ತೀಚಿನ ಪೋಲಿಯೋ, ಕುರುಡುತನ, ಬುದ್ಧಿಮಾಂದ್ಯರು ಇತ್ಯಾದಿ.

- ಚಲನಾತ್ಮಕ ಅರ್ಥವ್ಯವಸ್ಥೆಯು ಬದಲಾವಣೆಯ ಸಂಕೇತವಾಗಿದ್ದು, ಇಂದಿನ ನವೀನ ತಂತ್ರಜ್ಞಾನವು ಬದಲಾಗುತ್ತಿರುವ ಅರ್ಥವ್ಯವಸ್ಥೆಗೆ ಕಾರಣ ಎಂದು ಅರ್ಥೈಸಿಕೊಂಡು ಚಲನೆಯೇ ಆಧುನಿಕ ಅರ್ಥ ವ್ಯವಸ್ಥೆಗೆ ಮೂಲ ಎಂಬ ಜ್ಞಾನವನ್ನು ತಿಳಿದುಕೊಳ್ಳುವರು.

ಉದಾ : – ದೂರವಾಣಿ ಕ್ಷೇತ್ರದ ಬದಲಾವಣೆ

– ರೈಲುಗಾಡಿ ತಯಾರಿಕೆಯಲ್ಲಾಗಿರುವ ಬದಲಾವಣೆ.

- ಸ್ವಾಂತಂತ್ರ್ಯಾನಂತರ ಭಾರತದ ಅರ್ಥವ್ಯವಸ್ಥೆಯಲ್ಲಿನ ಪ್ರಗತಿದಾಯಕ ಬದಲಾವಣೆಗೆ ವೈಜ್ಞಾನಿಕತೆಯೇ ಕಾರಣ ಎಂದು ಒಪ್ಪಿಕೊಳ್ಳುವರು. ಹಾಗೂ ಸಮಾಜಮುಖಿ ವಿಜ್ಞಾನದ ಬಳಕೆಗೆ ತೀರ್ಮಾನಿಸುವರು.

### 5) ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ರಚನೆಗೆ ಇರುವ ಅವಕಾಶಗಳು

- ಆರ್ಥಿಕ ಚಟುವಟಿಕೆಗಳ ಪಟ್ಟಿ ತಯಾರಿಕೆ.
- ಉತ್ಪಾದಕ ಮತ್ತು ಅನುತ್ಪಾದ ಆರ್ಥಿಕ ವಲಯಗಳ ನಡುವಿನ ವ್ಯತ್ಯಾಸ ಸಂಗ್ರಹ.
- ನಗರೀಕರಣ ಹೆಚ್ಚಾಗಲು ಕಾರಣ ಹುಡುಕುವುದು.
- ವಸ್ತು ವಿನಿಮಯ ಪದ್ಧತಿ ಮತ್ತು ಹಣ ವಿನಿಮಯ ಪದ್ಧತಿಗಳನ್ನು ಕುರಿತು ಚರ್ಚೆ.

- ಆಧುನಿಕ ಅರ್ಥವ್ಯವಸ್ಥೆಯಲ್ಲಿ ಕೃಷಿ ವಾಣಿಜ್ಯೀಕರಣಗೊಳ್ಳಲು ಕಾರಣವನ್ನು ವಿಮರ್ಶಿಸುವುದು.
- ಗೃಹ ಕೈಗಾರಿಕೆಗಳ ನಾಶಕ್ಕೆ ಕೈಗಾರಿಕಾ ಕ್ರಾಂತಿಯೇ ಕಾರಣ ಹೇಗೆ? ಪ್ರಬಂಧ ಮಂಡನೆ.
- ಯುರೋಪಿನ ಊಳಿಗಮಾನ್ಯ ಪದ್ಧತಿಯ ಕಾಲದ ಭೂ ಒಡೆಯರು ಕೈಗಾರಿಕೆಗಳಿಗೆ ಬಂಡವಾಳವನ್ನು ಹೂಡಲು ಮುಂದೆ ಬಂದಿದ್ದರಿಂದ ಆದಂತಹ ಪರಿಣಾಮ-ಗುಂಪು ಚರ್ಚೆ.
- ಗೇಣಿ, ಕೂಲಿ, ಬಡ್ಡಿ, ಲಾಭ ಇವುಗಳ ನಡುವಿನ ವ್ಯತ್ಯಾಸವನ್ನು ಆರ್ಥಿಕ ಚಟುವಟಿಕೆಯ ಹಿನ್ನಲೆಯಲ್ಲಿ ಅರ್ಥೈಸಿರಿ – ಅಭಿಪ್ರಾಯ ಸಂಗ್ರಹ.
- ಪುರಾತನ ಅರ್ಥವ್ಯವಸ್ಥೆ, ಆಧುನಿಕ ಅರ್ಥವ್ಯವಸ್ಥೆಯಾಗಿ ಮಾರ್ಪಡುತ್ತಿದೆ. ಇದರ ಅರ್ಥವನ್ನು ವಿವರಿಸಿರಿ.
- ಅರ್ಥ ವ್ಯವಸ್ಥೆಯ ಸೇವಾ ಘಟಕಗಳನ್ನು ಪಟ್ಟಿ ಮಾಡಿರಿ.

**6) ಕಲಿಕೆಯನ್ನು ಅನುಕೂಲಿಸುವ ವಿಧಾನಗಳು**

- ಕೃಷಿ ಕೇಂದ್ರ, ಕೈಗಾರಿಕಾ ವಲಯಗಳಿಗೆ ಭೇಟಿ ನೀಡಿ ಅಲ್ಲಿನ ವಿವಿಧ ಚಟುವಟಿಕೆಗಳನ್ನು ಗಮನಿಸುವುದು.
- ರೈತ ಮಿತ್ರ ಕೇಂದ್ರಗಳಿಗೆ ಭೇಟಿ.
- ಜಿಲ್ಲಾ ಕೈಗಾರಿಕಾ ಸಲಹಾ ಕೇಂದ್ರಗಳಿಗೆ (ಡಿ.ಐ.ಸಿ.) ಭೇಟಿ.
- ಪುರಾತನ ಕೃಷಿ ಪದ್ಧತಿಯಲ್ಲಿ ಬೆಳೆಯುತ್ತಿದ್ದ ಬೆಳೆಗಳ ಪಟ್ಟಿ.
- ಕೃಷಿಯಾಧಾರಿತ ಕೈಗಾರಿಕೆಗಳ ಉತ್ಪಾದನಾಂಗಳನ್ನು ಕುರಿತಂತೆ ಮಾರುಕಟ್ಟೆ, ಸಾರಿಗೆ, ಬ್ಯಾಂಕಿಂಗ್ ಸೇವೆ ಇವುಗಳ ನಡುವಿನ ಸಂಬಂಧ ಕುರಿತು ಚರ್ಚೆ, ತೀರ್ಮಾನ.
- ಗ್ರಾಮೀಣ ಪರಿಸರ ಮತ್ತು ನಗರ ಪರಿಸರಗಳ ನಡುವಿನ ಅಂತರ, ವ್ಯತ್ಯಾಸ, ಸಾಧಕ ಬಾಧಕಗಳ ಗುಂಪು ಚರ್ಚೆ.
- ಕೈಗಾರಿಕಾ ಕ್ರಾಂತಿಗೆ ಕಾರಣ, ಪರಿಣಾಮ ಕುರಿತ ಕಲಿಕಾ ನಿಲ್ದಾಣಗಳ ಮೂಲಕ ವಿಶ್ಲೇಷಣೆ.
- ಕೃಷಿಯಾಧಾರಿತ ಮಾರುಕಟ್ಟೆಗೆ ಭೇಟಿ.
- ಯಶಸ್ವಿ ರೈತನೊಬ್ಬನ ಸಂದರ್ಶನ.
- ಮಾಲೀಕ ಮತ್ತು ಕಾರ್ಮಿಕರ ಕುಂದುಕೊರತೆಗಳ ಪಟ್ಟಿ.
- ಆರ್ಥಿಕವಾಗಿ ಬಡ ಕುಟುಂಬ ಮತ್ತು ಶ್ರೀಮಂತ ಕುಟುಂಬಗಳಿಗೆ ಭೇಟಿ ನೀಡಿ ಜೀವನ ಮಟ್ಟದಲ್ಲಿನ ವ್ಯತ್ಯಾಸ ಗುರುತಿಸುವುದು.

- ನಿಮ್ಮ ಕುಟುಂಬದಲ್ಲಿರುವವರ ಸಂಖ್ಯೆ ಇವರಲ್ಲಿ ದುಡಿಯುವವರು, ಆದಾಯ, ಖರ್ಚು, ಕುಟುಂಬದ ಜೀವನ ವಿಧಾನ ಕುರಿತು, ಪ್ರಬಂಧ ರಚನೆ.
- ಗೃಹ ಮತ್ತು ಉದ್ಯಮ ಘಟಕಗಳನ್ನು ವಿಂಗಡಿಸುವುದು.
- ನಿಮಗೆ ತಿಳಿದಿರುವ ಉದ್ಯೋದವಕಾಶಗಳನ್ನು ಒಂದು ಕಡೆ ಸಂಗ್ರಹಿಸಿರಿ.
- ಬ್ಯಾಂಕು, ಸಹಕಾರ ಸಂಘಗಳು ಸ್ತ್ರೀಶಕ್ತಿ ಸಂಘಗಳು, ಅಂಚೆ ಕಛೇರಿ, ಜೀವ ವಿಮಾ ನಿಗಮಗಳಿಗೆ ಭೇಟಿ ನೀಡಿ ಅಲ್ಲಿನ ಕಾರ್ಯ ವೈಖರಿಯನ್ನು ವೀಕ್ಷಿಸುವುದು.
- ಜಾಗತಿಕ ಮಟ್ಟದಲ್ಲಿ ಭಾರತೀಯ ವಸ್ತುಗಳು ಪೇಟೆಂಟ್ ಪಡೆಯುವಲ್ಲಿ ಅನುಭವಿಸಿದ ಹಿನ್ನಡೆ ಕುರಿತು ವಿಷಯ ಸಂಗ್ರಹ.

7) **ಸಂಪನ್ಮೂಲಗಳ ಕ್ರೂಡೀಕರಣ**

- 9ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕ.
- ಪದವಿ ಪೂರ್ವ ಮತ್ತು ಪದವಿ ತರಗತಿಗಳ ಅರ್ಥಶಾಸ್ತ್ರ ಪಠ್ಯಗಳು.
- ಅಂತರ್ಜಾಲ ಬಳಕೆ (ಕೃಷಿ, ಕೈಗಾರಿಕೆ, ಬ್ಯಾಂಕಿಂಗ್, ಸಾರಿಗೆ ವ್ಯವಸ್ಥೆಗೆ ಸಂಬಂಧಿಸಿದಂತೆ)
- ಮಾರುಕಟ್ಟೆಯ ಚಾರ್ಟ್ ತಯಾರಿಕೆ.
- ಬ್ಯಾಂಕಿಂಗ್ ವ್ಯವಹಾರದಲ್ಲಿ ಬಳಸುವ ನಮೂನೆಗಳ ಸಂಗ್ರಹ.

  ಉದಾ : ಡಿ.ಡಿ. ಚೆಕ್, ಪಾಸ್ ಬುಕ್ ಇತ್ಯಾದಿ.
- ಬಸ್, ರೈಲ್ವೆ, ವಿಮಾನ ಟಿಕೆಟ್‌ಗಳ ಸಂಗ್ರಹ.
- ನಾಣ್ಯಗಳು ಮತ್ತು ಕರೆನ್ಸಿಗಳ ಸಂಗ್ರಹ.
- ವಾಣಿಜ್ಯ ಬೆಳೆಗಳು ಮತ್ತು ಆಹಾರದ ಬೆಳೆಗಳ ಪಟ್ಟಿ.
- ಗೃಹ ಘಟಕಗಳು, ಉದ್ಯಮ ಘಟಕಗಳ ಚಾರ್ಟ್ ತಯಾರಿಕೆ.
- ವಾಣಿಜ್ಯ ತೆರಿಗೆ ಅಧಿಕಾರಿಗಳಿಂದ ತೆರಿಗೆ ಪದ್ಧತಿ ಕುರಿತು ಮಾಹಿತಿ ತಿಳಿಯಲು ಅವರನ್ನು ಆಹ್ವಾನಿಸುವುದು.
- ಕೃಷಿಯಲ್ಲಿ ವಿಜ್ಞಾನದ ಬಳಕೆಯಿಂದ ಆಗಿರುವ ಹೊಸ ಆವಿಷ್ಕಾರಗಳನ್ನು ಕುರಿತ ವಸ್ತು ಪ್ರದರ್ಶನ.
- ಪೌಷ್ಠಿಕ ಆಹಾರಗಳನ್ನು ಪಟ್ಟಿ ಮಾಡಿಕೊಳ್ಳುವುದು.
- ಆಸ್ಪತ್ರೆಗೆ ಭೇಟಿ ನೀಡಿ ವಿವಿಧ ಆರೋಗ್ಯ ಸೇವೆಗಳನ್ನು ಗಮನಿಸುವುದು.
- ಕುಟುಂಬವೊಂದರ ಆದಾಯದ ಮೂಲ ತಿಳಿಯಲು ಭೇಟಿ ನೀಡುವುದು.

**8 ) ಬೋಧನೋಪಕರಣಗಳು**

- ಮಾರುಕಟ್ಟೆಯಲ್ಲಿನ ವಸ್ತು ವಿನಿಮಯ ಪದ್ಧತಿ ಕುರಿತ ಚಾರ್ಟ್.
- ಕೃಷಿ ವಲಯ ಪ್ರದೇಶದ ಚಿತ್ರ.
- ದೂರದರ್ಶನದ 'ಕೃಷಿ ದರ್ಶನ' ವೀಕ್ಷಣೆ, ಅನ್ನದಾತ, (ಕಾರ್ಯಕ್ರಮ).
- ಕೈಗಾರಿಕಾ ವಲಯದ ಚಾರ್ಟ್
- ಆಹಾರ ಬೆಳೆ, ವಾಣಿಜ್ಯ ಬೆಳೆಗಳ ಪ್ರದರ್ಶನ.
- ಗೃಹ ಘಟಕಗಳು ಮತ್ತು ಉದ್ಯಮ ಘಟಕಗಳ ನಡುವಿನ ಸಂಬಂಧ ಕುರಿತು ಚಾರ್ಟ್.
- ಅಂತರ್ಜಾಲ ವೀಕ್ಷಣೆ (ಕೃಷಿ, ಕೈಗಾರಿಕೆ, ಸಾರಿಗೆ, ಬ್ಯಾಂಕ್ ಸೌಲಭ್ಯ ಕುರಿತಂತೆ)
- ನಗರೀಕರಣದ ಸಮಸ್ಯೆ ಬಿಂಬಿಸುವ ಚಾರ್ಟ್.

**9 ) ಮನನ ಮಾಡಿಕೊಳ್ಳಲೇ ಬೇಕಾದ ಅಂಶಗಳು**

- ದುಡಿಮೆಯೇ ದೇವರು
- ಕೈ ಕೆಸರಾದರೆ ಬಾಯಿ ಮೊಸರು
- ಆರ್ಥಿಕ ಚಟುವಟಿಕೆಗಳಲ್ಲಿ ಬಯಕೆಯೇ ಮೂಲ.
- ರೈತ ದೇಶದ ಬೆನ್ನೆಲುಬು
- ಶಿಕ್ಷಣದಿಂದ ಮಾತ್ರ ಕೌಶಲ್ಯಾಭಿವೃದ್ಧಿ ಸಾಧ್ಯ.
- ಕೈಗಾರಿಕೆಯಿಂದ ಉದ್ಯೋಗವಕಾಶಗಳು ಹೆಚ್ಚುತ್ತವೆ.
- ನಗರೀಕರಣದಿಂದ ಹಳ್ಳಿಗಳು ಬರಿದಾಗುತ್ತಿವೆ.
- ಕೈಗಾರಿಕಾ ಕ್ರಾಂತಿ ಗುಡಿ ಕೈಗಾರಿಕೆಗಳ ಅವನತಿಗೆ ನಾಂದಿ ಹಾಡಿತು.
- ಕುಟುಂಬ ಸಮಾಜದ ಬಹುಮುಖ್ಯ ಆರ್ಥಿಕ ಘಟಕ.
- ಗೃಹ ಮತ್ತು ಉದ್ಯಮ ಘಟಕಗಳು ಪರಸ್ಪರ ಪೂರಕ.
- ಆರೋಗ್ಯವಂತ ಕಾರ್ಮಿಕರೇ ದೇಶದ ಆಸ್ತಿ.
- ಸ್ವಚ್ಛ ಆರ್ಥಿಕ ವ್ಯವಸ್ಥೆ ಸುಸಂಸ್ಕೃತಿಯ ಲಕ್ಷಣ.
- ಸೋಮಾರಿತನವೇ ಬಡತನಕ್ಕೆ ಕಾರಣ.
- ಉದಾರೀಕರಣ ಜಾಗತೀಕರಣ ಮತ್ತು ಖಾಸಗೀಕರಣಗಳು ಭಾರತದ ಅರ್ಥವ್ಯವಸ್ಥೆಯನ್ನು ಬದಲಿಸುತ್ತಿವೆ.

**ಉದಾಹರಣೆ : 2**

**1 ) ಪಾಠದ ಹೆಸರು : ಶ್ರಮ ಮತ್ತು ಉದ್ಯೋಗ**

**2 ) ಜ್ಞಾನ ರಚನೆಗೆ ಇರುವ ಅವಕಾಶಗಳು :**

- ಶ್ರಮದ ಅರ್ಥವನ್ನು ತಿಳಿದುಕೊಳ್ಳುವುದು.
- ಶ್ರಮದ ಪ್ರಾಮುಖ್ಯತೆಯನ್ನು ಅರ್ಥೈಸುವುದು.
- ಶ್ರಮದ ವಿಧಗಳನ್ನು ಅರಿಯುವುದು.
- ಶ್ರಮದ ಲಕ್ಷಣಗಳನ್ನು ಅದರ ಅರ್ಥ ಮತ್ತು ಪ್ರಾಮುಖ್ಯತೆಯ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳುವುದು.
- ಶ್ರಮದ ಮಹತ್ವದ ಸಂದರ್ಭದಲ್ಲಿ ಶ್ರಮ ವಿಭಜನೆಯ ಅನುಕೂಲ ಅನನುಕೂಲಗಳನ್ನು ತಿಳಿಯುವುದು.
- ಭಾರತದಲ್ಲಿ ಸ್ತ್ರೀ ಪುರುಷರ ಅಸಮಾನತೆಗೆ ಕಾರಣಗಳನ್ನು ತಿಳಿಯುವುದು.
- ಜೀತ ಕಾರ್ಮಿಕರು ಮತ್ತು ಬಾಲ ಕಾರ್ಮಿಕ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ತಿಳಿಯುವುದು.
- ಉದ್ಯೋಗ, ನಿರುದ್ಯೋಗ ಪದಗಳ ಅರ್ಥವ್ಯತ್ಯಾಸವನ್ನು ಗಮನಿಸುವುದು.
- ನಿರುದ್ಯೋಗದ ವಿಧಗಳನ್ನು ಅರ್ಥೈಸಿಕೊಳ್ಳುವುದು.

**3 ) ವಿಮರ್ಶಾತ್ಮಕ ಶಿಕ್ಷಣಕ್ರಮ ಅಳವಡಿಕೆಗೆ ಇರುವ ಅವಕಾಶಗಳು**

- ವಸ್ತುವಿನ ಉತ್ಪಾದನೆಯಲ್ಲಿ ಬಂಡವಾಳದ ಜೊತೆಗೆ ಮಾನವ ಶ್ರಮ ಅದರ ಮಹತ್ವ ಮತ್ತು ಅಗತ್ಯತೆಯನ್ನು ಉತ್ಪಾದನಾಂಗವಾಗಿ ಶ್ರಮ ಎಂಬ ಮಾತಿನ ಹಿನ್ನಲೆಯಲ್ಲಿ ಚರ್ಚಿಸುವರು.
- ಮಾನವ ಶ್ರಮವನ್ನು ಪ್ರಾಣಿಗಳ ಶ್ರಮಕ್ಕಿಂತ ಭಿನ್ನವಾಗಿ ಗುರುತಿಸಲು ಕಾರಣವಾದ ಅಂಶಗಳನ್ನು ಅರ್ಥೈಸಿಕೊಳ್ಳುವರು.
- ಒಬ್ಬ ತಾಯಿಯು ತನ್ನ ರೋಗಿಷ್ಟ ಮಗುವಿನ ಆರೈಕೆಗಾಗಿ ಮಾಡುವ ಸೇವೆಯನ್ನು ಶ್ರಮವೆಂದು ಏಕೆ ಪರಿಗಣಿಸಲಾಗುವುದಿಲ್ಲ ಎಂಬುದನ್ನು ಚರ್ಚಿಸುವರು.
- ಶ್ರಮದ ಪ್ರಮುಖ ಲಕ್ಷಣಗಳನ್ನು ಶ್ರಮದ ಅರ್ಥ ಮತ್ತು ವ್ಯಾಪ್ತಿಯ ಹಿನ್ನಲೆಯಲ್ಲಿ ಚರ್ಚಿಸುವುದು.

- ಶ್ರಮವು ಒಂದು ಉತ್ಪನ್ನ ಉತ್ಪಾದನಾಂಗವಾಗಿದ್ದು, ಈ ಶ್ರಮಶಕ್ತಿಯ ಗಾತ್ರವನ್ನು ಆ ದೇಶದಲ್ಲಿನ 15 ರಿಂದ 60 ವರ್ಷಗಳ ನಡುವಿನ ವಯೋಗುಂಪಿನಲ್ಲಿರುವವರ ಒಟ್ಟು ಸಂಖ್ಯೆಯಿಂದ ನಿರ್ಧರಿಸಲ್ಪಡುತ್ತದೆ ಎಂಬ ಅಂಶವನ್ನು ವಿಶ್ಲೇಷಿಸಿ ಒಪ್ಪಿಕೊಳ್ಳುವರು.
- ಶ್ರಮದ ವಿಧಗಳನ್ನು ಉದಾಹರಣೆಗಳೊಂದಿಗೆ ವಿಮರ್ಶಿಸುವುದು.
- ಉತ್ಪಾದನಾ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿನ ಕೆಲಸಗಾರರ ವಿಭಜನಾತ್ಮಕ ಶ್ರಮದಿಂದಾಗಿ ಉತ್ಪಾದನಾ ಮಾರ್ಗ ಚಮತ್ಕಾರಯುತವಾಗಿ ಮುನ್ನಡೆಯುತ್ತದೆ ಎಂಬ ಅಂಶವನ್ನು ಉದಾಹರಣೆಯ ಮೂಲಕ ಚರ್ಚಿಸಿ ಒಪ್ಪಿಕೊಳ್ಳುವರು.

  ಉದಾ : – ಗುಂಡು ಪಿನ್ನು ತಯಾರಿಕೆ
  – ಸಿದ್ಧ ಉಡುಪುಗಳ ತಯಾರಿಕೆ
  – ಪುರುಷರು ಭೇಟಿಯಾಡುವುದು
  – ಮಹಿಳೆಯರು ಅಡಿಗೆ ಮಾಡುವುದು, ಬಟ್ಟೆ ತಯಾರಿಸುವುದು, ಇತ್ಯಾದಿ.

- ಶ್ರಮ ವಿಭಜನೆಯಿಂದಾಗಿ ದಕ್ಷತೆ, ಗುಣಮಟ್ಟ, ಲಾಭ, ಸಂಶೋಧನೆ ಮತ್ತು ಅಭಿವೃದ್ಧಿ ಪ್ರಮಾಣ ಹೆಚ್ಚಾಗಿ ವಸ್ತುಗಳ ಉತ್ಪಾದನೆಗೆ ತಗಲುವ ಸರಾಸರಿ ವೆಚ್ಚವು ಕಡಿಮೆಯಾಗುತ್ತದೆ ಎಂಬುದನ್ನು ಸ್ಮರಿಸಿಕೊಳ್ಳುವರು.

  ಉದಾ : – ಗಡಿಯಾರ ತಯಾರಿಕೆ (ಬೆಂಗಳೂರು, ತುಮಕೂರು)
  – ಸೈಕಲ್ ತಯಾರಿಕೆ (ಲೂದಿಯಾನ)

- ಶ್ರಮವಿಭಜನೆಯಿಂದಾಗಿ, ಕೆಲಸಗಾರರಲ್ಲಿ ಏಕತಾನತೆ, ಜವಾಬ್ದಾರಿಯ ಕೊರತೆ, ಪರಾವಲಂಬನೆ, ನಿರುದ್ಯೋಗ, ವರ್ಗಕಲಹ ಎಂಬಿತ್ಯಾದಿ ಅನನುಕೂಲಗಳು ಉಂಟಾಗುತ್ತವೆ ಎಂಬುದನ್ನು ತಿಳಿದುಕೊಂಡು, ಶ್ರಮವಿಭಜನೆ ಬಗ್ಗೆ ಸಕಾರಾತ್ಮಕ ಭಾವನೆ ತಳೆಯುವರು.

  ಉದಾ : ಸರ್ಕಾರಿ ಒಡೆತನದ/Army Base Work Shop (ಅಲಸೂರು) ಕೈಗಾರಿಕಾ ಕೇಂದ್ರಕ್ಕೆ ಭೇಟಿ.

- ಇತ್ತೀಚೆಗೆ ಮಹಿಳೆಯರನ್ನು ಸಮಾಜದ ಎಲ್ಲಾ ವಲಯಗಳಲ್ಲೂ ದುಡಿಯುವಂತೆ ಪ್ರೋತ್ಸಾಹಿಸಲಾಗುತ್ತಿದೆ. ಆದರೂ ಅವರ ಆರ್ಥಿಕ ಸ್ಥಿತಿಗತಿ ಉತ್ತಮವಾಗಿಲ್ಲ. ಮಹಿಳೆಯರು ಒಂದಲ್ಲಾ ಒಂದು ವಿಧದ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬ ಅಂಶವನ್ನು ಚರ್ಚಿಸಿ ಮಹಿಳಾ ಸಮಾನತೆಯ ಬಗ್ಗೆ ತೀರ್ಮಾನಿಸುವರು.

- ಮಾನವನ ಉತ್ಪಾದಕ ಶ್ರಮ ಮಾತ್ರ ಆತನಿಗೆ ಆದಾಯವನ್ನು ಕೊಡುವಲ್ಲಿ ಯಶಸ್ವಿಯಾಗುತ್ತದೆ, ಆದರೆ ಇತರರ ಸಂಪತ್ತನ್ನು ದೋಚಲು ಪ್ರಯತ್ನಿಸುವುದು ಉತ್ಪಾದಕ ಶ್ರಮ ಎನ್ನಿಸಿಕೊಳ್ಳುವುದಿಲ್ಲ. ಎಂಬ ಅಂಶವನ್ನು ಹೋಲಿಸಿ ಅರ್ಥೈಸಿಕೊಳ್ಳುವರು.

  ಉದಾ : – ಆಸ್ತಿ ಸಂಪಾದನೆ ಭ್ರಷ್ಟಾಚಾರ, ಗಣಿಗಾರಿಕೆ, ಅಕ್ರಮ ಆಸ್ತಿ
  - ವಾಹನ ಕೊಳ್ಳುವಿಕೆ ಲಂಚ
  - ಆಭರಣಗಳ ಖರೀದಿ ಲಾಭ, ಕಳ್ಳತನ. ಇವುಗಳ ವ್ಯತ್ಯಾಸ ಗ್ರಹಿಸುವರು.

- ಪುನರುತ್ಪಾದನ ಶ್ರಮದಲ್ಲಿ ಮಹಿಳೆಯರನ್ನು ಶೋಷಣೆಗೆ ಗುರಿಮಾಡಲಾಗುತ್ತಿದೆ ಎಂಬ ವಿಚಾರವನ್ನು ಗಂಭೀರವಾಗಿ ಚರ್ಚಿಸಿ, ಮಹಿಳೆಯರ ಮನೆಕೆಲಸವನ್ನು ಕೂಲಿರಹಿತ ಕೆಲಸ ಎಂದು ಕರೆಯಲು ಕಾರಣವೇನೆಂಬುದನ್ನು ಚರ್ಚಿಸಿ ಒಪ್ಪಿಕೊಳ್ಳುವುದು.

  ಉದಾ : – ಮಕ್ಕಳಿಗೆ ಜನ್ಮ ನೀಡುವುದು
  - ಮಕ್ಕಳ ಲಾಲನೆ ಪಾಲನೆ ಮಾಡುವುದು
  - ಅಡಿಗೆ ಮಾಡುವುದು, ಇತ್ಯಾದಿ.

- ನಿಗದಿತ ಹಣದ ಮೊತ್ತಕ್ಕೆ, ನಿಗದಿತ ಅವಧಿಯವರೆಗೆ ಮಾಡಿದ ಸಾಲವನ್ನು ಜಮೀನುದಾರರಿಗೆ ಹಿಂತಿರುಗಿಸುವವರೆಗೆ, ಆತನ ಜಮೀನಿನಲ್ಲಿ ಕೆಲಸ ಮಾಡಲು ಬದ್ಧನಾಗಿದ್ದವನನ್ನು ಜೀತ ಕಾರ್ಮಿಕ ಎಂದು ಅರ್ಥೈಸಿಕೊಂಡು ಈ ಜೀತ ಪದ್ಧತಿಯ ಲೋಪದೋಷಗಳನ್ನು ಚರ್ಚಿಸುವುದು.
- ಬಾಲಕಾರ್ಮಿಕರು ಎಂದರೆ ಯಾರು? ಈ ಪದ್ಧತಿಗೆ ಕಾರಣಗಳೇನು? ಭಾರತದ ಮಟ್ಟಿಗೆ ಬಾಲಕಾರ್ಮಿಕ ಪದ್ಧತಿ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳೇನು? ಎಂಬುದನ್ನು ಸೋದಾಹರಣವಾಗಿ ಚರ್ಚಿಸಿ ತಿಳಿದುಕೊಳ್ಳುವರು.
- ಉದ್ಯೋಗ ಮತ್ತು ನಿರುದ್ಯೋಗಗಳಿಗಿರುವ ಅರ್ಥ ವ್ಯತ್ಯಾಸವನ್ನು ಅವಲೋಕಿಸುವರು.
- ಭಾರತದಲ್ಲಿ ನಿರುದ್ಯೋಗದ ಸ್ಥಿತಿ ಕಂಡುಬರುವ ವಿವಿಧ ಸಂದರ್ಭಗಳನ್ನು ಉದಾಹರಣೆಗಳೊಂದಿಗೆ ತಿಳಿದುಕೊಳ್ಳುವರು.

(ಸಾಮಾನ್ಯ ಸ್ಥಿತಿ, ವಾರದ ಸ್ಥಿತಿ, ದೈನಂದಿನ ಸ್ಥಿತಿಗಳಿಗೆ ಸಂಬಂಧಿಸಿದಂತೆ)

- ನಿರುದ್ಯೋಗದ ವಿಧಗಳನ್ನು ಅವು ಕಂಡು ಬರುವ ಕಾಲಮಾನದ ಸಂದರ್ಭವನ್ನು ಉದಾಹರಣೆಗಳ ಮೂಲಕ ತಿಳಿದುಕೊಳ್ಳುವರು.

| | | |
|---|---|---|
| ಉದಾ : | ಮರೆಮಾಚಿದ ನಿರುದ್ಯೋಗ | – ಅಗತ್ಯಕ್ಕಿಂತ ಹೆಚ್ಚು ಕೆಲಸಗಾರರು |
| | ಋತುಮಾನದ ನಿರುದ್ಯೋಗ | – ಕೃಷಿ ಚಟುವಟಿಕೆ |
| | ಐಚ್ಛಿಕ ನಿರುದ್ಯೋಗ | – ಕೆಲಸ ಮಾಡಲು ಇಚ್ಛಿಸದವರು<br>ಬಂಡವಾಳಗಾರ<br>ಅಗತ್ಯ ಕೂಲಿ ಸಿಗದಿದ್ದಾಗ<br>ಆಸ್ತಿಯ ವರಮಾನ ಹೆಚ್ಚಾಗಿದ್ದಾಗ. |

**4) ಜ್ಞಾನ ಪುನರ್ರಚನೆಗೆ ಇರುವ ಅವಕಾಶಗಳು**

- ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮತ್ತು ಬಂಡವಾಳಗಳ ಮೂಲಕ ಉತ್ಪಾದನಾ ಚಟುವಟಿಕೆಗಳನ್ನು ಹೆಚ್ಚಿಸಲು ಮಾನವನ ದೈಹಿಕ ಮತ್ತು ಮಾನಸಿಕ ಶ್ರಮ ಅತ್ಯವಶ್ಯಕವಾಗಿದೆ ಎಂದು ಅರ್ಥೈಸಿಕೊಂಡು 'ಶ್ರಮಸಂಸ್ಕೃತಿಯ ಪರಿಕಲ್ಪನೆ'ಯನ್ನು ತಮ್ಮದಾಗಿಸಿಕೊಳ್ಳುವರು.
- ಸಂತೋಷ ಅಥವಾ ಅನುಕಂಪಕ್ಕಾಗಿ ಮಾಡುವ ಯಾವುದೇ ಕೆಲಸವು ಶ್ರಮವಹಿಸಿಕೊಳ್ಳುವುದಿಲ್ಲ. ಆದರೆ ಸಂಬಳ ಸ್ವೀಕರಿಸಿ, ಸಲ್ಲಿಸುವ ಸೇವೆಗಳನ್ನು ಶ್ರಮ ಎಂದು ಗುರುತಿಸಲಾಗಿರುವ ಹಿನ್ನಲೆಯಲ್ಲಿ ಒಬ್ಬ ತಾಯಿ, ಹಾಗೂ ಒಬ್ಬ ವೈದ್ಯನ ನಡುವಿನ ಶ್ರಮಗಳ ವ್ಯತ್ಯಾಸವನ್ನು ಕಲ್ಪಿಸಿಕೊಳ್ಳುವರು.
- ಶ್ರಮವನ್ನು ಯಾವ ಕಾರಣಕ್ಕೂ ಶ್ರಮಿಕರಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ ಹಾಗೂ ಶ್ರಮವನ್ನು ಸಂಗ್ರಹಿಸಲು ಆಗುವುದಿಲ್ಲ ಎಂಬ ಶ್ರಮಲಕ್ಷಣಗಳ ಹಿನ್ನಲೆಯಲ್ಲಿ ವಸ್ತುಗಳ ಉತ್ಪಾದನೆ ಎಂದ ಮೇಲೆ ಅಲ್ಲಿ ಮಹತ್ವಪೂರ್ಣವಾದದ್ದು 'ಶ್ರಮ' ಎಂದು ಸ್ವೀಕರಿಸಿ ಕೊಳ್ಳುವರು.
- 'ಶ್ರಮ' ಕೌಶಲ್ಯ ಪೂರಿತವಾಗಿದ್ದರೆ ಗುಣಾತ್ಮಕ ವಸ್ತುಗಳ ಉತ್ಪಾದನೆಗೆ ಸಾಧ್ಯವಾಗುತ್ತದೆ. ಉದಾ : ಚಿತ್ರಕಲೆ, ಶಿಲ್ಪಕಲೆ, ಆಟಗಳು ಇತ್ಯಾದಿ.
- 'ಶ್ರಮ'ಪಡುವುದರಲ್ಲಿ ಹಾಗೂ ಅದಕ್ಕೆ ದೊರೆಯುವ ಸಂಬಳದಲ್ಲಿ ಯಾವುದೇ ಲಿಂಗತಾರತಮ್ಯ ಮಾಡಲಾಗುವುದಿಲ್ಲ. ಹೆಣ್ಣು ಗಂಡು ಸಮಾನ ಎಂಬ ಭಾವನೆ ಬರುವುದು.
- ಜೀತ ಕಾರ್ಮಿಕ ಪದ್ಧತಿ ಮತ್ತು ಬಾಲ ಕಾರ್ಮಿಕ ಪದ್ಧತಿಗೆ ಸಂಬಂಧಿಸಿದಂತೆ ಈ ಎರಡೂ ಪದ್ಧತಿಗಳು ಕಾನೂನು ಬಾಹಿರವಾಗಿದ್ದು, ಇವುಗಳನ್ನು ತಿರಸ್ಕರಿಸುವ ಹಾಗೂ ತಾವಿರುವ ಸಮಾಜದಿಂದ ಕಿತ್ತೊಗೆಯುವ ತೀರ್ಮಾನಕ್ಕೆ ಬರುವರು.
- ಶ್ರಮ ವರ್ಗೀಕರಣದ ಹಿನ್ನಲೆಯಲ್ಲಿ ಅರೆ ಉದ್ಯೋಗ, ಪೂರ್ಣ ಉದ್ಯೋಗ, ಮರೆ ಮಾಚಿದ ನಿರುದ್ಯೋಗ, ಋತುಮಾನದ ನಿರುದ್ಯೋಗಕ್ಕೆ ಸಂಬಂಧಿಸಿದಂತೆ ತಮ್ಮ ಕುಟುಂಬದಲ್ಲಿ, ಊರಿನಲ್ಲಿ ಕಂಡುಬರುವ ಈ ರೂಪದ ಉದ್ಯೋಗಗಳನ್ನು ಗುರುತಿಸುವರು.

- ಲಿಂಗತಾರತಮ್ಯ ತಿರಸ್ಕರಿಸಲು ಮೊದಲು ಅನಕ್ಷರತೆ, ಅಜ್ಞಾನ ಮೂಢನಂಬಿಕೆಗಳನ್ನು ಬಿಡಬೇಕೆಂಬ ತೀರ್ಮಾನಕ್ಕೆ ಬರುವರು.

5) **ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕೆ ಇರುವ ಅವಕಾಶಗಳು**

- ಕೃಷಿ ಚಟುವಟಿಕೆಯಲ್ಲಿ ಮಾನವ ಮತ್ತು ಪ್ರಾಣಿಗಳ ಶ್ರಮ ಕುರಿತ ಚರ್ಚೆ
- ಸಂಬಳಕ್ಕಾಗಿ ಸೇವೆ ಸಲ್ಲಿಸುವರ ಪಟ್ಟಿ.
- ತಮ್ಮ ಸುತ್ತ ಮುತ್ತಲಿನಲ್ಲಿರುವ ವಿವಿಧ ಬಗೆಯ ಶ್ರಮಿಕರ ಸಂದರ್ಶನ.

  ಉದಾ : ಶಿಲ್ಪಿಗ, ಚಿತ್ರಕಲಾವಿದ, ಶಿಕ್ಷಕ, ಅಡಿಗೆಭಟ್ಟ, ರೈತ, ಕಾರ್ಮಿಕ ಇತ್ಯಾದಿ.
- ನಿಮ್ಮ ಕುಟುಂಬದ ಶ್ರಮ ವಿಭಜನೆ ವಿಶ್ಲೇಷಿಸಿ.
- ದೈಹಿಕ ಮತ್ತು ಮಾನಸಿಕ ಶ್ರಮವನ್ನು ವ್ಯತ್ಯಾಸಿಸಿ.
- ಕೌಶಲ್ಯ ಪ್ರಧಾನವಾದ ಕೆಲಸಗಳನ್ನು ಗುರುತಿಸಿರಿ.
- ವೃತ್ತಿಪರ ಮತ್ತು ಆಡಳಿತಾತ್ಮಕ ಶ್ರಮದೊಳಗಿರುವ ಅಂತರ ಪಟ್ಟಿ ಮಾಡಿರಿ.
- ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಉತ್ಪಾದನೆಯಾಗುವ ಸಿದ್ಧ ಉಡುಪುಗಳ ವಿವಿಧ ಹಂತಗಳನ್ನು ಶ್ರಮ ವಿಭಜನೆಯ ಹಿನ್ನಲೆಯಲ್ಲಿ ಕ್ರೂಢೀಕರಿಸಿರಿ.
- ಶ್ರಮ ವಿಭಜನೆ ಗುಣಮಟ್ಟಾಧಾರಿತ ವಸ್ತುಗಳ ಉತ್ಪಾದನೆಗೆ ಪೂರಕ ಹೇಗೆ? ಸಲಹೆಗಳನ್ನು ನೀಡಿರಿ.
- ವಸ್ತುಗಳ ಉತ್ಪಾದನೆಯಲ್ಲಿ ಶ್ರಮ ವಿಭಜನೆಯಿಂದಾಗಿ ಜವಾಬ್ದಾರಿಯ ಕೊರತೆ ಕಂಡುಬರುತ್ತದೆ; ಸಮರ್ಥಿಸಿರಿ.
- ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಲಾಗಿದೆ. ವಿಶ್ಲೇಷಿಸಿರಿ.
- ತಾಯಿ ಮಗುವಿನ ಸಂಬಂಧ ಕುರಿತು ಚರ್ಚಿಸಿರಿ.
- ಪ್ರಜ್ಞಾವಂತ ಸಮಾಜಕ್ಕೆ ಜೀತ ಮತ್ತು ಬಾಲ ಕಾರ್ಮಿಕ ಪದ್ಧತಿಗಳು ಅನಿಷ್ಠ ಪದ್ಧತಿಗಳಾಗಿವೆ ಹೇಗೆ?
- ನಿರುದ್ಯೋಗದ ಸಮಸ್ಯೆಗಳನ್ನು ಪಟ್ಟಿ ಮಾಡಿರಿ.
- ನಿರುದ್ಯೋಗದ ವಿವಿಧ ರೂಪಗಳನ್ನು ವಿವರಿಸಿರಿ.
- 2011 ರ ಜನಗಣತಿಯ ಅನ್ವಯ ಭಾರತದ ಲಿಂಗಾನುಪಾತ ಮಕ್ಕಳು, ವಯಸ್ಕರು, ಉದ್ಯೋಗಿಗಳು ಅಕ್ಷರಸ್ಥರು, ಅನಕ್ಷರಸ್ಥರ ಮಾಹಿತಿಯನ್ನು ಸಂಗ್ರಹಿಸಿರಿ.

7) **ಕಲಿಕೆಯನ್ನು ಅನುಕೂಲಿಸುವ ವಿಧಾನಗಳು**

- ಬ್ಯಾಂಕು ಕೇಂದ್ರವೊಂದಕ್ಕೆ ಭೇಟಿ, ಅಲ್ಲಿನ ಶ್ರಮವಿಭಜನೆಯ ಕೆಲಸಗಳ ಅವಲೋಕನ.
- ನಿಮ್ಮೂರಿನ ಜಮೀನ್ದಾರಿ ರೈತನೊಬ್ಬನನ್ನು ಸಂದರ್ಶಿಸಿ, ಆತ ತನ್ನ ಜಮೀನಿನಲ್ಲಿ ಆಹಾರ ಧಾನ್ಯಗಳ ಉತ್ಪಾದನೆಗಾಗಿ ಭೂಮಿಯನ್ನು ಹೇಗೆ ಹಂಚಿಕೆ ಮಾಡಿದ್ದಾನೆ ಎಂಬ ಮಾಹಿತಿ ಸಂಗ್ರಹ.
- ಕಾರ್ಮಿಕನೊಬ್ಬನನ್ನು ಸಂದರ್ಶಿಸಿ, ಆತನ ಕೌಶಲ್ಯಪೂರಿತ ಕೆಲಸದ ಬಗ್ಗೆ ಮಾಹಿತಿ ಸಂಗ್ರಹ.
- ಒಂದು ಕಾರ್ಖಾನೆಗೆ ಭೇಟಿ ನೀಡಿ ಅಲ್ಲಿನ ಕಾರ್ಮಿಕರ ಶ್ರಮ ವಿಭಜನೆಯಿಂದ ವಸ್ತುಗಳ ಉತ್ಪಾದನೆಯಲ್ಲಾಗಿರುವ ಅನುಕೂಲವನ್ನು ಮಾಲೀಕನಿಂದ ಪಡೆದುಕೊಳ್ಳುವುದು.
- ಶ್ರಮ ವಿಭಜನೆಯು ಕೆಲವು ಅನನುಕೂಲಗಳನ್ನು ಉಂಟು ಮಾಡುತ್ತದೆ ಎಂಬುದನ್ನು ನಿಮ್ಮೂರನ್ನು ಆಧಾರವಾಗಿಟ್ಟುಕೊಂಡು ಉದಾಹರಣೆ ಮೂಲಕ ತಿಳಿಯುವುದು.

  ಉದಾ : ಬಡಗಿ, ಅಕ್ಕಸಾಲಿಗ, ಗಾರೆ ಕೆಲಸದವ, ಪುರೋಹಿತ
  ನೀರುಗಂಟಿ, ಕಾರ್ಮಿಕ, ಚಾಲಕ, ಇತ್ಯಾದಿ.
- ನಿಮ್ಮ ಶಾಲೆಯಲ್ಲಿನ ಮಹಿಳಾ ಉದ್ಯೋಗಸ್ಥರನ್ನು ಗುರುತಿಸಿರಿ.
- ನಿಮ್ಮ ಸುತ್ತಮುತ್ತ ಇರುವ ಪುರುಷ ಮತ್ತು ಮಹಿಳಾ ಉದ್ಯೋಗಿಗಳ ಪ್ರಮಾಣ ಕಂಡುಕೊಳ್ಳುವುದು.
- ಗಾರ್ಮೆಂಟ್ಸ್ ಕಾರ್ಖಾನೆಗೆ ಭೇಟಿ.
- ನಿಮಗೆ ತಿಳಿದಿರುವ ಜೀತ ಕಾರ್ಮಿಕರು ಹಾಗೂ ಬಾಲಕಾರ್ಮಿಕರನ್ನು ಪಟ್ಟಿ ಮಾಡಿರಿ.
- ಶಿಲ್ಪಕಲಾ ವೈಭವದ ದೇವಾಲಯಕ್ಕೆ ಭೇಟಿ.
- ನಿಮ್ಮ ಮನೆಯಲ್ಲಿ ವರ್ಷವಿಡೀ ಕೆಲಸ ಮಾಡುವರು, ಅಲ್ಪ ಸ್ವಲ್ಪ ಕೆಲಸ ಮಾಡುವವರು, ಕೆಲಸ ಮಾಡದೇ ಇರುವವರ ಸಂಖ್ಯೆಯನ್ನು ಗುರುತಿಸಿರಿ, ಹಾಗೂ ಇವರಲ್ಲಿ 'ಶ್ರಮಾ'ಧಾರಿತ ಕೆಲಸವನ್ನು ನಿರ್ವಹಿಸುತ್ತಿರುವವರು ಯಾರೆಂಬುದನ್ನು ಗಮನಿಸಿರಿ.
- ನಿಮ್ಮ ಸುತ್ತಮತ್ತ ಸಂಬಳಕ್ಕಾಗಿ ದುಡಿಯುವವರ ಸಂಖ್ಯೆ ಹಾಗೂ ಸಂತೋಷ, ಅನುಕಂಪದ ಹಿನ್ನಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವವರ ಪ್ರಮಾಣವನ್ನು ಗುರುತಿಸಿರಿ.

**8) ಸಂಪನ್ಮೂಲಗಳ ಕ್ರೋಢೀಕರಣ**

- 9ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕ.
- ಮಾನವಶ್ರಮ ಆಧಾರಿತವಾದ ಸಾಕ್ಷ್ಯಚಿತ್ರ, ಉದಾ : ಕೃಷಿ ಚಟುವಟಿಕೆ. (ಗದ್ದೆನಾಟಿ)
- ಬ್ಯಾಂಕ್ ಕಾರ್ಯಚಟುವಟಿಕೆಗಳ ಸಾಕ್ಷ್ಯಚಿತ್ರ (ಪಿಪಿಟಿ)
- ಬೇಲೂರು ಹಳೇಬೀಡಿನ ಚಿತ್ರಕಲಾ ವೈವಿಧ್ಯ ಕುರಿತ ಚಿತ್ರಗಳ ಸಂಗ್ರಹ.
- ಲಿಂಗ ಸಮಾನತೆ ಬಗ್ಗೆ ಸಂವಿಧಾನದ ನಿರ್ದೇಶನ ಮಾಹಿತಿ ಸಂಗ್ರಹ.
- ಭೌತಿಕ ಸರಕುಗಳ ಉತ್ಪಾದನೆಗಳ ಪಟ್ಟಿ.
- ಕೃಷಿ, ಕೈಗಾರಿಕಾ ಕಾರ್ಮಿಕರಿಗೆ ತರಬೇತಿ ನೀಡುತ್ತಿರುವ ಪಿ.ಪಿ.ಟಿ. ತಯಾರಿಕೆ.
- ಬಾಲ ಕಾರ್ಮಿಕ ರದ್ಧತಿಗಿರುವ ಸಂವಿಧಾನಾತ್ಮಕ ಕಾನೂನುಗಳ ಸಂಗ್ರಹ.
- ಜೀತ ಮತ್ತು ಬಾಲಕಾರ್ಮಿಕ ಪದ್ಧತಿ ವಿರೋಧ ಕುರಿತ ನಾಟಕಗಳ ರಚನೆ ಮತ್ತು ಪ್ರದರ್ಶನ.
- ಮಹಿಳಾ ಉದ್ಯೋಗಿಗಳು ಎದುರಿಸುತ್ತಿರುವ ಸಮಸ್ಯೆಗಳ ಸಂಗ್ರಹ.
- ಅಂತರ್ಜಾಲ ಬಳಕೆ, (ಮಹಿಳಾ ಉದ್ಯೋಗ, ಬಾಲ ಕಾರ್ಮಿಕ ವ್ಯವಸ್ಥೆ, ಜೀತ ಕಾರ್ಮಿಕ ವ್ಯವಸ್ಥೆ ಕುರಿತ ಮಾಹಿತಿಗಳಿಗಾಗಿ.)

**9) ಬೋಧನೋಪಕರಣಗಳು**

- ಅನ್ನದಾನತ ಚಿತ್ರ
- ಗಾಣದ ಚಿತ್ರ
- ಮೂಟೆ, ಕಸುಗುಡಿಸುವವರ ಚಿತ್ರಗಳು
- ಶಿಕ್ಷಕರು/ಮಕ್ಕಳನ್ನೊಳಗೊಂಡ ತರಗತಿಯ ಚಿತ್ರ
- ಬೇಟೆಯಾಡುತ್ತಿರು ಚಿತ್ರ
- ಆಟೋ ಚಾಲಕನ ಚಿತ್ರ
- ಶ್ರಮ ವಿಭಜನೆಯ ಅನುಕೂಲ ಮತ್ತು ಅನನುಕೂಲಗಳ ಚಾರ್ಟ್
- ವಿವಿಧ ಕ್ಷೇತ್ರಗಳು, ಮಹಿಳೆಯರು ಕಾರ್ಯನಿರ್ವಹಿಸುತ್ತಿರುವ ಚಿತ್ರ

- ತಾಯಿ ಮಗುವಿಗೆ ಹಾಲುಣಿಸುವ ಚಿತ್ರ
- ಬಾಲ ಕಾರ್ಮಿಕ ಪದ್ಧತಿ ತೋರಿಸುವ ಚಿತ್ರಗಳು
- ಅಂಚೆ ಕಛೇರಿ ಚಿತ್ರ – ಸಾಕ್ಷ್ಯಚಿತ್ರ
- ಸಿದ್ಧ ಉಡುಪು ಘಟಕಕ್ಕೆ ಭೇಟಿ
- ಸಕ್ಕರೆ ಕೈಗಾರಿಕೆಗೆ ಭೇಟಿ. ವಿವಿಧ ಹಂತದ ಸಕ್ಕರೆ ತಯಾರಿಕೆ ವೀಕ್ಷಣೆ.

**10) ಮನನ ಮಾಡಿಕೊಳ್ಳಬೇಕಾದ ಅಂಶಗಳು**

- ನೈಸರ್ಗಿಕ ಸಂಪನ್ಮೂಲಗಳ ಬಳಕೆಗೆ ಮಾನವ ಶ್ರಮ ಅಗತ್ಯ.
  ಉದಾ : ಗಣಿಗಾರಿಕೆ, ತೈಲ ಬಾವಿಗಳು, ಅರಣ್ಯ ಸಂರಕ್ಷಣೆ.
- ಸಂತೋಷ ಮತ್ತು ಅನುಕಂಪಕ್ಕಾಗಿ ಮಾಡುವ ಕೆಲಸ ಶ್ರಮವಲ್ಲ.
- ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಬೇಕು.
- ಜೀತ ಪದ್ಧತಿ ನಿರ್ಮೂಲನೆ.
- ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ
- ಶ್ರಮದಲ್ಲಿ ಕೌಶಲ್ಯವಿರಲಿ
- ಶ್ರಮ ಕೌಶಲ್ಯದಿಂದಿರಬೇಕಾದರೆ ತರಬೇತಿ ಅನಿವಾರ್ಯ
- ಶ್ರಮದಲ್ಲಿ ದೈಹಿಕ, ಮಾನಸಿಕ ಎಂಬ ಎರಡು ವಿಧಗಳಿವೆ.
- ಬೌದ್ಧಿಕ ಶ್ರಮ ಇತ್ತೀಚೆಗೆ ಹೆಚ್ಚು ಪ್ರಾಧಾನ್ಯತೆ ಗಳಿಸಿದೆ.
- ಸಮಾನತೆ
- ನಿರುದ್ಯೋಗ ದೇಶಕ್ಕೆ ಮಾರಕ
- ಆಳಾಗಿ ದುಡಿ ಅರಸನಾಗಿ ಬಾಳು
- ದುಡಿಮೆಯೇ ದೇವರು
- ವ್ಯಕ್ತಿ ಶ್ರಮಪಟ್ಟರೆ ಕ್ರಿಯಾಶೀಲವಾಗಿರುತ್ತಾನೆ.
- ಸೋಮಾರಿತನ ಬದುಕಿಗೆ ಮಾರಕ
- ಉತ್ತಮ ಶ್ರಮ ಉತ್ತಮ ಆದಾಯ ತಂದುಕೊಡುತ್ತದೆ.

# 13. ಕಲಿವಿನ ವಿಧಾನಗಳನ್ನು ಸಂಘಟಿಸಲು ಕೆಲವು ಉದಾಹರಣೆಗಳು

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಶಿಶು ಕೇಂದ್ರಿತ, ಚಟುವಟಿಕಾಧಾರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಈಗಾಗಲೇ ನಾವೆಲ್ಲರೂ ಅರ್ಥೈಸಿಕೊಂಡಿರುವಂತೆ ಕಂಠಪಾಠ ಕಲಿಕೆಯಿಂದ ಹೊರಬಂದು ಕಲಿಕಾರ್ಥಿಯನ್ನು ಆತನ ಸ್ವ ಪ್ರೇರಣೆಯೊಂದಿಗೆ ಕಲಿಕೆಗೆ ಸಿದ್ಧಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ವಿಜ್ಞಾನಕ್ಕೆ ಸಂಬಂಧಿಸಿದಂತೆ, 18 ವಿಧಾನಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ :

1) ಕಥಾ ನಿರೂಪಣಾ ವಿಧಾನ
2) ಯೋಜನಾ ವಿಧಾನ
3) ಪಾಠ ಅವಲೋಕನ ವಿಧಾನ
4) ಚರ್ಚಾ ವಿಧಾನ
5) ಸಮಸ್ಯಾ ಪರಿಹಾರ ವಿಧಾನ
6) ಮೂಲಾಧಾರಿತ ವಿಧಾನ
7) ಶಿಶು ಕೇಂದ್ರಿತ ವಿಧಾನ
8) ಘಟಕ ಪದ್ಧತಿ
9) ವೀಕ್ಷಣಾ ವಿಧಾನ
10) ಹೊರ ಸಂಚಾರ ವಿಧಾನ
11) ಪಾತ್ರಾಭಿನಯ ವಿಧಾನ
12) ಕ್ಷೇತ್ರ ಅಧ್ಯಯನ ವಿಧಾನ
13) ಪ್ರಯೋಗ ವಿಧಾನ
14) ಕ್ರೀಡಾ ವಿಧಾನ
15) ಪ್ರಶ್ನೋತ್ತರ ವಿಧಾನ
16) ಸಂಶೋಧನಾ ವಿಧಾನ
17) ಸಂದರ್ಶನ ವಿಧಾನ
18) ವಿಶ್ಲೇಷಣಾತ್ಮಕ ವಿಧಾನ

ಶಿಕ್ಷಕರು ದೈನಂದಿನ ಕಲಿಕಾಂಶದ ಸ್ವರೂಪವನ್ನು ಅರ್ಥೈಸಿಕೊಂಡು ಮಕ್ಕಳ ಗುಣಾತ್ಮಕ ಕಲಿಕೆಗಾಗಿ ಬೇಕಾದಂತಹ ಅಗತ್ಯಗಳನ್ನು ಅನುಕೂಲಿಸಲು ಈ ಮೇಲಿನ ಕಲಿವಿನ ವಿಧಾನಗಳನ್ನು ತರಗತಿಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ ಹಾಗೂ ಈ ವಿಧಾನಗಳು ಚಟುವಟಿಕೆ ಆಧಾರಿತವಾಗಿರಬೇಕು ಎಂಬುದನ್ನು ಶಿಕ್ಷಕರು ಮರೆಯುವಂತಿಲ್ಲ.

ಈ ಹಿನ್ನಲೆಯಲ್ಲಿ 9ನೇ ತರಗತಿ ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ಎರಡು ಘಟಕಗಳನ್ನು ತೆಗೆದುಕೊಂಡು ಆರು ವಿಧದ ಕಲಿಕಾ ವಿಧಾನಗಳನ್ನು ಹೇಗೆ ಬಳಸಿಕೊಳಳಬಹುದು ಎಂಬ ಪರಿಕಲ್ಪನೆಯನ್ನು ಇಲ್ಲಿ ಉದಾಹರಣೆಯಾಗಿ ನೀಡಲಾಗಿದೆ. ಶಿಕ್ಷಕರು ಇದಕ್ಕಿಂತಲೂ ಇನ್ನು ಉತ್ತಮವಾದ ಚಟುವಟಿಕೆಗಳ ಮೂಲಕ ಕಲಿವನ್ನುಂಟುಮಾಡಲು ಅವಕಾಶವು ಇರುತ್ತದೆ ಎಂಬುದನ್ನು ಮುಂದೆ ನೀಡಲಾಗಿರುವ ಉದಾಹರಣೆಗಳೊಂದಿಗೆ ಶಿಕ್ಷಕರು ಗ್ರಹಿಸಬಹುದು.

## ಕೆಲವು ಬೋಧನಾ ವಿಧಾನಗಳೊಂದಿಗೆ
## ಸೂಚಿತ ಚಟುವಟಿಕೆಗಳು ಮತ್ತು ಅವುಗಳ ನಿರ್ವಹಣೆ
## ಪಾಠದ ಹೆಸರು : ನಮ್ಮ ರಾಜ್ಯ ಕರ್ನಾಟಕ

**ಕಲಿಕಾಂಶ 1 :** **'ಚರ್ಚಾ ವಿಧಾನ' ಪದ್ಧತಿ**

**ಕರ್ನಾಟಕ ರಾಜ್ಯದ ವೈಶಿಷ್ಟ್ಯತೆ**

ಈ ವಿಷಯ ಜ್ಞಾನವನ್ನು ಮಕ್ಕಳು ಕಟ್ಟಿಕೊಳ್ಳಲು ಅನುಕೂಲವಾಗುವಂತೆ ಶಿಕ್ಷಕರು ಕಲಿಕಾ ಪರಿಸರವನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ. ಭಾರತದ ಭೂಪಟವನ್ನು ತರಗತಿಯಲ್ಲಿ ಪ್ರದರ್ಶಿಸಿ ಈ ಭೂಪಟದಲ್ಲಿ ಕರ್ನಾಟಕ ರಾಜ್ಯವನ್ನು ಗುರುತಿಸಿರಿ ಎಂದು, ವಿಷಯವನ್ನು ವಿದ್ಯಾರ್ಥಿಗಳ ಮುಂದಿಟ್ಟ ಚರ್ಚೆ ಹಾಗೂ ಸಂವಾದಗಳ ಮೂಲಕ ಜ್ಞಾನ ರಚನೆಗೆ ಅವಕಾಶ ಕಲ್ಪಿಸುತ್ತಾರೆ.

**ಚಟುವಟಿಕೆ 1** : ಶಿಕ್ಷಕರು ತಾವು ಸೂಚಿಸಿದ ವಿಷಯವನ್ನು ಕುರಿತು ತರಗತಿಯಲ್ಲಿ ಎರಡು ಗುಂಪುಗಳನ್ನು ಮಾಡಿ, ಕರ್ನಾಟಕ ರಾಜ್ಯದ ವೈಶಿಷ್ಟ್ಯತೆಯನ್ನು ಕುರಿತು ಚರ್ಚಿಸಲು ಅವಕಾಶ ನೀಡುವುದು.

**ಗುಂಪು 1 :**

* **ಕರ್ನಾಟಕದ ಭೌಗೋಳಿಕ ಹಿನ್ನಲೆ :** ಭೂಸ್ವರೂಪ, ಸಸ್ಯವರ್ಗ ಮತ್ತು ಪ್ರಾಣಿವರ್ಗ, ಮಣ್ಣು, ನದಿಗಳು, ಖನಿಜ ಸಂಪನ್ಮೂಲಗಳನ್ನು ಕುರಿತು, ಚರ್ಚೆ ನಡೆಸುವುದು.
* **ಕರ್ನಾಟಕ ರಾಜ್ಯದ ಎಲ್ಲೆ :** ಉತ್ತರದಲ್ಲಿ ಬೀದರ್‌ನಿಂದ ದಕ್ಷಿಣದಲ್ಲಿ ಚಾಮರಾಜನಗರದ ವರೆಗಿನ ವಿಶಾಲ ಕರ್ನಾಟಕ ರಾಜ್ಯದ ಪರಿಕಲ್ಪನೆಯನ್ನು ಹೇಳುವರು.
* **ಭೌಗೋಳಿಕ ಸ್ವರೂಪ/ ಲಕ್ಷಣಗಳು :** ಬಯಲು ಪ್ರದೇಶ ಘಟ್ಟಪ್ರದೇಶ ಕರಾವಳಿ ಪ್ರದೇಶ, ನದಿ ಉಗಮ ಸ್ಥಳಗಳನ್ನು ಕುರಿತಂತೆ.
* **ಸಸ್ಯವರ್ಗ :** ರಾಜ್ಯದಲ್ಲಿ ಮುಖ್ಯವಾಗಿ ಬೆಳೆಯುವ ಸಸ್ಯಗಳಾದ ಶ್ರೀಗಂಧ, ತ್ಯಾಗ, ಬೇಟಿ, ಸಾಲ್ ಮರಗಳ ಸಹ್ಯಾದ್ರಿ ಶ್ರೇಣಿ ಕುರಿತಂತೆ.
* **ಪ್ರಾಣಿವರ್ಗ :** ಹುಲಿ, ಸಿಂಹ, ಚಿರತೆ, ಕರಡಿ, ಜಿಂಕೆ, ಕಡವೆ ಪ್ರಾಣಿಗಳನ್ನು ಕುರಿತಂತೆ ಪ್ರತಿಕ್ರಿಯೆ ನೀಡುವರು.
* **ಮಣ್ಣು :** ಕರ್ನಾಟಕ ರಾಜ್ಯದಲ್ಲಿ ಕೆಂಪು, ಮರಳು, ಕಪ್ಪು ಮಣ್ಣು ಜಂಬಿಟ್ಟಿಗೆ ಮಣ್ಣನ್ನು ಕುರಿತು ಹೇಳುವರು.

ಈ ಮೇಲ್ಕಂಡ ಅಂಶಗಳನ್ನು ಮಕ್ಕಳು ತಮಗೆ ತಿಳಿದಿರುವ ಪೂರ್ವಜ್ಞಾನದಿಂದ ತರಗತಿಯಲ್ಲಿ ಪ್ರಸ್ತುತಪಡಿಸುವರು.

**ಗುಂಪು – 2 :**

ಕರ್ನಾಟಕ ರಾಜ್ಯದ ವಿಭಿನ್ನ ವೈಶಿಷ್ಟ್ಯವಾದ ಕಲೆ, ಸಂಸ್ಕೃತಿ, ಸಾಹಿತ್ಯ, ಧಾರ್ಮಿಕ, ಆಧ್ಯಾತ್ಮಿಕ, ಐತಿಹಾಸಿಕ ಹಾಗೂ ಪುಣ್ಯ ಕ್ಷೇತ್ರಗಳನ್ನು ಕುರಿತು ಪ್ರಸ್ತುತಪಡಿಸುವರು.

* **ಕಲೆ :** ಕರ್ನಾಟಕದ ದೇವಾಲಯಗಳ ದ್ರಾವಿಡಶೈಲಿ ಹೊಯ್ಸಳ ಶೈಲಿ ನಾಗಶೈಲಿಗಳನ್ನು ಕುರಿತು ಹೇಳುವರು.
* **ಸಂಸ್ಕೃತಿ :** ಕರ್ನಾಟಕ ನೃತ್ಯ, ಯಕ್ಷಗಾನ, ಬಯಲಾಟ, ಸಣ್ಣಾಟ, ಭರತನಾಟ್ಯ, ಚಿತ್ರಕಲೆ ಕುರಿತು ಚರ್ಚೆ ನಡೆಸುವರು.
* **ಆಚಾರ–ವಿಚಾರ :** ವೇಷಭೂಷಣ, ಊಟ ಉಪಚಾರ, ಭಾಷೆಯ ಬಳಕೆಗಳನ್ನು ಕುರಿತು ಪ್ರಸ್ತುತಪಡಿಸುವರು.
* **ಸಾಹಿತ್ಯ :** ಕವಿರಾಜ ಮಾರ್ಗಕಾರ, ಪಂಪ, ರನ್ನ, ಬಸವ, ಅಕ್ಕ, ದಾಸರು, ಕುಮಾರವ್ಯಾಸ, ಕುವೆಂಪು, ಇನ್ನಿತರ ಕವಿಗಳ ಕೃತಿಗಳ ರಚನೆ ಕುರಿತು ಪ್ರಸ್ತುತಿ.
* **ಧಾರ್ಮಿಕ :** ಹಿಂದೂ, ಮುಸಲ್ಮಾನ್, ಕ್ರೈಸ್ತ, ಜೈನ, ಬೌದ್ಧ ಧರ್ಮಗಳನ್ನು ಕುರಿತು ಅಭಿಪ್ರಾಯ.
* **ಐತಿಹಾಸಿಕ :** ಹಂಪಿ, ಪಟ್ಟದಕಲ್ಲು, ಬಾದಾಮಿ, ಬಿಜಾಪುರ, ಬೇಲೂರು, ಮೈಸೂರು ಕುರಿತಂತೆ ಇತಿಹಾಸದ ಪರಿಚಯ ಪ್ರಸುತಿ.
* **ಪುಣ್ಯಕ್ಷೇತ್ರಗಳು :** ಧರ್ಮಸ್ಥಳ, ಶೃಂಗೇರಿ, ಶ್ರವಣಬೆಳಗೊಳ, ಕೂಡಲಸಂಗಮ, ಉಡುಪಿ, ಕ್ಷೇತ್ರಗಳನ್ನು ಒಳಗೊಂಡಂತೆ ಪರಿಚಯಾತ್ಮಕ ಚರ್ಚೆ.

ಈ ಮೇಲ್ಕಂಡ ಅಂಶಗಳನ್ನು ಮಕ್ಕಳು ತಮಗೆ ತಿಳಿದಂತೆ ಪೂರ್ವಜ್ಞಾನದಿಂದ ತರಗತಿಯಲ್ಲಿ ಚರ್ಚೆಗೆ ತೊಡಗಿಸಿಕೊಳ್ಳುವರು. ಜೊತೆಗೆ ಇಲ್ಲಿನ ಚರ್ಚೆಗೆ ಬರುವ ಅಂಶಗಳು, ಪ್ರತಿಕ್ರಿಯೆಯ ರೂಪದಲ್ಲಿದ್ದು, ಅನಿರೀಕ್ಷಿತವಾಗಿರಲೂ ಬಹುದು.

ಹೀಗೆ ಮಕ್ಕಳಿಂದ ಬರುವ ಎಲ್ಲಾ ಪ್ರತಿಕ್ರಿಯೆಗಳನ್ನು ಶಿಕ್ಷಕರು ಸ್ವೀಕರಿಸಿ ಕರ್ನಾಟಕ ರಾಜ್ಯದ ವೈಶಿಷ್ಟ್ಯವನ್ನು ಮಕ್ಕಳ ಸಾಮರ್ಥ್ಯವಾರು ಹಿನ್ನಲೆಯಲ್ಲಿ ಬಂದ ಉತ್ತರಗಳಿಂದ ಪರಸ್ಪರ ಚರ್ಚಿಸುವಂತೆ ಮಾಡಿ ಒಟ್ಟಾರೆ ಕರ್ನಾಟಕದ ವಿಭಿನ್ನರೂಪದ ಶ್ರೀಮಂತ ವೈಶಿಷ್ಟ್ಯವನ್ನು ಕಲಿಯುವಂತೆ ಅವಕಾಶ ಕಲ್ಪಿಸುವರು. ಹಾಗೂ ಗುಂಪು ಗುಂಪುಗಳ ನಡುವೆ ಅವರೇ ಪ್ರಶ್ನೆಗಳನ್ನು ಕೇಳುವಂತೆ ಉತ್ತರಗಳನ್ನು ಪಡೆಯುವಂತೆ ಮಕ್ಕಳು ಪ್ರೇರೇಪಿಸುವರು.

**ಚಟುವಟಿಕೆ – 2 ಕಲಿಕಾ ನಿಲ್ದಾಣ ಮಾದರಿ**

**ಕಲಿಕಾಂಶ 2,** ಕರ್ನಾಟಕ ಎಂಬ ಹೆಸರಿನ ಹಿನ್ನಲೆ

ಸಮಾಜ ವಿಜ್ಞಾನ ವಿಷಯದಲ್ಲಿ ಬರುವ ವಂಶಾವಳಿಗಳು, ದಾರ್ಶನಿಕರು ವಾಸ್ತುಶಿಲ್ಪ, ಆಡಳಿತದ ಅಂಗಗಳು, ಭೂಮಿಯ ಮೇಲ್ಪದರಗಳು, ಸಸ್ಯವರ್ಗ, ಪ್ರಾಣಿವರ್ಗ, ಸಮಾಜ ವಿಜ್ಞಾನಿಗಳು, ಕುಟುಂಬ, ಆರ್ಥಿಕ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದಾದರೂ ಒಂದು ಘಟಕವನ್ನು ಕಲಿಕಾ ನಿಲ್ದಾಣ ಮಾದರಿಯಲ್ಲಿ ಕಲಿವನ್ನು ಉಂಟುಮಾಡಬಹುದು.

ಪ್ರಸ್ತುತ **'ಕರ್ನಾಟಕ ಎಂಬ ಹೆಸರಿನ ಹಿನ್ನಲೆ'** ಎಂಬ ಘಟಕಕ್ಕೆ ಸಂಬಂಧಿಸಿದಂತೆ, **'ಕರುನಾಡು'** ಎಂದು ಹೆಸರು ಬರಲು ಕಾರಣ, ಕರ್ನಾಟಕ ಕುರಿತು ಕವಿರಾಜಮಾರ್ಗಕಾರನ ಉಲ್ಲೇಖ, ಮೈಸೂರು ರಾಜ್ಯದ ಉದಯ, ಕನ್ನಡ ರಾಜ್ಯೋತ್ಸವ ಆಚರಣೆ ಮಹತ್ವ, ಕುರಿತಂತೆ ಇರುವ ಅಂಶಗಳನ್ನು ಕಾರ್ಡ್‌ಗಳಲ್ಲಿ ವಿವರವಾಗಿ ಬರೆಯುವುದು. ಅವುಗಳನ್ನು ತರಗತಿಯ ನಿಗಧಿತ ಸ್ಥಳದಲ್ಲಿ ಇಡುವುದು. ನಂತರ ತರಗತಿಯ ಮಕ್ಕಳನ್ನು ನಾಲ್ಕು ಅಥವಾ ಐದು ಗುಂಪುಗಳನ್ನು (ಕಾರ್ಡ್ ಅನುಸಾರವಾಗಿ) ರಚಿಸಿ ಕಾರ್ಡ್ ಇಟ್ಟಿರುವ ಸ್ಥಳಕ್ಕೆ ಪ್ರತಿ ಗುಂಪು ಆವರ್ತದಲ್ಲಿ ಚಲಿಸುವಂತೆ ಮಾಡಬೇಕು, ಪ್ರತಿಗುಂಪು ಅಲ್ಲಿನ ವಿಷಯ ಓದಿ ತಮ್ಮ ತಮ್ಮಲ್ಲಿ ಚರ್ಚಿಸಬೇಕು. ನಂತರ ಮುಂದಿನ ಕಾರ್ಡ್ ಬಳಿ ಚಲಿಸಬೇಕು. ಕಾರ್ಡ್ ಇರಿಸಿದ ಸ್ಥಳವೇ ಕಲಿಕೆಯ ನಿಲ್ದಾಣ, ಇದರಿಂದ ಮಕ್ಕಳು ಸ್ವಯಂ ಉತ್ಸಾಹಿಗಳಾಗಿ ಪರಸ್ಪರ ಚರ್ಚೆಯ ಮೂಲಕ ಕಲಿಕೆಯಲ್ಲಿ ತೊಡಗಿಕೊಳ್ಳುತ್ತಾರೆ. ಉಪನ್ಯಾಸ ಪದ್ಧತಿ ಅನಿವಾರ್ಯ ಎಂದು ಭಾವಿಸಿದ್ದವರಿಗೆ ಅದನ್ನು ತಪ್ಪಿಸಲು ಈ ವಿಧಾನ ಹೇಳಿ ಮಾಡಿಸಿದ ಮಾದರಿಯಾಗಿ ಎಂದು ಒಪ್ಪಿಕೊಳ್ಳಬಹುದು, ಹಾಗು ಶಿಕ್ಷಕರು ಪ್ರತಿಗುಂಪಿಗೂ ಚಲಿಸುತ್ತಾ ಚರ್ಚೆ ಅನುಕೂಲಿಸುತ್ತಾರೆ.

ಇದೇ ರೀತಿಯಾಗಿ ಕಲಿಕಾ ನಿಲ್ದಾಣ ವಿಧಾನದಲ್ಲಿ ಇನ್ನೂ ಮೂರು ವಿಧಾನಗಳಿವೆ. ಅವುಗಳೆಂದರೆ, ಪರಿಣತ ಗುಂಪು ಕಲಿಕೆ, ಸಹವರ್ತಿ ಕಲಿಕೆ, ಗುಂಪು ಕಲಿಕಾ ವಿಧಾನಗಳಿವೆ.

* **ಪರಿಣತ ಗುಂಪು ಕಲಿಕೆ :** ಇಲ್ಲಿನ ಗುಂಪಿನಲ್ಲಿ ಮೊದಲ ಹಂತದಲ್ಲಿ ಐದು ಅಥವಾ ಆರು ಮಕ್ಕಳ ಗುಂಪು ರಚಿಸುವುದು. ಈ ಗುಂಪುಗಳಲ್ಲಿ ಒಂದು ಗುಂಪು ಪರಿಣತ ಗುಂಪು ಎಂದು ಪರಿಗಣಿಸಲ್ಪಡುತ್ತದೆ. ಕಾರಣ ಶಿಕ್ಷಕರು ತಮ್ಮ ಗಮನಕ್ಕೆ ಬರುವಂತೆ ತರಗತಿಯ ಪರಿಣತ ವಿದ್ಯಾರ್ಥಿಗಳು ಒಂದು ಗುಂಪಿಗೆ ಬರುವಂತೆ ನಂಬರ್ (ಸಂಖ್ಯೆ)ಗಳನ್ನು ನೀಡಿರುತ್ತಾರೆ. ಹೀಗೆ ಒಂದು ಕಡೆ ಬಂದ ಪರಿಣತ ಗುಂಪು (ನಮ್ಮ ಗುಂಪು) ಎಂದು ಕರೆಸಿಕೊಳ್ಳುತ್ತದೆ. ಈ ಗುಂಪಿನವರು, ಆವರ್ತದಲ್ಲಿ ಪ್ರತಿ ಗುಂಪಿಗೂ (ಕಲಿಕಾ ನಿಲ್ದಾಣ) ಚಲಿಸುತ್ತಾ ಕಲಿಕೆಯನ್ನು ಅನುಕೂಲಿಸುತ್ತಾರೆ.

(**ಗಮನಿಸಿರಿ :** ಗುಂಪುಗಳಿಗೆ ಅನುಸಾರವಗಿ ಕಲಿಕಾಂಶದ ಅಂಶಗಳನ್ನು ನೀಡಬೇಕು. ಉದಾ : ಕಲಿಕಾಂಶ ಭಾರತದ ಭೂಪಟದಲ್ಲಿ ಕರ್ನಾಟಕದಲ್ಲಿನ ಅಕ್ಷಾಂಶ ರೇಖಾಂಶಗಳು, ಕರ್ನಾಟಕದ ಎಲ್ಲೆ ಭೂ ಮತ್ತು ಜಲ ಮೇರೆಗಳು, ಕರ್ನಾಟಕದ ಗಡಿ ರಾಜ್ಯಗಳು – ಹೀಗೆ).

ಈ ಅಂಶಗಳನ್ನು ಕುರಿತು ಚರ್ಚಿಸಿದ ನಂತರ ಪರಿಣತರ ಗುಂಪಿನ ಸದಸ್ಯರು ತಮ್ಮ ಮೂಲ ಗುಂಪಿಗೆ ಮರಳಿ ತಮ್ಮ ಅನುಭವಗಳನ್ನು ಪರಿಸ್ಪರ ವಿನಿಮಯಮಾಡಿಕೊಳ್ಳುತ್ತಾರೆ. ಪ್ರತಿ ಸದಸ್ಯರೂ ಒಂದೊಂದು ವಿಷಯವನ್ನು ಚರ್ಚಿಸಿ ಒಂದು ಕಡೆ ತರಗತಿ ಗುಂಪುಗಳನ್ನು ಸೇರಿಸಿ ವಿಷಯಗಳನ್ನು ಮತ್ತೆ ಹಂಚಿಕೊಳ್ಳುತ್ತಾರೆ. ಹಾಗೂ ಕೊನೆಯಲ್ಲಿ ಇನ್ನೂ ಹೆಚ್ಚಿನ ವಿವರಗಳಿಗೆ ಶಿಕ್ಷಕರನ್ನು ಸಂಪರ್ಕಿಸುತ್ತಾರೆ.

* **ಸಹವರ್ತಿ ಕಲಿಕೆ :**

ಒಂದು ತರಗತಿಯ ಅಷ್ಟು ವಿದ್ಯಾರ್ಥಿಗಳಲ್ಲಿ ಪರಸ್ಪರ ಸ್ನೇಹ, ಆತ್ಮೀಯತೆ, ಅನುಸರಣೆಗುಣ ಇದ್ದೇ ಇರುತ್ತದೆ. ಈ ಸಂದರ್ಭವನ್ನು ಗಮನಿಸಿದ ಶಿಕ್ಷಕರು, ಘಟಕದ ಕಲಿಕಾಂಸಕ್ಕೆ ಸಂಬಂಧಿಸಿದಂತೆ ವಿಷಯಗಳನ್ನು ಗ್ರಹಿಸಲು ಚೀಟಿಗಳನ್ನು ಬರೆದಿಡುವುದು. ಮಕ್ಕಳು ತೆಗೆದುಕೊಂಡ ಚೀಟಿಯಲ್ಲಿನ ಮಾಹಿತಿಯು/ಜ್ಞಾನವು ತನಗೆ ತಿಳಿಯದೇ ಇದ್ದಾಗ, ತನ್ನ ಮಿತ್ರ/ಸಹವರ್ತಿ, ಬಳಿ ಕೇಳಿ ತಿಳಿದುಕೊಳ್ಳುವುದು, ಆತನಿಗೂ ತಿಳಿಯದಿದ್ದರೆ ಮತ್ತೊಬ್ಬ ಸಹವರ್ತಿಯ ಬಳಿ ಪರಸ್ಪರ ಕೇಳಿ ತಿಳಿದುಕೊಳ್ಳುವುದು. ತರಗತಿಯ ಯಾವೊಬ್ಬ ಮಗುವಿಗೂ ತಿಳಿಯದೇ ಇದ್ದ ಕಲಿಕಾಂಶದ ಜ್ಞಾನವನ್ನು ಕಡೆಯಲ್ಲಿ ಶಿಕ್ಷಕರು ಅನುಕೂಲಿಸುವರು.

ಉದಾ : – ಕಲಿಕಾಂಶವಾಗಿ – ವಿಶಾಲ ಕರ್ನಾಟಕದ ಪರಿಕಲ್ಪನೆ

– ಕರ್ನಾಟಕದ ವಿಸ್ತೀರ್ಣ ಮತ್ತು ಗಾತ್ರ.

– ಕರ್ನಾಟಕದ ಜನಸಂಖ್ಯೆ ಸ್ಥಾನ.

* **ಗುಂಪು ಕಲಿಕೆ :**

ಗುಂಪು ಕಲಿಕೆಗೆ ಸಂಬಂಧಿಸಿದಂತೆ ತರಗತಿಯ ಒಟ್ಟು ವಿದ್ಯಾರ್ಥಿಗಳಲ್ಲಿ ಎರಡು ಗುಂಪುಗಳನ್ನು ರಚಿಸುವುದು. ಈ ಗುಂಪುಗಳ ಸಂಖ್ಯೆಯನ್ನು ಗರಿಷ್ಠ ಹತ್ತು ಗುಂಪುಗಳನ್ನು ಮಾಡಿಕೊಳ್ಳಬಹುದು. ಈ ಗುಂಪುಗಳಿಗೆ ಈ ಕೆಳಗಿನ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಚರ್ಚಾಂಶಗಳನ್ನು ಪ್ರತಿಗುಂಪಿಗೂ ನೀಡುವುದು.

**ಕಲಿಕಾಂಶ :** ವಿಕೇಂದ್ರೀಕೃತ ಆಡಳಿತವಾಗಿ – ಕರ್ನಾಟಕ.

ಚರ್ಚಾಂಶಗಳು : ಕರ್ನಾಟಕದ, ಜಿಲ್ಲೆಗಳು, ತಾಲ್ಲೂಕುಗಳು, ಹೋಬಳಿಗಳು, ಪಟ್ಟಣ, ನಗರಗಳು, ಹಳ್ಳಿಗಳು, ಚಿಕ್ಕ ಮತ್ತು ದೊಡ್ಡ ಜಿಲ್ಲೆ ಆಡಳಿತಾತ್ಮಕ ವಿಭಾಗಗಳು.

ಈ ಚರ್ಚಾಂಶಗಳನ್ನು ಒಳಗೊಂಡಂತೆ ಕಲಿಕಾರ್ಥಿಗಳ ಪ್ರತಿ ಗುಂಪಿಗೆ ಕಲಿಕಾಂಶಕ್ಕೆ ಪೂರಕವಾದ ಚಟುವಟಿಕೆಗಳನ್ನು ಶಿಕ್ಷಕರು ಆಯೋಜಿಸುವುದು.

ಉದಾ : – ಮಕ್ಕಳಿಗೆ ತಿಳಿದಿರುವ ಜಿಲ್ಲೆಗಳ ಪಟ್ಟಿ ಮಾಡಿಸುವುದು.

– ಮಕ್ಕಳ ಗ್ರಾಮಗಳ ಹೆಸರುಗಳನ್ನು ಬರೆಯಲು ತಿಳಿಸುವುದು.

ಹೀಗೆ ಪ್ರತಿ ಗುಂಪುಗಳಲ್ಲಿಯ ಚರ್ಚೆಯಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಶಿಕ್ಷಕರು ಗಮನಿಸುತ್ತಾ ಅಗತ್ಯ ಮಾರ್ಗದರ್ಶನ ನೀಡುವುದು. ಗುಂಪಿನಲ್ಲಿ ಮಗುವಿನ ಭಾಗವಹಿಸುವಿಕೆ, ಅಲ್ಲಿ ಉಂಟಾಗಬಹುದಾದ ಗೊಂದಲ ಅಸ್ಪಷ್ಟತೆಗಳಿಗೆ ಅಗತ್ಯ ಸಲಹೆ ನೀಡುತ್ತಾ ಪರಸ್ಪರ ಕಲಿಕೆಗೆ ಹೆಚ್ಚು ಅವಕಾಶ ನೀಡುವುದು.

ಪ್ರಸ್ತುತ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಈ ರೀತಿಯ ಗುಂಪು ಚರ್ಚೆ ಹಾಗೂ ಜ್ಞಾನ ಸಂಗ್ರಹಣಾ ಚಟುವಟಿಕೆಗಳು ಇದ್ದು ಇವು ಮಗುವಿನ ಕಲಿಕಾ ಹಂದರಗಳನ್ನು ತುಂಬಲು ಹಾಗೂ ಅವರ ಪೂರ್ವಜ್ಞಾನದೊಂದಿಗೆ ತಾವೇ ಜ್ಞಾನವನ್ನು ಕಟ್ಟಿಕೊಳ್ಳಲು ಅವಕಾಶಗಳು ಇವೆ.

ಈ ಮೇಲ್ಕಂಡ ಎಲ್ಲ ನಾಲ್ಕು ಕಲಿಕಾ ನಿಲ್ದಾಣ ವಿಧಾನಗಳಿಂದ ಮಗುವಿನ ಮಾತುಗಾರಿಕೆ, ಪಾಲ್ಗೊಳ್ಳುವಿಕೆ, ಪರಸ್ಪರ ವಿನಿಮಯ, ಸಂವಹನ, ಹಾಗೂ ದಾಖಲೀಕರಣವು ಪ್ರಧಾನವಾಗಿರುತ್ತದೆ. ತನಗೆ ತಿಳಿದಿರುವ ಜ್ಞಾನದ ಮೂಲಕ ಹೊಸ ಸನ್ನಿವೇಶವೊಂದರಲ್ಲಿ ಆ ಜ್ಞಾನವನ್ನು ಪುನರ್ರಚಿಸಿಕೊಳ್ಳಲು ಮಗುವಿಗೆ ಸಾಧ್ಯವಾಗುತ್ತದೆ. ಪ್ರತಿ ಸಂದರ್ಭದಲ್ಲಿಯೂ ಮಗುವಿಗೆ ಹಿಮ್ಮಾಹಿತಿ ನೀಡಬಹುದಾದ ಹಾಗೂ ಮಗುವೇ ಹಿಮ್ಮಾಹಿತಿಯನ್ನು ನೀಡಲು ಅವಕಾಶವೂ ಇರುತ್ತದೆ.

**ಚಟುವಟಿಕೆ – 3, ಸಮಾಜಶಾಸ್ತ್ರ (ವಿಭಾಗ)**

# ಅಧ್ಯಾಯ–1 : ಕುಟುಂಬ

**ಕಲಿಕಾಂಶಗಳು : ಜ್ಞಾನ ರಚನಾ ಅಂಶಗಳು**

* ಕುಟುಂಬ ಪದದ ಅರ್ಥ
* ಕುಟುಂಬದ ಲಕ್ಷಣಗಳು
* ಕುಟುಂಬದಲ್ಲಿ ಮಗುವಿನ ಬೆಳವಣಿಗೆ
* ಕುಟುಂಬದ ಪ್ರಕಾರಗಳು
* ಅವಿಭಕ್ತ ಕುಟುಂಬ
* ಅವಿಭಕ್ತ ಕುಟುಂಬದ ಲಕ್ಷಣಗಳು

**ಕಲಿಕಾಂಶ 1 – ಕುಟುಂಬ ಪದದ ಅರ್ಥ**

ಪಾತ್ರಾಭಿನಯ/ಪ್ರಹಸನ/ಕಿರು ನಾಟಕ ವಿಧಾನ : ಶಿಕ್ಷಕರು ವಿದ್ಯಾರ್ಥಿಗಳನ್ನು ಸಮನಾಗಿ ನಾಲ್ಕು ಗುಂಪುಗಳನ್ನಾಗಿ ವಿಂಗಡಿಸುವುದು. ಪ್ರತಿಗುಂಪಿಗೆ ಒಬ್ಬ ನಾಯಕ/ನಾಯಕಿಯನ್ನು ಗುರುತಿಸುತ್ತಾರೆ. ಈಗಾಗಲೇ ಶಿಕ್ಷಕರು ತಾವು ಸಿದ್ಧಪಡಿಸಿಕೊಂಡಿರುವ ನಾಲ್ಕು ಚೀಟಿಗಳನ್ನು ಮೇಜಿನ ಮೇಲಿಟ್ಟು ತಂಡದ ಮುಖ್ಯಸ್ಥರು ಒಂದೊಂದು ಚೀಟಿಯನ್ನು ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸುತ್ತಾರೆ. ಚೀಟಿಯಲ್ಲಿರುವ ವಿಷಯವನ್ನು ವಿದ್ಯಾರ್ಥಿಗಳು ತಮ್ಮ ಗುಂಪಿನೊಂದಿಗೆ ಚರ್ಚಿಸಿ ಮೂಕಾಭಿನಯ, ಪ್ರಹಸನ, ಅಥವಾ ಕಿರುನಾಟಕ ರೂಪದಲ್ಲಿ ಪ್ರದರ್ಶಿಸಬೇಕು. (ಆಯ್ಕೆ ವಿದ್ಯಾರ್ಥಿಗಳದ್ದು) ಪ್ರದರ್ಶನದ ಅವಧಿ 5 ನಿಮಿಷಗಳು ಮಾತ್ರ. ತಂಡದವರು ನಿಡುವ ಪ್ರದರ್ಶನವನ್ನು ಉಳಿದ ತಂಡದವರು ವೀಕ್ಷಿಸುತ್ತಾರೆ.

**ಪ್ರದರ್ಶನ–1 :** ವಿದ್ಯಾರ್ಥಿಗಳೇ ತಂದೆ, ತಾಯಿ, ಅಜ್ಜ, ಅಜ್ಜಿ, ಅಣ್ಣ, ತಂಗಿ, ವೇಷಗಳಲ್ಲಿ ಬಂದು, ಅಭಿನಯದ ಮೂಲಕ ಒಂದು ಭಾವನಾತ್ಮಕವಾದ ಕುಟುಂಬದ ಪರಿಕಲ್ಪನೆಯನ್ನು ತರಲು ಪ್ರಯತ್ನಿಸುವರು.

**ಪ್ರದರ್ಶನ–2 :** ಮಕ್ಕಳು, ಊಟ ಮಾಡುತ್ತಿರುವುದು, ತಾಯಿಯಾದವರು ಬಡಿಸುತ್ತಿರುವ ದೃಶ್ಯ. ತಂದೆ ಪತ್ರಿಕೆಯನ್ನು ಓದುತ್ತಿರುವಂತೆ ಕುಳಿತುಕೊಳ್ಳುವುದು.

**ಪ್ರದರ್ಶನ–3 :** ತಂದೆ ತಾಯಿಗಳು, ಮಕ್ಕಳ ವಿದ್ಯಾಭ್ಯಾಸದ ಪ್ರಗತಿಯ ಬಗ್ಗೆ ಚರ್ಚೆ ನಡೆಸುವುದು.

**ಪ್ರದರ್ಶನ–4 :** ಮಕ್ಕಳು ತಪ್ಪು ಮಾಡಿರುವ ಸಂದರ್ಭವನ್ನು ತಂದೆ ತಾಯಿಗಳು ತಿಳಿಹೇಳುತ್ತಿರುವ ದೃಶ್ಯ.

ಕಲಿಕೆಯನ್ನು ಅನುಕೂಲಿಸುವ ಸಲುವಾಗಿ ಶಿಕ್ಷಕರು ಈ ಪ್ರದರ್ಶನದ ಬಳಿಕ ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾರೆ.

1. ಈ ಪ್ರದರ್ಶನಗಳು, ನಿಮಗೆ ಯವ ತಿಳುವಳಿಕೆಯನ್ನು ನೀಡಿದವು.

2. ತಂದೆ, ತಾಯಿ, ಮಕ್ಕಳು, ತಾತ, ಅಮ್ಮ ಇವರು ಒಟ್ಟಿಗೆ ವಾಸಿಸುವುದು ಎಲ್ಲಿ?

3. ಕುಟುಂಬದಲ್ಲಿ ತಂದೆ ತಾಯಿಗಳ ಪಾತ್ರವೇನು?

4. ಮನೆಯೇ ಮೊದಲ ಪಾಠಶಾಲೆ ಹೇಗೆ?

5. ಮಗುವಿನ ಜೀವನದಲ್ಲಿ ಕುಟುಂಬದ ಪಾತ್ರವೇನು?

ಮಕ್ಕಳು ತಮ್ಮದೇ ಆದ ಭಾಷೆಯಲ್ಲಿಯೇ ಉತ್ತರಿಸಲಿ. ಅವರಿಗೆ ಕುಟುಂಬದ ಅರ್ಥವನ್ನು ಅರಿವು ಮಾಡಿಕೊಳ್ಳುವುದೇ ಶಿಕ್ಷಕರ ಆಶಯ. ಇದನ್ನು ಶಿಕ್ಷಕರೇ ಬಲವಂತವಾಗಿ ಅಥವಾ ಪರೋಕ್ಷವಾಗಿ ಹೇಳುವುದು ಬೇಡ. ಮಕ್ಕಳ ಸ್ವಯಂ ಕಲಿಕೆಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾ ಮಕ್ಕಳ ಜ್ಞಾನ ರಚನೆಗೆ ಅನುಕೂಲಿಸುತ್ತಾರೆ.

**ವಿಶೇಷ ಸೂಚನೆ :-** ಈ ಚಟುವಟಿಕೆಯ ನಂತರ ಶಿಕ್ಷಕರು ಕುಟುಂಬದ ಪರಿಕಲ್ಪನೆ ಬರುವ ವಿವಿಧ ಬಗೆಯ ಚಾರ್ಟ್‌ಗಳನ್ನು ಪ್ರದಶಿಸಬಹುದು. ಹಾಗೂ ಮಂಗನಿಂದ ಮಾನವನಾದ ವಿವಿಧ ಹಂತಗಳ ಚಿತ್ರಗಳ ಪ್ರದರ್ಶನ.

**ಜ್ಞಾನರಚನೆ :** ಮೇಲಿನ ಚಟುವಟಿಕೆಗಳಿಂದ ಮಕ್ಕಳಲ್ಲಿ ಕುಟುಂಬದ ಪರಿಕಲ್ಪನೆಯನ್ನು ಅರಿತುಕೊಳ್ಳುತ್ತಾರೆ. ಕುಟುಂಬದ ಅರ್ಥ ತಂದೆ ತಾಯಿಗಳ ತ್ಯಾಗ, ಸಂಸ್ಕಾರ, ಶಿಸ್ತು, ಬಾಂಧವ್ಯ ಮುಂತಾದ ಗುಣಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ.

**ಜ್ಞಾನದ ಪುನರ್‌ರಚನೆ :** ಮಕ್ಕಳು ಕೂಡಿ ಬಾಳಿದರೆ ಸ್ವರ್ಗ ಸುಖ, ಮನೆಯೇ ಮೊದಲ ಪಾಠಶಲೆ, ತಾಯಿಯೇ ಮೊದಲ ಗುರು. ತಾಯಿಗಿಂತ ದೇವರಿಲ್ಲ. ಉಪ್ಪಿಗಿಂತ ರುಚಿಯಿಲ್ಲ. ಕೊಡುಕೊಳ್ಳುವ ಗುಣ, ಸಹಕಾರ, ವಾತ್ಸಲ್ಯ ಮುಂತಾದ ಭಾವನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ.

## ಕಲಿಕಾಂಶ : 2 – ಕುಟುಂಬದ ಲಕ್ಷಣಗಳು

## ವಿಧಾನ : (ಶಿಶು ಕೇಂದ್ರಿತ ಮಾದರಿ)

ಶಿಕ್ಷಕರು ತರಗತಿಯಲ್ಲಿನ ಮಕ್ಕಳು ಕಲಿಕೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳುವಂತೆ ಮಾಡಲು, ಮಕ್ಕಳನ್ನು ಐದು ಗುಂಪುಗಳನ್ನಾಗಿ ಮಾಡಿ ಶಿಕ್ಷಕರು ಮೊದಲೇ ಬರೆದು ಇಟ್ಟುಕೊಂಡಿದ್ದ ಮಿಂಚುಪಟ್ಟಿಗಳನ್ನು ಪ್ರತಿ ತಂಡಕ್ಕೂ ನೀಡುತ್ತಾರೆ. ಮಕ್ಕಳು, ತಮ್ಮ ಗುಂಪಿಗೆ ಬಂದಂತಹ ಮಿಂಚು ಪಟ್ಟಿಯಲ್ಲಿನ ವಿಷಯವನ್ನು (ಕುಟುಂಬದ ಲಕ್ಷಣಗಳು) ಪರಸ್ಪರ ವಿನಿಮಯ

ಮಾಡಿಕೊಳ್ಳುತ್ತಾರೆ. ನಂತರ ಶಿಕ್ಷಕರು ಕುಟುಂಬದ ಲಕ್ಷಣಗಳಿಗೆ ಸಂಬಂಧಿಸಿದಂತೆ ಚರ್ಚಾಂಶಗಳನ್ನೂ ಕಪ್ಪು ಹಲಗೆಯ ಮೇಲೆ ಬರೆಯುತ್ತಾರೆ. ಆ ಅಂಶಗಳನ್ನು ಕುರಿತಂತೆ ಮಕ್ಕಳಿಂದ ಉತ್ತರಗಳನ್ನು ಬರೆದು ಕಪ್ಪು ಹಲಗೆಯ ಮೇಲೆ ದಾಖಲಿಸುತ್ತಾರೆ.

**ಚರ್ಚಾಂಶಗಳು**

* ಕುಟುಂಬದಲ್ಲಿರುವ ಸದಸ್ಯರು
* ಕುಟುಂಬದಲ್ಲಿ ತಂದೆ, ತಾಯಿ
* ಕುಟುಂಬದಲ್ಲಿ ಹಿರಿಯರು
* ಕುಟುಂಬ ಸರ್ವವ್ಯಾಪಿ ಹೇಗೆ?
* ಕುಟುಂಬ ಸಮಾಜದ ಚಿಕ್ಕ ಘಟಕವಾಗಿ
* ಕುಟುಂಬ ಸದಸ್ಯರ ಪಾತ್ರ ಪ್ರಜ್ಞೆ
* ಕುಟುಂಬದಲ್ಲಿ ಕಂಡುಬರುವ ಲಾಲನೆ, ಪಾಲನೆ
* ಕುಟುಂಬದ ಸದಸ್ಯರ ಕರ್ತವ್ಯಗಳು
* ಕುಟುಂಬದಲ್ಲಿನ ಆಚರಣೆಗಳು

ಈ ಮೇಲ್ಕಂಡ ಚರ್ಚಾಂಶಗಳನ್ನು ಕುರಿತ ಮಕ್ಕಳ ಅಭಿಪ್ರಾಯ ಜ್ಞಾನವನ್ನು ಶಿಕ್ಷಕರು ಕಪ್ಪು ಹಲಗೆಯ ಮೇಲೆ ಬರೆಯುವರು. ಕುಟುಂಬದ ಸಮಗ್ರ ಚಿತ್ರಣವನ್ನು ಮಕ್ಕಳಿಗೆ ತರುವಲ್ಲಿ ಯಶಸ್ವಿಯಾಗುವುದು.

**ಸೂಚನೆ :** ಈ ವಿಧಾನದಲ್ಲಿ ಮಕ್ಕಳೇ ತಮ್ಮ ಜ್ಞಾನ ರಚನೆಗೆ ತಾವೇ ತೊಡಿಗಿಕೊಳ್ಳಬೇಕು. ಯಾವ ಕಾರಣಕ್ಕೂ ಕಲಿಕೆ ಶಿಕ್ಷಕ ಕೇಂದ್ರೀಕೃತವಾಗಲೇಬಾರದು.

## ಕಲಿಕಾಂಶ : 3 – ಕುಟುಂಬದಲ್ಲಿ ಮಗುವಿನ ಬೆಳವಣಿಗೆ

## ವಿಧಾನ : ವಿಶ್ಲೇಷಣಾತ್ಮಕ ಮಾದರಿ

ಈ ವಿಧಾನದಲ್ಲಿ ಶಿಕ್ಷಕರು ಕಲಿಕಾಂಶಕ್ಕೆ ಸಂಬಂಧಿಸಿದಂತೆ ಪೂರಕವಾಗುವ ಘಟನಾವಗಳಿಗಳನ್ನು ತರಗತಿಯಲ್ಲಿ ಪ್ರಸ್ತುತಪಡಿಸುತ್ತಾರೆ. ಇದರನ್ವಯ ಕಲಿಕಾಂಶವು ಮಗುವಿನ ಜ್ಞಾನ ರಚನೆಗೆ ಹೆಚ್ಚಿನ ಪರಿಣಾಮವನ್ನು ಬೀರುತ್ತದೆ. ಏಕೆಂದರೆ ಮಗು ತನ್ನ ಸಹಪಾಟಿಗಳಿಂದ ಕಲಿಯುವಂತಹ ಹೊಂದಾಣಿಕೆ, ಸ್ನೇಹ, ನಾಯಕತ್ವ, ಸ್ವಾತಂತ್ರ್ಯ ಪ್ರವೃತ್ತಿಯ ಅಂಶಗಳನ್ನು ಹೆಚ್ಚು ಮನನ ಮಾಡಿಸಲು ಘಟನಾವಳಿಗಳ ವಿಶ್ಲೇಷಣೆಯನ್ನು ಮಾಡುತ್ತಾರೆ.

ಉದಾ : ಅಬ್ರಹಾಂ ಲಿಂಕನ್ನನು ತನ್ನ ಮಗನ ಶಿಕ್ಷಕರಿಗೆ ಬರೆದ ಪತ್ರ.

* ಅಂಬೇಡ್ಕರ್ ಎಂಬ ಹೆಸರಿನ ಹಿನ್ನಲೆ.
* ಗಾಂಧೀಜಿಯವರು ಮತ್ತು ಕೆಟಲ್ ಶಬ್ದ.
* ಶಿವಾಜಿ ಮತು ಜೀಜಾಬಾಯಿ.

ಈ ಘಟನಾವಳಿಗಳನ್ನು ಶಿಕ್ಷಕರು ಮಕ್ಕಳ ಮುಂದೆ ವಿಶ್ಲೇಷಿಸಿ, ಈ ಘಟನೆಗಳಿಂದ ಪರಿಣಾಮಗಳನ್ನು ಮಕ್ಕಳಿಂದ ಅಭಿಪ್ರಾಯ ಸಂಗ್ರಹಿಸಲು ಕಪ್ಪು ಹಲಗೆಯನ್ನು ಬಳಸಿಕೊಳ್ಳುವುದು.

ಈ ಘಟನಾವಳಿಗಳು ಮಕ್ಕಳ ಮೇಲೆ ಬೀರಿದ ಪ್ರಭಾವದ ಹಿನ್ನಲೆಯಲ್ಲಿ ಸಮಾಜ, ಕುಟುಂಬ ಸಹಪಾಟಿಗಳಿಂದ ಮಗುವಿನ ವರ್ತನೆಯಲ್ಲಾದ ಬದಲಾವಣೆಯನ್ನು ಮಕ್ಕಳಿಂದ ಪಟ್ಟಿ ಮಾಡಿಸುವುದು.

**ಜ್ಞಾನ ರಚನೆ :**

* ಮಗುವಿನ ವ್ಯಕ್ತಿತ್ವದ ಮೇಲೆ ಶಾಲೆ, ಸಮಾಜ, ಕುಟುಂಬ ಪ್ರಮುಖ ಪಾತ್ರ.
* ಮಗುವಿನ ವರ್ತನೆಯು ಆತನ ಸಹಪಾಟಿಗಳನ್ನು ಅವಲಂಬಿಸಿರುತ್ತದೆ. ಮಗು ಮತ್ತು ಆತನ ಸಹಪಾಟಿಗಳು.
* ಕುಟುಂಬದಲ್ಲಿ ಮಗುವಿನ ಬೆಳವಣಿಗೆ (ಬೌದ್ಧಿಕವಾಗಿ).
* ಮಗುವಿನ ಬಾಲ್ಯ ಮತ್ತು ಯೌವ್ವನದ ಹಂತಗಳು.
* ಕುಟುಂಬ ನಿರ್ವಹಣೆಯಲ್ಲಿ ತಂದೆ ತಾಯಿಗಳ ಪಾತ್ರ.

**ಜ್ಞಾನ ಪುನರ್ರಚನೆ (ಮನನ ಮಾಡಿಕೊಳ್ಳಬೇಕಾದ ಅಂಶಗಳು)**

* ಮುಂದಾಳತ್ವ
* ಸ್ನೇಹ ಸಂಬಂಧ
* ಹೊಂದಾಣಿಕೆ
* ರಕ್ಷಣಾತ್ಮಾಕ ಬದುಕು
* ಕೂಡಿ ಬಾಳು
* ಗೌರವ, ಅಭಿಮಾನ.

ಈ ಮೇಲ್ಕಂಡ ಮನನ ಮಾಡಿಕೊಳ್ಳಲೇ ಬೇಕಾದ ಅಂಶಗಳನ್ನು ಮಗು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಲು ಯತ್ನಿಸುವುದು. ಹಾಗೂ ಈ ರೂಪದ ಜ್ಞಾನ ಪುನರ್ರಚನೆಗೆ ಹೆಚ್ಚಿನ ಒತ್ತು ನೀಡುವುದು.

## ಕಲಿಕಾಂಶ : 4 – ಕುಟುಂಬದ ಪ್ರಕಾರಗಳು

## ವಿಧಾನ : ಸಂಶೋಧನಾ ಮಾದರಿ

ಸಮಾಜ ವಿಜ್ಞಾನ ವಿಷಯದ ಕಲಿವಿನ ಸಂದರ್ಭದಲ್ಲಿ ಸಂಶೋಧನಾ ಮಾದರಿ. ಬಹು ಮುಖ್ಯವಾದ ವಿಧಾನವಾಗಿದೆ. ಇದಕ್ಕಾಗಿ ಶಿಕ್ಷಕರು, ತರಗತಿಯಲ್ಲಿ ನಾಲ್ಕು ಗುಂಪುಗಳನ್ನು ಮಾಡಿ, ಪ್ರತಿ ಗುಂಪಿಗೂ ಈ ಕೆಳಗಿನ ಚರ್ಚಾಂಶಗಳನ್ನು ಮಕ್ಕಳು ಆಯ್ಕೆಯ ಆಧಾರದ ಮೇಲೆ ನೀಡುವುದು.

**ಚರ್ಚಾಂಶಗಳು :**

* ಪಿತೃ ಪ್ರಧಾನ ಕುಟುಂಬ
* ಮಾತೃ ಪ್ರಧಾನ ಕುಟುಂಬ
* ಆಧುನಿಕ ಕೇಂದ್ರ ಕುಟುಂಬ
* ಅವಿಭಕ್ತ ಕುಟುಂಬ

ಈ ಆಯ್ಕೆಯ ಅಂಶಗಳನ್ನು ಮಕ್ಕಳು ಪರಸ್ಪರ ಚರ್ಚೆಗಳ ಮೂಲಕ ವಿನಿಮಯ ಮಾಡಿಕೊಳ್ಳುವರು. ಹಾಗೂ ಇದಕ್ಕೆ ಸಂಬಂಧಿಸಿದಂತೆ ಒಂದು ದಿನ ಮೊದಲೇ ತಂಡಗಳಿಗೆ ವಿಷಯವನ್ನು ಹಂಚಿ ವಿಷಯ ಸಂಗ್ರಹಿಸಲು ಈ ಮುಂದಿನ ಹಂತಗಳಲ್ಲಿ/ಮಾದರಿ ಅನ್ವಯ ಸಂಗ್ರಹಿಸುವಂತೆ ತಿಳಿಸುವುದು.

**ಮೌಲ್ಯಮಾಪನ**

ಈ ಸಂಶೋಧನಾ ಹಂತಗಳಿಗೆ ಹೊಂದಿಕೊಂಡಂತೆ ಮಕ್ಕಳು ತಮಗೆ ನಿಡಿದ ಚರ್ಚಾಂಶಗಳ ಕಲಿಕೆಯ ವಿಷಯವನ್ನು ಸಂಗ್ರಹಿಸಿ ತರುತ್ತಾರೆ.

ಉದಾ :
* ವಿಷಯದ ಆಯ್ಕೆ : ಪಿತೃ ಪ್ರಧಾನ ಕುಟುಂಬ
* ವಿಷಯದ ವ್ಯಾಪ್ತಿ : ತಂದೆ ಕುಟುಂಬದ ಒಡೆಯ ಹೇಗೆ?
* ಪೂರ್ವ ತಯಾರಿ : ಪಿತೃ ಕುಟುಂಬದ ಭೇಟಿ ಪರಸ್ಪರ ವಿಚಾರ ವಿನಿಯಮ.
* ವಿಷಯ ಸಂಗ್ರಹಣೆ – ಪಿತೃ ಪ್ರಧಾನ ಕುಟುಂಬದ ಅರ್ಥ
  – ಪಿತೃ ಪ್ರಧಾನ ಕುಟುಂಬದಲ್ಲಿನ ಇತರ ಸದಸ್ಯರು

– ಈ ಕುಟುಂಬದ ವಹಿವಾಟು

– ಪಿತೃ ಪ್ರಧಾನ ಕುಟುಂಬ ಲಕ್ಷಣ

– ಪಿತೃ ಪ್ರಧಾನ ಕುಟುಂಬಗಳು ಕಂಡು ಬರುವ ಪ್ರದೇಶಗಳು

– ಪಿತೃ ಪ್ರಧಾನ ಕುಟುಂಬ ಅನುಕೂಲ/ ಅನಾನುಕೂಲಗಳು

* ವಿಷಯ ವಿಶ್ಲೇಷಣೆ – ವಿಷಯ ಸಂಗ್ರಹಣೆಯಲ್ಲಿರುವ ಪ್ರತಿಯೊಂದು ಅಂಶಗಳನ್ನು ವಿವರಿಸಿ ಅರ್ಥೈಸಿಕೊಳ್ಳುವುದು.

ಉದಾ : ತಂದೆಯೇ ಒಡೆಯನಾಗಿರುವ ಕುಟುಂಬ ಪಿತೃ ಪ್ರಧಾನ ಕುಟುಂಬ (ಅರ್ಥ) ವ್ಯಾಖ್ಯಾನಗಳ ಸಂಗ್ರಹ.

* ವಿಷಯದ ಮನನ – ಕುಟುಂಬದ ಸಂಪೂರ್ಣ ವಹಿವಾಟು ತಂದೆಯದು.

* ಕಲಿವಿನ ಫಲ – ಕುಟುಂಬದ ಹಣಕಾಸಿನ, ಆರೋಗ್ಯದ ಆಸ್ತಿ ಪಾಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ತಂದೆ ಮತ್ತು ಇತರ ಸದಸ್ಯರ ಪಾತ್ರ ಅರಿಯುವುದು.

* ಮೌಲ್ಯಮಾಪನ – ಭಾವನಾತ್ಮಕ ಸಂಬಂಧದ ಹಿನ್ನಲೆಯಲ್ಲಿ ಕುಟುಂಬದ ಇತರ ಸದಸ್ಯರು, ಸಂಬಂಧಿಕರನ್ನು ಒಳಗೊಂಡಂತೆ ಹೇಗೆ ಸಂಬೋಧಿಸುತ್ತಾರೆ ಎಂಬುದನ್ನು ಪಟ್ಟಿ ಮಾಡಿರಿ.

ಉದಾ : ತಾಯಿಯ ಅಣ್ಣ – ಮಾವ.

ಹೀಗೆ ಪ್ರತಿಯೊಂದು ಚರ್ಚಾಂಶಗಳನ್ನು ಆಯಾ ಗುಂಪಿನ ಮಕ್ಕಳು ಸಂಶೋಧನಾತ್ಮಕವಾಗಿ ವಿಷಯವನ್ನು ಸಂಗ್ರಹಿಸಿ ಜ್ಞಾನವನ್ನು ಕಟ್ಟಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಶಿಕ್ಷಕರು ಕಲಿಕಾಂಶವಾದ ಕುಟುಂಬದ ಪ್ರಕಾರಗಳು ಎಂಬ ಘಟಕದ ಅವಧಿಯಲ್ಲಿ ಪ್ರತಿ ಗುಂಪಿನ ಪ್ರತಿ ಮಗುವಿಗೂ ಈ ಸಂಶೋಧನಾತ್ಮಕ ಹಂತದ ಅಂಶಗಳನ್ನು ಮಕ್ಕಳು ಜ್ಞಾನವನ್ನು ಕಟ್ಟಿಕೊಂಡಂತೆ ತರಗತಿಯಲ್ಲಿ ವಿಷಯ ಮಂಡಿಸಲು ಅವಕಾಶ ಕಲ್ಪಿಸುವುದು. ಹಾಗೂ ಉಳಿದ ವಿಷಯಾಂಶಗಳಿದ್ದಲ್ಲಿ ಶಿಕ್ಷಕರು ತಿಳಿಸುವುದು. ಹಾಗೂ ಉಳಿದ ವಿಷಯಾಂಶಗಳಿದ್ದಲ್ಲಿ ಶಿಕ್ಷಕರು ತಿಳಿಸುವುದು.

**ಜ್ಞಾನ ಪುನರ್ರಚನೆ :** * ಸಂಶೋಧನಾತ್ಮಕತೆ

* ಸಕಾರಾತ್ಮಕ ಆಲೋಚನೆ
* ಮುಂದಾಳತ್ವ * ಕ್ರಿಯಾಶೀಲತೆ * ಹೊಸತನ

ಹೀಗೆ ಕಲಿಕೆಗೆ ಬೇಕಾಗುವ ವಿಧಾನಗಳನ್ನು ಶಿಕ್ಷಕರು ಕಲಿಕಾಂಶದ ಅಗತ್ಯಗಳಿಗನುಗುಣವಾಗಿ ಬಳಸಿಕೊಳ್ಳಬಹುದು. ಇವುಗಳನ್ನು ಸಮರ್ಪಕವಾಗಿ ಅನುಕೂಲಿಸುವುದು ಹಾಗೂ ಸಂದರ್ಭೋಚಿತವಗಿ ಮಾರ್ಗೋಪಾಯಗಳನ್ನು ತಪ್ಪದೆ ಅಳವಡಿಸಿಕೊಳ್ಳುವುದು.

ಮಕ್ಕಳೇ ಕ್ರಿಯಾಶೀಲರಾಗಿ ತಮ್ಮ ತಮ್ಮ ಅನುಭವಗಳ ಮೂಲಕ ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಕೊಂಡು (ವೈಯಕ್ತಿಕ/ಗುಂಪು ಚರ್ಚೆ) ಆತ್ಮ ವಿಶ್ವಾಸವನ್ನು ರೂಢಿಸಿಕೊಳ್ಳುತ್ತಾರೆ.

ಇದಲ್ಲದೆ ಸಮಾಜ ವಿಜ್ಞಾನ ವಿಷಯದಲ್ಲಿ ಪಾಠಗಳನ್ನು ಪರಿಣಾಮಕಾರಿಯಾಗಿ ಕಲಿಸಲು ಬಳಸುವ ವಿಧಾನ ಇದೊಂದೇ ಎಂಬ ಭಾವನೆಯನ್ನು ಇಟ್ಟುಕೊಳ್ಳಬಾರದು. ಏಕೆಂದರೆ ಒಂದೇ ಘಟಕದ ಬೇರೆ ಬೇರೆ ಕಲಿಕಾಂಶಗಳಿಗೆ/ಚರ್ಚಾಂಶಗಳಿಗೆ ಬೇರೆ ಬೇರೆ ಅನುಕೂಲಿಸುವ ವಿಧಾನಗಳನ್ನು ಬಳಸಲು ಶಿಕ್ಷಕರು ಸ್ವತಂತ್ರರು. ತನ್ನ ಶಾಲಾ ಪರಿಸರ, ವಿದ್ಯಾರ್ಥಿಗಳ ಅಭಿರುಚಿ, ಲಭ್ಯವಿರುವ ಪರಕರಗಳು ಇವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸೂಕ್ತ ವಿಧಾನ ಆಯ್ಕೆ ಮಾಡಿಕೊಂಡು ರಚನಾತ್ಮಕ ಕಲಿಕೆ ಎಡೆಗೆ ಸಾಗುವುದು ಇಲ್ಲಿನ ಬಹುಮುಖ್ಯ ಆಶಯವಾಗಿದೆ.

# 14. ಸಮಾಜ ವಿಜ್ಞಾನದಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಅಳವಡಿಸಿಕೊಳ್ಳಲು ಇರುವ ಅವಕಾಶಗಳು

ಮೌಲ್ಯಮಾಪನ ಪ್ರಕ್ರಿಯೆಗೆ ಸಂಬಂಧಿಸಿದಂತೆ ನಾವು ಈಗಾಗಲೇ ಸಾಕಷ್ಟು ಅಧ್ಯಯನವನ್ನು ಮಾಡಿದ್ದೇವೆ. ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ತರಗತಿಯಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ನಡೆಸಲಾಗುತ್ತಿದ್ದು, ಈ ಸಂಬಂಧ ರಚಿಸಲ್ಪಟ್ಟಿರುವ ಸಾಹಿತ್ಯಗಳು ಸಹ ನಮ್ಮೊಂದಿಗಿದ್ದು ಸೂಕ್ತ ತಿಳುವಳಿಕೆಯನ್ನು ಶಿಕ್ಷಕರಿಗೆ ನೀಡುತ್ತಲೇ ಬಂದಿವೆ.

ನಾವು ಈಗಾಗಲೇ ಮಾಡುತ್ತಿರುವ ದೈನಂದಿನ ಮೌಲ್ಯಮಾಪನಗಳು ಬದಲಾದ ಪಠ್ಯಪುಸ್ತಕದ ಹಿನ್ನಲೆಯಲ್ಲಿ ನಿರ್ದಿಷ್ಟತೆಯನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗುತ್ತಿವೆ. ಆದ್ದರಿಂದ ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನವನ್ನು ಅರ್ಥೈಸಿಕೊಂಡು ಮಗುವಿನ ಕಲಿಕೆಯನ್ನು ಮತ್ತಷ್ಟು ದೃಢಪಡಿಸಿಕೊಳ್ಳಲು ಪ್ರಯತ್ನಿಸೋಣ.

ಸಮಾಜ ವಿಜ್ಞಾನ ಕಲಿಸುವಾಗ, ಘಟನೆ, ಇಸವಿ, ವಂಶಾವಳಿ, ನಕ್ಷೆ, ಪರಿಸರ, ಖರ್ಚು, ಆದಾಯ, ಸರ್ಕಾರ, ಕೊಡುಕೊಳ್ಳುವಿಕೆ ಮುಂತಾದ ಅಂಶಗಳು ಕಣ್ಣ ಮುಂದೆ ಬಂದು ನಿಲ್ಲುತ್ತವೆ. ಸಮಾಜ ವಿಜ್ಞಾನವೆಂದರೆ ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ವ್ಯವಹಾರ ಅಧ್ಯಯನಕ್ಕೆ ಸಂಬಂಧಿಸಿದ ಜ್ಞಾನವನ್ನು ನೀಡುವುದಕ್ಕಾಗಿ ಕಲಿಸಲಾಗುತ್ತಿದೆಯೋ? ಎಂಬ ಪ್ರಶ್ನೆ ನಮ್ಮೊಳಗೆ ಅದೆಷ್ಟೋ ಬಾರಿ ಬಂದಿದೆಯಲ್ಲವೇ? ಅಲ್ಲದೆ ಅಂಕಗಳ ಆಧಾರದ ಮೇಲೆ ಮಕ್ಕಳ ಕಲಿವಿನ ಪ್ರಗತಿಯನ್ನು ಗುರುತಿಸಿ ನಾವು ಸಮಾಧಾನ ಪಟ್ಟುಕೊಳ್ಳುತ್ತಿಲ್ಲವೇ? ಆದರೆ ಈಗ ನಾವೆಲ್ಲರೂ ಹೊಸ ಮತ್ತು ಏಕರೂಪದ ಶಿಕ್ಷಣ ವ್ಯವಸ್ಥೆಯ ಸಂದರ್ಭದಲ್ಲಿನ ಆಶಯಗಳನ್ನು ಅರ್ಥೈಸಿಕೊಂಡಿರುವ ನಾವು, ಅಂಕಗಳ ಹಣೆಪಟ್ಟಿಯೊಂದಿಗೆ ಅವರ ಭವಿಷ್ಯ ರೂಪಿಸುವ ನಿರ್ಧಾರಕರೇ? ಎಂದು ಗಂಭೀರವಾಗಿ ಯೋಚಿಸಬೇಕಿದೆ.

ಆದ್ದರಿಂದ ಎನ್.ಸಿ.ಎಫ್–2005 ಮತ್ತು ನಿರಂತರ ವ್ಯಾಪಕ ಮೌಲ್ಯಮಾಪನದ ಪ್ರಕ್ರಿಯೆಯು ನಿರ್ದೇಶನದ ರಚನಾವಾದದ ಹಿನ್ನಲೆಯ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಕಲಿಕಾ ಮಾಪನಗಳು ಹೆಚ್ಚು ಅವಶ್ಯಕ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ನಾವು ಸಮಾಜ ವಿಜ್ಞಾನ ವಿಷಯವನ್ನು ಮಗುವಿನ ಬದುಕಿನೊಟ್ಟಿಗೆ ಸಮಗ್ರವಾಗಿ ಅರಿಯುತ್ತಾ ವಿಷಯವನ್ನು ಜ್ಞಾನಾತ್ಮಕ ಹಾಗೂ ತೊಡಗಿಸಿಕೊಳ್ಳುವಿಕೆಯ ಭಾಗವಾಗಿ ಅರ್ಥೈಸಿಕೊಳ್ಳೋಣ.

ಅದಕ್ಕಾಗಿ 9ನೇ ತರಗತಿ ಸಮಾಜ ವಿಜ್ಞಾನ ವಿಷಯದ ಕ್ಷೇತ್ರಗಳ ಉದ್ದೇಶಗಳನ್ನು ಜ್ಞಾನಾತ್ಮಕ ಮತ್ತು ತೊಡಗಿಸಿಕೊಳ್ಳುವಿಕೆಯ ವಲಯಗಳೊಂದಿಗೆ ಉದ್ದಿಷ್ಟಗಳ ಸ್ವರೂಪವನ್ನು ಮಾದರಿಯಾಗಿ ಈ ಪಟ್ಟಿಯಲ್ಲಿ ನೀಡಲಾಗಿದೆ. ಇದರಿಂದಾಗಿ ಜ್ಞಾನಾತ್ಮಕ ವಲಯದ ಉದ್ದಿಷ್ಟಗಳಾದ, ಜ್ಞಾನ ಮತ್ತು ಅರ್ಥೈಸಿಕೊಳ್ಳುವಿಕೆ ಅನ್ವಯ ಹಾಗೂ ತೊಡಗಿಸಿಕೊಳ್ಳುವಿಕೆಯ (ಭಾವಾನಾತ್ಮಕ) ಉದ್ದಿಷ್ಟಗಳಾದ ಕೌಶಲ, ಮೌಲ್ಯಗಳು, ಮನೋಧೋರಣೆ, ಆಸಕ್ತಿಯನ್ನು ಘಟಕವಾರು ಕಲಿಕಾ ಮಾನಕಗಳ ಸಂದರ್ಭವನ್ನು ಉದಾಹರಣೆಗಳ ಮೂಲಕ ತಿಳಿಯೋಣ.

## ವಿಷಯ : 'ಸಮಾಜ ವಿಜ್ಞಾನ', ಭಾಗ : ಭೂಗೋಳ / ಘಟಕ–ಸಾರಿಗೆ

| **ವಲಯಗಳು** | **ಉದ್ದಿಷ್ಟಗಳು** | **ಕಲಿಕಾ ಮಾನಕಗಳು (ನಿರ್ದಿಷ್ಟಗಳು)** |
|---|---|---|
| ಜ್ಞಾನಾತ್ಮಕ | ಜ್ಞಾನ ಮತ್ತು ಅರ್ಥೈಸಿಕೊಳ್ಳುವಿಕೆ | ಸಾರಿಗೆಯ ಅರ್ಥ ಪ್ರಾಮುಖ್ಯತೆ, ವಿಧಗಳು |
| | ಅನ್ವಯ (ತಾರ್ಕಿಕ ಚಿಂತನೆ) | ಸಾರಿಗೆಯ ಅನುಕೂಲಗಳನ್ನು ಸೂಕ್ತ ಆಧಾರಗಳೊಂದಿಗೆ ನಿರೂಪಿಸುವುದು.<br>ಉದಾ : * ಅಮೇರಿಕಾದ ವಾಷಿಂಗ್‌ಟನ್ ಸಿಟಿಯನ್ನು ಬಾಂಬೆ ಅಂ.ರಾ. ವಿಮಾನ ನಿಲ್ದಾಣದಿಂದ ಕೇವಲ 7 ಘಂಟೆಗೆ ತಲುಪಬಹುದು.<br>* ಬೆಂಗಳೂರಿನಿಂದ ದೆಹಲಿಗೆ 2 ಗಂಟೆ ಪ್ರಯಾಣ ಸಾಕಾಗುತ್ತದೆ. |
| ತೊಡಗಿಕೊಳ್ಳುವಿಕೆ (ಭಾವನಾತ್ಮಕ ವಲಯ) | ಕೌಶಲ | * ಕರ್ನಾಟಕ ಭೂಪಟದಲ್ಲಿ ಬಂದರು, ವಿಮಾನ ನಿಲ್ದಾಣಗಳನ್ನು, ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಗುರುತಿಸುವುದು. |
| | ಮೌಲ್ಯಗಳು | * ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸುವುದು.<br>* ಪರಿಸರ ಕಾಳಜಿ<br>* ಪ್ರಯಾಣಕ್ಕಾಗಿ ಸಾರ್ವಜನಿಕ/ಖಾಸಗಿ ವಾಹನಗಳ ಬಳಕೆ |

| | | |
|---|---|---|
| | | * ಆರ್ಥಿಕ ಉಳಿತಾಯದ ಅರಿವು.<br>* ಸಮಯಪಾಲನೆ<br>* ವಿಶ್ವ ಪರ್ಯಾಟನೆ ಪರಿಕಲ್ಪನೆ |
| | ಮನೋಧೋರಣೆ | * ಸಾರಿಗೆ ಸಾಧನಗಳಾದ ಬಸ್ಸು, ರೈಲು, ಹಡಗು, ವಿಮಾನ, ಇವುಗಳ ಸಾರಿಗೆಯ ವ್ಯತ್ಯಾಸ ಅರಿಯುವರು.<br>* ವಿಮಾನಯಾನದ ಕೌತುಕದ ಬಗ್ಗೆ ಆಸಕ್ತಿ ಬೆಳಸಿಕೊಳ್ಳುವರು.<br>* ಹಡಗಿನ ವಿಶಾಲತೆ, ಸಾಗಣೆಯ ರೋಮಾಂಚನದ ಅರಿವು ಪಡೆಯಲೆತ್ನಿಸುವರು.<br>* ಬಸ್ ಹಾಗೂ ರೈಲು ಪ್ರಯಾಣದ ವ್ಯತ್ಯಾಸದೊಂದಿಗೆ ಇಲ್ಲಿನ ಅನುಭವಗಳನ್ನು ವಿಶ್ಲೇಷಿಸುವರು. |
| | ಆಸಕ್ತಿ | * ಎತ್ತಿನಗಾಡಿ ಕುದುರೆಗಾಡಿ, ಸೈಕಲ್, ಬಸ್, ರೈಲು, ಹಡಗು, ವಿಮಾನಗಳ ಚಿತ್ರ ಸಂಗ್ರಹ.<br>* ಸಾರಿಗೆ ವ್ಯವಸ್ಥೆ ಪ್ರಯೋಜನಗಳ ಪಟ್ಟಿ<br>* ರೈಲು ಸಾರಿಗೆಯ, ರಸ್ತೆ ಸಾರಿಗೆಯ ಅನುಭವಗಳ ಪಟ್ಟಿ ಮಾಡುವುದು.<br>* ಮೆಟ್ರೋ ರೈಲು ವೀಕ್ಷಣೆಗೆ ಮುಂದಾಗುವರು. |

## ಭಾಗ : ವ್ಯವಹಾರ ಅಧ್ಯಯನ
## ಘಟಕ : ವ್ಯವಹಾರ ನಿರ್ವಹಣೆ

| ವಲಯಗಳು | ಉದ್ದಿಷ್ಟಗಳು | ಕಲಿಕಾ ಮಾನಕಗಳು (ನಿರ್ದಿಷ್ಟಗಳು) |
|---|---|---|
| ಜ್ಞಾನಾತ್ಮಕ ಸಂಘಟನೆ | ಜ್ಞಾನ/ ಅರ್ಥೈಸಿಕೊಳ್ಳುವಿಕೆ | * ವ್ಯವಹಾರದ ಅರ್ಥ ನಿರ್ವಹಣೆ, ಸಂಘಟನೆಗಳ ಬಗ್ಗೆ ಅರಿಯುವರು<br>* ನಿರ್ಧಾರಗಳು, ಪ್ರಾಮುಖ್ಯತೆ, ಕ್ಷೇತ್ರವ್ಯಾಪ್ತಿ ತಿಳಿಯುವರು. |
| | ಅನ್ವಯ/ತಾರ್ಕಿಕ ಚಿಂತನೆ | * ಯಾವುದೇ ಕೆಲಸದ ಉದ್ದೇಶ ಹಾಗೂ ಈಡೇರಿಕೆಗಾಗಿ ಸಂಘಟನೆಯ ಮೂಲಕ ಕ್ರಿಯಾಶೀಲ ಯೋಜನೆಯೊಂದಿಗೆ ನಿರ್ವಹಿಸುವಲ್ಲಿ ನಿರ್ವಹಣೆಯ ಮಹತ್ವವನ್ನು ಅರ್ಥಮಾಡಿಕೊಳ್ಳುವರು.<br>ಉದಾ : ಶಾಲೆಯ ಉತ್ತಮ ಫಲಿತಾಂಶ ನಿರ್ವಹಣೆ (ಮುಖ್ಯ ಶಿಕ್ಷಕರು, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳ ಪಾತ್ರ ಕುರಿತಂತೆ.<br>* ನಿರ್ವಹಣೆಯ ಫಲಶೃತಿಯು ತೆಗೆದು ಕೊಳ್ಳುವ ಉತ್ತಮ ನಿರ್ಧಾರಗಳನ್ನು ಅವಲಂಬಿಸಿರುತ್ತದೆ ಎಂದು ತಿಳಿಯುವರು.<br>ಉದಾ : ಕುಟುಂಬದ ಮಿತವ್ಯಯದ ನಿರ್ವಹಣೆಯಲ್ಲಿ ಕುಟುಂಬದ ಸದಸ್ಯರು ತಮ್ಮ ಕೆಲಸದ ಸ್ಥಳಗಳಿಗೆ ನಡೆದೇ ಹೋಗಬೇಕು ಎಂಬ ನಿರ್ಧಾರ ಮಾಡುವುದು.<br>* ನಿರ್ವಹಣೆಯಲ್ಲಿ ನಿಗದಿತ ಮತ್ತು ಹೊಂದಾಣಿಕೆಗಳ ಪ್ರಾಮುಖ್ಯತೆ ಬಹಳ ಮುಖ್ಯವಾದುದೆಂದು ಅರ್ಥೈಸಿಕೊಳ್ಳುವರು.<br>ಉದಾ : ಮಾಲೀಕ ಮತ್ತು ಕಾರ್ಮಿಕರ ನಡುವಿನ ಹೊಂದಾಣಿಕೆ |

| | | |
|---|---|---|
| | | * ನಿರ್ವಹಣೆಯ ಸಾಫಲ್ಯತೆಯು ರೂಪಿಸಿ ಕೊಂಡಿರುವ ಯೋಜನೆಯನ್ನು ಅವಲಂಬಿಸಿರುತ್ತದೆ ಎಂದು ಅರಿಯುವರು.<br>ಉದಾ : 2020ಕ್ಕೆ ಸಂಪೂರ್ಣ ಸಾಕ್ಷರತೆ. ಅಡಿಯಲ್ಲಿ ಉಚಿತ ಕಡ್ಡಾಯ ಶಿಕ್ಷಣ, ಯೋಜನೆ, ವಿದ್ಯಾರ್ಥಿ ವೇತನಗಳು, ಸೈಕಲ್ ವಿತರಣೆ, ಇತ್ಯಾದಿ ಸೌಲಭ್ಯಪೂರಿತ ಯೋಜನೆಗಳ ಮಹತ್ವದ ಹಿನ್ನಲೆಯಲ್ಲಿ. |
| ತೊಡಗಿಸಿ ಕೊಳ್ಳುವಿಕೆ (ಭಾವನಾತ್ಮಕ) | ಕೌಶಲ | * ನಿರ್ವಹಣೆಯ ತತ್ವಗಳನ್ನು ಅನುಸರಿಸುವರು.<br>* ಶಾಲೆಗಳಲ್ಲಿ ವಿದ್ಯಾರ್ಥಿ, ಕಲಾ ವಿಜ್ಞಾನ, ಸಾಂಸ್ಕೃತಿಕ ಸಂಘಟನೆಗಳನ್ನು ಆಯೋಜಿಸುವುದು.<br>* ಉತ್ತಮ ಫಲಿತಾಂಶಕ್ಕಾಗಿ, ವಿದ್ಯಾರ್ಥಿಗಳು ತಮ್ಮ ಅಭ್ಯಾಸ ಕ್ರಮದ ಯೋಜನೆ ತಯಾರಿಸಿಕೊಳ್ಳುವರು.<br>* ವಿದ್ಯಾರ್ಥಿ ಜೀವನದಲ್ಲಿ ಉತ್ತಮ ನಿರ್ಧಾರ ಗಳಿಗೆ ಮಹತ್ವ ಕೊಡುವರು. |
| | ಮೌಲ್ಯಗಳು | * ಕಾಯಕ್ಷಮತೆ ಬೆಳಸಿಕೊಳ್ಳುವರು<br>* ಕಾರ್ಯ ವಿಧಾನಕ್ಕೆ ಅಣಿಯಾಗುವರು<br>* ಮುಂದಾಳತ್ವ<br>* ತೀರ್ಮಾನದ ಮಹತ್ವ<br>* ಒಗ್ಗಟ್ಟು (ಹೊಂದಾಣಿಕೆ)<br>* ಶಿಸ್ತು<br>* ಜವಾಬ್ದಾರಿ<br>* ತಾಳ್ಮೆ, ಸಂಘಟನೆ, ವಿವೇಕ<br>* ಮುಂದಾಲೋಚನೆ, ಸರಿ ತಪ್ಪು ಪರಾಮರ್ಶೆ ಇತ್ಯಾದಿ ಮೌಲ್ಯಗಳನ್ನು ಬೆಳೆಸಿಕೊಳ್ಳುವರು. |

| | | |
|---|---|---|
| | ಮನೋಧೋರಣೆ | * ಕೆಲಸದ ನಿರ್ವಹಣೆಯಲ್ಲಿ ಮುಂದಾಳತ್ವ ಮತ್ತು ಇತರ ಸದಸ್ಯರ ಪಾತ್ರವೇನೆಂದು ಅರಿತು ಅದರಂತೆ ತನ್ನ ಸ್ವಭಾವವನ್ನು ಬೆಳೆಸಿಕೊಳ್ಳುವರು.<br>* ಕೆಲಸದ ನಿರ್ವಹಣೆಯಲ್ಲಿ ತೆಗೆದುಕೊಳ್ಳುವ ನಿರ್ಧಾರದ ಬಗ್ಗೆ ಎಚ್ಚರ ವಹಿಸುವರು.<br>* ನಿರ್ವಹಣೆಯಲ್ಲಿ ಸಮಯಪಾಲನೆ, ಶಿಸ್ತು ಅಚ್ಚುಕಟ್ಟುತನಗಳು ಬಹು ಮುಖ್ಯವೆಂದು ಭಾವಿಸುವರು.<br>* ಒಗ್ಗಟ್ಟಿನಲ್ಲಿ ಬಲವಿದೆ ಎಂಬ ನಾಣ್ಣುಡಿ ಯನ್ನು ಮೆಚ್ಚಿಕೊಳ್ಳುವರು.<br>* ಅಧಿಕಾರ ಮತ್ತು ಜವಾಬ್ದಾರಿಗಳನ್ನು ಗೌರವಿಸಿ ಅನುಸರಿಸುವರು.<br>* ನಿರ್ವಹಣೆ ಮತ್ತು ನಿರ್ಧಾರಗಳಲ್ಲಿನ ತಪ್ಪುಗಳನ್ನು ಖಂಡಿಸಿ/ಸಲಹೆ ಸೂಚನೆ ಕೊಡುವರು.<br>* ಕೆಲಸ ಮತ್ತು ಸಂಬಳದ ನಡುವಿನ ಸಾಮ್ಯತೆಯನ್ನು ಬಯಸುವರು.<br>* ಸಂಘಟನೆಯಲ್ಲಿ ಹೊಂದಾಣಿಕೆ ಅನಿವಾರ್ಯ ಎಂಬ ತೀರ್ಮಾನಕ್ಕೆ ಬರುವರು. |
| | ಅಸಕ್ತಿ | * ಸ್ತ್ರೀ ಶಕ್ತಿ ಸಂಘಗಳ ಕಾರ್ಯಗಳನ್ನು ಕುರಿತು ಮಾಹಿತಿ ಸಂಗ್ರಹಿಸುವರು.<br>* ಸಮೀಪದ ಬ್ಯಾಂಕಿನ ವ್ಯವಹಾರದ ನಿಯಮಗಳನ್ನು ತಿಳಿಯುವರು.<br>* ಊರಿನ ಜಾತ್ರೆ, ಉತ್ಸವಗಳ ಸಂದರ್ಭದಲ್ಲಿ ಮುಂದಾಳತ್ವ ವಹಿಸುವರು.<br>* ಉತ್ತಮ ಫಲಿತಾಂಶ ನಿರ್ವಹಣೆಗೆ ವೇಳಾಪಟ್ಟಿ ತಯಾರಿಸಿಟ್ಟುಕೊಳ್ಳುವರು, ಅನುಸರಿಸುವರು.<br>* ಶಾಲೆಯ ಸಾಂಘಿಕ ಚಟುವಟಿಕೆಗಳಲ್ಲಿ ಭಾಗವಹಿಸುವರು.<br>* ಗೆಳೆತನ, ಭ್ರಾತೃತ್ವ, ಐಕ್ಯಮತ್ಯಗಳನ್ನು ಬೆಳೆಸಿಕೊಳ್ಳುವರು. |

**ಈ ಎಲ್ಲಾ ಕಲಿಕಾ ಮಾನಕಗಳನ್ನು ಒಳಗೊಂಡಂತೆ ನಿರ್ವಹಿಸಬೇಕಾದ ದಾಖಲೆಗಳ ವಹಿಯನ್ನು ತರಬೇತಿ ಸಂದರ್ಭದಲ್ಲಿ ತಿಳಿಸುವುದು.**

# 15. ಕಲಿಕಾ ಪ್ರಗತಿಯ ಅವಲೋಕನವಾಗಿ ಅಭ್ಯಾಸ ಹಾಳೆ

ಕಲಿಕೆಯಲ್ಲಿ ಮಗುವಿನ ಭಾಗವಹಿಸುವಿಕೆ, ಜವಾಬ್ದಾರಿ, ಅಭಿವ್ಯಕ್ತಿಗಳನ್ನು ಒಳಗೊಂಡಂತೆ ಮಗುವಿನ ಬೌದ್ಧಿಕ ಶಕ್ತಿ, ಆತ್ಮಗೌರವ ಹಾಗೂ ವರ್ತನೆಗಳನ್ನು ಅರ್ಥೈಸಿಕೊಳ್ಳಲು ಬಳಸುವ ಅದ್ಭುತ ಸಾಧನವೇ ಅಭ್ಯಾಸಹಾಳೆ.

ಮಗು ಸ್ವ ಅನುಭವ ಹಂಚಿಕೊಳ್ಳುವುದರೊಂದಿಗೆ ಸಂವೇದನಾಶೀಲತೆಯಿಂದ ಸ್ವಯಂ ಅವಲೋಕನವನ್ನು ಮಾಡಿಕೊಳ್ಳಲು ಉತ್ತಮ ಮಾಪನವಾಗಿದೆ. ಮಗು ತನ್ನ ತಪ್ಪುಗಳನ್ನು ಶಿಕ್ಷಕರು, ಸ್ನೇಹಿತರು ಗಮನಿಸುತ್ತಾರೆ ಎಂಬ ಎಚ್ಚರಿಕೆಯೊಂದಿಗೆ ತಪ್ಪು ಮಾಡುತ್ತಲೇ ಸರಿಯಾದ ಕ್ರಮ/ಉತ್ತರಗಳನ್ನು ಕಂಡುಕೊಳ್ಳುತ್ತಾ ಹೋಗುತ್ತದೆ.

ಶಿಕ್ಷಕರು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆಗಳನ್ನು ಕಲಿಕೆಯ ಸಂದರ್ಭದಲ್ಲಿ ಬಳಸಿಕೊಂಡರೂ, ಪಾಠದ ಕೊನೆಯಲ್ಲಿ ಮಕ್ಕಳ ಕಲಿಕೆಯ ಪ್ರಗತಿಯ ಅವಲೋಕನಕ್ಕಾಗಿ ಹಾಗೂ ಕಲಿವಿನಲ್ಲಿ ಹಿಂದುಳಿದ ಮಕ್ಕಳಿಗೆ ಹಿಮ್ಮಾಹಿತಿ ನೀಡುವ ಸಲುವಾಗಿ ಅಭ್ಯಾಸ ಹಾಳೆಯನ್ನು ಬಳಸಿಕೊಳ್ಳಬಹುದಾಗಿದೆ. ಈ ಅಭ್ಯಾಸ ಹಾಳೆಯು ಮಗುವಿನ ಕಲಿಕಾ ಅನುಭವಗಳನ್ನು ಬಹಳ ಮುಖ್ಯವಾಗಿ ಅರ್ಥೈಸುವಂತಿರಬೇಕು.

**ಸೂಚನೆ :** (ಅಭ್ಯಾಸ ಹಾಳೆಯಲ್ಲಿ ಎಲ್ಲಾ ಮಾದರಿಯ ಪ್ರಶ್ನಾವಳಿಗಳು ಇರಬೇಕೆಂದು ತಿಳಿಯಬೇಕಿಲ್ಲ. ಇಲ್ಲಿ ಮಕ್ಕಳ ಅರ್ಥೈಸಿಕೊಂಡಿರುವಿಕೆಯನ್ನು ಅನುಕೂಲಿಸಲು ಪ್ರಶ್ನೆಗಳಿದ್ದು, ಇವು ಮಗುವಿನ ಯಾವ ರೀತಿಯ ಕಲಿಕೆಯನ್ನು ಬಯಸುತ್ತವೆ ಎಂಬುದನ್ನು ಒಳಗೊಂಡಂತಿರಲಿ).

**ಉದಾಹರಣೆಯಾಗಿ** ಒಂದು ಅಭ್ಯಾಸ ಹಾಳೆಯನ್ನು ಮಾದರಿಯಾಗಿ ಕೊಡಲಾಗಿದೆ.

## ಅಭ್ಯಾಸ ಹಾಳೆ

**ಘಟಕ :** ಕರ್ನಾಟಕದ ವಾಯುಗುಣ, ಮಣ್ಣುಗಳು, ಸ್ವಾಭಾವಿಕ ಸಸ್ಯವರ್ಗ ಹಾಗೂ ಪ್ರಾಣಿವರ್ಗ, (ಭೂಗೋಳ ವಿಭಾಗ).

**I. ಕೆಳಗಿನ ವಾಕ್ಯಗಳಲ್ಲಿ ಬಿಟ್ಟು ಹೋಗಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ :**

1) ಕರ್ನಾಟಕದಲ್ಲಿ ____________ ಮಾದರಿ ವಾಯುಗುಣವಿದೆ.

2) ವಾಯುಗುಣದ ಋತುಗಳನ್ನು _________ ವಿಭಾಗಗಳಾಗಿ ವಿಂಗಡಿಸಲಾಗಿದೆ.

3) ಕರ್ನಾಟಕಕ್ಕೆ ___________ ಮಾರುತಗಳಿಂದ ಹೆಚ್ಚು ಮಳೆ ಬರುತ್ತದೆ.

4) ತೇವಾಂಶವನ್ನು ಹೆಚ್ಚು ಹಿಡಿದಿಟ್ಟುಕೊಳ್ಳುವ ಮಣ್ಣು ____________

5) ಕರ್ನಾಟಕ ಕಾಡುಗಳಲ್ಲಿ ಹೆಚ್ಚಿಗೆ ____________ ಮರ ಕಂಡು ಬರುತ್ತದೆ.

**II. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ :**

1) ಕರ್ನಾಟಕ ರಾಜ್ಯದಲ್ಲಿರುವ ರಾಷ್ಟ್ರೀಯ ಉದ್ಯಾನಗಳ ಸಂಖ್ಯೆ

ಎ) ಐದು ಬಿ) ಎಂಟು ಸಿ) ಹನ್ನೆರಡು ಡಿ) ಇಪ್ಪತ್ತನಾಲ್ಕು

2) ಚಳಿಗಾಲದಲ್ಲಿ ಮರಗಳು ಎಲೆ ಉದುರಿಸಲು ಕಾರಣ

ಎ) ಸೂರ್ಯನ ಕಿರಣ ಬಿ) ತೇವಾಂಶದ ಕೊರತೆ

ಸಿ) ಮಳೆ ಕಡಿಮೆ ಡಿ) ಶಾಖ ಕಡಿಮೆ

3) ಸುಣ್ಣ ಮತ್ತು ಉಪ್ಪಿನಾಂಶ ಹೆಚ್ಚಾಗಿರುವ ಮಣ್ಣು

ಎ) ಕಪ್ಪು ಬಿ) ಲ್ಯಾಟರೈಟ್ ಸಿ) ಕೆಂಪು ಡಿ) ಮೆಕ್ಕಲು

4) ಕರ್ನಾಟಕದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶವಿದು

ಎ) ಆಗುಂಬೆ ಬಿ) ಚಿತ್ರದುರ್ಗ ಸಿ) ಚಿರಾಪುಂಜಿ ಡಿ) ನಾಯಕನಹಟ್ಟಿ

5) ಕರ್ನಾಟದಲ್ಲಿ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲಾವಧಿ

ಎ) ಅಕ್ಟೋಬರ್, ನವೆಂಬರ್ ಬಿ) ಮಾರ್ಚ್–ಮೇ

ಸಿ) ಡಿಸೆಂಬರ್, ಫೆಬ್ರವರಿ ಡಿ) ಜೂನ್–ಸೆಪ್ಟೆಂಬರ್

**III. ಈ ಕೆಳಗಿನ ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೇ ಪದದ ಸಂಬಂಧ ಕಲ್ಪಿಸಿ ಬರೆಯಿರಿ.**

1) ರಾಗಿ, ಕೆಂಪುಮಣ್ಣು, ಹತ್ತಿ, ____________

2) ಕಾಫಿ, ಪಾನೀಯ ಬೆಳೆ, ಸೂರ್ಯಕಾಂತಿ, ____________

**IV. ಕೆಳಗಿನ ಆಯಾ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ :**

1) ಆನೆ, ಹುಲಿ, ಸಿಂಹ, ಹಿಮಕರಡಿ.

2) ಲವಂಗ, ಸಾಸಿವೆ, ದಾಲ್ಚಿನ್ನಿ, ಏಲಕ್ಕಿ.

**V. ಕೆಳಗಿನ 'ಅ' ಪಟ್ಟಿಯಲ್ಲಿರುವ ಪದಗಳೊಂದಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಉತ್ತರಕ್ಕಾಗಿ ನೀಡಲಾಗಿರುವ 'ಸಿ' ಪಟ್ಟಿಯಲ್ಲಿ ಬರೆಯಿರಿ :**

| 'ಅ' ಪಟ್ಟಿ | 'ಬ' ಪಟ್ಟಿ | 'ಸಿ' ಪಟ್ಟಿ |
|---|---|---|
| 1) ಗೋಡಂಬಿ | ಎ) ನಿತ್ಯ ಹರಿದ್ವರ್ಣದ ಕಾಡುಗಳು | __________ |
| 2) ಹೊನ್ನೆ | ಬಿ) ಗಿರಿಧಾಮ | __________ |
| 3) ಬಾಬಾಬುಡನಗಿರಿ | ಸಿ) ಚಳಿಗಾಲ | __________ |
| 4) ಆಗುಂಬೆ | ಡಿ) ಕರಾವಳಿ | __________ |
| 5) ಡಿಸೆಂಬರ್–ಫೆಬ್ರವರಿ | ಇ) ಹೆಚ್ಚು ಮಳೆ ಬೀಳುವ ಪ್ರದೇಶ | __________ |
| | ಎಫ್) ಮಳೆಗಾಲ | |

**VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರವನ್ನು ಬರೆಯಿರಿ :**

1) ಕರ್ನಾಟಕದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿರುವ ಪ್ರದೇಶ ಯಾವುದು?

2) ಸ್ವಾಭಾವಿಕ ಸಸ್ಯ ವರ್ಗ ಎಂದರೇನು?

3) ಎಲೆ ಉದುರುವ ಸಸ್ಯವರ್ಗಗಳು ಎಲ್ಲಿ ಕಂಡುಬರುತ್ತವೆ?

4) ವಿಶ್ವ ಪಾರಂಪರಿಕ ಪ್ರದೇಶವೆಂದು ಕರ್ನಾಟಕದ ಯಾವ ಭಾಗವನ್ನು ಘೋಷಿಸಲಾಗಿದೆ?

5) ಕರ್ನಾಟಕದಲ್ಲಿ ಅತಿ ಕಡಿಮೆ ಅರಣ್ಯವಿರುವ ಜಿಲ್ಲೆ ಯಾವುದು?

**VII. ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ :**

1) ವಾಯುಗುಣವನ್ನು ನಿರ್ಧರಿಸುವ ಅಂಶಗಳಾವುವು?

2) ಕರ್ನಾಟಕದ ಪ್ರವಾಸ ಮಾಸ ಎಂದು ಜನವರಿ ತಿಂಗಳನ್ನು ಏಕೆ ಕರೆಯುತ್ತಾರೆ?

3) ಕರ್ನಾಟಕದ ಪ್ರಮುಖ ಅರಣ್ಯ ಪ್ರದೇಶಗಳಾವುವು?

**VIII. ಕೆಳಗಿನ ವಿಷಯಗಳಿಗೆ ಟಿಪ್ಪಣಿ ಬರೆಯಿರಿ :**

1) ಕಪ್ಪುಮಣ್ಣು

2) ನಿತ್ಯ ಹರಿದ್ವರ್ಣದ ಕಾಡುಗಳು

**IX. ಕೆಳಗಿನವುಗಳಿಗೆ ಕಾರಣ ಕೊಡಿ**

1) ಕರ್ನಾಟಕದ ಉತ್ತರ ಮೈದಾನ ಪ್ರದೇಶದಲ್ಲಿ ಬೇಸಿಗೆಯಲ್ಲಿ ಮಳೆ ಬೀಳುತ್ತದೆ.

2) ಕರ್ನಾಟಕದ ಪೂರ್ವ ಮೈದಾನ ಪ್ರದೇಶವು ಮಳೆಯ ನೆರಳಿನ ಪ್ರದೇಶವಾಗಿದೆ.

3) ಕರ್ನಾಟಕವು ಶ್ರೀಗಂಧದ ನಾಡು

4) ಪಂಚನದಿಗಳ ಬೀಡಾದ ಬೀಜಾಪುರ ಕಡಿಮೆ ಅರಣ್ಯ ಪ್ರದೇಶ ಹೊಂದಿದೆ.

**X. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ :**

1) ಕರ್ನಾಟಕದಲ್ಲಿ ಅತೀವೃಷ್ಟಿ – ಅನಾವೃಷ್ಟಿ.

2) ವಿಶ್ವ ಪರಂಪರೆಯ ಸಾಲಿನಲ್ಲಿ ಕರ್ನಾಟಕದ ಪಶ್ಚಿಮಘಟ್ಟ ಪ್ರದೇಶ.

3) ಕರ್ನಾಟಕ ವನ್ಯ ಪ್ರಾಣಿ ಸಂಕುಲ.

**XI. ಕೆಳಗಿನ ಪ್ರಶ್ನೆಗಳಿಗೆ ಏಳೆಂಟು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ :**

1) ಬೇಸಿಗೆಕಾಲ, ಮಳೆಗಾಲ ಮತ್ತು ಚಳಿಗಾಲದಲ್ಲಿ ನೀವು ಕಂಡಂತೆ ವಾತಾವರಣದಲ್ಲಾಗುವ ವ್ಯತ್ಯಾಸಗಳನ್ನು ಸಂಗ್ರಹಿಸಿರಿ.

2) ಅರಣ್ಯ ಸಂರಕ್ಷಣೆಯಲ್ಲಿ ನಿಮ್ಮ ಪಾತ್ರವೇನೆಂಬುದನ್ನು ಬರೆಯಿರಿ.

**XII. ನಿಮ್ಮ ಸಮೀಪದ ಪಕ್ಷಿಧಾಮ ಒಂದಕ್ಕೆ ಭೇಟಿ ನೀಡಿ ಆ ಪಕ್ಷಿಧಾಮದ ವಿಶೇಷತೆಯನ್ನು ವನ್ಯ ಜೀವಿ ಸಂರಕ್ಷಣಾ ಹಿನ್ನಲೆಯಲ್ಲಿ ಅರ್ಥೈಸಿರಿ.**

**XIII. ನಿಮ್ಮ ಸುತ್ತ ಮುತ್ತಲಿನಲ್ಲಿ ಕಂಡುಬರುವ ಸಸ್ಯವರ್ಗಗಳನ್ನು ಗುರುತಿಸಿ, ಅವು ಯಾವ ವಿಧದ ಅರಣ್ಯ ವರ್ಗಕ್ಕೆ ಸೇರುತ್ತವೆ ಎಂಬ ವಿಚಾರವಾಗಿ ಅಲ್ಲಿನ ವಾಯುಗುಣ, ಪ್ರದೇಶದ ಹಿನ್ನಲೆಯೊಂದಿಗೆ ಯೋಜನೆ ತಯಾರಿಸಿರಿ.**

**XIV. ಚಟುವಟಿಕೆಗಳು**

* ಸಾಕುಪ್ರಾಣಿ, ಕಾಡುಪ್ರಾಣಿಗಳ ಚಿತ್ರ ಸಂಗ್ರಹ
* ವಿವಿಧ ಬಗೆಯ ಮಣ್ಣಿನ ಸಂಗ್ರಹ, ಆಯಾ ಬೆಳೆಗಳೊಂದಿಗೆ
* ನೀವು ಕಡ್ಡಾಯವಾಗಿ ಒಂದೊಂದು ಗಿಡ ನೆಟ್ಟು ಪೋಶಿಸುವುದು.

**XV. ಕರ್ನಾಟಕದ ರೇಖಾ ನಕ್ಷೆಯನ್ನು ಬರೆದು ಈ ಕೆಳಗಿನ ಪ್ರದೇಶಗಳನ್ನು ಗುರುತಿಸಿರಿ.**

1) ಪಶ್ಚಿಮ ಘಟ್ಟಗಳು, ರಾಯಚೂರು, ಆಗುಂಬೆ, ಕೊಕ್ಕರೆ ಬೆಳ್ಳೂರು, ಬಂಡಿಪುರ, ಘಟಪ್ರಭಾನದಿ, ಉಡುಪಿ, ಬೆಂಗಳೂರು.

2) ಕರ್ನಾಟಕದ ನಕ್ಷೆಯನ್ನು ಬರೆದು ನಮ್ಮ ಪ್ರದೇಶದ ಮಣ್ಣು ಯಾವುದೆಂದು, ನಿಮಗೆ ಪಠ್ಯ ಪುಸ್ತಕದಲ್ಲಿ ನೀಡಿರುವ ಮಣ್ಣುಗಳ ಹಂಚಿಕೆ ನಕ್ಷೆಯನ್ನು ಆಧರಿಸಿ ಗುರುತಿಸಿರಿ.

**XVI. ಪಠ್ಯಪುಸ್ತಕದಲ್ಲಿನ ಜ್ಞಾನದ ಜೊತೆಗೆ ನಿಮ್ಮ ಶಾಲಾ ಗ್ರಂಥಾಲಯದಲ್ಲಿ ದೊರೆಯುವ ಸಂಬಂಧಿಸಿದ ಘಟಕಕ್ಕೆ ಪೂರಕವಾಗುವ ಕೃತಿಗಳನ್ನು ಅಭ್ಯಸಿಸಿರಿ.**

ಉದಾ : – ಭೂಗೋಳ ಸಂಗಾತಿ : ಡಿ.ಎಸ್.ಇ.ಆರ್.ಟಿ.

– ಪ್ರಪಂಚದ ಭೂಗೋಳ : ಎಸ್. ಮಲ್ಲಪ್ಪ

– ಭೂಮಿಕ : ಡಿ.ಎಸ್.ಇ.ಆರ್.ಟಿ.

## 16. ಘಟಕ : ಪ್ರಾತ್ಯಕ್ಷಿಕೆ ಕುರಿತ ಅವಲೋಕನ ಮಾದರಿ

| ಕ್ರಮ ಸಂಖ್ಯೆ | ಹಂತಗಳು ನೀವು ಗುರುತಿಸಿದಂತೆ (ತರಬೇತುದಾರ) | ಹೇಗೆ ನಿರ್ವಹಿಸಲಾಯಿತು | ನೀವು ಈ ಘಟಕವನ್ನು ಹೇಗೆ ನಿರ್ವಹಿಸುತ್ತಿದ್ದೀರಿ? |
|---|---|---|---|
| | | | |